...ದ ಹಬ್ಬದ ವರ್ಷ - ೨೦೧೧
೭೭
...ಲೈ - ಸೆಪ್ಟಂಬರ್
೨೦೦೮

ಅನಿಕೇತನ

■ ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ



ಅನಿಕೇತನ

(ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ)

ಜುಲೈ-ಸೆಪ್ಟೆಂಬರ್ ೨೦೦೮

■ ಸಂಪಾದಕರು

ಡಾ. ಬಾಳಾಸಾಹೇಬ ಲೋಕಾಪುರ

ಪ್ರೊ. ಚನ್ನಪ್ಪ ಕಟ್ಟಿ

ಡಾ. ಶಿವಾನಂದ ಕೆಳಗಿನಮನಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ANIKETANA — A Literary Journal (Quarterly)
Edited by : Dr. Balasaheb Lokapur, Pro. Channappa Katti
Dr. Shivanand Kelaginamani

Registration No	:	45646/68
ಸಂಪುಟ	:	೨೦
ಸಂಚಿಕೆ	:	೧
ಪ್ರತಿಗಳು	:	೧೫೦೦
ಪುಟಗಳು	:	viii + ೧೨೮

ಪ್ರಧಾನ ಸಂಪಾದಕರು
ಪ್ರೊ. ಎಂ. ಎಚ್. ಕೃಷ್ಣಯ್ಯ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು- ೫೬೦ ೦೦೨

ಬಿಡಿ ಪ್ರತಿ	:	ರೂ ३೦/-
ವಾರ್ಷಿಕ ಚಂದಾ	:	ರೂ ೧೦೦/-
ಆಜೀವ ಚಂದಾ	:	ರೂ ३೦೦/-

ಮುಖಪುಟ ಕಲೆ	:	ಮಹಾವೀರ ರಾಯಪ್ಪ ಬಾಳಿಕಾಯಿ
ಕೃಪೆ	:	ಕರ್ನಾಟಕ ಲಲಿತಕಲಾ ಅಕಾಡೆಮಿ
ಮುಖಪುಟ ವಿನ್ಯಾಸ	:	ಅನಿಲ್‌ಕುಮಾರ್ ಆರ್.
ಅಕ್ಷರ ಜೋಡಣೆ	:	ಕ್ರಿಯೇಟಿವ್ ಗ್ರಾಫಿಕ್ಸ್ ಬೆಂಗಳೂರು - ೫೬೦ ೦೨೬
ಮುದ್ರಣ	:	**ರಶ್ಮಿ ಪ್ರಿಂಟರ್ಸ್** ನಂ.೧೨ಬಿ, ೧ನೇ ಕ್ರಾಸ್, ಕಲಾಸಿಪಾಳ್ಯ ಹೊಸ ಬಡಾವಣೆ ಬೆಂಗಳೂರು - ೫೬೦ ೦೦೨ ದೂ. : ೨೨೧೧೫೮೧೫, ಮೊ. : ೯೯೦೧೯೧೬೫೮೧

ಸಂಪಾದಕೀಯ

ನಾವೆಲ್ಲಾ ಇಂದು ಜಾಹೀರಾತಿನ ಯುಗದಲ್ಲಿದ್ದೇವೆ. ಎಲ್ಲವನ್ನು ಕೊಂಡುಕೊಳ್ಳುವಂತೆ ಪುಸಲಾಯಿಸುವ ದಿನಮಾನಗಳಿವು. ನಮ್ಮ ಸಂಸ್ಕೃತಿಯನ್ನು ಕೂಡ ಅದು ಬಿಟ್ಟಿಲ್ಲ. ಅದನ್ನೂ ಖರೀದಿಸಿ ತನಗೆ ಬೇಕಾದಲ್ಲಿ ಬಿಕರಿ ಮಾಡಲು ಶಕ್ತಿ ಮತ್ತು ಸಾಮರ್ಥ್ಯ ಹಣಕ್ಕಿದೆ. ಸಾಮಾನ್ಯ ಜನರ ಸಂವೇದನೆಗಳು ಮಂಕಾಗುತ್ತಿವೆ. ಒಂದು ನಳನಳಿಸುವ ಹೂವು, ಹರಿವ ನದಿ, ಮಾವಿನ ಚಿಗುರು, ಮಗುವಿನ ಮುಗ್ಧ ನಗೆ, ಎಂದಿನ ಸಂತೋಷವನ್ನು ಕೊಡಲಾಗದ ದುಸ್ಥಿತಿ ಒದಗಿಬಂದಿದೆ. ಬಳಕೆದಾರನ ಅಲೋಚನೆಗಳು ನಾವು ಪಡೆದ ವಸ್ತು ನಮಗೆ ಎಷ್ಟು ಬಗೆಯಿಂದ ಸಂತೋಷಕೊಡಬಲ್ಲದು ಎಂಬುದಾಗಿದೆ. ಅದಕ್ಕಾಗಿ ನಗೆ ಮಾಯವಾಗುವ ಕಾಲದಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ.

ಬಹುಶಃ ಸಾಹಿತ್ಯದ ಓದು ಮಾತ್ರ ನಮ್ಮನ್ನು ಪುನಃ ನೆಮ್ಮದಿಯ ನಿತಾಂತ ನಗುವಿನ ಮನುಷ್ಯರನ್ನಾಗಿ ಮಾಡಬಲ್ಲದು. ಸಾಹಿತ್ಯಕ್ಕೆ ಅದು ಸಾಧ್ಯವಿದೆ. ಬದುಕು ಬಣಗುಟ್ಟುವಂತಾದಾಗ ಸಾಹಿತ್ಯ ಅಲ್ಲಿ ಚಿಗುರು ಮೂಡಿಸಬಲ್ಲದು ಎಂಬ ಅಚಲ ನಂಬಿಕೆ ನಮ್ಮದು.

ಇಂದು ಬಹಳಷ್ಟು ಹೊಸ ಬರಹಗಾರರು ಅತ್ಯುತ್ತಮವಾಗಿ ಬರೆಯುತ್ತಿದ್ದಾರೆ. ಮಹಿಳಾ ಲೇಖಕರು ಕೂಡಾ ಹಿಂದೆ ಬಿದ್ದಿಲ್ಲ. ಇದೊಂದು ಅಶಾದಾಯಕವಾದ ಸಂಗತಿಯಾಗಿದೆ. ಆದರೆ ಬಹಳಷ್ಟು ಯುವ ಬರಹಗಾರರು ನಮ್ಮ ಹಿಂದಣ ಕವಿಗಳನ್ನು ಓದುತ್ತಿಲ್ಲ ಎಂಬ ಅನಿಸಿಕೆ ಸುಳ್ಳೇನು ಅಲ್ಲ. ಪರಂಪರೆಯ ಅರಿವು ವರ್ತಮಾನದ ವಿವೇಕ ಹೊಸ ಬಗೆಯ ಸಾಹಿತ್ಯದ ಹುಟ್ಟಿಗೆ ಖಂಡಿತವಾಗಿಯೂ ಕಾರಣವಾಗಿರುತ್ತದೆ. ಅದಕ್ಕಾಗಿ ಇಂದು ಮರು ಓದು, ಮರುಚಿಂತನೆಗಳ ಮೂಲಕ ಹಿಂದಣ ಸಾಹಿತ್ಯವನ್ನು ಪುನರ್ ಮನನಕ್ರಿಯೆ ಸುರುವಾಗಿರುವುದು ಸ್ವಾಗತಪೂರ್ಣ ಸಂಗತಿಯಾಗಿದೆ.

ಈ ಸಂಚಿಕೆಯಲ್ಲಿ ಟಿ.ಎಸ್. ವಿವೇಕಾನಂದರ ನಾಗರೀಕತೆಯ ದಿವ್ಯ ಭ್ರಮೆಗಳು ಲೇಖನ ನಮ್ಮ ವಿಚಾರಗಳನ್ನು ಪುನಃ ಆಲೋಚನೆಗೆ ಒಡ್ಡುವಷ್ಟು ವಿಚಾರ ಪ್ರಚೋದಕವಾಗಿದೆ. ಚೀನಿ ಕಥೆಗಾರ ಲಾವೊಶೆ ಬರೆದ ಬಿದಿಗೆ ಚಂದ್ರ

ಕಥೆಯನ್ನು ಡಾ. ಪ್ರಭಾಕರ್ ನಿಂಬರಗಿಯವರು ಅನಿಕೇತನಕ್ಕಾಗಿಯೇ ಅನುವಾದಿಸಿ ಕೊಟ್ಟಿದ್ದಾರೆ. ಮನುಷ್ಯ ಸಂವೇದನೆಗಳು ಜಗತ್ತಿನ ಎಲ್ಲೆಡೆ ಒಂದೇ ಬಗೆ ಅದು ಚೈನಾ, ರಷ್ಯಾ, ಪಾಕಿಸ್ತಾನ ಅಥವಾ ಭಾರತ ಯಾವುದಾದರೂ ನೆಲ ಆಗಿರಬಹುದು.

ಮೂಲ ಫ್ರೇಂಚ್‌ದಲ್ಲಿ ಇದ್ದ ಸೆಂಟ್ ಅಕ್ಸೂಪರಿಯ ಕಾದಂಬರಿ ಪುಟ್ಟ ರಾಜಕುಮಾರವನ್ನು ಡಾ. ಜೆ. ಬಾಲಕೃಷ್ಣರವರು ಇಂಗ್ಲೀಷ್‌ಯಿಂದ ಅನುವಾದಿಸಿ ನಾಟಕಕ್ಕೆ ರೂಪಂತರಿಸಿ ಇಲ್ಲಿ ಕೊಟ್ಟಿದ್ದಾರೆ. ಇದೊಂದು ಅಪರೂಪದ ನಾಟಕವಾಗಿದೆ. ಊಹೆ ಮತ್ತು ಕಲ್ಪನೆಗಳು ಭಿನ್ನ ಭಿನ್ನ ಅಷ್ಟೆ ಅಲ್ಲ ಅವು ವಯೋಮಾನಕ್ಕೆ ಅನುಗುಣವಾಗಿ ಒಂದೇ ದೃಶ್ಯ ಬೇರೆಯದೆ ಆದ ಅರ್ಥವ್ಯಾಪ್ತಿಯನ್ನು ಕೊಡಬಲ್ಲದು, ಎಂಬುದನ್ನು ಈ ನಾಟಕ ನಮಗೆ ಮನಗಾಣಿಸುತ್ತದೆ. ಮರಾಠಿ ಸಾಹಿತ್ಯದಲ್ಲಿ ಭಕ್ತಿಸ್ವರೂಪ ಪ್ರೊ. ಚಂದ್ರಕಾಂತ ಪೋಕಳೆ ಅವರ ಅಪರೂಪದ ಲೇಖನವಾಗಿದೆ. ಖಂಡೋಬಾ ದೇವರ ಬಗ್ಗೆ ಇರುವ ಮಿಥ್‌ಗಳು, ಸತ್ಯಗಳು ಇಲ್ಲಿ ಅವಲೋಕನಕ್ಕೆ ಒಳಗಾಗಿವೆ.

ಇದರೊಂದಿಗೆ ಡಿ.ಎನ್.ಶ್ರೀನಾಥ್ ಅನುವಾದಿಸಿದ ಮರಾಠಿ ಕವಿ ದಾಮೋದರ ಖಡಸೆಯವರ ಮೆಟ್ಟಿದ ಕಾಮನ ಬಿಲ್ಲು ಹಾಗೂ ಮಲರ್ ವಿಳಿ ಕೆ. ಅನುವಾದಿಸಿದ ತಮಿಳಿನ ವೈರ್‌ಮುತ್ತುವಿನ ಕವನಗಳು ಇಲ್ಲಿವೆ. ಅಲ್ಲದೆ ಮಲಯಾಳದ ಜ್ಞಾನಪೀಠ ಪುರಸ್ಕೃತ ಕವಿ ಓ.ಏನ್.ವಿ. ಕುರುಪ್‌ರವರ ಅಮ್ಮ ಕವನವನ್ನು ಕೆ.ಕೆ. ನಾಯರ್ ಅವರು ಅನುವಾದಿಸಿದ್ದಾರೆ. ತೆಲುಗು ಕಥೆಗಾರ ಡಾ. ಕೇತು ವಿಶ್ವನಾಥ್ ರೆಡ್ಡಿಯವರ ಭಜಾರು ಕಥೆ ಡಾ. ಮೀರಾಸಾಬಿ ಹಳ್ಳಿಯವರು ಇಲ್ಲಿ ಅನುವಾದಿಸಿ ಕೊಟ್ಟಿದ್ದಾರೆ ಇವೆಲ್ಲ ನಿಮಗೆ ಪ್ರಿಯವಾಗುತ್ತವೆ ಎಂದು ನಂಬಿದ್ದೇವೆ.

ಈ ಸಂಚಿಕೆಯನ್ನು ರೂಪಿಸಲು ಅವಕಾಶ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರಿಗೂ ರಿಜಿಸ್ಟ್ರಾರ್ ಆದ ವಿ.ಎನ್. ಮಲ್ಲಿಕಾರ್ಜುನಸ್ವಾಮಿಯವರಿಗೂ ಲೇಖನಗಳನ್ನು ಕೊಟ್ಟು ಸಹಕರಿಸಿದ ಲೇಖಕರನ್ನು ಹಾಗೂ ಅಕಾಡೆಮಿಯ ಮಾನ್ಯ ಸದಸ್ಯರುಗಳನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಸಂಪಾದಕರು

ಪರಿವಿಡಿ

ಮೆಟ್ಟಿದ ಕಾಮನ ಬಿಲ್ಲು

ಮರಾಠಿ ಮೂಲ : ದಾಮೋದರ ಖಡಸೆ
ಕನ್ನಡಕ್ಕೆ : ಡಿ. ಎನ್. ಶ್ರೀನಾಥ್

ಗತಿಸುತ್ತಿದ್ದ ವರ್ಷದ
ಕೊನೆ ಸಂಜೆಯಲ್ಲಿ
ಸಾಗರದ ಪ್ರದೇಶದಲ್ಲಿ.
ಲೋಬಿಸುತ್ತಿದ್ದೆ ನಾನು ಕೂತು
ಕಾಮನ ಬಿಲ್ಲೊಂದು.....
ಯಾವಾಗಲೋ
ನನ್ನ ಬೊಗಸೆಯಲ್ಲಿ
ಎಲ್ಲಿಂದಲೋ
ಬಂದಿತು

ಮೆಟ್ಟಿದ ಕಾಮನ ಬಿಲ್ಲೊಂದು
ಇಂದು ಆಸೆ-ಭರವಸೆಗಳ ತುಂತುರು ಮಳೆಯಿರಲಿಲ್ಲ
ನಿರುತ್ಸಾಹದ ಹಸಿ ಬಿಸಿಲಿರಲಿಲ್ಲ
ಸಮುದ್ರದಲ್ಲಿ ಮಳೆಯಿರಲಿಲ್ಲ
ಆದರೆ ಈ ಎಲ್ಲದರ ನಡುವೆ ನಾನಿದ್ದೆ!
ಅಂಗೈಗಳ ಅಂಚಿನಿಂದ
ಪದೇ ಪದೇ ನೋಡಿಕೊಳ್ಳುತ್ತಿದ್ದೆ
ಮೆಟ್ಟಿದ ಕಾಮನ ಬಿಲ್ಲು.....

ಇದು ವರ್ಷದ ಅಂತಿಮ ರಾತ್ರಿಯಾಗಿತ್ತು
ಖುಷಿಯನ್ನು ಲೂಟಗೈಯಲು ಕಾತುರದ ಆಕೃತಿಗಳು
ನಾಣ್ಯಗಳನ್ನೆಸದು ಎಸೆದು
ಬೆಳಕನ್ನು ಖರೀದಿಸುತ್ತಿದ್ದವು
ಸಮುದ್ರದ ತೀರದಲ್ಲಿ ನಿಂತ
ತೆಂಗಿನ ಮರಗಳನ್ನೆಲ್ಲಾ

ಬೆಳಕಿನ ಸೋಲಿನಂಥ ಬಲೆಗಳಲ್ಲಿ
ನೇತು ಹಾಕಲಾಗಿತ್ತು
ಮತ್ತೆ ಮದವೇರಿದ ಕೂಗಾಟಗಳು
ಅಲೆಗಳನ್ನು ಬೆದರಿಸುತ್ತಿದ್ದವು.....
ಮುಂಬೈನ ಈ
ಹೊಳೆಯುವ ನಾರಿಮನ್ ಪಾಯಿಂಟ್ ರಸ್ತೆ
ವಾಸ್ತವವಾಗಿಯೂ ಇಂದು ರಾಣಿಯ ಮಾಲೆಯಾಗಿತ್ತು....

ಸಂತೆಯಲ್ಲಿ ನಿಂತಿತ್ತು ಬೆಳಕು
ಜನ ಹರಾಜು ಕೂಗುತ್ತಿದ್ದರು
ಇದು ಅಟ್ಟಹಾಸಗಳ ವ್ಯಾಪಾರವೋ
ಅಥವಾ ವ್ಯಾಪಾರದ ಅಟ್ಟಹಾಸವೋ!
ತಿಳಿಯುತ್ತಿರಲಿಲ್ಲ
ಭ್ರಮೆಯಾದಾಗಲೆಲ್ಲಾ
ಬೊಗಸೆ ಬಿಚ್ಚಿ ನಾನು
ನೋಡುತ್ತಿದ್ದೆ ಕಾಮನ ಬಿಲ್ಲನ್ನು !
ನನ್ನ ಈ ಮೂರ್ಖತೆಗೆ
ಅಪಹಾಸ್ಯದ ಮಂದ ನಗುವೊಂದು
ಪರಿಹಾಸ್ಯ ಮಾಡುತ್ತಿತ್ತು
'ಅರೇ, ರಾತ್ರಿಯಲ್ಲಿ
ಕಾಮನಬಿಲ್ಲು ಎಂದಾದರೂ
ಕಂಡಿದೆಯಾ ಯಾರಿಗಾದರೂ..... !'
ನನ್ನ ಬೊಗಸೆ ಕಂಡು
ಹೇಳಿದರೂ ಯಾರೋ
'ಇದುವರೆಗೆ ನಿರ್ಮಾಣಗೊಂಡಿಲ್ಲ ಎಲ್ಲೂ
ಗಾಜಿನ ಕಾಮನ ಬಿಲ್ಲು........'

ಏನೇನೋ ಹೀಗೆ
ಮಾತುಗಳು
ಪಕ್ಷಿಗಳ ಕೇಕೆಯೊಂದಿಗೆ !
ಅವು ನನಗೇನೂ ಹೇಳುತ್ತಿರಲಿಲ್ಲ ವಾಸ್ತವವಾಗಿ

ಅವು ತುಂಬಿಸಿಕೊಳ್ಳಲು ಬಯಸುತ್ತಿದ್ದವು
ಬೇಗ – ಬೇಗನೆ ತಮ್ಮ ಗಂಟುಗಳನ್ನು.......

ನನ್ನ ಬೊಗಸೆ ಸ್ವಲ್ಪ ಕಂಪಿಸಿತು
ನನ್ನೊಳಗೆ ಸರಸರ ಶಬ್ದವಾಯಿತು
ಬೆಳಕಿನಂತಹದ್ದು ಏನೋ
ಬೊಗಸೆಯಿಂದ ಜಾರಿ
ದಾಟುತ್ತಿತ್ತು ವೇಗವಾಗಿ
ಮುಂಬೈನ ವಿಶಾಲ ರಸ್ತೆ
ಕ್ರಾಸಿಂಗ್ ಬಳಿ ಓಡಿದೆ ನಾನು
ನನ್ನ ಕಾಮನ ಬಿಲ್ಲಿಗಾಗಿ !

ನನ್ನ ಅಂಗೈಗಳು ಚದುರಿದ್ದವು
ತೆಂಗಿನ ಗರಿಗಳಂತೆ !
ರಸ್ತೆಯ ಆ ಬದಿ
ಓಬೆರಾಯ ಟವರ್ಸ್ ಬಳಿ
ಮೂಡಿತ್ತು
ಒಂದು ಕಾಮನ ಬಿಲ್ಲು.... ವಿದ್ಯುತ್‌ನ ಕಾಮನ ಬಿಲ್ಲು !
ರಸ್ತೆ ದಾಟುವಾಗ
ಮನಗಂಡೆ ನಾನು

ಕಾಮನಬಿಲ್ಲಿನ ಸಣ್ಣ ಸಣ್ಣ ತುಂಡುಗಳು
ನನ್ನ ನರನಾಡಿಗಳಲ್ಲಿ
ಹರಿಯುತ್ತಿವೆ
ಯಾವಾಗ,
ಶಬ್ದಗೈಯುತ್ತಿದ್ದ ಒಂದೊಂದು ಕಾರನ್ನು
ಬಹು ಎಚ್ಚರಿಕೆಯಿಂದ ದಾಟಿದ್ದೆ ನಾನು !
ಅರಿವಿದೆ ನನಗೆ
ನನ್ನ ಕಾಮನಬಿಲ್ಲು ಗಾಜಿನದಾಗಿರಲಿಲ್ಲ
ಆದರೆ ಅದರ ತುಂಡುಗಳು
ನನ್ನ ರಕ್ತದಲ್ಲಿ

ಸೇರಿ ಹೋಗಿವೆ !
ನನ್ನೆದುರಿನಿಂದ
ಸರಸರ ಹಾದು ಹೋಗುವ
ಕೆಂಪು-ಹಳದಿ ಬೆಳಕುಗಳು
ಒಂದು ಹೊಡೆತಕ್ಕೆ
ತಳ್ಳುತ್ತದೆ ನನ್ನನ್ನು ಹಿಂದಕ್ಕೆ
ನನಗನ್ನಿಸುವುದಿಲ್ಲ
ರಸ್ತೆ ದಾಟಲಾರೆ ನಾನು.......

ರಸ್ತೆಯಲ್ಲಿ
ಹಾರ್ನ್‌ಗಳ ಕೋಲಾಹಲ
ಎಲ್ಲೂ ತಲುಪದ ವೇಗ
ಹಿಂದೆ ಸ್ತಬ್ಧಸಾಗರ
ಹೋಟೇಲ್‌ನಲ್ಲಿ ಬೊಬ್ಬೆ ಹಾಕುವ ಡ್ರಮ್‌ಗಳ ನಡುವೆ.
ನನ್ನ ಬೊಗಸೆಯಿಂದ ಜಾರಿತು

ನನ್ನ ಕಾಮನ ಬಿಲ್ಲು
'ರೇನ್ ಬೋ' ಆಗಿತ್ತು ಒಂದು ಪಾರ್ಟಿಯ
ನನಗನ್ನಿಸಿತ್ತು
ಬಹುಶಃ ನನ್ನನ್ನು ಹುಡುಕುತ್ತಿವೆ ಅದು
ಬೆಳಕಿನ ಕೊರೈಸುವಿಕೆಯಿಂದ
ಕುಕ್ಕಿದ ಅದರ ಕಣ್ಣುಗಳು
ಬಂದಿವೆ ತುಂಬಿ.....
ನಾನೀಗ ಏದುಸಿರು ಬಿಡುತ್ತಿರುವೆ
ನನ್ನ ಕಾಮನ ಬಿಲ್ಲಿಗಾಗಿ !

ರಸ್ತೆಗಿಳಿದು
ಬಂದಿದೆ
ಖುಷಿಯ ಆರ್ಭಟಿಸುವ ಸಮುದ್ರ
ಮದವೇರಿದ ವಡಬಾನಲ........
ಹೊಸ ವರುಷದ ಹೊಸ್ತಿಲಿನಲ್ಲಿ

ನಿಂತಾಗ ನಾನು ಕ್ಷತ-ವಿಕ್ಷತ
ಕವನಗಳು ಹಿಡಿದುಕೊಳ್ಳುತ್ತವೆ ನನ್ನನ್ನು
ನಾನು ಯೋಚಿಸುವೆ ಮತ್ತೆ
ಒಂದು ಸಮುದ್ರ
ಒಂದು ಸೂರ್ಯೋದಯ
ಸಮುದ್ರದ ಮೇಲೆ ಮಳೆ
ಎಲ್ಲೆಡೆಯಲ್ಲೂ ಇರುವ
ಮರಳಿ ಬರುತ್ತದೆ
ನನ್ನ ಕಾಮನ ಬಿಲ್ಲು !

ನಾಗರಿಕತೆಯ ದಿವ್ಯ ಭ್ರಮೆಗಳು

ಟಿ.ಎಸ್. ವಿವೇಕಾನಂದ

ಮೊನ್ನೆ ಒಬ್ಬ ವ್ಯಕ್ತಿಯ ಜೊತೆಗೆ ನಿರ್ಮಾಣದ ಅಂತಿಮ ಹಂತದಲ್ಲಿದ್ದ ಆತನ ಮನೆಯ ಒಳಗೆ ಹೋಗಿದ್ದೆ. ಇವನು ದೊಡ್ಡ ಹುದ್ದೆಯಲ್ಲಿರುವ ಸರ್ಕಾರಿ ನೌಕರ. ಆತ ಗೃಹಪ್ರವೇಶದ ದಿನಾಂಕವನ್ನು ನಿರ್ಧರಿಸಿಯಾಗಿತ್ತು. ಅಂದು ಜಗದ್ಗುರುಗಳೊಬ್ಬರು ಅಲ್ಲಿಗೆ ಪಾದಪೂಜೆಗೆ ಬರಲಿದ್ದರು. ಈತ ತುಂಬಾ ಆತಂಕದಲ್ಲಿದ್ದ. ಉಳಿದ ಕೆಲಸಗಳನ್ನು ಬೇಗ ಮುಗಿಸುವುದು ಅವನ ಏಕೈಕ ಗುರಿಯಾಗಿತ್ತು. ಹಾಗಾಗಿ ಅಲ್ಲಿದ್ದ ಕೆಲಸಗಾರನೊಬ್ಬನನ್ನು ಕರೆದು ನೆಲಕ್ಕೆ ಹಾಸಿದ್ದ ಅಮೃತಶಿಲೆಗಳನ್ನು ಇಂದು ರಾತ್ರಿಯೇ ಪಾಲಿಷ್ ಮಾಡಿ ಮುಗಿಸಬೇಕೆಂದು ಆದೇಶ ನೀಡಿದ. ಅದಕ್ಕೆ ಆತ 'ಇವತ್ತು ಸಾಯಂಕಾಲ ನನ್ನ ಮಕ್ಕಳಿಗೆ ಬಟ್ಟೆ ಕೊಡಿಸಲು ಹೋಗಬೇಕು. ಅವರ ಬಟ್ಟೆಗಳೆಲ್ಲಾ ಹರಿದು ಹೋಗಿವೆ' ಎಂದು ಹೇಳಿದ. ಅದಕ್ಕೆ ಈತ 'ಏನಾ ಬಟ್ಟೆ ಇಲ್ಲದಿದ್ರೆ ಮಕ್ಕಳೇನೂ ಸತ್ತೋಗಲ್ಲ ತಗೋ' ಎಂದ. ಹೀಗೆ ಮಾತಿಗೆ ಮಾತು ಬೆಳೆಯಿತು. ಇವನೂ ಏನೋ ಅಂದ, ಅವನೂ ಇವನ ಮರ್ಮಕ್ಕೆ ತಾಗುವಂತೆ ಏನೇನೋ ಅಂದ. ಅಲ್ಲಿಂದ ಹೊರಡುವ ಮುಂಚೆ ಇವನು 'ಅನ್‌ಕಲ್ಚರ್ಡ್' 'ಅನಾಗರಿಕರು' ಅಂದ. ಈ ಎರಡೂ ಪದಗಳ ಅರ್ಥ ಅವನಿಗೆ ಗೊತ್ತಿರಲಿಲ್ಲ. ಅಂತೂ ಏನೊಂದೂ ತೀರ್ಮಾನವಾಗದೆ ಅತಂತ್ರದಲ್ಲಿ ಮಾತುಕತೆ ಬರಖಾಸ್ತಾಯಿತು.

ಇಂದು ಈ ಎರಡೂ ಪದಗಳು ಸಾಮಾನ್ಯವಾಗಿ ಒಂದು ಬೈಗುಳದಂತೆ ಬಳಕೆಯಾಗುತ್ತಿವೆ. ಆದರೆ ಇದು ಇಂದಿನದಲ್ಲ. ಒಮ್ಮೆ ಸುಮ್ಮನೆ ಮಾನವವಿಕಾಸ ಚರಿತ್ರೆಯನ್ನು ತಿರುವಿಹಾಕುತ್ತ ಹೋಗಿ, ಅಲ್ಲಿ 'ಅನಾಗರಿಕ', 'ಅಸಂಸ್ಕೃತ' ಪದಗಳ ಮೆರವಣಿಗೆಯೇ ಸಾಗಿದಂತೆ ಕಾಣುತ್ತದೆ. ಪ್ರತಿಯೊಂದು ನಾಗರಿಕತೆಯೂ ತನ್ನ ಪೂರ್ವಿಕ ನಾಗರಿಕತೆಯನ್ನು ಹೀಗೆಂದು ಹೇಳಿದ ದಾಖಲೆಗಳಿವೆ. ಪ್ರತಿಯೊಬ್ಬ ಇತಿಹಾಸಕಾರ, ಬರಹಗಾರ, ಸಮಾಜ ಶಾಸ್ತ್ರಜ್ಞನೂ ಪದೇ ಪದೇ ಇದೇ ಪದಗಳನ್ನು ಬಳಸಿದ್ದಾನೆ. ಅಂತೂ ನಮಗಿಂತ ಹಿಂದಿನದು ಅನಾಗರಿಕವಾದದ್ದು, ಅಸಂಸ್ಕೃತವಾದದ್ದು ಎಂಬ ವಿಷಯ ಸಾಮಾಜಿಕ ನೀತಿ, ಚಾರಿತ್ರಿಕ ಸತ್ಯ ಎಂಬಂತಾಗಿಬಿಟ್ಟಿದೆ. ಇದನ್ನೇ ಆಧರಿಸಿ ಇವು ಬೈಗುಳದ ನುಡಿಗಟ್ಟುಗಳಾಗಿ ರೂಪಾಂತರ ಹೊಂದಿವೆ. ಸಾಮಾನ್ಯರ ಆಡುಭಾಷೆಯಲ್ಲಿಯೂ ಇವು ನೀರುಕುಡಿದಷ್ಟು ಸಲೀಸಾಗಿ ಬಳಕೆಯಾಗುತ್ತವೆ.

ದೂರದ ಉದಾ. ಬೇಡ. ನಮ್ಮ ತೇಜಸ್ವಿಯವರ ನೈಲ್ ಕುರಿತ ಬರಹವೊಂದರಲ್ಲಿ... "ಸ್ಪೀಕೆ ನ್ಯಾನ್ಸಾ ಸರೋವರವನ್ನು ಸುತ್ತುವರಿದು ಈ ಭಾಗಕ್ಕೆ ಹೋದಾಗ ಅಲ್ಲಿ ಮೂರು ಪುಟ್ಟ ಪುಟ್ಟ ರಾಜ್ಯಗಳಿದ್ದುವು. ಬುನ್ಯೋರೋ, ಬುಗಾಂಡ, ಮತ್ತು ಖರಗ್ವೆ – ಇವು ಮೂರು ಈ ರಾಜ್ಯಗಳ ಹೆಸರು.... ಈ ಮೂರು ರಾಜ್ಯಗಳಲ್ಲಿಯೂ ಜನ ಆಫ್ರಿಕಾದ ಮಿಕ್ಕಡೆಯಲ್ಲಿ ಇದ್ದಷ್ಟು ಅನಾಗರಿಕರಾಗಿರದೆ ಅನೇಕ ವಿಷಯಗಳಲ್ಲಿ ಕೊಂಚ ನಾಗರಿಕರೇ ಆಗಿದ್ದರು. ಅವರು ಸುಂದರ ಹುಲ್ಲಿನ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಮರದ ತೊಗಟೆಯ ನೂಲಿನಿಂದ ಬಟ್ಟೆಗಳನ್ನು ನೇಯ್ದು ಧರಿಸುತ್ತಿದ್ದರು. ಚಾಪೆಗಳನ್ನೂ, ಚೀಲಗಳನ್ನೂ ನೇಯುತ್ತಿದ್ದರು. ಪಶುಪಾಲನೆ ಮತ್ತು ವ್ಯವಸಾಯ ಇವರಿಗೆ ಗೊತ್ತಿತ್ತು. ಆದ್ದರಿಂದ ಈ ಮೂರು ರಾಜ್ಯಗಳನ್ನು ಅರೆ ನಾಗರಿಕ ರಾಜ್ಯಗಳೆಂದು ಕರೆಯಬಹುದಾಗಿತ್ತು" ಎಂದು ಬರೆಯುತ್ತಾರೆ.

ಹಾಗೇ ಇವರ ನಿಗೂಢ ಮನುಷ್ಯರು ಕೃತಿಯಲ್ಲಿ, "ಅವರು ಅತ್ಯಂತ ಸ್ಪಷ್ಟವಾಗಿ ಕಾಣುವಷ್ಟು ಹತ್ತಿರವಾದಾಗ ಅವರ ಆಕೃತಿ, ವೇಷ ಭೂಷಣಗಳನ್ನು ನೋಡಿ ಕಾರಿನವರಿಬ್ಬರೂ ಬೆಚ್ಚಿಬಿದ್ದರು ಅಷ್ಟೊಂದು ಅನಾಗರಿಕವಾಗಿತ್ತು ಅವರ ಕುಳ್ಳ ಆಕೃತಿ– ಉಬ್ಬಿದ ಹಲ್ಲು, ಕರಿಯ ಮುಖ ಇತ್ಯಾದಿಗಳು. ಯಾವುದೋ ಗವಿಯಿಂದ ಹೊರಬಿದ್ದ ಪ್ರಾಕೃತಮಾನವರಂತೆ ಅವರು ಕಂಡರು.... ಅವರ ಬಾಯಿಂದ ಯಾವುದೋ ಪೈಶಾಚಿಕ ಭಾಷೆಯನ್ನು ನಿರೀಕ್ಷಿಸಿದ್ದ ಜಗನ್ನಾಥನಿಗೆ ಕನ್ನಡ ಕೇಳಿ ಆನಂದವಾಯಿತು" ಎನ್ನುತ್ತಾರೆ.

ಇಂಥ ಒಬ್ಬ ಸೃಜನಶೀಲ ಸಾಹಿತಿಯ ನಿರೂಪಣೆಯನ್ನು ಒಬ್ಬ ಮಾನವಶಾಸ್ತ್ರಜ್ಞ ಸಮರ್ಥಿಸುತ್ತಾ.... ". ಮಾನವ ಭೂಮಿಯ ಮೇಲೆ ಅವತರಿಸಿದಾಗ ಅವನು ಅನಾಗರಿಕನಾಗಿದ್ದು ಭಾಷೆ ಮತ್ತು ಬರವಣಿಗೆಯ ಪರಿಜ್ಞಾನವನ್ನು ಹೊಂದಿರಲಿಲ್ಲ.

ಅವನಿಗೂ ಮತ್ತು ಪ್ರಾಣಿಗೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ವ್ಯವಸಾಯ, ಪಶುಪಾಲನೆ ಮತ್ತು ಲೋಹಗಳ ಬಳಕೆ ತಿಳಿದಿರಲಿಲ್ಲ.... ಲೋಹಗಳ ಬಳಕೆ ಗೊತ್ತಿಲ್ಲದೆ ಇದ್ದುದರಿಂದ ಮಾನವನು ತನ್ನ ಉದರಪೋಷಣೆಗಾಗಿ ಮತ್ತು ರಕ್ಷಣೆಗಾಗಿ ಪ್ರಕೃತಿಯಲ್ಲಿ ಹೇರಳವಾಗಿ ದೊರೆಯುತ್ತಿದ್ದ ಶಿಲೆಯನ್ನು ತನ್ನ ಆಯುಧವನ್ನಾಗಿ ಬಳಸಿದ......" ಎನ್ನುತ್ತಾರೆ. ಇದಕ್ಕಾಗಿ ಇವರನ್ನು ಕಟಕಟೆಯಲ್ಲಿ ನಿಲ್ಲಿಸುವ ಅಗತ್ಯವಿಲ್ಲ. ಇವರೇ ಅಲ್ಲ ಈ ಜಗತ್ತಿನಲ್ಲಿ ಅಂದಿನ ಪ್ಲೇಟೋವಿನಿಂದ ಹಿಡಿದು ಇಂದಿನ ಪ್ರಾಟ್ ಚಾಯರನವರೆಗೆ ಈ ಪದಗಳು ಸಹಜವಾಗಿಯೇ ಬಳಕೆಯಾಗುತ್ತವೆ. ಇಲ್ಲಿ ಸಮಸ್ಯೆ ಇರುವುದು ಪದಗಳಲ್ಲಲ್ಲ ಯಾ ಪದಗಳ ಬಳಕೆಯ ಹಿಂದಿನ ಮನಃಸ್ಥಿತಿಗಳ ಬಗ್ಗೆಯೂ ಅಲ್ಲ. ಏಕೆಂದರೆ ಈ ಪದಗಳನ್ನು ಬಳಸುವ ಮನಸ್ಸುಗಳು ಸ್ವಸ್ಥ, ಸುಂದರವಾಗೇ ಇರುತ್ತದೆ. ಆದರೆ ಸಮಸ್ಯೆ ಇರುವುದು ಇವುಗಳ ಹಿಂದಿನ ಪರಿಕಲ್ಪನೆಯಲ್ಲಿ, ಅರ್ಥದಲ್ಲಿ, ಆ ಸಾಮೂಹಿಕ ಅಭಿಪ್ರಾಯವನ್ನು ರೂಪಿಸಿದ ಮನಃಸ್ಥಿತಿಗಳಲ್ಲಿ ಹಾಗೂ ವರ್ತಮಾನದಲ್ಲಿ ಅವುಗಳ ವರ್ಗೀಕರಣದ ಹಿಂದಿರುವ ನೆಲೆ ಹಾಗೂ ಆಚರಣೆಯ ವೈರುಧ್ಯದಲ್ಲಿ.

ಮೇಲಿನ ಪ್ರಸ್ತಾಪಗಳಿಂದ ಅನಾಗರಿಕ, ಅಸಂಸ್ಕೃತ ಎಂಬುದಕ್ಕೆ ಕೆಲಮಟ್ಟಿನ ಕಾರಣಗಳು, ನೆಪಗಳು, ಆಧಾರಗಳು ದೊರೆಯುತ್ತವೆ. ಇದರಲ್ಲಿ ಮುಖ್ಯವಾದವು, ಭಾಷೆ, ಆಕಾರ, ಬಣ್ಣ, ಕೃಷಿ ಆಯುಧಗಳ/ಉಪಕರಣಗಳ ಬಳಕೆ, ನಡವಳಿಕೆ ಇತ್ಯಾದಿಗಳು ಸೇರುತ್ತವೆ. ಇವು ಪ್ರಾಗೈತಿಹಾಸಿಕ ಕಾಲದ ಕಾರಣಗಳಾದರೆ, ಕಾಲದ ಚಲನೆಯಲ್ಲಿ ಮುಂದೆ ಸಾಗುತ್ತಾ ಹೋದಂತೆ ಸಿಗುವ ಶಿಲಾಯುಗ, ಮಧ್ಯ–ನವ ಶಿಲಾಯುಗ ಹಾಗೂ ಲೋಹಯುಗಗಳು ತಮ್ಮದೇ ಕಾರಣಗಳಿಂದ ತಮ್ಮ ಮುಂದಿನ ನಾಗರಿಕತೆಗಳಿಂದ ಅನಾಗರಿಕ ಎಂಬ ಅವಹೇಳನಕ್ಕೀಡಾಗಿರುವುದನ್ನು ಕಾಣುತ್ತೇವೆ. ಈ ಅನಾಗರಿಕರು ಎಂದರೆ, ಸಾಮಾನ್ಯವಾಗಿ ಕ್ರೂರಿ, ಒರಟ, ಪರಸ್ಪರ ಕಿತ್ತಾಡಿ ಕೊಲ್ಲುವವ, ಅಂತರ್‌ಕುಲ, ಸಮುದಾಯ, ಬುಡಕಟ್ಟುಗಳ ಹೊಡೆದಾಟದಲ್ಲಿ ಇಡಿಯ ಸಮುದಾಯಗಳನ್ನೇ ನಾಮಾವಶೇಷ ಮಾಡಿರುವ ನರಹಂತಕ, ಶಿಕ್ಷಣಹೀನ, ನಡವಳಿಕೆಗಳಲ್ಲಿ ನಾಜೂಕಿಲ್ಲದವ ಇತ್ಯಾದಿ ಗುಣವಿಶೇಷಣಗಳು ಅಂಟಿರುವುದನ್ನು ಕಾಣುತ್ತೇವೆ. ಇಂಥವರನ್ನು ನಮ್ಮ ಆರ್ಯರು ರಾಕ್ಷಸರೆಂದು ಕರೆದಿರುವುದರಿಂದ ಈ ಪದವನ್ನೂ ಅನಾಗರಿಕ ಎಂಬುದಕ್ಕೆ ಪರ್ಯಾಯವಾಗಿ ಬಳಸುವುದನ್ನು ನಿತ್ಯ ಕಾಣುತ್ತೇವೆ.

ಈ ಅರ್ಥದಲ್ಲಿ ಪ್ರಸ್ತುತ ಈ ಭೂಮಂಡಲದಲ್ಲಿರುವ ನಾವು 'ಸೂಪರ್ ನಾಗರಿಕರು' ಆಗಬೇಕು, ಅಲ್ಲವೇ! (ಎಲ್ಲರೂ ಅಲ್ಲ ಎಂಬುದು ಬೇರೆ ವಿಷಯ, ಅದನ್ನು ಮುಂದೆ ನೋಡೋಣ) ಏಕೆಂದರೆ ನಮಗೆ ಆಕರ್ಷಕ ಆಕಾರವಿದೆ, ವಿದ್ಯೆ ಇದೆ, ಕೃಷಿಯಲ್ಲಿ ಕ್ರಾಂತಿಯನ್ನೇ ಮಾಡಿ ಬಿಸಾಕಿದ್ದೇವೆ. ವಿಜ್ಞಾನದ ಜುಟ್ಟು ಹಿಡಿದು ಮಣಿಸುತ್ತಿದ್ದೇವೆ.

ತಂತ್ರಜ್ಞಾನದ ಕುತ್ತಿಗೆಪಟ್ಟಿ ಹಿಡಿದಿದ್ದೇವೆ. ಆಯುಧಗಳ ಆವಿಷ್ಕಾರವೇ ನಾಗರಿಕತೆಯ ಪ್ರಧಾನ ಮಾನದಂಡವೆಂಬಂತೆ ಮಂಡಿಸಿರುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಘರಾವರಿ ವಿಧ್ವಂಸಕ ಆಯುಧಗಳ ರಾಶಿಯನ್ನೇ ಪೇರಿಸಿಬಿಟ್ಟಿದ್ದೇವೆ. ನೂರಾರು ಸಾರಿ ಈ ಭೂಮಿಯನ್ನು ಭಸ್ಮ ಮಾಡುವಂಥ ಅಣು, ಜಲಜನಕದ ಬಾಂಬುಗಳನ್ನು 'ಸುರಕ್ಷಿತವಾಗಿ' ಮಡಗಿದ್ದೇವೆ. ಪರಸ್ಪರ ಕುಳಿತು ಸಮಸ್ಯೆಗಳ ಬಗ್ಗೆ ಚರ್ಚಿಸುವುದನ್ನೂ, ಶಾಂತಿ/ಸಂಧಾನ ಮಾಡುವುದನ್ನು ಕಲಿತಿದ್ದೇವೆ. ಗಾಂಚಾಲಿ ಮಾಡಿವರೆ ಯುದ್ಧವನ್ನು ಮಾಡುವುದನ್ನೂ ಕಲಿತಿದ್ದೇವೆ. ಸ್ಥಿರವಾದ ಕೌಟುಂಬಿಕ ವ್ಯವಸ್ಥೆಗಳನ್ನು ರೂಢಿಸಿಕೊಂಡಿದ್ದೇವೆ. ಇರಲಿ ನಾವೀಗ ಸೂಪರ್ ಅಲ್ಲದಿದ್ದರೂ, ಹಿಂದಿನವರಿಗೆ ಹೋಲಿಸಿದರೆ ಅವರೆಲ್ಲಾ ಮಾಡಿದ ತಪ್ಪುಗಳನ್ನು ಮಾಡದ ನಾಗರಿಕರೆಂದು ಕರೆದುಕೊಳ್ಳೋಣವೇ?

ಆದರೆ ಇಲ್ಲಿಂದ ಏಕೋ 'ವರ್ಗೀಕರಣದ ಗಡಿ ಸಮಸ್ಯೆ' ಆರಂಭವಾಗುವಂತಿದೆ. ಖಚಿತವಾದ ಗಡಿ ರೇಖೆ ಎಳೆಯಲು ಸಾಧ್ಯವಾಗುತ್ತಿಲ್ಲ. ಚೇರೆಲ್ಲೋ ಒಂದು 'ಲೈನ್ ಆಫ್ ಕಂಟ್ರೋಲ್' ಇದ್ದಂತಿದೆ. ಈ ಸಮಸ್ಯೆ ಪರಿಹಾರಕ್ಕೆ ನಾವು ಸ್ವಲ್ಪ ಸರಿದು ನಮ್ಮ ನಾಗರಿಕೆಯ ಮಾನದಂಡಗಳನ್ನು ಒಂದೊಂದಾಗಿ ಪರೀಕ್ಷಿಸಬೇಕಾಗಿದೆ.

ಮೊದಲು ಅನಾಗರಿಕತೆಯ ಮುಖ್ಯ ಲಕ್ಷಣವಾದ ಕಾದಾಟಗಳನ್ನು ನೋಡೋಣ. ಅದನ್ನು ನಾವೀಗ ಯುದ್ಧ ಎನ್ನುತ್ತೇವೆ. ತುಂಬಾ ಹಳೆಯ ಕಡತಗಳನ್ನು ಬಿಚ್ಚುವುದು ಬೇಡ. ಇತ್ತೀಚಿನ ಉದಾಹರಣೆ ನೋಡಿ. ಇದಾಗಿದ್ದು ೧೯೬೮ರಲ್ಲಿ. ಕ್ಯಾತೆ ತೆಗೆದು ಯುದ್ಧಕ್ಕೆ ಹೋಗಿದ್ದು ಅಮೇರಿಕಾ ಎಂಬ ಬಹುದೊಡ್ಡ ದೇಶ. ಯುದ್ಧಕ್ಕೀಡಾಗಿದ್ದು ವಿಯೆಟ್ನಾಂ ಎಂಬ ಪುಟ್ಟದೇಶ. ಆಗ ದಕ್ಷಿಣ ವಿಯೆಟ್ನಾಮಿನ ಮೇಲೆ ದಾಳಿ ಮಾಡಿದ ಅಮೇರಿಕಾದ ಸೈನಿಕರ ಸಂಖ್ಯೆ ೫೪೩.೦೦೦. ದ. ಕೊರಿಯಾ, ಥೈಲ್ಯಾಂಡ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗಳಿಂದ ಅಮೆರಿಕಾ ಪರವಾಗಿ ಬಂದಿದ್ದ ಬಾಡಿಗೆ ಸೈನಿಕರ ಮೊತ್ತ ೭,೫೫.೦೦೦. ಜೊತೆಗೆ ಸಮೀಪದಲ್ಲೇ ನೆರವು ನೀಡುತ್ತಾ ಓಡಾಡುತ್ತಿದ್ದ ಅಮೇರಿಕಾ ಏಳನೇ ನೌಕಾಪಡೆ. ಇದರಿಂದ ವಿಯೆಟ್ನಾಮಿನಲ್ಲಾದ ಪರಿಣಾಮಗಳ ಪಟ್ಟಿ ಹೀಗಿದೆ..... ಸತ್ತವರ ಸಂಖ್ಯೆ ೪.೩೦.೦೦೦, ಗಾಯಗೊಂಡವರು, ಇಲ್ಲವಾದವರ ಸಂಖ್ಯೆ ೧೪,೩೫,೦೦೦, ತಬ್ಬಲಿಗಳಾದ ಮಕ್ಕಳ ಸಂಖ್ಯೆ ೮ಲಕ್ಷ, ವಿಧವೆಯರ ಸಂಖ್ಯೆ ೧೦ಲಕ್ಷ, ಅಂಗವಿಕಲರು ೫ಲಕ್ಷ, ನಿರುದ್ಯೋಗಿಗಳು ೩೦ಲಕ್ಷ, ಸೃಷ್ಟಿಯಾದ ವೇಶ್ಯೆಯರು ೫ಲಕ್ಷ, ಮಾದಕದ್ರವ್ಯ ವ್ಯಸನಿಗಳಾದವರು –೫ಲಕ್ಷ.

ಇದು ಜೀವಜಗತ್ತಿಗೆ ಸಂಬಂಧಿಸಿದ್ದು. ಭೌತಿಕ ಜಗತ್ತಿಗೆ ಸಂಬಂಧಿಸಿದ್ದನ್ನು ನೋಡಿ; ಅವರ ಬಾಂಬ್ ದಾಳಿಗೀಡಾದ ಪ್ರಮುಖ ನಗರಗಳು ಆರು, ಇವುಗಳಲ್ಲಿ ಮೂರು ನಗರಗಳು ಸಂಪೂರ್ಣ ನಾಶವಾದರೆ ಉಳಿದವು ಬಹುಪಾಲು ನಾಶವಾದವು.

ಆರು ರೈಲು ಮಾರ್ಗಗಳು ಹಾಗೂ ಎಲ್ಲಾ ರೈಲು ನಿಲ್ದಾಣಗಳು, ಬಂದರುಗಳು ಬಾಂಬ್ ದಾಳಿಯಲ್ಲಿ ಸರ್ವನಾಶವಾದವು. ಜೊತೆಗೆ ೨೯೨೩ ಶಾಲೆಗಳು, ೪೬೫ ಪಗೋಡ ಹಾಗೂ ದೇವಾಲಯಗಳು, ೪೮೪ ಚರ್ಚುಗಳು, ೮೦೮ ಸಾಂಸ್ಕೃತಿಕ ಸ್ಮಾರಕಗಳು, ೨೫೦ ಆಸ್ಪತ್ರೆಗಳು, ೧೫೦೦ ಅನಾಥಾಲಯಗಳು ಮತ್ತು ಹೆರಿಗೆ ಆಸ್ಪತ್ರೆಗಳನ್ನು ನಾಶಮಾಡಲಾಯಿತು. ಇದಕ್ಕೆ ಬಳಸಿದ ಬಾಂಬುಗಳ ಮೊತ್ತ ೨೫,೫೦,೦೦೦ ಟನ್. ಇವುಗಳ ನಿರ್ಮಾಣ ವೆಚ್ಚ, ಇಂಥಾ ಹತ್ತು ವಿಯೆಟ್ನಾಮುಗಳನ್ನು ಮರುಸೃಷ್ಟಿ ಮಾಡುವಷ್ಟು ಮೊತ್ತ. ಈ ಯುದ್ಧಕ್ಕೆ ಕಾರಣ : ಅಲ್ಲಿನ ಅಪಾರ, ಅನನ್ಯ ನೈಸರ್ಗಿಕ ಸಂಪನ್ಮೂಲಗಳ ಕೊಳ್ಳೆಯಲ್ಲಿ ಏಕಸ್ವಾಮ್ಯ ಸಾಧಿಸುವುದು.

ಇಂಥ ಕನಿಷ್ಠ ೧೦೦ ಯುದ್ಧಗಳನ್ನು ಈ ಜಗತ್ತಿನ ನಾಗರಿಕ ರಾಷ್ಟ್ರಗಳು ಈವರೆಗೂ ಮಾಡಿವೆ. ಈ ಪಟ್ಟಿಯಲ್ಲಿ ಇಂಡೋ - ಚೈನಾ, ಇಂಡೋ - ಪಾಕಿಸ್ತಾನ್, ಇಂಡೋ-ಬಾಂಗ್ಲಾ ಯುದ್ಧಗಳನ್ನೂ, ಹಾಗೂ ಮೊದಲ ಮತ್ತು ದ್ವಿತೀಯ ಮಹಾಯುದ್ಧಗಳನ್ನು ಸೇರಿಸಬೇಕು. ಇಲ್ಲಿ ನಾಶವಾದರೆ, ವಿಧವೆಯಾದವರ, ಸೈನಿಕರ ಲೈಂಗಿಕ ದಾಳಿಗೀಡಾದ, ಸತ್ತ, ವೇಶ್ಯೆಯರಾದ ಹೆಂಗಸರ, ಸತ್ತ ಹಸುಗೂಸುಗಳ ಲೆಕ್ಕವನ್ನು ಕೂಡಿಸಬೇಕು, ನಮ್ಮ ನಾಗರಿಕತೆ ನಾಚಿಕೊಂಡಿತು.

ಇದಕ್ಕೆ ಒಂದು ಸ್ಯಾಂಪಲ್ ನೋಡಿ: "೧೯೧೪ರ ಮೊದಲ ವಿಶ್ವಯುದ್ಧ ಆರಂಭವಾದಾಗ ನೀಗ್ರೋಗಳನ್ನು ಬಹುಸಂಖ್ಯೆಯಲ್ಲಿ ಐರೋಪ್ಯ ಸೈನ್ಯಗಳಿಗೆ ಒತ್ತಾಯವಾಗಿ ಭರ್ತಿಮಾಡಿದರು, ರಣರಂಗಗಳಿಗೆ ಕರೆದೊಯ್ದು ಬಲಿಕೊಟ್ಟರು. ಇವರಲ್ಲಿ ಫ್ರೆಂಚರು ಕರೆದುಕೊಂಡು ಹೋದ ನೀಗ್ರೋಗಳ ಸಂಖ್ಯೆ ೨,೧೧,೦೦೦. ಇವರಲ್ಲಿ ಸತ್ತರೆಂದು ಅಧಿಕೃತವಾಗಿ ಘೋಷಿಸಲಾಗಿದ್ದು-೨೪,೭೬೨ ಮಾತ್ರ. ಆದರೆ ಹೋದವರಾರೂ ಹಿಂದಿರುಗಲೇ ಇಲ್ಲ." ಹೀಗೆಂದು ೧೯೨೧ರಲ್ಲಿ 'ಗೋಲ್ಡ್‌ಕೋಸ್ಟ್ ಇಂಡಿಪೆಂಡೆಂಟ್' ಎಂಬ ಪತ್ರಿಕೆ ಬರೆಯಿತು.

ಇದು ಅಲ್ಲಿಗೇ ನಿಲ್ಲಲಿಲ್ಲ. ೧೯೨೬ರ ಮೇ ತಿಂಗಳಲ್ಲಿ ಒಂದು ದಿನ ಮೊರಕ್ಕೋದ ಜನ ನಾಯಕ ಅಬ್ದುಲ್ ಕರೀಮನ ಹಳ್ಳಿಯ ಮೇಲೆ ಫ್ರೆಂಚ್ ಮತ್ತು ಸ್ಪಾನಿಷ್ ವಿಮಾನಗಳು ಬಾಂಬ್ ದಾಳಿ ಮಾಡಿದವು. ಕರೀಮನನ್ನು ಸೆರೆ ಹಿಡಿದವು. ಆಗ ವಿಷಾದದಿಂದ ಕರೀಮ್ ಹೇಳುತ್ತಾನೆ....., "ಈ ಸಲ ನಿಮ್ಮ ವಿಮಾನಗಳು ಗಂಡಸರನ್ನು ಕೊಂದಿವೆಯೆಂದು ನನಗೆ ಆಶ್ಚರ್ಯವಾಗಿದೆ. ಸಾಮಾನ್ಯವಾಗಿ ಅವು ಹೆಂಗಸರನ್ನು ಕೊಲ್ಲುತ್ತವೆ. ನಿಮ್ಮದು ಹೊಸಮಟ್ಟಿನ ನಾಗರಿಕತೆ. ನಿಮ್ಮ ಬಳಿ ದೊಡ್ಡ ಬಾಂಬುಗಳಿವೆ, ಆದ್ದರಿಂದ ನೀವು ನಾಗರಿಕರು. ನನ್ನಲ್ಲಿರುವುದು ರೈಫಲ್ ಗುಂಡುಗಲು ಮಾತ್ರ, ಆದ್ದರಿಂದ ನಾನು ಅನಾಗರಿಕ."

ಹಾಗೆ ತೀರಾ ಇತ್ತೀಚೆಗೆ ಇದೇ ಅಮೇರಿಕಾ ಇರಾಕ್ ಎಂಬ ಪುಟ್ಟ ರಾಷ್ಟ್ರದ ಮೇಲೆ ಯುದ್ಧ ಘೋಷಿಸಿ ೮೮ ಸುತ್ತುಗಳಲ್ಲಿ. ೪೩ ದಿನಗಳ ಕಾಲ, ಒಟ್ಟು ೨ ಲಕ್ಷ ೨೦ ಸಾವಿರ ಟನ್ ಬಾಂಬುಗಳನ್ನು ಸುರಿಯಿತು. ಆಗ ಸತ್ತವರ ಸಂಖ್ಯೆ ೩ ಲಕ್ಷ, ಒಟ್ಟು ನಾಶವಾದ ಜನಸಾಮಾನ್ಯರ ಆಸ್ತಿಪಾಸ್ತಿಗಳ ಮೊತ್ತ ೨೫೦ ಬಿಲಿಯನ್ ಡಾಲರ್‌ಗಳು. ೪೩ ಸಾರ್ವಜನಿಕ ಆಸ್ಪತ್ರೆಗಳು. ೧೫ ಪ್ರಮುಖ ಔಷಧ ಕಾರ್ಖಾನೆಗಳು, ಇತ್ಯಾದಿ..... ಎಲ್ಲವನ್ನೂ ಸರ್ವನಾಶ ಮಾಡಲಾಯಿತು. ಇಡೀ ದೇಶವನ್ನು ರೋಗಿಗಳ ಸಂತೆಯನ್ನಾಗಿ ಮಾಡಲಾಯಿತು. ಆದರೆ ಅಲ್ಲಿಗೆ ಔಷಧ ಒದಗಿಸುವುದು ಮಾನವೀಯತೆಯಲ್ಲವೆ? ಆದ್ದರಿಂದಲೇ ತಾನೆ ನಾವೆಲ್ಲ ನಾಗರಿಕರಾಗುವುದು! ಬ್ರಿಟನ್ನಿನ ಹಲವು ಕಂಪನಿಗಳು ಇಲ್ಲಿ ವ್ಯಾಪಾರಕ್ಕೆ ಇಳಿದವು. ಐದುರೂಪಾಯಿದ್ದ ಬ್ಯಾಂಡೇಜಿನ ಬೆಲೆ ನೂರು ರೂಪಾಯಿಗಳಿಗೇರಿತು, ಇಪ್ಪತ್ತುರೂಪಾಯಿ ಇದ್ದ ಇನ್‌ಸುಲಿನ್‌ನ ಬೆಲೆ ಐನ್ನೂರಕ್ಕೇರಿತು. ಹೆಣದ ರಾಶಿಗಳ ಮೇಲೆ ಅದ್ಭುತ ವ್ಯಾಪಾರ ನಡೆಯಿತು. ಲಾಭದ ಹೊಳೆಯೇ ಹರಿಯಿತು.

ಇಂಥಾ ಸಾವಿರಾರು ಉದಾಹರಣೆಗಳು ಇಂದು ನಮ್ಮ ಮುಂದಿವೆ. ಈ ಪಟ್ಟಿಯನ್ನು ಎಷ್ಟು ಉದ್ದಕ್ಕೆ ಬೇಕಾದರೂ ಬೆಳೆಯಬಹುದು. ಬೆಲ್ಚಿ ದಲಿತದಹನದಿಂದ ಹಿಡಿದು ಇತ್ತೀಚಿನ ಕೋಲಾರದ ಕಂಬಾಲಪಲ್ಲಿ ದಲಿತದಹನದವರೆಗೆ, ಖಾಂಡವ ದಹನದಿಂದ ಹಿಡಿದು ಇತ್ತೀಚಿನ ನರೇಂದ್ರ ಮೋದಿ ಕೃಪಾಪೋಷಿತ ಗುಜರಾತ್ ದಹನ ಖಾಂಡದವರೆಗೆ, ಗಾಂಧಿಹತ್ಯೆಯಿಂದ ಹಿಡಿದು ಬೆಳ್ಳೊಟ್ಟಿನ ಪಾರ್ವತಿ, ಹಾಜಿಮಾರ ಹತ್ಯೆಯವರೆಗೆ ದಿನಕ್ಕೊಂದು ಉದಾಹರಣೆ ನೀಡಬಹುದು. ಈಗ ಗಡಿ ಸಮಸ್ಯೆಯನ್ನು ಬಗೆಹರಿಸಲು ನಿಮಗೆ ಕೆಲವು ಒಳ ನೋಟಗಳು ಸಿಕ್ಕಿರಬಹುದು, ಪ್ರಯತ್ನಿಸಿ, ನಿಮಗೆ ಯಶಸ್ಸಾಗಲಿ, ನಮ್ಮ ನಾಗರಿಕತೆಯ ದಾರಿಯನ್ನು ಹರ ಕಾಯಲಿ.

ಹಾಗೇ ನಾನು ಮೊದಲಲ್ಲಿ ಹೇಳಿದ ಅಧಿಕಾರಿಯ ಹೆಸರು ಬೇಕಿಲ್ಲ. ಈ ದೇಶದ ಒಟ್ಟು ಅಧಿಕಾರಿ ವರ್ಗದಲ್ಲಿ ಶೇಕಡಾ ೯೯ ಭಾಗದಲ್ಲಿ ಯಾವುದೇ ಹೆಸರನ್ನು ಅವನಿಗೆ ಅಂಟಿಸಬಹುದು. ಅಂದ ಹಾಗೆ ಅವನ ಮನೆಯ ನಿರ್ಮಾಣ ವೆಚ್ಚ ಕನಿಷ್ಟ ೩೦ಲಕ್ಷಗಳು. ಇಷ್ಟು ಹಣವನ್ನು ಗಳಿಸಲು ಅವನು ಅದೇ ಸ್ಥಾನದಲ್ಲಿ ನಾಲ್ಕು ಜನ್ಮ ಉಳಿದರೂ ಅವನ ಸಂಬಳದ ಮೊತ್ತ ಅಷ್ಟಾಗುವುದಿಲ್ಲ. ಆದರೂ ಅವನು ನಾಗರಿಕ. ಆ ಕೆಲಸಗಾರ ಅನಾಗರಿಕ.

ಈಗ ನಾವು ಅನಾಗರಿಕರೆಂದು ಹೇಳುವ ಒಡಿಯೇ ಜನಾಂಗವು ಬಹಳ ಹಿಂದೆಯೇ ನಮಗಾಗಿ ಹೀಗೆ ಪ್ರಾರ್ಥಿಸಿದೆ: "ಒಡಕಿನ ನಮ್ಮೀ ಪಾಡ ನೋಡು ತಂದೆ! ಸೃಷ್ಟಿಯ ದಿವ್ಯಮಂಡಲದಿಂದ ಮನುಷ್ಯಕುಟುಂಬ ಮಾತ್ರ ಹೊರ ನಡೆದಿದೆ!

ಛೇದಿಸಿದವರು, ಭಾಗಿಸಿದವರು ನಾವೇ, ದಿವ್ಯ ಮಂಡಲಕೆ ಮರಳಬೇಕಾದವರೂ ನಾವೇ! ಪ್ರೀತಿ ಕಲಿಸು ತಂದೆ ನಮ್ಮಲ್ಲಿ, ಕರುಣೆ ಗೌರವಗಳು! ಭೂಮಿಯು ಪ್ರತಿ ಮನುಷ್ಯರ ಗಾಯಗಳ ಮಾಗಿಸುವ ಪ್ರೇಮ ಕಲಿಸು!"

ಬಹುಶಃ ಈ ಜನಾಂಗ ಈಗಿನ ನಮ್ಮ ನಾಗರಿಕ ಕೆಲಸಗಳನ್ನು ನೋಡಿದರೆ 'ನಾಗರಿಕ' ಎಂಬುದು ಬೈಗುಳವೆಂದು ಭಾವಿಸುತ್ತಿದ್ದರೇನೋ?

ಮರಾಠಿ ಸಾಹಿತ್ಯದಲ್ಲಿ ಭಕ್ತಿಸ್ವರೂಪ

– ಚಂದ್ರಕಾಂತ ಪೋಕಳೆ

೧೦-೧೧ನೇ ಶತಮಾನದಲ್ಲಿ ಮರಾಠಿ ಭಾಷೆಯ ಉಗಮ ಕಾಲವೆಂದು ವಿದ್ವಾಂಸರು ಒಪ್ಪಿದ್ದಾರೆ. 'ಚಾವುಂಡರಾಯ ಕರವಿಲೆ' ಎಂದು ಬರೆದ ಮರಾಠಿಯ ಶಿಲಾಶಾಸನವು ಕ್ರಿ.ಶ. ೯೮೩ರಲ್ಲಿ ಶ್ರವಣ ಬೆಳಗೋಳದಲ್ಲಿ ದೊರಕಿದ ಸಂಗತಿ ಸರ್ವವಿಖ್ಯಾತವಾದುದು. ಮಹಾನುಭಾವ ಪೂರ್ವಕಾಲದಲ್ಲಿ ಮರಾಠಿ ವಾಙ್ಮಯವು ವಿವಿಧ ಜೀವನಾನುಭವದ ಕಥೆಗಳಿಂದ ಪರಿಪುಷ್ಟವಾಗಿತ್ತು. ಮರಾಠಿ ಭಾಷೆಯ ಸಾಹಿತ್ಯದ ಪರಂಪರೆಯು ಸಂಸ್ಕೃತ-ಪ್ರಾಕೃತ ವಾಙ್ಮಯಕ್ಕಿಂತ ತೀರಾ ಭಿನ್ನವಾದುದು. ಮರಾಠಿ ಭಾಷೆಯ ಬಹುತೇಕ ಸಾಹಿತ್ಯವು ಆಧ್ಯಾತ್ಮಿಕ ಸ್ವರೂಪದ್ದಾಗಿದ್ದು ನಾಥ, ಮಹಾನುಭಾವ, ವಾರಕರಿ, ಪತ್ರ, ಸಮರ್ಥ ಮುಂತಾದ ಪಂಥಗಳ ಅನುಯಾಯಿಗಳಿಂದ ರಚನೆಗೊಂಡಿತು.

೧೨ನೇ ಶತಮಾನದಲ್ಲಿ ನಾಥಪಂಥವು ಮಹಾರಾಷ್ಟ್ರದಲ್ಲಿ ಧಾರ್ಮಿಕ ಜಾಗೃತಿಯನ್ನು ಕೈಗೊಂಡಿತು. ಮಚ್ಛೇಂದ್ರನಾಥ ಮತ್ತು ಗೋರಖನಾಥನ ಪ್ರಭಾವ ಬಹಳ ದೊಡ್ಡದು. ಇದರಿಂದ ಸಾಮಾನ್ಯರ ಧಾರ್ಮಿಕ ಜೀವನಕ್ಕೆ ಉನ್ನತ ಸ್ವರೂಪ ಪ್ರಾಪ್ತವಾಯಿತು. ನಾಥಪಂಥವು ಮೂಲತಃ ಶೈವ ಸಂಪ್ರದಾಯಕ್ಕೆ ಸೇರಿದ್ದು,

ತವರು ಹರಿ-ಹರ ಐಕ್ಯವನ್ನು ಸ್ಥಾಪಿಸಿದರು. ಅದು ಹರಬೋಧಿ ಸಿದ್ಧರ ಪಂಥ. ಹಾಗೆಯೇ ಮಹಾನುಭಾವ ಪಂಥಕ್ಕೂ ನಾಥ ಪಂಥಕ್ಕೂ ಸಂಬಂಧವಿದೆ. 'ವಿವೇಕ ಸಾಧು' (೧೨ನೇ ಶತಮಾನ) ಮರಾಠಿಯ ಆದ್ಯಗ್ರಂಥ. ಅದ್ವೈತ, ಯೋಗ, ಸಗುಣೋಪಾಸನೆಯನ್ನು ಇಲ್ಲಿ ಬಣ್ಣಿಸಲಾಗಿದೆ. ಮಹಾನುಭಾವ ಪಂಥವು ಮರಾಠಿ ಸಾಹಿತ್ಯದ ಪರಂಪರೆಯನ್ನೇ ಆರಂಭಿಸಿತು. ಇದು ದ್ವೈತಮತದ ಭಕ್ತಿಪಂಥವಾಗಿದೆ. ಶ್ರೀಕೃಷ್ಣ - ದತ್ತ - ಚಾಂಗದೇವ ಗುಂಡಮ್ ರಾವುಳ ಚಕ್ರಧರ ಈ ಪಂಚಕೃಷ್ಣರು ಅವರ ದೃಷ್ಟಿಯಲ್ಲಿ ದೇವರು. ಇಲ್ಲೂ ಕರ್ಮಕಾಂಡವಿದೆ. ಜೈನ ಧರ್ಮದ ಪ್ರಭಾವವೂ ಸಾಕಷ್ಟಿದೆ. ಇವರ ವಾಙ್ಮಯದಲ್ಲಿ ಪಂಥ ಸಂಸ್ಥಾಪಕರ ಮತ್ತು ದೇವತೆಗಳ ಚರಿತ್ರೆಯಿದೆ. ಮಹಾತ್ಮ್ಯ-ಸ್ತೋತ್ರ-ಕಾವ್ಯ- ಹೀಗೆ ಕ್ರಮಬದ್ಧವಾಗಿ ಮಹಾನುಭಾವ ವಾಙ್ಮಯವು ವಿಸ್ತಾರಗೊಂಡಿತು. ಭಾಷೆ ಮತ್ತು ಸಾಹಿತ್ಯದ ಬಾಬತ್ತಿನಲ್ಲಿ ಮಹಾನುಭಾವ ಪಂಡಿತರ ಸಾಧನೆ ಪ್ರಶಂಸಾರ್ಹವಾದುದು. 'ಲೀಳಾ ಚರಿತ್ರವು' ಮಹಾನುಭಾವ ಪಂಥದ ಮೊದಲಗ್ರಂಥ ಮರಾಠಿಯ ಪ್ರಾಚೀನ ಗದ್ಯಗ್ರಂಥ ಮತ್ತು ಚರಿತ್ರಗ್ರಂಥ.

ಕ್ರಿ.ಶ. ೧೨೫೦ರಿಂದ ೧೩೫೦. ಇದು ಮರಾಠಿ ಸಾಹಿತ್ಯ ಇತಿಹಾಸದ ಆರಂಭದ ಹಂತ. ನಾಥಪಂಥವು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸುವ ಮಹಾನುಭಾವ ಧಾರಕ ಪಂಥದವರ ಧಾರ್ಮಿಕ ಸಾಧನೆಯಿಂದ ನಮ್ಮ ಸಾಮುದಾಯಿಕ ಕರ್ತೃತ್ವದಿಂದಾಗಿ ಮಹಾರಾಷ್ಟ್ರದ ತುಂಬೆಲ್ಲ ಜಾಗೃತಿಯ ಮತ್ತು ಬೋಧನೆಯ ಒಂದು ಗಾಳಿಯೇ ಬೀಸಿತ್ತು. ಆ ಗಾಳಿಯಿಂದ ಬಂದ ಪ್ರತಿಧ್ವನಿಯು ಈ ಕಾಲದ ಕೊನೆಯವರೆಗೂ ಸಾಹಿತ್ಯದಲ್ಲೂ ಕೇಳಿಬಂತು. ಇದರ ಅನಂತರ ಬಹಮನಿ ರಾಜ್ಯ ಸ್ಥಾಪನೆಯಿಂದ (೧೩೪೭)ಮಹಾರಾಷ್ಟ್ರದ ಜನಜಾಗೃತಿಯ ಮೊದಲ ಹಂತ ಕ್ಷೀಣಿಸಿತು. ನಾಮದೇವನ ಸಾವಿನ ನಂತರ ಹಿಂದೆ ಸರಿಯಿತು.

೧೧ರಿಂದ ೧೪ ನೇ ಶತಕದ ಕಾಲಖಂಡವೆಂದರೆ ದೇಶಭಾಷೆಯ ಉತ್ಕರ್ಷದ ಕಾಲ-ವಿವಿಧ ಪ್ರಾದೇಶಿಕ ಜನಸಮುದಾಯದವರಲ್ಲಿ ಏಕಭಾಷಿಕತೆಯ ಅರಿವು ಮೂಡಿದ್ದು ಕಂಡುಬರುತ್ತದೆ. ಮಹಾಂತ ಮಹಾರಾಷ್ಟ್ರದವನಾಗಿದ್ದರೆ. ಮಹಾರಾಷ್ಟ್ರ ಸಾತ್ತಿಕಗೊಳ್ಳುತ್ತದೆ' ಎಂಬ ಚಕ್ರಧರನ ಮಾತಿನಲ್ಲಿ ಅಭಿಮಾನವಿದೆ.

ಸಂಸ್ಕೃತದಲ್ಲಿ ಬೇಡ ಮರಾಠಿಯಲ್ಲಿಯೇ ಗ್ರಂಥರಚನೆ ಮಾಡಿ ಎಂದು ನಾಮದೇವ ಬೋಧಿಸುತ್ತಾನೆ. ಮರಾಠಿ ಅಮೃತಕ್ಕಿಂತಲೂ ಸವಿ ಎಂದು ಜ್ಞಾನದೇವ ಮರಾಠಿಯ ಗುಣಗಾನ ಮಾಡುತ್ತಾನೆ. ಪ್ರಾದೇಶಿಕ ಭಾಷೆಯ ಅಭಿಮಾನದ ಅರಿವು ಮಾಡಿಕೊಡುವ ಚಕ್ರಧರ, ಜ್ಞಾನೇಶ್ವರರು ಮಹಾರಾಷ್ಟ್ರಸಂಸ್ಕೃತಿಗೆ ಗಟ್ಟಿಯಾದ ಬುನಾದಿ ಹಾಕಿದರು.

ವಾರಕರಿ ಸಂತರು ಪ್ರಪಂಚದಲ್ಲಿದ್ದು ಪರಮಾರ್ಥ ಸಾಧಿಸುವ ಮಾರ್ಗವನ್ನು ಬೋಧಿಸಿದರು. ಮಹಾನುಭಾವ ಪಂಥವು ಏಕಾಂತಿಕ ನಿವೃತ್ತಿಪಾದ ಮತ್ತು ಕಠಿಣ ಆಚಾರಧರ್ಮದಿಂದಾಗಿ ವಿಫಲಗೊಂಡಿತು. ವಾರಕರಿಪಂಥದಲ್ಲಿ ಎಲ್ಲ ಜಾತಿಧರ್ಮದವರಿಗೆ ಸಮಾನ ಸ್ಥಾನಮಾನ ಸಿಕ್ಕಿತು. ಮಹಾನುಭಾವರು ವಿಪುಲಗ್ರಂಥ ರಚಿಸಿದರು. ವಾರಕರಿ ಪಂಥವು ಅಭಂಗ, ಪದಗಳಂತಹ ಸ್ಫುಟರಚನೆಗೆ ಮಹತ್ವ ನೀಡಿತು. ಜ್ಞಾನೇಶ್ವರನು ತನ್ನ ಗೀತಾಟೀಕೆಯಲ್ಲಿ ಜನರಿಗೆ ರುಚಿಸುವ, ಅಂತಃಕರಣಕ್ಕೆ ತಟ್ಟುವ, ವಿವೇಕ-ಬುದ್ಧಿಗೆ ಚಾಲನೆ ನೀಡುವ ರಸಮಯ ಟೀಕೆಯನ್ನು ರಚಿಸಿದರು. ಇದೇ ವಾರಕರಿ ಸಮಾಜ ಅದನ್ನು ಕಂಠಪಾಠ ಮಾಡಿತು. ಅಭಂಗಗಳು ಆಯಾ ಜಾತಿಯ ಪರಿಭಾಷೆಯಲ್ಲಿ ಮೂಡಿ ಬಂದಿದ್ದರಿಂದ ಹೆಚ್ಚು ಪ್ರಭಾವ ಬೀರಿತು.

ಕ್ರಿ.ಶ. ೧೩೫೦-೧೬೫೦ ಎರಡನೆಯ ಕಾಲಖಂಡ. ಏಕನಾಥನು ವಿವಿಧ ಬಗೆಯ ಸಾಹಿತ್ಯ ರಚನೆಯಿಂದ ಬೀಜೋತ್ಪತ್ತಿ ಮಾಡಿದರು. ಮುಕ್ತೇಶ್ವರನಂಥವರು ಶುದ್ಧ ಕಲಾದೃಷ್ಟಿಯಿಂದ ಗ್ರಂಥ ರಚಿಸಿದರು. ತುಕಾರಾಮನ ಅಭಂಗರಚನೆಯು ಪರಂಪರೆಯ ಪರಮೋತ್ಕರ್ಷವನ್ನು ತಲುಪಿತು. ಹೀಗಾಗಿ ಏಕನಾಥ-ಮುಕ್ತೇಶ್ವರ-ತುಕಾರಾಮ ಇವರು ಈ ಕಾಲದ ಪ್ರತಿನಿಧಿಗಳು. ಏಕನಾಥ ಪಂಡಿತಪರಂಪರೆಯ ಅಧ್ವರ್ಯು ಮೊದಲ ಕಾಲಖಂಡದಲ್ಲಿ ಕಾವ್ಯದ ಗುಣಧರ್ಮವಿದ್ದರೆ, ಎರಡನೇ ಕಾಲಖಂಡದಲ್ಲಿ ಪಾಂಡಿತ್ಯ ಪೂರ್ಣ ಗದ್ಯದ ರಚನೆಗೆ ಮಹತ್ವ ಬಂತು.

ಈ ಕಾಲದ ಕವಿಗಳು ಪಾರಲೌಕಿಕದ ಜೊತೆಗೆ ಲೌಕಿಕ ಮತ್ತು ಪಾರಮಾರ್ಥದ ಜತೆಗೆ ಐಹಿಕ ವಿಷಯದ ಕಡೆಗೆ ಹೊರಳಿದರು. ಜಾನೇಶ್ವರನ ಪದಲಾಲಿತ್ಯ, ನಾಮದೇವನ ಭಾವಕೋಮಲತೆ, ಏಕನಾಥನ ಧೀರಗಂಭೀರತೆ, ತುಕಾರಾಮನ ವಾಣಿಯಲ್ಲಿ ಗೋಚರಿಸದಿದ್ದರೂ ಲೋಕಕಲ್ಯಾಣದ ತಳಮಳ, ಹೃದಯಸ್ಪರ್ಶಿ ಉತ್ಕಟತೆ, ಮರ್ಮಭೇದಿ ದಾಹಕತೆ, ಪ್ರಕ್ಷೋಭಿಕ ವಿಚಾರ ಪ್ರಣಾಲಿಯು ಒಗ್ಗೂಡಿದೆ. ಅನುಭವ ದಿಂದ ಹೊರಹೊಮ್ಮಿದ ತೇಜಸ್ಸು ಮತ್ತು ಶಾಬ್ದಿಕಸಾಮರ್ಥ್ಯದಿಂದಾಗಿ ತುಕಾರಾಮನ ಅಭಂಗವಾಣಿಗೆ ಅಮರತ್ವ ದಕ್ಕಿತು. ದೇವರು - ಭಕ್ತಿ ಈ ಪ್ರೇಮಸಂಬಂಧದ ಜತೆಗೆ ಸಮಾಜ ಮತ್ತು ವ್ಯಕ್ತಿ ಸಂಬಂಧದ ಒಳಿತು ಕೆಡುಕುಗಳ ಕಾಲಸಾಪೇಕ್ಷ ಪ್ರತಿಧ್ವನಿಯು ಈ ಆತ್ಮನಿಷ್ಠ ವಾಙ್ಮಯದಲ್ಲಿ ಸ್ಪಷ್ಟವಾಗಿ ಮೂಡಿತು. ಆಧ್ಯಾತ್ಮಿಕ ಮಾನವತಾವಾದದ ತತ್ವಜ್ಞಾನ ಹೇಳುವ ಏಕನಾಥ - ತುಕಾರಾಮನಲ್ಲಿ ಸಾಮಾಜಿಕ ನೀತಿಯ ಭಾಗ ಬರುವುದು ಸಹಜ. ಮುಕ್ತೇಶ್ವರನು ರಾಮಾಯಣ - ಮಹಾಭಾರತ ಮೂಲಕ ಸಾಮಾಜಿಕ ನೀತಿಯನ್ನು ಬೋಧಿಸಿದನು. ಮೊದಲ ಕಾಲಖಂಡದಲ್ಲಿ ಪ್ರಾಸಂಗಿಕ ಭಾಷೆ ಬಳಸಿದ್ದು ಕಂಡು ಬಂದರೆ, ಎರಡನೆ ಕಾಲಖಂಡದಲ್ಲಿ ವಾಸ್ತವಕ್ಕೆ ಧೀರ ಗಂಭೀರ ಜತೆಗೆ ಒರಟು ಭಾಷೆಗೆ ಮಹತ್ವ ನೀಡಲಾಯಿತು.

ಕ್ರಿ.ಶ. ೧೬೫೦-೬೦ರ ಕಾಲದ ಮೂರನೇ ಕಾಲಖಂಡದಲ್ಲಿ ಮುಸಲ್ಮಾನರ ವರ್ಚಸ್ಸು ಕಂಡು ಬರುತ್ತದೆ. ನಿಜಾಮಶಾಹಿ - ಆದಿಲ್‌ಶಾಹಿ; ಶಿಯಾಸುನ್ನಿ;ದಕ್ಷಿಣ ಆದಿಲ್ ಶಾಹಿ - ಪರದೇಶಿ ಎಂಬ ವ್ಯತ್ಯಾಸದಿಂದ ಮುಸಲ್ಮಾನರಲ್ಲಿ ವೈಮನಸ್ಸು ಬೆಳೆಯಲಾರಂಭಿಸಿತ್ತು. ಜತೆಗೆ ದಿಲ್ಲಿ ಮೊಘಲರ ಉಪಟಳ. ಹೀಗಾಗಿ ಮರಾಠ ಸರದಾರರ ಪರಾಕ್ರಮ ಮತ್ತು ಮುತ್ಸದ್ದಿತನಕ್ಕೆ ಹೆಚ್ಚು ಅವಕಾಶ ಸಿಗತೊಡಗಿತು. ೧೬೪೬ರಲ್ಲಿ ಶಿವಾಜಿಯು ಸ್ವರಾಜ್ಯದ ತೋರಣವನ್ನು ಕಟ್ಟಿ ಆದಿಲಶಾಹಿ ರಾಜಸತ್ತೆಗೆ ಆಘಾತ ನೀಡಿದ. ಸ್ವರಾಜ್ಯದ ಕಾಲ ಖಂಡದಲ್ಲಿಯ ಭೌತಿಕ ಉತ್ಕರ್ಷದ ಪ್ರತಿಬಿಂಬವು ರಾಮದಾಸ, ವಾಮನ, ಶಾಹೀರ ಕವಿಗಳಲ್ಲಿ ಮೂಡಿತು. ಈ ಕಾಲದ ಸಾಹಿತ್ಯವು ಎಲ್ಲ ಬಗೆಯ ಸಂಪನ್ನತೆ ಮತ್ತು ಸಾಮರ್ಥ್ಯವನ್ನು ಅರಗಿಸಿಕೊಂಡಿತು. ಒಂದೆಡೆ ಸ್ವಾತಂತ್ರ್ಯದ ಅನುಭೂತಿ, ಮತ್ತೊಂದೆಡೆ ಸ್ವರಾಜ್ಯದ ಸಂರಕ್ಷಣೆಯ ಪ್ರಶ್ನೆ ತಲೆಯೆತ್ತಿತ್ತು. ಹೀಗಾಗಿ ಶೌರ್ಯ-ಪರಾಕ್ರಮಕ್ಕೆ ಪೂರಕವಾಗುವಂತಹ ಸಾಹಿತ್ಯ ನಿರ್ಮಾಣಗೊಂಡಿತು. ಮರಾಠಿಯು ರಾಜ್ಯ ಭಾಷೆಯಾಯಿತು. ಪರಿಣಾಮ ನಾನಾ. ಪಂಥದ ಜಾತಿಯ, ಕವಿ-ಶಾಹೀರ-ಬಖರಕಾರರು ವಿಪುಲ ಸಾಹಿತ್ಯವನ್ನು ನಿರ್ಮಿಸಿದರು. ಲಲಿತ ಸಾಹಿತ್ಯವನ್ನು ಲಲಿತೇತರ ಸಾಹಿತ್ಯ ಎರಡೂ ರೀತಿ ಈ ಕಾಲಖಂಡದಲ್ಲಿ ಕಾಣುತ್ತೇವೆ.

ಧರ್ಮರಕ್ಷಣೆಗಾಗಿ ಸ್ವರಾಜ್ಯ ಸಂಪಾದನೆ ಎಂಬ ಧ್ಯೇಯವನ್ನು ಜನರೆದುರಿಗಿಟ್ಟು ಸ್ವಂತ ನಾಯಕತ್ವ ವಹಿಸಿ ಸತ್ತಾಧಾರಿ ಮರಾಠಿವರ್ಗದ ರಾಜಕೀಯ ಆಕಾಂಕ್ಷೆಯನ್ನು ಶಿವಾಜಿಯು ಈಡೇರಿಸಿದರೆ, ರಾಮದಾಸನು ದಾಸಬೋಧದ ಮೂಲಕ ತತ್ವಜ್ಞಾನವನ್ನು ದೊರಕಿಸಿ ಕೊಟ್ಟ; ರಾಮದಾಸನು ಭಾಗವತಧರ್ಮಕ್ಕೆ ಮಹಾರಾಷ್ಟ್ರಧರ್ಮದ ಸ್ಥಾನವನ್ನು ದೊರಕಿಸಿಕೊಟ್ಟ. ಇದೇ ಅವರ ರಾಜಕಾರಣದಲ್ಲಿಯ ಲೋಕೋತ್ತರ ಕಾರ್ಯ.

ತುಕಾರಾಮನ ಕಾರ್ಯ (ಶಿವಾಜಿಪೂರ್ವ ಕಾಲವು) ಇಲ್ಲಿಗೆ ಮುಗಿಯುತ್ತದೆ ಇಲ್ಲಿಂದ ರಾಮ ದಾಸನ ಕಾರ್ಯ ಆರಂಭವಾಗುತ್ತದೆ ಎಂದು ಚರಿತ್ರಕಾರರು ಅನ್ನುತ್ತಾರೆ. ರಾಮದಾಸನಿಗೆ ಸನಾತನಪರಂಪರೆಯ ಅಭಿಮಾನ ಹಾಗೂ ಬ್ರಾಹ್ಮಣವರ್ಗ ಪಕ್ಷಪಾತವಿತ್ತು. ಹೀಗಾಗಿ ತುಕಾರಾಮನಿಗೆ ಹೋಲಿಸಿದರೆ, ರಾಮದಾಸನು ಸಾಮಾಜಿಕ ವಿಷಯದಲ್ಲಿ ಪ್ರತಿಗಾಮಿಯಾಗಿದ್ದ. ಅವರ ಗ್ರಂಥರಚನೆಯಲ್ಲೂ ಸಾಂಪ್ರದಾಯಿಕ ಗಂಧದ್ದೇ ಪ್ರಭಾವವಿದೆ. ಹೀಗಾಗಿ ಅವರ ಸಾಹಿತ್ಯವು ಬಹುಜನ ಸಮಾಜಕ್ಕೆ ಪ್ರೇರಣೆ ನೀಡಲಿಲ್ಲ. ಅವರು ಹೇಳಿದ್ದು - ಸಾಮರ್ಥ್ಯದ ಉಪಾಸನೆ, ಸಂಘಟನೆ ಎಂಬ ತತ್ವಜ್ಞಾನ. ಅವರದ್ದು 'ಆತ್ಮನಿಷ್ಠ ಕಾವ್ಯ'. ಅವರ ವಾಙ್ಮಯದ ಪ್ರಕೃತಿಯು ಗಂಭೀರವಾದುದು. ಅವರ ಓವಿಗಳಿಗೆ ಸುಭಾಷಿತ ದರ್ಜೆ ಪ್ರಾಪ್ತವಾಯಿತು.

ಪಂಡಿತಕವಿಗಳು ಶಾಬ್ದಿಕಕಸರತ್ತಿಗೆ ಮಹತ್ವ ನೀಡುತ್ತ ಅಲಂಕಾರಿಕ ಕಾವ್ಯ ರಚಿಸುತ್ತಿದ್ದ ಕಾಲದಲ್ಲೇ ನಾಥ ವಾರಕರಿ. ರಾಮದಾಸಿ ಮಂಡಳಿಯ ಕವಿಗಳು ಸಾಂಪ್ರದಾಯಿಕ ಸ್ವರೂಪದ ಆಧ್ಯಾತ್ಮಿಕ – ಭಕ್ತಿಪರ ರಚನೆಯಲ್ಲಿ ತೊಡಗಿದ್ದು ಕಂಡು ಬರುತ್ತದೆ. ಆನಂದಸಂಪ್ರದಾಯದ ಕವಿಗಳು ೧೭–೧೮ಶತಕದಲ್ಲಿ ಮರಾಠಿ ಸಾಹಿತ್ಯದ ದೃಷ್ಟಿಯಿಂದ ಮಹತ್ವದ ಕಾರ್ಯ ಮಾಡಿದರು. ಕೃಷ್ಣ ದಯಾರ್ಣವ ಮತ್ತು ಶ್ರೀಧರ ಇವರು ಈ ಸಂಪ್ರದಾಯದ ಮಹತ್ವದ ಕವಿಗಳು.

ಲೋಕಜಾಗೃತಿ ಮತ್ತು ಧರ್ಮಪ್ರಸಾರದ ಪ್ರೇರಣೆಯಿಂದ ಸಾಹಿತ್ಯರಚನೆಯನ್ನು ಮಾಡುವ ಪ್ರಾಚೀನ ಕವಿಗಳು ನಿಸ್ಪೃಹ ಮತ್ತು ವಿರಕ್ತ ವೃತ್ತಿಯ ಸಂತರಾಗಿದ್ದರು. ಅವರಲ್ಲಿ ಯಾಚಕವೃತ್ತಿಯಿಲ್ಲದ್ದರಿಂದ ಅವರ ಶಬ್ದಗಳಿಗೆ ಅಧಿಕಾರವಾಣಿಯ ಸ್ವರೂಪ ಪ್ರಾಪ್ತವಾಗಿತ್ತು. ಜನರ ಆಚಾರ–ವಿಚಾರಗಳಿಗೆ ರೂಪ ನೀಡುವ, ತಿದ್ದುವ ಸಾಮರ್ಥ್ಯ ಅವರ ವಾಣಿಗಿತ್ತು, ಲೇಖನಿಗಿತ್ತು. ಸಮಾಜಕ್ಕೆ ಇಂಥ ರೂಪ ನೀಡುವ ಸಮರ್ಥಶಾಲಿಯಾದ ಒಬ್ಬ ಕವಿಯೂ ಪೇಶ್ವೆಕಾಲದಲ್ಲಿ ಕಂಡು ಬರಲಿಲ್ಲ. ಶ್ರೇಷ್ಠ ಮೌಲ್ಯವು ಪ್ರತ್ಯಕ್ಷ ಜೀವನದಿಂದ ಹೊರ ಸಂದದ್ದೇ ಇದಕ್ಕೆ ಕಾರಣ. ಧಾರ್ಮಿಕ ಪಂಥದ ಹಿಂದಿನ ನೈತಿಕ ಪ್ರೇರಣೆಯು ಲುಪ್ತಗೊಂಡಿತು. ಅಂಧಶ್ರದ್ಧೆ, ಬಾಹ್ಯಾಡಂಬರ ಹೆಚ್ಚಾಯಿತು. ಹರಿದಾಸರು, ಕೀರ್ತನಕಾರರು ಸಾಮಾಜಿಕ ನಾಯಕತ್ವವನ್ನು ವಹಿಸಿದರು. ಕಾವ್ಯಶಾಸ್ತ್ರ ವಿನೋದಕ್ಕಾಗಿ ಕಥಾವಾಙ್ಮಯ ನಿರ್ಮಾಣವಾಯಿತು. ಅಖ್ಯಾನ ಕವಿತೆಯು ರಸಿಕತೆಗಾಗಿ ರಂಜನೆಗಾಗಿ ನಿರ್ಮಾಣಗೊಂಡಿತು. ಹೀಗಾಗಿ ಕ್ಲೃಪ್ತಿ, ಚಮತ್ಕೃತಿಗೆ ಮಹತ್ವ ಬಂತು. ಈ ಕಾಲದಲ್ಲಿ ಮಧ್ವಮುನಿಯು ತುಂಬ ಜನಪ್ರಿಯ ಕವಿ ಎನಿಸಿಕೊಂಡ. ಕಾನ್ಹಾ, ಸಂರಕ್ಷಿಸು ನಮ್ಮ ಗೋವು ಎಂಬ ಪದ್ಯಗಳು ಲೋಕಪ್ರಿಯವಾದವು. ಈ ಕವಿಯು ಪೇಶ್ವೆಯ ಅವನತಿಯ ಚಿತ್ರಣವನ್ನು ನೀಡುತ್ತಾನೆ.

ಮಹದಂಗಾ, ಮುಕ್ತಾಬಾಯಿ, ಜನಾಬಾಯಿ, ಬಹಿಣಾಬಾಯಿ, ವೇಣಾಬಾಯಿ, ಕಾನ್ಹೋಪಾತ್ರಾ ಇವರು ಪ್ರಾಚೀನ ಮರಾಠಿ ಸಾಹಿತ್ಯದ ಮಹತ್ವದ ಕವಯತ್ರಿಯರು. ಕರ್ತೃಕಾಂಡದ ವಿರುದ್ಧ ಸೆಣಸಾಡಿದವರು. ಬಹುಶಃ ಸಂತ ಕವಿಗಳಿಗೆ ವಿಠ್ಠಲನೇ ಪ್ರೇರಕ ಶಕ್ತಿ. ಈ ಲೋಕದೇವ ಇವತ್ತಿಗೂ ಜನಪ್ರಿಯ.

ಮೋರೋ ಪಂತರ ಕಥಾಕಥನ ಚಾತುರ್ಯವನ್ನು ಮರಾಠಿ ರಸಿಕರು ಎಂದೂ ಮರೆಯುವುದಿಲ್ಲ. ಅವನ ಭಾಷಿಕ, ಸಾಹಿತ್ಯಕ ಕಾರ್ಯ. ಬಹುದೊಡ್ಡದು. ತುಂಬಾ ಚರ್ಚೆಗೊಳಗಾದ ಕವಿ. ಪ್ರವರ್ತಕ ಕಥನಕವಿ. 'ಆರ್ಯ' ರಚನೆಯಲ್ಲಿ ಮರಾಠಿ ಭಾಷೆಯ ಸಾಮರ್ಥ್ಯವನ್ನೂ ವೈಭವವನ್ನೂ ಗುರುತಿಸಲಾಗಿದೆ.

ಶಾಹೀರ ಮತ್ತು ಪೋವಾಡೆಗಳಲ್ಲಿ ಸಮಕಾಲೀನ ಜೀವನದ ಚಿತ್ರಣವಿದೆ. ಇಲ್ಲಿ

ಭಕ್ತಿಗೆ ಮಹತ್ವವಿಲ್ಲ. ಲೌಕಿಕ ಬದುಕಿನ ಸುಖ-ದುಃಖದಲ್ಲಿ ಅವರು ತಾದಾತ್ಮ್ಯರಾದರು. ಲಾವಣಿಯು ಮರಾಠಿ ಸೈನಿಕರ ವೀರಗಾಥೆಯನ್ನು ಬಣ್ಣಿಸುವದರ ಜತೆಗೆ ಶೃಂಗಾರ ಲಾಲಸೆಯನ್ನು ಚಿತ್ರಿಸಿದರು. ಸಂತರ ಶೃಂಗಾರಪೂರ್ಣವಾದ ಗೌಳಣಿಯ ಮತ್ತು ವಿರಹಿಣಿಯ ಭಾವನೆಯು ಲಾವಣಿಗೆ ಹೋಲುವಂಥದ್ದು. ಸಮಕಾಲೀನ ಜನರ ಧಾರ್ಮಿಕ ಭಾವನೆ, ರೀತಿ ರಿವಾಜು, ಶ್ರದ್ಧೆಯೂ ಲಾವಣಿಯಲ್ಲಿ ಪ್ರತಿಬಿಂಬಿತಗೊಂಡಿದೆ. ಮಹಾರಾಷ್ಟ್ರದ ಸ್ತ್ರೀ ಚಿತ್ರಣ ಲಾವಣಿಯಲ್ಲಿ ಕಾಣಬಹುದು. ಕೆಲ ವೈರಾಗ್ಯ ಪರ ಲಾವಣಿಗಳೂ ಇವೆ.

'ಬಖರ', ವಾಙ್ಮಯವು ಶಿವಾಜಿ ಕಾಲದಲ್ಲಿ ಉದಯಗೊಂಡಿತು. ಇಲ್ಲಿ ಮೂರು ಬಗೆ ಪ್ರತ್ಯಕ್ಷ ಕಂಡಿದ್ದು, ಸ್ಮೃತಿ ಆಧಾರಿತ ದಂತಕಥೆ, ಐತಿಹಾಸಿಕ ಕಾಗದ ಪತ್ರ ದಾಖಲೆಯಿಂದ ನಿರ್ಮಾಣಗೊಂಡ ಬಖರ ಸಾಹಿತ್ಯ. ಬಖರ ಎಂದರೆ 'ಅಸ್ತಂಗತ' ಮರಾಠರ ಸ್ಮೃತಿದೀಪ ಎನ್ನುತ್ತಾರೆ. ಬಖರ ವಾಙ್ಮಯದಲ್ಲಿ ವಿಕಾಸ-ಪರಂಪರೆ ಪ್ರಸಾರ ಎನ್ನುವದು ಇಲ್ಲ.

ಮರಾಠಿಯ ಗ್ರಂಥಕಾರರೆಲ್ಲ ಭಾಗವತಧರ್ಮದ ಪರಂಪರಾಗತ ಜೀವನ ಮೌಲ್ಯದ ಸುತ್ತಲೇ ಗಿರಕಿ ಹೊಡೆಯುವುದನ್ನು ಕಾಣುತ್ತೇವೆ. ಮರಾಠಿ ಸಂತರೆಲ್ಲರ ಜೀವನ ದೃಷ್ಟಿ ಒಂದೇ. ಶೈಲಿ ಭಾಷೆ ವೃತ್ತಯೋಜನೆಯಲ್ಲಿ ಕಿಂಚಿತ್ ವ್ಯತ್ಯಾಸವಿದೆ. ಒಂದೇ ಆಧ್ಯಾತ್ಮಿಕ ವಿಚಾರದ ಸೂತ್ರವನ್ನು ಸಂಪೂರ್ಣ ವಾಙ್ಮಯದ ಅಂತರಂಗದಲ್ಲಿ ಪೋಣಿಸಲಾಗಿದೆ. ಹೊಸ ತಾಂತ್ರಿಕ ದೃಷ್ಟಿ ಇಲ್ಲಿ ಕಂಡು ಬರುವುದಿಲ್ಲ.

-೨-

ಮರಾಠಿಕಾವ್ಯದಲ್ಲಿ ದೇವಿ ತತ್ವದ ಉಪಾಸನೆಯನ್ನು ಗುರುತಿಸಬಹುದು. ಪರಮೇಶ್ವರ ರೂಪ ಆದಿಶಕ್ತಿಯನ್ನು ಆದಿಮಾಯಾ, ದುರ್ಗಾ, ಮಹಾಲಕ್ಷ್ಮಿ, ಜಗದಂಬೆ, ಭವಾನಿ, ಚಂಡಿಕೆ, ಚಾಮ್ಡ, ಕರಾಲಿ, ಶಿವದೂತಿ, ಮಹಾಸರಸ್ವತಿ, ರೇಣುಕೆ ಹೀಗೆ ಹಲವು ಹೆಸರಿನಿಂದ ಉಲ್ಲೇಖಿಸಲಾಗಿದೆ. ಈ ವಿರಾರೂಪ ಮಾಟಿ 'ಅದ್ವೈತ' ಸಂಕಲ್ಪನೆ ಅನನ್ಯ ನಿಷ್ಠೆಯ 'ಭಕ್ತಿ'ಭಾವದೊಂದಿಗೆ ಬೆರೆಸುತ್ತದೆ. ಈ ದೇವಿಯು ಅಸುರಿ ಶಕ್ತಿಯನ್ನೇ ಸಂಹಾರ ಮಾಡಿ, ತನ್ನ ಮಕ್ಕಳ ಸಂರಕ್ಷಣೆ ಮಾಡಿದ್ದಾಳೆ. ಸಂತರ ಕಾವ್ಯದಲ್ಲೂ ದೇವಿಯ ಉಪಾಸನೆಯಿದೆ. (ಜ್ಞಾನೇಶ್ವರನ ಭಾವಾರ್ಥ ದೀಪಿಕೆ, ಅಮೃತಾನುಭವ) ಏಕನಾಥನ ಕುಲದೇವತೆಯು ಏಕವೀರಾ. ಅವನ ಭಾಷಣದಲ್ಲಿ ದೇವಿ ಮಹಾತ್ಮೆ ಹೇಳಲಾಗಿದೆ. ಕ್ಷುದ್ರ ದೇವತೆಗಳಿಗೂ ಉಚ್ಚ ಪ್ರತಿಷ್ಠೆ ತಂದು ಕೊಡಲಾಗಿದೆ. ವಿಠ್ಠಲನೂ ದೇವಿಯ ರೂಪವೇ ಆಗಿದ್ದರಿಂದ, ಭಕ್ತರಿಗೆ ಅತನು 'ವಿಠಾಯಿ', 'ಮಾವುಲಿ' ರೂಪದಲ್ಲಿ ಪ್ರಿಯನಾಗಿದ್ದಾನೆ. ಮುಕ್ತೇಶ್ವರನು ದೇವಿಯನ್ನು 'ಮ್ಲೇಚ್ಛ ಮಹಿಷ ಮರ್ದಿನಿ' ಎನ್ನುತ್ತಾನೆ.

ಮೋರೊಪಂತರೂ 'ಭವಾನಿ ಸ್ತುತಿ' ಮಾಡಿದ್ದಾರೆ. ಶ್ರೀಧರ ಕವಿಯು 'ರಾಮವರದಾಯಿನಿ' ಎಂದು ಸಂಬೋಧಿಸುತ್ತಾನೆ. ತುಳಜಾಭವಾನಿಯು ಇಡೀ ಮಹಾರಾಷ್ಟ್ರದ ಕುಲದೇವತೆ ದಾಸ ಸಮರ್ಥರಾಮರಿಗೆ ತುಂಬಾ ಪ್ರಿಯ. ಶಿವಾಜಿಯ ಆರಾಧ್ಯ ದೇವತೆ. ಈ ದೇವಿ ಲೋಕ ಧರ್ಮದ ಒಂದು ಭಾಗ ಕುರಿತು ಬರದೆ ಹಲವು ಮಧ್ಯಯುಗದ ಸಂಪ್ರದಾಯವು ಮರಾಠಿ ಕಾವ್ಯ, ಪುರಾಣ, ಶ್ಲೋಕ, ಮಹಾತ್ಮೆ, ಸಹಸ್ರನಾಮಗಳಿವೆ. ದೇವಿಯ ಕುರಿತು ಆರತಿ ಅಷ್ಟಕ, ಪದ, ಅಭಂಗಗಳು ಮರಾಠಿ ಯಲ್ಲಿವೆ. ಎಲ್ಲ ಕ್ಷುದ್ರದೇವತೆಗಳನ್ನು ಕೊನೆಗೆ ವಿಠ್ಠಲನಲ್ಲೇ ಸಮಾವೇಶಗೊಳಿಸಲಾಗಿದೆ.

ಸಂತರು, ಪುರುಷದೇವರನ್ನು 'ಮಾವುಲಿ' ಎಂದು ಉಪಾಸನೆ ಕೈಗೊಂಡ ಅಪರೂಪದ ಉದಾಹರಣೆ ಭಾರತೀಯ ಸಾಹಿತ್ಯದಲ್ಲೇ ವಿರಳ ಎನ್ನಬಹುದು. ಉದಾ, ವಿಠಾಯಿ, ಕೃಷ್ಣಾಯಿ, ಸೂರ್ಯ, ಭೈರವ, ಖಂಡೋಬಾರಂತಹ ಲೋಕದೇವತೆಯ ಸ್ತುತಿ ಗೀತೆ ಹಾಡಿದ್ದಾರೆ. ಅರುಣ ಕೊಲ್ಹಟಕರ ರಚಿಸಿದ 'ಜೇಜೂರಿ' ಎಂಬ ಆಂಗ್ಲ-ಮರಾಠಿ ಗೀತೆಯು ತುಂಬಾ ಚರ್ಚೆಗೊಳಗಾಗಿದೆ. ಗ್ರಾಮದೇವ-ದೇವತೆಯ ಭಾರೂಡವನ್ನು ಹಾಡಿ ಏಕನಾಥನು ಭಕ್ತಿಯ ಉನ್ನತಿಯನ್ನು ಸಾಧಿಸಿದ್ದಾರೆ. ಕರ್ಮಕಾಂಡವಾದ ಶ್ರದ್ಧೆಯ ವಿರುದ್ಧ ನಾಮದೇವ-ಏಕನಾಥ-ತುಕಾರಾಮನಂಥ ಸಂತರು ಆತ್ಯಂತಿಕ ಹೋರಾಟ ನಡೆಸಿದರು. ಇವೆಲ್ಲ 'ಏಕದೇವ' ಉಪಾಸನೆಯ ಪ್ರತೀಕ. ಭಾರೂಡದಲ್ಲಿ ಬರುವ ವಾಘ್ರಾ-ಮುರಳಿಯು ಕೋಪಕ್ಕೂ ಆಧ್ಯಾತ್ಮಿಕ ರೂಪಕ ನೀಡಲಾಗಿದೆ.

ಬೌದ್ಧ ಮತ್ತು ಜೈನಧರ್ಮಾನುಯಾಯಿಗಳು ಇತರ ಧರ್ಮದಲ್ಲಿ ಲೀನಗೊಂಡಿರುವದರಿಂದ, ಅಷ್ಟೊಂದು ವಿಪುಲ ಸಾಹಿತ್ಯ ಮರಾಠಿಯಲ್ಲಿ ಕಂಡು ಬರುವುದಿಲ್ಲ ಎನ್ನಲಾಗಿದೆ. ವಾರಕರಿ ಸಂತರು ವಿಠ್ಠಲನನ್ನೂ 'ದಿಗಂಬರ' ಎಂದು ಕರೆದಿದ್ದಾರೆ. 'ಬೌದ್ಧ'ನೆಂದೂ ಸಂಬೋಧಿಸಿದ್ದಾರೆ. ವಿಠ್ಠಲನ ಅಸೀಮ ಕರುಣೆಗೂ ಬೌದ್ಧ ಧರ್ಮಕ್ಕೂ ನಿಕಟ ಸಂಬಂಧವಿರುವದಾಗಿ ಸಂಶೋಧಕರು ಅಭಿಪ್ರಾಯ ಪಡುತ್ತಾರೆ.

ಮಧ್ಯಯುಗದ ಮಹಾರಾಷ್ಟ್ರದಲ್ಲಿಯ ಪ್ರಮುಖ ಸಂಪ್ರದಾಯವೆಂದರೆ, ನಾಥ, ಮಹಾನುಭಾವ, ವಾರಕರಿ, ದತ್ತ ಮತ್ತು ಸಮರ್ಥ. ಇದಕ್ಕೆ ಪೂರಕವಾಗಿರುವ ಸಂಪ್ರದಾಯವೆಂದರೆ ಆನಂದ – ನಾಗೇಶ – ಗಣೇಶ – ಶಕ್ತಿದೇವತೆ – ಲೋಕದೇವತೆ. ಇವರೆಲ್ಲರೂ ಮಹಾರಾಷ್ಟ್ರದ ಭಕ್ತಿಪರಂಪರೆಯನ್ನು ದೃಢಗೊಳಿಸಿದರು. ಈ ಸಂಪ್ರದಾಯವು ಇಲ್ಲಿಯ ಭಾಗವತ ಸಂಪ್ರದಾಯದ ವೈಭವವನ್ನು ಹೆಚ್ಚಿಸಿತು. ಈ ಎಲ್ಲ ಧರ್ಮ-ಸಂಪ್ರದಾಯದ ನಡುವೆ ಸುಂವಾದ ಸೂತ್ರವಿದೆ, ಆಂತರಿಕ ಅನುಬಂಧವಿದೆ. ಇವರು ಮಹಾರಾಷ್ಟ್ರದ ಸಮನ್ವಯಶೀಲವನ್ನು ಉದಾರಮನಸ್ಕ ಪ್ರಕೃತಿ ಪರಂಪರೆಯನ್ನು ಹೆಚ್ಚಿಸಿದರು. ಈ ಎಲ್ಲ ಧಾರ್ಮಿಕ ಸಂಪ್ರದಾಯಗಳು ಮರಾಠಿ ಜನರಿಗೆ ಸತ್ವಶೀಲ

ಜೀವನವನ್ನು ಸಾಗಿಸುವಂತೆ ಸಾಂಸ್ಕೃತಿಕ ಆಹ್ವಾನ ನೀಡಿದರು. ಸದಾಚಾರದ-ಸದ್ವಿಚಾರದ ಉಪದೇಶ ನೀಡಿದವು. ಗೀತೆಯ 'ದೈವೀ ಸಂಪದ'ದ ಪ್ರೇರಣೆಯಿಂದ ಸಾಮಾಜಿಕ ದೈವೀಗುಣ ಬೆಳೆಯುವಂತಾಯಿತು. ಹೀಗಾಗಿ ಮಧ್ಯಯುಗದಲ್ಲಿ ಮಹಾರಾಷ್ಟ್ರವು ಕೇವಲ ಮಹಾರಾಷ್ಟ್ರವಷ್ಟೇ ಅಲ್ಲ 'ಮಹಂತ-ರಾಷ್ಟ್ರ'ವೂ ಆಯಿತೆಂದು ಚರಿತ್ರಕಾರರು ಹೇಳುತ್ತಾರೆ.

ಈ ಆಂತರಿಕ ಅನುಬಂಧದ ಹಲವು ಉದಾಹರಣೆಗಳು ಕಾಣಸಿಗುತ್ತವೆ. ರಾಘವ ಚೈತನ್ಯರು ಗಾಣಪತ್ಯರು. ಆ ಪರಂಪರೆಯ ಬಾಬಾಜಿ ಚೈತನ್ಯ ಎಂಬುವರು ತುಕರಾಮನಿಗೆ ಗುರುಮಂತ್ರ ನೀಡುತ್ತಾರೆ. ಗಾಣಪತ್ಯ ಜನಿಜನಾರ್ದನರು ಪಂಢರಿಯ ಯಾತ್ರೆ ಕೈಗೊಳ್ಳುತ್ತಾರೆ. ಕೃಷ್ಣಗೀತೆ ಹಾಡುತ್ತಾರೆ. ಮಧುಮಾಣಿಕ ಎಂಬುವನು ಏಕನಾಥ ಶಿಷ್ಯ ಪರಂಪರೆಯವನು. ಹೀಗೆ ಗಾಣಪತ್ಯರು ಭಾಗವತಕ್ಕೆ ಪೂರಕವಾಗಿ ಕಾರ್ಯ ಮಾಡಿದರು.

ಡಾ। ರಾ. ಚಿಂ. ಢೇರೆಯವರ ಪ್ರಕಾರ ಭಾಗವತಧರ್ಮದ ಚತುಷ್ಟಯದಲ್ಲಿ ವಾರಕರಿಯು ಪ್ರಕಾಶ, ಸಮರ್ಥವು ಸ್ವರೂಪ – ಸಂಪ್ರದಾಯವಾಗಿದೆ. ಆನಂದ ಮತ್ತು ಚೈತನ್ಯ ಸಂಪ್ರದಾಯವೂ ಇಲ್ಲಿ ಕಾರ್ಯ ಕೈಗೊಂಡಿದೆ. ಆನಂದವು ದತ್ತ ಸಂಪ್ರದಾಯವೇ ಮತ್ತೊಂದು ರೂಪ ದತ್ತನನ್ನು ವಿಷ್ಣುವಿನ ಅವತಾರ ಎಂದಿಟ್ಟು ಕೊಂಡಿದ್ದರಿಂದ ಅದು ವೈಷ್ಣವ ಸಂಪ್ರದಾಯ. ತುಕಾರಾಮ ಸಹ ಚೈತನ್ಯ ಪರಂಪರೆಯವನು.

ಮಧ್ಯಯುಗದ ಮಹಾರಾಷ್ಟ್ರದಲ್ಲಿಯ ಧರ್ಮ-ಸಂಪ್ರದಾಯವು 'ಸಮನ್ವಯದ ಅಧಿಷ್ಠಾನ'ವನ್ನು ಉಳಿಸಿತು. ಮರಾಠಿ ಭಕ್ತಿ ಪರಂಪರೆಯನ್ನು ಸಫಲ-ಸಂಪೂರ್ಣ ಸಮೃದ್ಧಗೊಳಿಸಿ ಮಹಾರಾಷ್ಟ್ರದ ಧರ್ಮ-ಸಂಪ್ರದಾಯದಲ್ಲಿ 'ವಾದ'ವಿಲ್ಲ 'ಸಂವಾದವಿದೆ' ಎಂದು ಡಾ। ಢೇರೆ ಹೇಳುತ್ತಾರೆ. ಇಲ್ಲಿ ವಿಭಿನ್ನ ಸಂಪ್ರದಾಯವಿದ್ದೂ ಅಭಿನ್ನ ಸೌಹಾರ್ದವಿದೆ. ಮೂಲ ನಾಥಪಂಥದವನಾದ ಜ್ಞಾನೇಶ್ವರನು ವಾರಕರಿ ಸಂಪ್ರದಾಯಕ್ಕೆ ಜ್ಞಾನದ ಅಧಿಷ್ಠಾನ ಪ್ರಾಪ್ತಮಾಡಿಕೊಟ್ಟ. ದತ್ತಪಂಥದ ಏಕನಾಥನು ಭಾಗವತಧರ್ಮದ ಧ್ವಜ ಹಾರಿಸಿದ. ತುಕಾರಾಮ ಚೈತನ್ಯ ಸಂಪ್ರದಾಯದವನು ಅವನೂ ಈ ಮಂದಿರದ ಕಳಸದಂತೆ ಮೆರೆದ.

'ಈ ಸಾಂಪ್ರದಾಯಿಕ ಸಮನ್ವಯದ ರಹಸ್ಯವು ಮರಾಠಿ ಸಂತರ ಶುದ್ಧ ವಿವೇಕ ನಿಷ್ಠೆಯಲ್ಲಿದೆ. ಸಂತರು ದಾರ್ಶನಿಕ ಭಿನ್ನತೆಗೆ ಮಹತ್ವ ನೀಡದೆ, ಆಧ್ಯಾತ್ಮಿಕ ಅನುಭೂತಿಯ ಸಹಾಯದಿಂದ ಏಕತೆಯನ್ನು ಸಾಧಿಸಿದರು. ಹರಿ-ಹರೈಕ್ಯ ದರ್ಶನವನ್ನು ಕೈಕೊಂಡರು' ಎಂದು ಡಾ। ಢೇರೆ ಎನ್ನುತ್ತಾರೆ.

'ಪುಂಡಲೀಕನ ಭಾಗ್ಯ ದೊಡ್ಡದು. ಅವನು ವಿಷ್ಣುಸಹಿತ ಶಿವನನ್ನು ಪಂಢರಿಗೆ ತಂದ' ಎಂದು ನಿವೃತ್ತಿನಾಥನು ಹೇಳುತ್ತಾನೆ. ತುಕಾರಾಮ, ಜ್ಞಾನದೇವನೂ ಹರಿ-ಹರ

ಜೇಧ ಒಪ್ಪಲಿಲ್ಲ. ರಾಮೋಪಾಸಕ ಸಮರ್ಥ ರಾಮದಾಸರೂ ವಿಠ್ಠಲನನ್ನು ಶಿರದ ಮೇಲೆ ಇರಿಸಿಕೊಂಡರು. ಹೀಗೆ ಅನೇಕ ಸ್ತರದಲ್ಲಿ ಈ ಸುಸಂವಾದವಿದೆ.

ನಾಥಪಂಥವು ನಾನಾ ದೇವತೆಗಳ ಭ್ರಮೆಯನ್ನು ಹೋಗಲಾಡಿಸಲು ಶಿವ-ಶಕ್ತಿಯ ಸಾಮರಸ್ಯ ಸ್ವೀಕರಿಸಿತು. ವೀರಶೈವರು ಇಷ್ಟಲಿಂಗಪೂಜೆಯನ್ನು ಪ್ರಚಲಿತಗೊಳಿಸಿದರು. ಮಹಾನುಭಾವರು ಪಂಚವೈಷ್ಣರ ಉಪಾಸನೆ ಸ್ವೀಕರಿಸಿದರು. ವಾರಕರಿಪಂಥವು ಸಕಲ ಹಿಂದೂದೇವತೆಗಳ ಬಗೆಗೆ ಆದರ ಭಾವನೆಯನ್ನು ವ್ಯಕ್ತಪಡಿಸಿ, ವಿಠ್ಠಲನಲ್ಲಿ ಹರಿಹರೈಕ್ಯ ಸಾಧಿಸಿತು.

ಮಹಾನುಭಾವಪಂಥದ ಗುರುಪರಂಪರೆಯು ನಾಥರ ಸಿದ್ಧಯೋಗಿ ಪರಂಪರೆಯೇ ಆಗಿದೆ. ನಾಥಯೋಗಿ ಚಾಂಗವಟೇಶ್ವರನ ಪೂರ್ವಗುರು ಕದಳಿನದ ಗೋರಖ ಶಿಷ್ಯೆಯಾದ ಯೋಗಿನಿ ಮುಕ್ತಾಯಿ.

ಸಂತ ವಾಙ್ಮಯದ ಮೇಲೆ 'ವಿವೇಕ ಸಿಂಧು' ಮತ್ತು 'ಪರಮಾಮೃತ'ದ ಗಾಢ ಪ್ರಭಾವವನ್ನು ಗುರುತಿಸಲಾಗಿದೆ. ನಿವೃತ್ತಿನಾಥನಿಗೆ ಗಹಿನಿನಾಥನಿಂದ ವಿಠ್ಠಲನಾಮದ ಉಪದೇಶ ಸಿಕ್ಕಿತು. ನಾಮದೇವನ ಗುರು ವಿಠೋಬಾ ಖೇಚರ ನಾಥಪಂಥಿಯನಾಗಿದ್ದ ನಾಥ-ದತ್ತರಲ್ಲೂ ಸಾಕಷ್ಟು ಸಾಮ್ಯವಿದೆ. ಮಚ್ಛೇಂದ್ರ ಗೋರಖಾದಿ ನಾಥರ ಸಾಧನೆಯನ್ನು ಪೂರ್ಣತ್ವಕ್ಕೆ ಒಯ್ದದ್ದೆ ದತ್ತಾತ್ರೇಯ. ನಾಥ-ದತ್ತರಲ್ಲಿ ವೈರಾಗ್ಯ, ಯೋಗ, ಸಿದ್ಧಿ, ಮೋಕ್ಷ, ವೇಷ-ಭೂಷಣದಲ್ಲಿ ಏಕರೂಪತೆಯಿದೆ. 'ಅವಧೂತ ಗೀತೆ' ಇಬ್ಬರಿಗೂ ಪೂಜ್ಯನೀಯ : 'ಗುರುಚರಿತ್ರೆ' ದತ್ತರದ್ದು 'ವಿವೇಕ ಸಿಂಧು'ವಿನ ಪ್ರಭಾವ ಗುರುತಿಸಲಾಗಿದೆ. ಸಮರ್ಥ ಸಂಪ್ರದಾಯದ ಮೇಲೂ ನಾಥಪಂಥದ ಪ್ರಭಾವವಿದೆ. ರಾಮದಾಸರು 'ಸಿದ್ಧ ಲಕ್ಷಣ'ವನ್ನು ಗೌರವಿಸಿದ್ದಾರೆ. ಗೋರಖನನ್ನು ವಂದಿಸಿದ್ದಾರೆ. ದತ್ತ-ವಾರಕರಿಯಲ್ಲೂ ಸಾಮ್ಯತೆಯಿದೆ. ಇಬ್ಬರೂ ದತ್ತನನ್ನು ಗೌರವಿಸುತ್ತಾರೆ. ಶಿವ-ವಿಷ್ಣುವಿನ ಮಹಿಮೆ ಹಾಡುತ್ತಾರೆ. ಬ್ರಹ್ಮ-ವಿಷ್ಣು-ಮಹೇಶನ ಪ್ರತೀಕವೇ 'ದತ್ತಾತ್ರೇಯ' (ಪ್ರತೀಕರೂಪದ ಪಾದುಕೆಯ ಉಪಾಸನೆ.)

ನಾಗೇಶ ಸಂಪ್ರದಾಯದ ತತ್ವ ಸೃಷ್ಟಿಯಲ್ಲೂ ನಾಥ, ಚೈತನ್ಯ, ದತ್ತ, ಲಿಂಗಾಯುತ ಧರ್ಮಸಂಪ್ರದಾಯದ ಕೆಲವು ವಿಶಿಷ್ಟ ತತ್ವಗಳನ್ನು ಸಮಾವೇಶಗೊಳಿಸಲಾಗಿದೆ. ಇದೂ ಸಂಪ್ರದಾಯ ಸಮನ್ವಯಕ್ಕೆ ಉದಾಹರಣೆ. ಪ್ರಾಚೀನ ಯೋಗಸುತ್ತ ಜೈನ ಶ್ರಮಣರಲ್ಲೂ ಸಾಮ್ಯ ಗುರುತಿಸಲಾಗಿದೆ. (ಅಹಿಂಸೆ-ಆಸ್ತೆಯ-ಅಪರಿಗ್ರಹ ವ್ರತ) ಲಿಂಗಾಯತ ಧರ್ಮದ ಅಲ್ಲಮ ಪ್ರಭು ನಾಥಸಿದ್ಧ. ನಾಥ ಪಂಥದ ತತ್ವಜ್ಞಾನ, ಸಾಧನೆ ಮತ್ತು ಪರಿಭಾಷೆಯ ಪ್ರಭಾವವನ್ನು ವೀರಶೈವ ಪಂಥದ ಮೇಲೆ ಸ್ಪಷ್ಟವಾಗಿ ಗುರುತಿಸಬಹುದು.

'ನಾಥಪಂಥವು, ಮಹಾರಾಷ್ಟ್ರದಲ್ಲಿ ವೈಷ್ಣವಪಂಥವಾಗಿ. ಕರ್ನಾಟಕದಲ್ಲಿ

ವೀರಶೈವ ಪಂಥವಾಗಿ ಪರಿವರ್ತನೆಯಾಯಿತೆಂದು ಸಂಶೋಧಕರು ಹೇಳುತ್ತಾರೆ. ಇದು ಪರೀಕ್ಷೆಗೊಳಪಡಬೇಕಾದ ಸಂಗತಿ.

ಜೈನಮತದ ಪ್ರಭಾವ ಮಹಾನುಭಾವ ಪಂಥದ ಮೇಲಾಗಿದೆ. ಇಬ್ಬರೂ ಅಹಿಂಸೆ, ಅಪರಿಗ್ರಹ ಹಾದಿ ನೈತಿಕ ಮೌಲ್ಯವನ್ನು ಕಠೋರವಾಗಿ ಆಚರಿಸುತ್ತಾರೆ. ಇಬ್ಬರೂ ವೈದಿಕ ಕರ್ಮಕಾಂಡವನ್ನು ವಿರೋಧಿಸಿ, ಆಂತರಿಕ ಶುದ್ಧಿಗೆ ಮಹತ್ವ ನೀಡಿದರು. ನಾಥ-ಮಹಾನುಭಾವ-ಲಿಂಗಾಯತ-ಜೈನರು ಮಧ್ಯಯುಗದ ಜನತೆಯನ್ನು ಕರ್ಮಕಾಂಡದಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿರುವುದು ಗಮನಾರ್ಹ. ಹಾಗೆಯೇ ಆತ್ಮಿಕ ಉಚ್ಚ ಮೌಲ್ಯದ ಉಪಾಸನೆ ಮತ್ತು ಉದಾತ್ತಗುಣದ ಜೋಪಾಸನೆ ಮಾಡುವಂತೆ ಬೋಧಿಸಿದರು.

ಈ ಶ್ರೇಷ್ಠ ವಾರಸಾವನ್ನೇ ವಾರಕರಿ ಸಂಪ್ರದಾಯ ಮುಂದುವರಿಸಿತು. ದಯೆ-ಕ್ಷಮೆ-ಶಾಂತಿ-ಸಮತೆ. ಮಮತೆಯೇ ನಿಜವಾದ ಮಾನವೀಯ ಧರ್ಮ ಎಂದು ಈ ಸಂಪ್ರದಾಯ ಮನವರಿಕೆ ಮಾಡಿಕೊಟ್ಟಿತು. ಜ್ಞಾನದೇವನು ಭಕ್ತಿ-ಜ್ಞಾನ-ಧರ್ಮದ ಭಕ್ತಿಯೋಗವನ್ನು ಉಪದೇಶ ಮಾಡಿ, ತಾತ್ವಿಕ ದೃಷ್ಟಿಯನ್ನು ನೀಡಿದ.

ಏಕತೆ ಮತ್ತು ಸಮನ್ವಯದ ಸಂದೇಶ ನೀಡುವಲ್ಲಿ ಸೂಫಿಸಂತರೂ ಹಿಂದೆ ಬಿದ್ದಿಲ್ಲ. ಸಂತಕವಿ ಶೇಖ ಮಹಮ್ಮದ ಗುರುವಿನ ಹೆಸರು ಚಂದ ಬೋಧಲೆ. ಗುರುಪರಂಪರೆಯ ಈ ಸೂಫಿಯದು ಸಂಪೂರ್ಣ ಸಮನ್ವಯದೃಷ್ಟಿ. ಶೇಖ ಮಹಮ್ಮದನು 'ಯೋಗ ಸಂಗ್ರಾಮ' ರಚಿಸಿದ. ಹುಸೇನ ಅಂಬರನು ಗೀತೆಯ ಭಾಷ್ಯ ಬರೆದ. ಹಲವು ಮುಸ್ಲಿಂ-ಮರಾಠಿ ಸಂತಕವಿಗಳು ವಾರಕರಿ-ನಾಗೇಶ ಸಂಪ್ರದಾಯದ ಸಮನ್ವಯ ಸಾಧಿಸಿದರು. ಫಾದರ್ ಸ್ಟಿಫನ್ನನ 'ಕ್ರಿಸ್ತ ಪುರಾಣ'ದ ಮೇಲೆ ಜ್ಞಾನೇಶ್ವರಾದಿ ಸಂತಕವಿಗಳ ಪ್ರಭಾವ ಗುರುತಿಸಲಾಗಿದೆ.

ಬಹುತೇಕ ಮಹಾರಾಷ್ಟ್ರದ ಎಲ್ಲ ಸಂಪ್ರದಾಯಗಳು 'ಗುರುಮಾರ್ಗ'ವನ್ನು ಬೋಧಿಸಿದವು. ಇವು ನಿಜವಾಗಿಯೂ 'ಗುರುದತ್ತ-ಮಾರ್ಗ'ವೆನ್ನಬಹುದು. ಎಂದು ಶಂ.ಬಾ. ಜೋಶಿ ಅಭಿಪ್ರಾಯ ಪಡುತ್ತಾರೆ. ಇವರೆಲ್ಲ ಗುರುತ್ವವ ಕೈಗೊಂಡಿದ್ದು ವಿಶೇಷ. ಗುರುಮಾರ್ಗವೇ 'ಆದರ್ಶ'ವೆಂದು ಭಾವಿಸಿದರು.

ಈ ಧರ್ಮಸಂಪ್ರದಾಯದ ವಾಙ್ಮಯದ ಆತ್ಮವೆಂದರೆ ಸದ್ವಿಚಾರ ಮತ್ತು ಸದಾಚಾರ, ಚಿತ್ತಶುದ್ಧಿ, ಈಶ್ವರಾರ್ಪಣ ಬುದ್ಧಿ, ಲೋಕ ಸಂಗ್ರಹ. ವಿಶ್ವಕಲ್ಯಾಣವೇ ಅವರ ಸಂದೇಶ. ಸಂತ ಸಾಹಿತ್ಯವು ಸಮಾಜ ಜೀವನದ ಸತ್ವಶೀಲತೆ, ಸಂಸ್ಕೃತಿ--ಪರಂಪರೆಯನ್ನು ರಕ್ಷಿಸಿತು. ಮಾನವತಾ ಧರ್ಮವನ್ನು ಬಿತ್ತರಿಸಿತು. ಭಕ್ತಿ ಮತ್ತು ತತ್ವಜ್ಞಾನದ ಸಮನ್ವಯ ಸಾಧಿಸಿತು. ನೈತಿಕ ಮೌಲ್ಯದ ಸಂರಕ್ಷಣೆ ಮಾಡಿತು. ಲೋಕ ಕಲ್ಯಾಣದ ಕನಸು ಕಂಡಿತು.

ಸಂತರ ಧರ್ಮವು 'ಲೋಕಧರ್ಮ'ವಾಗಿತ್ತು, ಸಾಧನೆಯು 'ಸಹಜ'ವಾಗಿತ್ತು. ಇವೆಲ್ಲ ಸಹಿಷ್ಣುತೆ ಮತ್ತು ಏಕತೆಯ ಪ್ರತೀಕ. ಧಾರ್ಮಿಕ ಸಮನ್ವಯ ಮಹತ್ವವದ್ದು ದಿನ ನಿತ್ಯ ಪವಿತ್ರ ಮತ್ತು ಶುದ್ಧ ಆಚರಣೆ, ದೇವರ ನಾಮಸ್ಮರಣೆ, ನಾಮಸಂಕೀರ್ತನೆ, ಭಗವಂತನಿಗೆ ಶರಣು ಹೋಗುವದು, ಇದೇ ನಿಜವಾದ ಭಕ್ತಿ.

'ಭಕ್ತಿಯುಕ್ತ ಕರ್ಮಯೋಗ'ವೇ ಸಂತಸಾಹಿತ್ಯದ ಸಂದೇಶ. ಇದು ಸಕಲರಿಗೆ ಮಾನವ ಮತ್ತು ಮಾನವತೆಯನ್ನು ಬೋಧಿಸುತ್ತದೆ. ಆತ್ಮಜ್ಞಾನಯುಕ್ತ ವಿವೇಕ ವಿಚಾರಗಳನ್ನು ಮತ್ತು ಪರಿಶುದ್ಧಭಕ್ತಿಯನ್ನು ಪಾಲಿಸಲು ತಿಳಿಸುತ್ತದೆ. ಸಂತರು ಜನ ಮಾನಸದಲ್ಲಿ ಧಾರ್ಮಿಕ ನಿಷ್ಠೆಯನ್ನು ಜಾಗೃತಗೊಳಿಸಿದರು. ಧಾರ್ಮಿಕ ಜ್ಞಾನವನ್ನು ಜನಭಾಷೆಯಲ್ಲಿ ಹೇಳಿದರು. ಶುದ್ಧ ಲೋಕಧರ್ಮ ತಿಳಿಸಿದರು. ಕ್ಷುದ್ರ ದೇವತೆಯ ಉಪಾಸನೆಯನ್ನು ನಿಷೇಧಿಸಿದರು. ಸುಪ್ತ ಆತ್ಮಶಕ್ತಿಯನ್ನು ಜಾಗೃತಗೊಳಿಸಿದರು. ಹೀಗಾಗಿ ಜಾತಿ ವಿಷಮತೆಯು ಕ್ಷೀಣಿಸಿ, ಸಾಮಾಜಿಕ ಸಹಿಷ್ಣುತೆಯ ವೃತ್ತಿ ನಿರ್ಮಾಣಗೊಂಡಿತು. ಈ ವಾಙ್ಮಯವು ಸಾಧುತ್ವವನ್ನು ಸಂರಕ್ಷಿಸಿತು. ಸೌಜನ್ಯವನ್ನು ಸಂವರ್ಧನೆ ಮಾಡಿತು. ತಿಳಿವಳಿಕೆಯ ಅರಿವಿನ ವರದಾನ ನೀಡಿತು. ಸದಾಚಾರವೇ ಸದ್ಗುಣವಾಯಿತು. ಸಮನ್ವಯದ ಆಚಾರವನ್ನು ಬೋಧಿಸಿತು.

ಅನುಭವ ಮತ್ತು ಶಾಸ್ತ್ರದ ಆಧಾರದಿಂದ ಮರಾಠಿಭಾಷೆಯನ್ನು ಸಮೃದ್ಧಗೊಳಿಸುವ ಕಾರ್ಯವನ್ನು ಸಂತ ಪರಂಪರೆ ಕೈಕೊಂಡಿತು. ಸಾಹಿತ್ಯದ ರೂಪ ಬಂಧ ಮತ್ತು ಗದ್ಯದ ತರ್ಕನಿಷ್ಠೆಯಲ್ಲಿ ಈಶ್ವರಚಿಂತನೆಯ ಭಕ್ತಿ ವಿಚಾರವು ವ್ಯಾಪಿಸಿ ಕೊಂಡಂತೆ ಕಾಣಬರುತ್ತದೆ. ತುಕಾರಾಮನ ಭಾಷೆ ಕೆಲವೊಮ್ಮೆ ವಜ್ರದಂತೆ ಕಠಿನ, ಕುಸುಮದಂತೆ ಕೋಮಲವಾಗಿರುತ್ತಿತ್ತು. ಭಾಷೆಯನ್ನು ಮುರಿದು ಕಟ್ಟುವ ಪ್ರಕ್ರಿಯೆಯು ತುಕಾರಾಮನ ಕವಿತೆಯಲ್ಲಿ ಗೋಚರಿಸುತ್ತದೆ. ಇದೇ ಸಂಸ್ಕಾರವು ಆಧುನಿಕ ಕಾಲದಲ್ಲಿ ಕುಸುಮಾಗ್ರಜ, ಮರ್ಢೋನಕರ, ಕೇಶವಸುತರಲ್ಲೂ ಕಂಡು ಬರುತ್ತದೆ. 'ಮನುಷ್ಯತ್ವದ ಆವಿಷ್ಕಾರ ರೂಪಿಸುವ ಸಾಹಿತ್ಯ'ವೆಂದು ಇಂದಿನ ಕವಿಗಳು ಸಂತಸಾಹಿತ್ಯದ ಕಡೆಗೆ ನೋಡುತ್ತಾರೆ. ಭಕ್ತಿವಿಚಾರದಿಂದ ಸಮಾಜವನ್ನು ನಿಷ್ಕಲಂಕ ಮತ್ತು ಬಲವಂತಗೊಳಿಸಿದ ಶ್ರೇಯಸ್ಸು ಸಂತ ಸಾಹಿತ್ಯಕ್ಕೆ ಸಲ್ಲಬೇಕು. ಇದೇ ಈ ಸಾಹಿತ್ಯದ ಶಕ್ತಿ ಮತ್ತು ಫಲಶ್ರುತಿ.

ಮಹಾರಾಷ್ಟ್ರದಲ್ಲಿಯ ಭಕ್ತಿ ಪಂಥಗಳು

೧. ನಾಥ ಪಂಥ :

ನಾಥ ಪಂಥಕ್ಕೆ ಆದಿನಾಥ – ಮಚ್ಛೇಂದ್ರ – ಗೋರಖ ಈ ಗುರುಪರಂಪರೆಯ ಬಗೆಗೆ ಅಭಿಮಾನವಿದೆ. ಸಮತೆಯು ಈ ಪಂಥದ ಗುರುತು. ಟೀಕಾರಾಮನಂಥ ಬ್ರಾಹ್ಮಣೇತರ ಸಾಧಕನು ವೇದಾಂತದ ಕುರಿತು ಭಾಷ್ಯ ಬರೆಯುತ್ತಾನೆ. ಭುಜಂಗ

ನಾಥನಂತಹ ಕೀರ್ತನಕಾರ ಗಂಗಾನಾಥನಂಥ ಕುರುಬಜಾತಿಯ ಸಾಧಕನು ಪದ ರಚನೆ ಮಾಡುತ್ತಾರೆ. ಈ ಪಂಥದ ಸಾಹಿತ್ಯ ನಿರ್ಮಿತಿಯು ೧೩ ರಿಂದ ೧೯ನೇ ಶತಮಾನದವರೆಗೂ ಅಖಂಡವಾಗಿ ನಡೆಯಿತು. ಅವರಲ್ಲಿ ಜ್ಞಾನದೇವ, ಆದಿನಾಥ ಭೈರವ, ಶಿವಕಲ್ಯಾಣ, ಶ್ರೀನಾಥನಂತಹ ಹಲವು ಭಾಷ್ಯಕಾರರು ಆಗಿ ಹೋದರು. ಚರಿತ್ರೆ ಸ್ತೋತ್ರ, ಪದವಾಙ್ಮಯ, ಗೇಯಗೀತೆ, ಭೂಪಾಳಿ, ಜೋಗುಳ, ಆರತಿ, ಪ್ರೋವಾಡಿ, ಲಾವಣಿ, ಗೌಳಣೆ – ಮುಂತಾದ ಕಾವ್ಯವನ್ನು ವಿಪುಲವಾಗಿ ರಚಿಸಿದರು.

ಮೂಲದ ಶೈವ ಪರಂಪರೆಯನ್ನು ಉಳಿಸಿಕೊಂಡ ಗ್ರಂಥಕಾರರ ಸಂಖ್ಯೆ ತೀರಾ ಕಡಿಮೆ ಭಾಗವತಭಕ್ತಿಯನ್ನು ಸಂಪೂರ್ಣವಾಗಿ ಅವಲಂಬಿಸಿದ ಕವಿಗಳ ಸಂಖ್ಯೆ ಹೆಚ್ಚಿಗಿದೆ. ಭಗವದ್ಭಕ್ತಿಯೆ ಅವರ ವಾಙ್ಮಯದ ಆಶಯ ಸೂತ್ರ.

ಗಹಿನಿನಾಥ, ಜ್ಞಾನೇಶ್ವರ, ಸೋಪಾನದೇವ, ಮುಕ್ತಾಬಾಯಿ ಮತ್ತು ಮುಕುಂದ ರಾಜ – ಇವರ ವಿವಿಧ ಪರಂಪರೆಯು ಇಂದು ಮಹಾರಾಷ್ಟ್ರದಲ್ಲಿ ಕಾಯಕ ಕೈಗೊಂಡಿದೆ ಇದೂ ಅಲ್ಲದೆ ನಾಥ ಸಮನ್ವಯಗೊಂಡ ದತ್ತ ಪಂಥ, ಮೂಡಲಗಿ ಸ್ವಾಮಿ ಪಂಥಗಳೂ ಅಸ್ತಿತ್ವದಲ್ಲಿವೆ. ಇವರಲ್ಲಿ ಕೆಲವರು ಗೋರಖನ ತತ್ವಜ್ಞಾನ, ಕೆಲವರು ಮುಕುಂದ ರಾಜನನ್ನು ಸ್ವೀಕರಿಸಿದ್ದಾರೆ. ಮತ್ತು ಆದ್ಯ ಆಚಾರ ಪ್ರಣೀತ ಕೇವಲಾದ್ವೈತ ವೇದಾಂತವನ್ನು ಸ್ವೀಕರಿಸಿದ್ದಾರೆ. ಕೆಲವು ಪರಂಪರೆಯವರು ಜ್ಞಾನದೇವನ 'ಅಮೃತಾನುಭವ'ವನ್ನು ಪ್ರಮಾಣ ಗ್ರಂಥವಾಗಿ ಸ್ವೀಕರಿಸಿದ್ದಾರೆ.

ಮುಕ್ತಾಬಾಯಿ, ಗಂಗಾಬಾಯಿ, ಲಕ್ಷ್ಮೀಬಾಯಿ, ರಾಧಾಬಾಯಿ ಮತ್ತು ಪಾರ್ವತಿಬಾಯಿಯಂತಹ ಸ್ತ್ರೀಯರೂ ಪದ ರಚನೆ ಮಾಡಿದ ಉಲ್ಲೇಖ ಉಪಲಬ್ಧವಿದೆ. ನಾಥ – ಸಿದ್ಧರ ಲೋಕಗೀತೆಯ ಪ್ರಭಾವ ಕಬೀರ, ನಾನಕರ ಮೇಲೂ ಬಿದ್ದಿರುವುದು ಗಮನಾರ್ಹ.

೨. ಮಹಾನುಭಾವ ಪಂಥ :

ಈ ಪಂಥದ ಕವಿಗಳು ಮರಾಠಿಯಲ್ಲಿ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ಇವರಿಂದ ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನಕ್ಕೆ ಮಹತ್ವ ಪ್ರಾಪ್ತವಾಯಿತು. ಮಹಾನುಭಾವ ವಾಙ್ಮಯದಲ್ಲಿ ಶ್ರೀಕೃಷ್ಣಭಕ್ತಿಗೆ ಮಹತ್ವ ನೀಡಲಾಗಿದೆ. ಇವರ ಗಾಳಿಯು ಪಂಜಾಬವರೆಗೂ ಬೀಸಿತು. ದೇವರ ಸ್ವರೂಪವು ನಿರ್ಗುಣ ನಿರಾಕಾರವಾಗಿದೆ ಎನ್ನುವುದು ಅವರ ತತ್ವ. ಸಾಕಾರರೂಪದಿಂದ ಮೋಕ್ಷ ಪರಮೇಶ್ವರ ಅವತಾರ 'ಲೀಲೆ' ಎಂದರೇನೇ ಮಹಾನುಭಾವ ಪಂಥ. ಇದು ಅವತಾರವಾಗಿದ್ದರಿಂದ ಪಂಚಕೃಷ್ಣರ ಉಪಾಸನೆ ಚಕ್ರಧರ ನಾಮಸ್ಮರಣೆಗೆ ಮಹತ್ವ ನೀಡಿದ

ಚಕ್ರಧರನ ಪರಿಭ್ರಮಣೆ, ಬೋಧಿಸಿದ ದೃಷ್ಟಾಂತ ಕಥೆ, ತತ್ವಚಿಂತನೆಯನ್ನು

ಮಹಾನುಭಾವ ಗದ್ಯವು ಸಂರಕ್ಷಿಸಿದೆ. ಚಕ್ರಧರನೇ ಕೇಂದ್ರ ಬಿಂದು ಈ ಗದ್ಯದಲ್ಲಿ ಸಮಾಜ ಜೀವನದ ಸ್ಪಂದನ ಮತ್ತು ಹಂಕಾರ ಧ್ವನಿತಗೊಂಡಿತು. ಗದ್ಯರೂಪದಲ್ಲಿ ವಿವಿಧತೆಯಿದ್ದರೂ ಅಭಿಜಾತವೆನಿಸಿತು. ಆ ಕಾಲದಲ್ಲಿ ಅಂತರದ ಕಾಲದಲ್ಲೂ ಇಂಥ ಸಮೃದ್ಧ ಗದ್ಯ ಸಾಹಿತ್ಯವೇ ನಿರ್ಮಾಣಗೊಂಡಿಲ್ಲ ಎನ್ನುತ್ತಾರೆ ವಿದ್ವಾಂಸರು. ಈ ಗದ್ಯದಲ್ಲಿ ಶಾಸ್ತ್ರವಿದೆ, ಸಾಮಾನ್ಯ ರಚನೆಯೂ ಇದೆ. ಸಾಂಕೇತಿಕ ಲಿಪಿಯ ಬಳಕೆಯಿದೆ ಕವಿಗಳಿಗೆ ಸಂಸ್ಕೃತಕ್ಕಿಂತ ಮರಾಠಿ ಮೋಹ ಅಪಾರವಾಗಿತ್ತು. ಹೀಗಾಗಿ ನಾನಾ ವಿಧಥ ಗದ್ಯ ಪದ್ಯಗಳ ರಚನೆಯಾಯಿತು. ಅವರ ಸಾಹಿತ್ಯಿಕ – ಸಾಂಸ್ಕೃತಿಕ ಕೊಡುಗೆ ಅಪಾರ. ಅದು ಸಂಖ್ಯೆ ಮತ್ತು ಗುಣಾತ್ಮಕ ದೃಷ್ಟಿಯಿಂದಲೂ ಸಮೃದ್ಧವಾಗಿದೆ. ಯಾದವ ಕಾಲದ ರಾಜಕೀಯ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ದಸ್ತಾವೇಜು ಎನ್ನಲಡ್ಡಿಯಿಲ್ಲ.

೩. ವಾರಕರಿ ಪಂಥ :

ವಾರಕರಿ ಪಂಥವು ಸಂಗ್ರಾಹಕವಾದುದು. ಯಾವ ಸಂಕುಚಿತ ಭಾವನೆಯಿಲ್ಲ. ಪ್ರತೀಕದ ದುರಾಗ್ರಹವೂ ಇಲ್ಲ, ದೇವತೆಗಳ ಜತೆ ಜಗಳವಿಲ್ಲ. ವಿಠ್ಠಲ ಭಕ್ತಿಯೇ ಪ್ರಮುಖ ವಿಠ್ಠಲನು ನಾನೂರು ವಚನಗಳ ಕಾಲ ಕಾವ್ಯರಚನೆಗೆ ಸ್ಫೂರ್ತಿ ನೀಡಿದ. ದಲಿತರ, ಶೂದ್ರರ ಆತ್ಮೋದ್ಧಾರಕ್ಕೆ ಪ್ರೇರಣೆ ನೀಡಿದ ಬಂಧುಭಾವದ ಪಾಠ ಕಲಿಸಿದ, ದೇವರು ಸರ್ವವ್ಯಾಪಿ ಅವನ ರೂಪ ಹಲವು ಆದ್ದರಿಂದ ಭಕ್ತಿಪಂಥದಲ್ಲಿ ಉಪಾಸಕರ ಭಾವನೆಯೇ ಮುಖ್ಯ, ಪ್ರತಿಮೆ ಗೌಣ ಹೀಗಾಗಿ ಸಕಲ ದೇವತೆಗಳನ್ನು ವಾರಕವಿ ಸಂತರು ತಮ್ಮೊಳಗೆ ಸೇರಿಸಿಕೊಂಡರು. ಹರಿ–ಹರ ಐಕ್ಯಕ್ಕೆ ಮಹತ್ವ ನೀಡಿದರು. ದೇಶಿ ಭಾಷೆಯನ್ನು ಪುರಸ್ಕರಿಸಿದರು. ಸ್ತ್ರೀಯರಿಗೂ ಶೂದ್ರರಿಗೂ ಮುಕ್ತ ಪ್ರವೇಶ. ಏಕನಾಥ ತುಕಾರಾಮರು ವಾಚಕರೊಂದಿಗೆ ಸಮರಸಗೊಂಡಿದ್ದರು. ನಾಮದೇವನ ಕೀರ್ತನೆ ಸಂಪ್ರದಾಯ ಆರಂಭಿಸಿದ ಜನಾಬಾಯಿಯಂಥ ಸಾಮಾನ್ಯ ಹೆಂಗಸೂ ಅಭಂಗದ ಮೂಲಕ ಹಾಡಿದಳು. ಜ್ಞಾನದೇವನ ಪ್ರತಿಭೆಯಂತೂ ಆಗಾಧವಾದುದು. ಹೀಗಾಗಿ ಈ ಪಂಥದಲ್ಲಿ ಜ್ಞಾನಕ್ಕೆ ಮಹತ್ವ ಬಂತು. ಅವನು ವೈಯಕ್ತಕ ಅಪಮಾನವನ್ನು ನುಂಗಿ, ಬಹುಜನ ಸಮಾಜದ ಆತ್ಮೋನ್ನತಿಗಾಗಿ ಶ್ರಮಿಸಿ ಧರ್ಮ ಸುಧಾರಿಕನೆನಿಸಿದ. ಈ ಪಂಥದಲ್ಲಿ ಬುದ್ಧಿ ಭಾವನೆಗಳ ಅಪೂರ್ವ ಮಿಲಾಪವಿಕರುವುದರಿಂದ ಅದು ಹೆಚ್ಚು ಜನಪ್ರಿಯಗೊಂಡಿತು.

೪. ದತ್ತ ಸಂಪ್ರದಾಯ :

'ದತ್ತ' ದೇವತೆಯ ಬಗ್ಗೆ ಇತಿಹಾಸ – ಪುರಾಣದಲ್ಲಿ ಹೇಳಲಾಗಿದ್ದರೂ ಅವನ ೧೬ ಅವತಾರಗಳ ಕಥೆಯು 'ಅವಧೂತಗೀತೆ'ಯಲ್ಲಿ ಬರುತ್ತದೆ. ಅವನ ಉಲ್ಲೇಖ ಉಪನಿಷತ್ತಿನಲ್ಲೂ ಬರುತ್ತದೆ. ದತ್ತಾವತಾರದ ಲೀಲಾಭಾಯಿ ಮಹಾರಾಷ್ಟ್ರ ಆಂಧ್ರ – ಕರ್ನಾಟಕದಲ್ಲೂ ದತ್ತೋಪಾಸನೆಯಿದೆ. 'ಗುರುಚರಿತ್ರ' ಗ್ರಂಥವು ಈ ಸಂಪ್ರದಾಯದ ಪ್ರಮಾಣಗ್ರಂಥ. ಈ ಗ್ರಂಥದಲ್ಲಿ ಯೋಗ ಸಾಧನೆಯ ಜತೆಗೆ, ಭಕ್ತಿ ಮತ್ತು ಕರ್ಮಕಾಂಡವಿದೆ,

ಸಂಪ್ರದಾಯದ ಆಚಾರಧರ್ಮವನ್ನು ಗುರುಚರಿತ್ರೆಯಲ್ಲಿ ಹೇಳಲಾಗಿದೆ. ಉಪಾಸ್ಯ ದೇವತೆಯಾದ ದತ್ತನ ಚರಿತ್ರೆ, ಶ್ರೀಪಾದವಲ್ಲಭ, ನರಸಿಂಹ ಸರಸ್ವತಿಯನ್ನೂ ಹೇಳುವುದು, ಚರಿತ್ರೆ ಹಾಡುತ್ತಲೇ ಆತ್ಮೋದ್ಧಾರ ಸಾಧಿಸಲು ನಿರ್ಮಾಣಗೊಂಡಿದೆ. ಹಾಗೆಯೇ ಧರ್ಮಜಾಗೃತಿ, ಸಂರಕ್ಷಣೆಯ ಉದ್ದೇಶವೂ ಇದೆ. ಅವತಾರವಿರುವುದರಿಂದ, ಚಮತ್ಕಾರ ಪವಾಡವೂ ಇದೆ. ಸಮಾಜದ ಪಾರಲೌಕಿಕ ಕಲ್ಯಾಣದ ಜತೆಗೆ ವ್ಯಾಧಿ ಸಂಕಟ ಪರಿಹಾರಕ್ಕೂ ಮಹತ್ವ ನೀಡಲಾಗಿದೆ. ಸಾಹಿತ್ಯಿಕ ದೃಷ್ಟಿಯಿಂದ ಈ ಗ್ರಂಥಕ್ಕೆ ಗುರುಚರಿತ್ರೆ ಮೌಕಿಕತೆ ಪ್ರಾಪ್ತವಾಗಲಿಲ್ಲ. ಮುಸ್ಲಿಂ ಹಲ್ಲೆಯಿಂದ ಶ್ರದ್ಧಾಸ್ಥಾನ ಸುರಕ್ಷಿತವಾಗಿಡಲು ಪಾದುಕಾ ಪೂಜೆ ರೂಢಗೊಂಡಿತು.

೫. ಸಮರ್ಥ ಸಂಪ್ರದಾಯ

ಗೀತೆಯ ಭಕ್ತಿಪ್ರಧಾನ ಕರ್ಮಯೋಗವನ್ನು ಪುರಸ್ಕರಿಸಿ ಸಮರ್ಥ ಸಂಪ್ರದಾಯವನ್ನು ರಾಮದಾಸರು ಸ್ಥಾಪಿಸಿದರು. ಧರ್ಮಸ್ಥಾಪನೆಗಾಗಿ ರಾಜಕಾರ್ಯ ಸ್ವಾರ್ಥಸಾಧುಗಳಿಗೆ ಇಲ್ಲಿ ಅವಕಾಶವಿಲ್ಲ. ಸತ್ಯ-ನ್ಯಾಯ - ಸಮತೆಯ ಪಾಲನೆಗಾಗಿ ರಾಜಕಾರಣ ದುಷ್ಟರ (ಮುಸ್ಲಿಂ) ಸಂಹಾರ, ಸಜ್ಜನರ ಸಂರಕ್ಷಣೆಗಾಗಿ ಶ್ರೀರಾಮ, ಹನುಮನ ಉಪಾಸನೆ ದೇಟಿ. ಭವಾನಿಯು ರಾಮನಿಗೆ ವರ ನೀಡಿದ್ದರಿಂದ ಭವಾನಿಯ ಉಪಾಸನೆಗೂ ಶಿವಾಜಿಗೆ ಬೋಧನೆ. ಮಹಾರಾಷ್ಟ್ರದ ಕ್ಷಾತ್ರವೃತ್ತಿ ಮತ್ತು ಬ್ರಹ್ಮತೇಜಕ್ಕೆ ಆವಾಹನೆ ನೀಡುವ ಸಂಪ್ರದಾಯದ ಸ್ಥಾಪನೆ, ನಂತರ ಬೋಧನೆಯಿಂದ ಸ್ವಧರ್ಮದ ಬಗೆಗೆ ಅಭಿಮಾನ ಮೂಡಿಸುವ ಪ್ರಯತ್ನ ಸ್ವಧರ್ಮದ ಮೇಲೆ ಹಲ್ಲೆ ಮಾಡುವವರ ಮೇಲೆ ಪ್ರತಿ ಕಾರ ಇದು ರಾಮದಾಸರ ಬೋಧನೆ.

ಶಕ್ತಿ-ಬುದ್ಧಿ-ಮನೋವೃತ್ತಿ ಉಲ್ಲಸಿತವಾಗಿರುವ ತೇಜಸ್ವಿ ತರುಣ ವರ್ಗವು ತನ್ನ ಸಂಪ್ರದಾಯದಲ್ಲಿರಬೇಕೆಂಬ ಇಚ್ಛೆ ಅವರದ್ದು.

೬. ಆನಂದ ಸಂಪ್ರದಾಯ :

ಇದು ಭಕ್ತಿಮಾರ್ಗದ ಸಂಪ್ರದಾಯ. ಕಾಶಿ ವಿಶ್ವೇಶ್ವರನ ಪ್ರೇರಣೆಯಿಂದ ಈ ಸಂಪ್ರದಾಯ ರೂಢವಾಯಿತು. ಗಂಗೆಯಲ್ಲಿ ಜನಿಸಿದ ಬಾಲಕನು ಸದಾ ನಗುತ್ತ ಇದ್ದುದರಿಂದ ಅವನಿಗೆ 'ಸದಾನಂದ' ಎನ್ನಲಾಯಿತು. ಅವನು ವಿಶ್ವೇಶ್ವರನ ಅನುಗ್ರಹ ಬೇಡಿದ. ಕಲಿಯುಗದಲ್ಲಿ ದತ್ತಾತ್ರೇಯನ ಹೊರತು ಬೇರೆ ಯಾರಿಂದಲೂ ಅನುಗ್ರಹವಾಗದು. ಆದರೂ ವಿಶ್ವೇಶ್ವರ ಕಥನ ಮಾಡಿದ ಈ ಸೂಚನೆಯಂತೆ ಸದಾನಂದ ದಕ್ಷಿಣಕ್ಕೆ ಪಯಣಿಸಿದ. ಅಲ್ಲಿ ದತ್ತಾತ್ರೇಯನ ಅನುಗ್ರಹವಾಯಿತು. ಹೀಗಾಗಿ ಸದಾನಂದನೇ ಈ ಸಂಪ್ರದಾಯದ ಆದ್ಯ ಪ್ರವರ್ತಕ. ರಾಮಾನಂದ ಅವನ ನಿಜಶಿಷ್ಯ ಕಲ್ಯಾಣದಲ್ಲಿ (ಬಸವ ಕಲ್ಯಾಣ) ಮಠವಿದೆ. ಬಳಿಕ ಸದಾನಂದರು ಸಜೀವ ಸಮಾಧಿ ತೆಗೆದುಕೊಂಡರು. ಅನಂತರ ಹಲವು ಮಠಾಧೀಶರಾಗಿಹೋದರು.

ಕಲ್ಯಾಣದಲ್ಲಿ ದತ್ತಗದ್ದುಗೆಯಿದೆ. ಪೀಠಾಧೀಶರಿಂದ ಗದ್ದುಗೆಯ ಪೂಜೆ, ಈ ಪರಂಪರೆಯಲ್ಲಿ ಬೆಳಿಗ್ಗೆ ಬ್ರಹ್ಮನ, ಮಧ್ಯಾಹ್ನ ವಿಷ್ಣುವಿನ, ಸಂಜೆ ಶಂಕರನ ಪೂಜೆ, ವರ್ಷದಲ್ಲಿ ಎರಡು ಬಾರಿ ಮಾತ್ರ ತೀರ್ಥ ವಿನಿಯೋಗ.

ಈ ಸಂಪ್ರದಾಯವು ದತ್ತಪಂಥದ ಅಂತರ್ಗತ ಕೇವಲಾದ್ವೈತ ತತ್ವವನ್ನು ಆಧರಿಸಿದೆ. ಭಾಗವತ ಧರ್ಮದ ಆದ್ಯ ಪ್ರವರ್ತಕ ಧರ್ಮಸ್ವರೂಪ ಅತ್ಯಂತ ವ್ಯಾಪಕ ಜೀವ ದೇವರಾಗಬಲ್ಲ. ಈ ಸಿದ್ಧಿಸಾಧನೆಯ ತತ್ವವನ್ನು ದತ್ತನು ಕಥನ ಮಾಡಿದ ಸಾಧನೆಯಿಂದ ಈಶ್ವರನಾಗುತ್ತಾನೆ. ಜೀವನ ಕಲ್ಯಾಣವೇ ಮುಖ್ಯ, ಆನಂದಸ್ವರೂಪದ ಮಾಹಿತಿಯಿದೆ. ಈ ತತ್ವ ಯೋಗವಿದ್ಯೆಗೂ ಪೋಷಕ. ಬ್ರಹ್ಮಾನಂದ ಪ್ರಾಪ್ತಿಯಿಂದ ದುಃಖ ಭಯದ ನಿವಾರಣೆ, ಇದೋ ಈ ಸಂಪ್ರದಾಯದ ಗುರಿ. ಅನ್ನ-ಪ್ರಾಣ ಮನ ಬುದ್ಧಿ ಕೊನೆಗೆ ಆನಂದ ಮತ್ತು ಬ್ರಹ್ಮನ ಉಪಾಸನೆ.

೭. ನಾಗೇಶ ಸಂಪ್ರದಾಯ

ಸಂತ ಕವಿ ವಡವಾಳ ಸಿದ್ಧನಾಗೇಶರ ಕಾಲ ೧೩ನೇ ಶತಮಾನ ಯಾರು ಉಪಾಸ್ಯದೇವತೆಯು ನಾಗನಾಥ ಉರ್ಫ್ ನಾಗೇಶವೋ ಅಂಥ ನಾಗೇಶ ಸಂಪ್ರದಾಯವು ಸ್ವತಂತ್ರವಾಗಿದ್ದು ಮಹಾರಾಷ್ಟ್ರ - ಕರ್ನಾಟಕ ಸೀಮೆಯಲ್ಲಿ ಪ್ರಚಲಿತ ವಾಗಿದೆ. ಹಲವು ಸಂತ ಕವಿಗಳಿಂದ ಸಾಹಿತ್ಯ ನಿರ್ಮಾಣಗೊಂಡಿದೆ .

ಅಜ್ಞಾನಸಿದ್ಧ ಮನ್ಮಥ ವೇಡಿಯಾ ನಾಗೇಶ, ಅವಧೂತ, ಫಕೀರ ಹುಸೇನ, ನಿರಂಜನ ಪುರಿ ಮುಂತಾದ ಕವಿಗಳ ರಚನೆ ಉಪಲಬ್ಧವಿದೆ. ಸಾಧಕನು ಗುರೂಪದೇಶದ ಬಳಿಕ 'ಬ್ರಹ್ಮ' ಅಧ್ಯಯನ ಕೈಗೊಂಡು ಸಂಸಾರದಲ್ಲಿ ರಮಿಸುತ್ತಾನೆ. ಆಗ ಪೂರ್ವ ಜ್ಞಾನದಿಂದ ಸ್ಮೃತಿ ಜಾಗೃತಗೊಂಡು ಬ್ರಹ್ಮನೊಂದಿಗೆ ಸಮರಸಗೊಳ್ಳುತ್ತಾನೆ. ಎಂಥ ಸಂಕಟದಲ್ಲೂ ಸಾಧನೆ ಬಿಡುವದಿಲ್ಲ. ಕೊನೆಗೆ ಬ್ರಹ್ಮನಲ್ಲಿ ಸಂಪೂರ್ಣ ಲೀನಗೊಳ್ಳುವುದು - ಇದನ್ನು 'ಪರವನಾಗೇಶ' ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಇದೇ ಈ ಸಂಪ್ರದಾಯದ ತತ್ವಜ್ಞಾನ. ಜೀವ - ಶಿವದ ಐಕ್ಯಕ್ಕೂ ಮಹತ್ವವಿದೆ.

(ಕ.ವಿ.ವಿ. ಧಾರವಾಡದವರು ಏರ್ಪಡಿಸಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ)

ಸೇಂತ್ ಎಕ್ಸೂಪರಿಯ
ಪುಟ್ಟ ರಾಜಕುಮಾರ

ಅನುವಾದ ಮತ್ತು ನಾಟಕ ರೂಪಾಂತರ
ಡಾ. ಜೆ. ಬಾಲಕೃಷ್ಣ

ಪಾತ್ರಗಳು

೧. ಪುಟ್ಟ ರಾಜಕುಮಾರ
೨. ನಿರೂಪಕ / ಪೈಲಟ್
೩. ಗುಲಾಬಿ ಹೂ
೪. ರಾಜ
೫. ಅಹಂಕಾರಿ ಮನುಷ್ಯ
೬. ಕುಡು
೭. ವ್ಯಾಪಾರಿ–೧
೮. ಭೂಗೋಳ ಶಾಸ್ತ್ರಜ್ಞ
೯. ಹಾವು
೧೦. ನರಿ
೧೧. ರೈಲ್ವೇ ಸ್ವಿಚ್‌ಮ್ಯಾನ್
೧೨. ವ್ಯಾಪಾರಿ–೨
೧೩. ಗಿಡ

ದೃಶ್ಯ ೧:

(ಸಂಪೂರ್ಣ ಕತ್ತಲಾವರಿಸಿರುವ ವೇದಿಕೆಯ ಒಂದು ಬದಿಯಲ್ಲಿ ಕಲ್ಲಿನ ಮೇಲೆ ಕೂತಿರುವ ವ್ಯಕ್ತಿಯ ಮೇಲೆ ಬೆಳಕು ನಿಧಾನವಾಗಿ ಮೂಡುತ್ತದೆ. ಆತ ಎದ್ದು ನಿಂತು)

ಕತ್ತಲಾಗುತ್ತಾ ಬಂತು. ಈ ವರ್ಷವೂ ನನ್ನ ಪುಟ್ಟ ರಾಜಕುಮಾರ ಬರಲೇ ಇಲ್ಲ. ನಾನು ಅವನನ್ನು ಕಂಡು ಆರು ವರ್ಷಗಳಾದುವು. ಅಬ್ಬಾ... ಆರು ವರ್ಷಗಳು! ಸಮಯ ಹೇಗೆ ವಿಮಾನದಂತೆ ಹಾರಿಹೋಗುತ್ತದೆ! ಆರು ವರ್ಷಗಳ ಹಿಂದೆ ಸಹಾರಾ ಮರುಭೂಮಿಯ ಇದೇ ಸ್ಥಳದಲ್ಲಿಯೇ ನಾನು ಆತನನ್ನು ಭೇಟಿಯಾದದ್ದು... ಇಲ್ಲೇ... ಇಲ್ಲಿಂದ ಸ್ವಲ್ಪ ದೂರದಲ್ಲಿ ಆತ ಕಣ್ಮರೆಯಾದ... ನಾನು ಎಷ್ಟೊಂದು ಹೇಳಿದೆ... ಬೇಡ... ಹೋಗಬೇಡ ಎಂದು. ಆತ ನನ್ನ ಮಾತು ಕೇಳಲೇ ಇಲ್ಲ... ಅವನು ಯಾರ ಮಾತೂ ಕೇಳೋದಿಲ್ಲ, ಅದು ಬೇರೆ ಮಾತು. ಆ ಪುಟ್ಟ ರಾಜಕುಮಾರ ಎಲ್ಲಿಂದ ಬಂದ, ಹೇಗೆ ಬಂದ... ಎಲ್ಲಾ ನಿಗೂಢ... ಕೇಳಿದರೆ ಅದೆಂಥದೋ ಕ್ಷುದ್ರಗ್ರಹದಿಂದ ಬಂದೆ ಅಂತ ಹೇಳಿದ....

ಆರು ವರ್ಷದಿಂದ ಇದೇ ಸಮಯಕ್ಕೆ ಸರಿಯಾಗಿ ಪ್ರತಿ ವರ್ಷ ನಾನಿಲ್ಲಿಗೆ ಬರ್ತಾ ಇದೀನಿ, ಆ ಪುಟ್ಟ ರಾಜಕುಮಾರ ಬರ್ತಾನೇನೋ ಅಂತ.. (ಒಂದರೆಕ್ಷಣ ನಿಂತು ಆಲೋಚಿಸುವನು)

ನನಗೆ ಕುತೂಹಲ ಮತ್ತು ಆತಂಕ... ನಾನು ಬರೆದುಕೊಟ್ಟ ಕುರಿಯ ಚಿತ್ರ ಹೇಗಿದೆ ಅಂತ... ಆ ಕುರಿ ಏನಾದರೂ ಅವನ ಪ್ರೀತಿಯ ಹೂಗಿಡವನ್ನು ತಿಂದುಬಿಟ್ಟಿದೆಯೇನೋ ಎನ್ನುವ ಆತಂಕ... ಆತ ಮತ್ತೆ ನನ್ನನ್ನು ನೋಡಲು ಬರಲೇ ಇಲ್ಲ... ಆರು ವರ್ಷಗಳು! ಆಗಲೇ ಹೇಳಿದೆನಲ್ಲಾ, ಸಮಯ ವಿಮಾನದ ಹಾಗೆ ಹಾರಿಹೋಗುತ್ತದೆ ಎಂದು...

ಈ ರೀತಿ ವಿಮಾನ ಎಂದು ಪದೇ ಪದೇ ಹೇಳ್ತಾ ಇರೋದು ನಿಮಗೆ ಆಶ್ಚರ್ಯ ಉಂಟುಮಾಡಿರಬಹುದು... ನಾನೊಬ್ಬ ಪೈಲಟ್... ವಿಮಾನಗಳು ಎಂದರೆ ನನಗಿಷ್ಟ... ಆದರೆ ನಾನು ಪೈಲಟ್ ಆಗದೆ ಒಬ್ಬ ಪ್ರಸಿದ್ಧ ಚಿತ್ರಕಾರ ಆಗಬಹುದಿತ್ತು... ಅದು ಬೇರೆ ಕತೆ. ಈ ದೊಡ್ಡವರು... ಎಲ್ಲಿ ಬಿಡ್ತಾರೆ... ಮಕ್ಕಳು ಮುಂದೆ ಏನಾಗಬೇಕು ಅನ್ನೋದನ್ನ ನಿರ್ಧರಿಸೋದು ಅವರೇ ಅಲ್ಲವೆ?

ಇರಲಿ, ನನ್ನ ಅನುಭವ ಹೇಳ್ತೀನಿ, ಇದು ನಿಮ್ಮದೂ ಅನುಭವ ಆಗಿರಬಹುದು...

ನಾನೊಂದು ಚಿತ್ರ ಬರೆದೆ... ಒಂದು ಆನೆಯನ್ನು ಇಡಿಯಾಗಿ ನುಂಗಿರೋ

ಹೆಬ್ಬಾವಿನ ಚಿತ್ರ... ಏಕೆ? ಆನೆಯನ್ನು ಹೆಬ್ಬಾವು ಇಡಿಯಾಗಿ ನುಂಗೋಕೆ ಆಗೋದಿಲ್ವಾ...? ನಮ್ಮ ಶರೀಫರೇ ಹಾಡಿದ್ದಾರಲ್ಲಾ... ಆಡು ಆನೆಯಾ ನುಂಗಿ.... ಸೀರೆ ಮಗ್ಗವಾ ನುಂಗಿ.....

ಆಡು ಆನೇನ ನುಂಗೋ ಹಾಗಿದ್ದರೆ, ಅದನ್ನು ನುಂಗೋ ಹೆಬ್ಬಾವು ಆನೇನ ಯಾಕ್ ನುಂಗ್‌ಬಾರ್ದು?

ಈ ಆನೆಯನ್ನು ನುಂಗಿರೋ ಹೆಬ್ಬಾವಿನ ಚಿತ್ರವನ್ನು ಅತ್ಯದ್ಭುತವಾಗಿ ಬರೆದು ಅತ್ಯಂತ ಹೆಮ್ಮೆಯಿಂದ ದೊಡ್ಡವರಿಗೆ ತೋರಿಸಿದೆ.....

ಅವರು ಅದನ್ನು ಕೈಯಲ್ಲಿ ಹಿಡಿದು ನೋಡಿದರು. ಹಿಂಗ್ ತಿರುಗಿಸಿ ನೋಡಿದರು.. ಹಿಂಗ್ ತಿರುಗಿಸಿ ನೋಡಿದರು.. ಅವರಿಗೆ ಆ ಚಿತ್ರ ಅರ್ಥಾನೇ ಆಗಲಿಲ್ಲ. ಹಾವಿನ ತಲೆ ಮತ್ತು ಬಾಲ ಸಣ್ಣಕ್ಕೆ ಇದೆ. ಹೊಟ್ಟೆಯಲ್ಲಿ ಆನೆ ಇರೋದರಿಂದ ದಪ್ಪಕ್ಕೆ ಇದೆ. ಅದನ್ನು ನೋಡಿ ಅವರು, 'ಇದೇನು ಟೋಪಿ ಬರೆದಿದೀಯಾ' ಅಂದರು.

ನನ್ನ ಎದೆ ಧಸಕ್ಕೆಂತು. ಆ ಹಾವು ಆನೆಬದಲಿಗೆ ನನ್ನನ್ನಾದರೂ ನುಂಗಿರಬಾರದಾ ಅನ್ನಿಸಿ ಬೇಜಾರಾಯ್ತು.

ನಿಮಗೊಂದು ಗುಟ್ಟು ಹೇಳ್ತೀನಿ. ದೊಡ್ಡೋರಿಗೆ ಈ ಮಾತು ಹೇಳಬೇಡಿ..ದೊಡ್ಡವರು ತಾವಾಗೇ ಏನೊಂದೂ ಅರ್ಥ ಮಾಡಿಕೊಳ್ಳೋದಿಲ್ಲ. ಮಕ್ಕಳು ಅವರಿಗೆ ಪ್ರತಿಯೊಂದನ್ನೂ ವಿವರಿಸಿ ಹೇಳಬೇಕು. ಈ ರೀತಿ ಹೇಳಿ ಹೇಳಿ ಮಕ್ಕಳಿಗೆ ಸಾಕು ಸಾಕಾಗಿರುತ್ತದೆ.

ಸರಿ, ಆಮೇಲೇನ್ಮಾಡ್ಲೆ, ದೊಡ್ಡೋರಿಗೆ ನನ್ನ ಚಿತ್ರಕಲೆ ಅರ್ಥ ಆಗಬೇಕಲ್ವಾ... ಅವರಿಗೆ ಪ್ರತಿಯೊಂದೂ ವಿವರವಾಗಿ ಬಿಡಿಸಿ ಹೇಳುವಂತಿರಬೇಕು. ಅದಕ್ಕೆ ಇನ್ನೊಂದು ಚಿತ್ರ ಬರೆದೆ... ಈ ಸಾರಿ ಹಾವಿನ ಹೊಟ್ಟೆಯಲ್ಲಿರೋ ಆನೆ ಕಾಣಿಸೋ ಹಾಗೆ ಬರೆದೆ. ಅದನ್ನು ದೊಡ್ಡವರಿಗೆ ತೋರಿಸಿದೆ.....

ಅವರು ಅದನ್ನು ಕೈಯಲ್ಲಿ ಹಿಡಿದು ನೋಡಿದರು.. ಹಿಂಗ್ ತಿರುಗಿಸಿ ನೋಡಿದರು. ಹಿಂಗ್ ತಿರುಗಿಸಿ ನೋಡಿದರು.. ಈ ಸಾರಿ ಅವರಿಗೆ ಆ ಚಿತ್ರ ಅರ್ಥ ಆಯ್ತೋ ಇಲ್ವೋ ಗೊತ್ತಿಲ್ಲ.. ಅವರು ಆ ಚಿತ್ರಾನ ಒಂದ್ಸಾರಿ ನೋಡಿದರು... ನನ್ನನ್ನ ಒಂದ್ಸಾರಿ ನೋಡಿದರು... ಆ ಚಿತ್ರಾನ ಒಂದ್ಸಾರಿ ನೋಡಿದರು... ನನ್ನನ್ನ ಒಂದ್ಸಾರಿ ನೋಡಿದರು... ನೋಡಿ ಕೊನೆಗೆ ಹೇಳಿದರು.

'ನಿನ್ನ ಹಾವು ಆನೆಗಳ ಚಿತ್ರ ನಿನಗೇನು ಊಟಕ್ಕೆ ಅನ್ನಾ ಕೊಡುತ್ತಾ? ನೀನು ಕಲಾವಿದ ಆದರೆ ತಿರುಪೆ ಎತ್ತಬೇಕಾಗುತ್ತದೆ. ಇದನ್ನು ಎತ್ತಿ ಬಿಸಾಕಿ ಭೂಗೋಳ, ಗಣಿತ, ವ್ಯಾಕರಣ ಓದು ಹೋಗು' ಎಂದು ನನ್ನ ಮಹಾನ್ ಕಲಾಕೃತಿಯನ್ನು ಎತ್ತಿ ಬಿಸಾಕಿದರು.

ಹೀಗಾಗಿ ನಾನು ಆರು ವರ್ಷದವನಿರುವಾಗಲೇ ಮಹಾನ್ ಚಿತ್ರ ಕಲಾಕಾರನಾಗುವ ಆಸೆಯನ್ನು ಕೈಬಿಟ್ಟೆ. ನನ್ನ ಮೊದಲನೆ ಹಾಗೂ ಎರಡನೇ ಚಿತ್ರಗಳು ಸೋತಿದ್ದರಿಂದ ನಾನು ಹತಾಶನಾಗಿದ್ದೆ.

ಹಾಗಾಗಿ ನಾನು ಪೈಲಟ್ ಆಗಬೇಕಾಯ್ತು.

ಆ ಚಿತ್ರಾನ ನಾನು ಯಾವಾಗಲೂ ನನ್ನ ಜೇಬಿನಲ್ಲೇ ಇಟ್ಟುಕೊಂಡು ಯಾರಾದ್ರೂ ದೊಡ್ಡವರು ಸಿಕ್ಕಾಗ ತೋರಿಸ್ತಿದ್ದೆ, ಅವರು ನನ್ನ ಚಿತ್ರಾನ ಅರ್ಥ ಮಾಡಿಕೊಳ್ತಾರೇನೋ ಅಂತ. ಅಂಥವರು ನನಗೆ ಯಾರೂ ಸಿಕ್ಲೇ ಇಲ್ಲ. ಅಂಥ ದೊಡ್ಡವರ ಜೊತೆ ನಾನು ಹೆಬ್ಬಾವಿನ ಬಗೆಗಾಗಲಿ, ಕಾಡು, ಪರಿಸರಗಳ ಬಗೆಗಾಗಲಿ ಅಥವಾ ನಕ್ಷತ್ರಗಳ ಬಗೆಗಾಗಲಿ ಮಾತನಾಡುತ್ತಲೇ ಇರಲಿಲ್ಲ. ನಾನೇ ಆ ವ್ಯಕ್ತಿಯ ಮಟ್ಟಕ್ಕೆ ಇಳಿದುಬಿಡುತ್ತಿದ್ದೆ. ಅವರ ಜೊತೆ ರಾಜಕೀಯದ ಬಗ್ಗೆ, ರಿಯಲ್ ಎಸ್ಟೇಟ್ ಬಗ್ಗೆ, ಶೇರ್ ಮಾರ್ಕೆಟ್ ಬಗ್ಗೆ ಆತ ಧರಿಸುವ ಟೈಗಳ ಬಗ್ಗೆ ಮಾತನಾಡುತ್ತಿದ್ದೆ. ನನ್ನಂತಹ ಸೂಕ್ಷ್ಮ ಹಾಗೂ ಸಂವೇದನಾಶೀಲ ಮನುಷ್ಯವನ್ನು ಭೇಟಿಯಾದುದ್ದಕ್ಕೆ ಅಂತಹ ದೊಡ್ಡವರಿಗೆ ಬಹಳ ಸಂತೋಷವಾಗುತ್ತಿತ್ತು.

ಈ ದೊಡ್ಡವರು ತುಂಬಾ ವಿಚಿತ್ರದವರು. ಅವರಿಗೆ ಅಂಕಿ – ಸಂಖ್ಯೆಗಳೆಂದರೆ ತುಂಬಾ ಇಷ್ಟ. ನೀವೇನಾದರೂ ಒಂದು ಸುಂದರ ಮನೆ ನೋಡಿ, ಸುಂದರ ಕೈತೋಟವಿರುವ, ಚಿಟ್ಟೆ, ಹಕ್ಕಿಗಳು ಹಾರಾಡುವ, ಹಸಿರು ಬಳ್ಳಿಗಳು ಹಬ್ಬಿರುವ ಅದ್ಭುತ ಮನೆ ಎಂದು ಅವರಿಗೆ ವಿವರಿಸಿ ಹೇಳಿದರೆ ಅವರಿಗೆ ಆ ಮನೆ ಹೇಗಿರಬಹುದೆಂದು ಊಹಿಸಿಕೊಳ್ಳಲೂ ಆಗೋದಿಲ್ಲ. ಅದೇ ನೀವು ಒಂದು ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಿರೋ ಮನೆ ಎಂದಾಕ್ಷಣ, 'ವಾಹ್! ಎಂಥ ಸುಂದರ ಮನೆ!' ಎನ್ನುತ್ತಾರೆ.

ಹಾಗಾಗಿ ನನ್ನೊಂದಿಗೆ ನಿಜವಾಗಿ ಮಾತನಾಡಬಲ್ಲ ಮತ್ತೊಬ್ಬ ವ್ಯಕ್ತಿ ಸಿಗದೆ ನನ್ನ ಬದುಕನ್ನು ಒಂಟಿಯಾಗಿಯೇ ಕಳೆದೆ–ಸಹಾರಾ ಭೂಮಿಯಲ್ಲಿ ಆರು ವರ್ಷಗಳ ಕೆಳಗೆ ನನ್ನ ವಿಮಾನ ಅಪಘಾತಕ್ಕೊಳಗಾಗುವವರೆಗು.....

(ನಿರೂಪಕನ ಮಾತು ಮುಗಿಯುತ್ತಿದ್ದಂತೆಯೇ ವೇದಿಕೆಯ ಮೇಲೆ ಸಂಪೂರ್ಣ ಕತ್ತಲಾವರಿಸುತ್ತದೆ.)

ದೃಶ್ಯ ೨:

(ವೇದಿಕೆ ಮೇಲೆ ನಿಧಾನವಾಗಿ ಬೆಳಕು ಮೂಡುತ್ತದೆ. ಕೆಟ್ಟುಹೋಗಿ ನಿಂತಿರುವ ಒಂದು ಸಣ್ಣ ವಿಮಾನ ಕಾಣುತ್ತದೆ. ಅದರ ಕೆಳಗಿನಿಂದ ಪೈಲಟ್ ತೆವಳಿ ಹೊರಗೆ ಬರುತ್ತಾನೆ. ಅವನ ಕೈಯಲ್ಲಿ ಸ್ಪ್ಯಾನರ್, ಸ್ಕ್ರೂಡ್ರೈವರ್ ಇರುತ್ತದೆ. ಬಟ್ಟೆಯೆಲ್ಲಾ

ಮಸಿಯಾಗಿರುತ್ತದೆ. ಸ್ಪ್ಯಾನರ್, ಸ್ಕ್ರೂಡ್ರೈವರ್ ಪಕ್ಕದಲ್ಲಿರಿಸಿ ಅಲ್ಲೇ ಒಂದು ಒಂದು ಕಲ್ಲಿಗೆ ಒರಗಿ ಕೂತು ನಿಟ್ಟುಸಿರುಬಿಡುತ್ತಾನೆ.)

'ಈ ವಿಮಾನದ ರಿಪೇರಿ ನನ್ನಿಂದ ಸಾಧ್ಯ ಆಗ್ತದೋ ಇಲ್ಲವೋ ಗೊತ್ತಿಲ್ಲ. ನನ್ನ ಜೊತೆ ಮೆಕ್ಯಾನಿಕ್ ಬೇರೆ ಇಲ್ಲ. ನಾನಿದನ್ನು ರಿಪೇರಿ ಮಾಡಲೇಬೇಕು. ಏಕೆಂದರೆ, ಇದು ನನ್ನ ಸಾವು ಬದುಕಿನ ಪ್ರಶ್ನೆ. ರಿಪೇರಿ ಆದ್ರೆ ನಾನು ಇಲ್ಲಿಂದ ಪಾರಾಗಿ ಹೋಗಬಹುದು. ಅಲ್ಲದೆ ಇಲ್ಲಿಂದ ಹತ್ತಿರದ ಮಾನವ ಬಿಡಾರ ಅಂದ್ರೆ ಸಾವಿರ ಮೈಲು ದೂರದಲ್ಲಿದೆ. ನನ್ನ ಬಳಿ ಒಂದು ವಾರಕ್ಕಾಗುವಷ್ಟು ನೀರು ಮಾತ್ರ ಉಳಿದಿದೆ.'

(ಪೈಲಟ್ ಪಕ್ಕದಲ್ಲಿದ್ದ ಕ್ಯಾನಿನಲ್ಲಿದ್ದ ನೀರನ್ನು ಕುಡಿದು ಅದನ್ನು ಪಕ್ಕಕ್ಕಿರಿಸಿ.. ಹಾಗೆಯೇ ಕಣ್ಣುಮುಚ್ಚುತ್ತಾನೆ. ಅಲ್ಲಿಗೆ ಪುಟ್ಟ ರಾಜಕುಮಾರ ಬರುತ್ತಾನೆ. ಬಂದವನೆ ಆಶ್ಚರ್ಯವೆಂಬಂತೆ ವಿಮಾನವನ್ನು ನೋಡುತ್ತಾನೆ. ಮಲಗಿರುವ ಪೈಲಟ್ ಬಳಿ ಬಂದು... ಗಂಭೀರ ಧ್ವನಿಯಲ್ಲಿ..)

ಪು.ರಾ.: ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು! (ಪೈಲಟ್ ಇನ್ನೂ ನಿದ್ರಿಸುತ್ತಿರುತ್ತಾನೆ, ಮತ್ತೊಮ್ಮೆ..)

ಪು.ರಾ.: ದಯವಿಟ್ಟು, ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು! (ಪೈಲಟ್ ಬೆಚ್ಚಿಬಿದ್ದವನಂತೆ ಮೇಲಕ್ಕೇಳುತ್ತಾನೆ. ಪುಟ್ಟ ರಾಜಕುಮಾರನನ್ನು ನೋಡಿ)

ಪೈಲಟ್: ಯಾರು ನೀನು? ಇಲ್ಲೇನ್ ಮಾಡ್ತಾ ಇದೀಯ?

ಪು.ರಾ.: ದಯವಿಟ್ಟು, ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು!

ಪೈಲಟ್: ಏನು!

ಪು.ರಾ.: ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು!

ಪೈಲಟ್: ನೀನು... ನೀನು... ಈ ಮರುಭೂಮಿಗೆ ಹೇಗೆ ಬಂದೆ. ಎಲ್ಲಿಂದ ಬಂದೆ? ನಿನ್ನಲ್ಲಿ ಯಾವುದೇ ಹೆದರಿಕೆ, ಆಯಾಸ ಏನೂ ಕಾಣ್ತಾ ಇಲ್ಲ. ಯಾವುದೋ ಮಗು ದಾರಿತಪ್ಪಿ ಬಂದಿರಬಹುದು ಅನ್ನೋ ಚಿಹ್ನೆಗಳೂ ಇಲ್ಲ. ಅದಿರಲಿ, ನೀನಿಲ್ಲಿ ಏನು ಮಾಡುತ್ತಿದ್ದೀಯ?

ಪು.ರಾ.: ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು!

ಪೈಲಟ್: ಕುರಿಯ ಚಿತ್ರ? ಹ್ಹಾಂ... ನಾನೂ ಒಬ್ಬ ದೊಡ್ಡ ಚಿತ್ರಕಲಾವಿದನಾಗಬಹುದಿತ್ತು... ಆದರೆ... ಆದರೆ... ಈ ದೊಡ್ಡವರು ನನಗೆ ಅವಕಾಶ ಕೊಡಲೇ ಇಲ್ಲ. ನಾನು ಕುರಿ ಚಿತ್ರ ಹೇಗೆ ಬರೆಯಲಿ?

ಪು.ರಾ.: ಪರವಾಗಿಲ್ಲ, ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು...

ಪೈಲಟ್: (ತನ್ನ ಜೇಬಿನಿಂದ ಹಾಳೆಯೊಂದನ್ನು ಹಾಗೂ ಪೆನ್ನನ್ನು ಹೊರತೆಗೆದು) ನೋಡು, ನಾನು ಅತ್ಯಂತ ಸಂಕಟದಿಂದ ಹೇಳ್ತಾ ಇದೀನಿ, ನಿಜವಾಗಿಯೂ ನನಗೆ ಚಿತ್ರ ಬಿಡಿಸೋಕೆ ಬರೋದಿಲ್ಲ.

ಪು.ರಾ.: ಪರವಾಗಿಲ್ಲ...... ನನಗೊಂದು ಕುರಿಯ ಚಿತ್ರ ಬಿಡಿಸಿ ಕೊಡು.....

ಪೈಲಟ್: ನಾನು ಚಿಕ್ಕ ಹುಡುಗನಾಗಿದ್ದಾಗ ಒಂದು ಚಿತ್ರ ಬರೆದಿದ್ದೆ. ಅದನ್ನು ಬರೆದು ತೋರಿಸ್ತೀನಿ. (ಪೈಲಟ್ ಚಿತ್ರವೊಂದನ್ನು ಬರೆದು ಅದನ್ನು ಪುಟ್ಟ ರಾಜಕುಮಾರನಿಗೆ ತೋರಿಸುತ್ತಾನೆ.)

ಪು.ರಾ.: ಬೇಡ, ಬೇಡ, ಆನೆ ನುಂಗಿರುವ ಹೆಬ್ಬಾವಿನ ಚಿತ್ರ ನನಗೆ ಬೇಡ. ಹೆಬ್ಬಾವು ಒಂದು ಅಪಾಯಕಾರಿ ಪ್ರಾಣಿ ಹಾಗೂ ಆನೆ ದೈತ್ಯಾಕಾರದ್ದು. ನಾನು ವಾಸಿಸುವಲ್ಲಿ ಎಲ್ಲವೂ ಚಿಕ್ಕವು. ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು.

ಪೈಲಟ್: ಆಯ್ತು, ಪ್ರಯತ್ನಿಸ್ತೀನಿ. (ಪೈಲಟ್ ಚಿತ್ರವೊಂದನ್ನು ಬರೆದು ಪುಟ್ಟ ರಾಜಕುಮಾರನಿಗೆ ತೋರಿಸುತ್ತಾನೆ)

ಪು.ರಾ.: (ಅದನ್ನು ಎಚ್ಚರಿಕೆಯಿಂದ ಗಮನಿಸಿ) ಬೇಡ, ಈ ಕುರಿಗೆ ಆಗಲೇ ಕಾಯಿಲೆ ಬಂದಂತಿದೆ. ಬೇರೊಂದು ಕುರಿಯ ಚಿತ್ರ ಬರಿ.

(ಮತ್ತೊಂದು ಚಿತ್ರವನ್ನು ಬಿಡಿಸಿದ ಆ ಚಿತ್ರ ನೋಡಿದ ಪುಟ್ಟ ರಾಜಕುಮಾರ ಮುಗುಳ್ನಕ್ಕು,)

ಪೈಲಟ್: ನೋಡಿಲ್ಲಿ ಇದು ಕುರಿಯಲ್ಲ, ಇದು ಟಗರು ಇದಕ್ಕೆ ಕೊಂಬುಗಳಿವೆ.

(ಪೈಲಟ್ ಮತ್ತೊಂದು ಚಿತ್ರ ಬಿಡಿಸಿದ.)

ಪು.ರಾ.: ಇದು ಮುದಿಯಾಗಿದೆ. ನನಗೆ ಬಹಳ ದಿವಸ ಬದುಕಬಲ್ಲ ಕುರಿ ಬೇಕು.

ಪೈಲಟ್: ನೋಡು, ನೀನು ನನ್ನ ತಾಳ್ಮೆ ಪರೀಕ್ಷಿಸ್ತಾ ಇದ್ದೀಯ. ಇನ್ನೂ ನನ್ನ ವಿಮಾನದ ರಿಪೇರಿಯ ಕೆಲಸ ಬೇರೆ ಇದೆ. ತಗೋ ಈ ಚಿತ್ರ., ಇದರಲ್ಲಿ ಒಂದು ಪೆಟ್ಟಿಗೆ ಚಿತ್ರ ಬರೆದಿದ್ದೀನಿ. ನೀನು ಕೇಳಿದ ಕುರಿ ಅದರೊಳಗೆ ಇದೆ.

ಪು.ರಾ.: ವಾಹ್! ಇದು ನನಗೆ ಬೇಕಾದ ಹಾಗೆಯೇ ಇದೆ. ಈ ಕುರಿಗೆ ಹೆಚ್ಚು ಹುಲ್ಲು ಬೇಕಾಗುತ್ತದೆಯೆ?

ಪೈಲಟ್: ಏಕೆ?

ಪು.ರಾ.: ಏಕೆಂದರೆ, ನಾನಿರುವಲ್ಲಿ ಎಲ್ಲವೂ ಚಿಕ್ಕವು.....

ಪೈಲಟ್: ಈ ಕುರಿಗೆ ಬೇಕಾಗುವಷ್ಟು ಹುಲ್ಲು ಅಲ್ಲಿ ಇದ್ದೇ ಇರುತ್ತದೆ. ನಾನು ನಿನಗೆ ಕೊಟ್ಟಿರುವುದು ಬಹಳ ಚಿಕ್ಕ ಕುರಿ.

ಪು.ರಾ.: (ಆ ಚಿತ್ರದ ಮೇಲೆ ಬಾಗಿ ನೋಡಿ) ಅಷ್ಟೇನೂ ಚಿಕ್ಕದಲ್ಲ. ನೋಡು! ಕುರಿ ನಿದ್ದೆ ಮಾಡಿದೆ......

ಪೈಲಟ್: (ಪುಟ್ಟ ರಾಜಕುಮಾರನ ಹೆಗಲ ಮೇಲೆ ಕೈಹಾಕಿ ತಾನೂ ಬಾಗಿ ನೋಡಿ) ಹೌದು, ಕುರಿ ನಿದ್ದೆ ಮಾಡಿದೆ.

ಕುರಿಯಿದೆ, ಕುರಿಯಿದೆ, ಕುರಿ ನಿದ್ದೆ ಮಾಡಿದೆ........... (ಹಾಡುವನು)

(ಪೈಲಟ್ ವಿಮಾನ ರಿಪೇರಿ ಮಾಡಲು ತೊಡಗುವನು.)

ಪು.ರಾ.: (ಏರೋಪ್ಲೇನ್ ಕಡೆಗೆ ಕೈತೋರುತ್ತಾ) ಆ ವಸ್ತು ಏನು?

ಪೈಲಟ್: ಇದು ವಸ್ತುವಲ್ಲ. ಇದು ಹಾರುತ್ತದೆ. ಅದು ಏರೋಪ್ಲೇನ್. ನನ್ನ ಏರೋಪ್ಲೇನ್.

ಪು.ರಾ.: (ಜೋರು ಧ್ವನಿಯಲ್ಲಿ) ಏನು! ನೀನು ಆಕಾಶದಿಂದ ಇಲ್ಲಿ ಬಿದ್ದೆಯಾ!

ಪೈಲಟ್: ಹೌದು.

ಪು.ರಾ.: ಹೋ! ಎಂಥ ತಮಾಷೆ! ಹಾಗಾದರೆ ನೀನೂ ಸಹ ಆಕಾಶದಿಂದ ಬಂದವನೆ! ನಿನ್ನ ಗ್ರಹ ಯಾವುದು?

ಪೈಲಟ್: (ರಿಪೇರಿ ಮಾಡುತ್ತಿದ್ದವ ನಿಲ್ಲಿಸಿ ಪುಟ್ಟ ರಾಜಕುಮಾರನ ಕಡೆಗೆ ನೋಡುತ್ತಾ) ನೀನು ಈ ಮರುಭೂಮಿಯಲ್ಲಿ ನನ್ನ ಹಿಂದೆ ಬಿದ್ದಿರೋದು ನೋಡಿದರೆ ನನ್ನ ಗ್ರಹ ಶನಿಗ್ರಹ ಅನ್ನಿಸ್ತಾ ಇದೆ. (ತನ್ನ ರಿಪೇರಿ ಕೆಲಸ ಮುಂದುವರಿಸಿ, ತಕ್ಷಣ ನಿಲ್ಲಿಸಿ, ಏನೋ ಯೋಚಿಸಿದವನಂತೆ) ನೀನು ಬೇರೊಂದು ಗ್ರಹದಿಂದ ಬಂದವನೆ?

ಪು.ರಾ.: (ಏರೋಪ್ಲೇನಿನ ಮೇಲೆ ನೆಟ್ಟ ದೃಷ್ಟಿ ನೆಟ್ಟಂತೆಯೇ) ಈ ವಾಹನದಲ್ಲಿ ನೀನು ಬಹಳ ದೂರದಿಂದ ಬಂದಿರಲು ಸಾಧ್ಯವೇ ಇಲ್ಲ....... (ತನ್ನ ಕೈಯಲ್ಲಿದ್ದ ಚಿತ್ರವನ್ನು ನೋಡತೊಡಗುತ್ತಾನೆ.)

ಪೈಲಟ್: (ತನ್ನ ರಿಪೇರಿ ಸಲಕರಣೆಗಳನ್ನು ಬದಿಗಿರಿಸಿ ಪುಟ್ಟ ರಾಜಕುಮಾರನ ಪಕ್ಕದಲ್ಲಿ ಕೂತು) ನನ್ನ ಪುಟ್ಟ ರಾಜಕುಮಾರನೆ, ನೀನು ಬಂದಿರುವುದು ಎಲ್ಲಿಂದ? ನಾನಿರುವೆಡೆಯಲ್ಲಿ ಎನ್ನುತ್ತೀಯಲ್ಲ, ಆ ಸ್ಥಳ ಯಾವುದು? ಈ ಕುರಿಯನ್ನು ನೀನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು?

ಪು.ರಾ.: (ಸ್ವಲ್ಪ ಹೊತ್ತಿನ ಮೌನದ ನಂತರ) ನನಗೆ ಕೊಟ್ಟಿರುವ ಈ ಪೆಟ್ಟಿಗೆಯ

ಮತ್ತೊಂದು ಅನುಕೂಲವೆಂದರೆ, ರಾತ್ರಿಹೊತ್ತು ಕುರಿ ಅದನ್ನು ತನ್ನ ಮನೆಯಾಗಿ ಮಾಡಿಕೊಳ್ಳಬಹುದು.

ಪೈಲಟ್: ಹೌದೇನು? ನೀನು ಒಳ್ಳೆಯವನಾದಲ್ಲಿ ಒಂದು ಹಗ್ಗ ಹಾಗೂ ಗೂಟವನ್ನೂ ಕೊಡುತ್ತೇನೆ. ಹಗಲು ಹೊತ್ತು ನೀನು ಈ ಕುರಿಯನ್ನು ಕಟ್ಟಿಹಾಕಬಹುದು.

ಪು.ರಾ.: (ಸರಕ್ಕನೆ ಮೇಲಕ್ಕೆದ್ದು) ಕಟ್ಟಿ ಹಾಕಬೇಕೇ? ಎಂಥ ವಿಚಿತ್ರ ಆಲೋಚನೆ!

ಪೈಲಟ್: ಹೌದು. ನೀನದನ್ನು ಕಟ್ಟಿ ಹಾಕದಿದ್ದಲ್ಲಿ, ಅಲ್ಲಿ ಇಲ್ಲಿ ಮೇಯುತ್ತಾ ಹೋಗಿ ಅದು ಕಳೆದುಹೋಗಬಹುದು.

ಪು.ರಾ.: (ಜೋರಾಗಿ ನಗುತ್ತಾ) ಆ ಕುರಿ.. ಎಲ್ಲಿಗೆ ಹೋಗಬಹುದು ಎಂದುಕೊಂಡಿದ್ದೀಯ?

ಪೈಲಟ್: ಎಲ್ಲಿಗಾದರೂ..... ಅದರ ಕಾಲು ಎಳೆದೊಯ್ಯುವ ಕಡೆಗೆ.

ಪು.ರಾ.: ಅದು ಸಮಸ್ಯೆಯಲ್ಲ, ಏಕೆಂದರೆ ನಾನಿರುವಲ್ಲಿ ಎಲ್ಲವೂ ಬಹಳ ಚಿಕ್ಕದಾಗಿದೆ. (ಹಾಡುತ್ತಾನೆ) ಚಿಕ್ಕದು, ಚಿಕ್ಕದು ಎಲ್ಲವೂ ಚಿಕ್ಕದು...........

ದೃಶ್ಯ ೩:

(ಪೈಲಟ್ ಮತ್ತು ಪುಟ್ಟ ರಾಜಕುಮಾರ ಮರಳಿನ ಮೇಲೆ ಕೂತಿರುತ್ತಾರೆ.)

ಪು.ರಾ.: ನನಗೆ ಸೂರ್ಯಾಸ್ತವೆಂದರೆ ಇಷ್ಟ. ನಡೆ, ಹೋಗಿ ನೋಡೋಣ.

ಪೈಲಟ್: ಈಗಿನ್ನೂ ಬೆಳಗಾಗಿದೆ ಅಷ್ಟೆ. ಅದಕ್ಕಾಗಿ ನಾವು ಕಾಯಬೇಕು.

ಪು.ರಾ.: ಕಾಯಬೇಕು ಯಾವುದಕ್ಕೆ?

ಪೈಲಟ್: ಸೂರ್ಯಾಸ್ತಮಾನಕ್ಕೆ, ಸೂರ್ಯ ಮುಳುಗುವ ಸಮಯ ಬರುವವರೆಗೂ ಕಾಯಬೇಕು.

ಪು.ರಾ.: ಹೋ. ಹೌದಲ್ಲವೆ? ನಾನು ಸದಾ ನನ್ನ ಗ್ರಹದಲ್ಲಿದ್ದೇನೆಂದೇ ಆಲೋಚಿಸುತ್ತಿರುತ್ತೇನೆ. ನನ್ನ ಚಿಕ್ಕ ಕ್ಷುದ್ರಗ್ರಹದಲ್ಲಿ, ಕುರ್ಚಿಯನ್ನು ಕೊಂಚ ಅತ್ತ ಸರಿಸಿದರೆ ಸಾಕು. ನಾನು ಸೂರ್ಯಾಸ್ತವನ್ನು ಮತ್ತು ನಸುಬೆಳಕನ್ನು ನನಗೆ ಬೇಕೆಂದಾಗ ನೋಡಬಹುದು........ ಒಂದು ದಿನ ನಾನು ಸೂರ್ಯಾಸ್ತವನ್ನು ನಲ್ವತ್ತನಾಲ್ಕು ಬಾರಿ ನೋಡಿದ್ದೆ!.......... ದುಃಖದಲ್ಲಿರುವವರು ಸೂರ್ಯಾಸ್ತವನ್ನು ಇಷ್ಟಪಡುತ್ತಾರೆ ಅಲ್ಲವೆ?

ಪೈಲಟ್: ಹಾಗಂದರೆ ಆ ದಿನ, ನೀನು ನಲ್ವತ್ತನಾಲ್ಕು ಸೂರ್ಯಾಸ್ತಗಳನ್ನು ಕಂಡಾಗ ನೀನು ದುಃಖದಲ್ಲಿದ್ದೆಯಾ?

(ತನ್ನ ಮೊಣಕಾಲುಗಳ ನಡುವೆ ತನ್ನ ತಲೆಯನ್ನು ಹುದುಗಿಸುತ್ತಾನೆ.)
(ಪೈಲಟ್ ಎದ್ದು ತನ್ನ ವಿಮಾನದ ರಿಪೇರಿ ಕೆಲಸ ಮುಂದುವರಿಸುತ್ತಾನೆ.)

ಪು.ರಾ.: (ಎದ್ದು ಬಂದು) ಕುರಿ ಸಣ್ಣ ಪೊದೆಗಳನ್ನು ತಿನ್ನಬಲ್ಲುದಾದಲ್ಲಿ ಹೂಗಳನ್ನೂ ತಿನ್ನುತ್ತದಲ್ಲವೆ?

ಪೈಲಟ್: ಕುರಿ, ಅದಕ್ಕೆ ಸಿಗುವಂಥವನ್ನೆಲ್ಲ ತಿನ್ನುತ್ತದೆ.

ಪು.ರಾ.: ಮುಳ್ಳಿರುವ ಹೂವನ್ನೂ ಸಹ?

ಪೈಲಟ್: ಹೌದು, ಮುಳ್ಳಿರುವ ಹೂವನ್ನೂ ಸಹ.

ಪು.ರಾ.: ಹಾಗಾದರೆ ಗಿಡದಲ್ಲಿ ಮುಳ್ಳಿರುವುದಾದರೂ ಏಕೆ? (ಪೈಲಟ್ ಉತ್ತರಿಸುವುದಿಲ್ಲ, ತನ್ನ ರಿಪೇರಿ ಕೆಲಸದಲ್ಲಿ ಮಗ್ನನಾಗಿರುತ್ತಾನೆ).

ಪು.ರಾ.: (ಪುನಃ ಕೇಳುತ್ತಾನೆ) ಹಾಗಾದರೆ, ಮುಳ್ಳಿರುವುದು ಏತಕ್ಕೆ?

ಪೈಲಟ್: ಮುಳ್ಳುಗಳು ಕೆಲಸಕ್ಕೆ ಬಾರದವು. ಹೂಗಳು ಹಗೆತನ ಸಾಧಿಸಲು ಮುಳ್ಳುಗಳನ್ನು ಹೊಂದಿರುತ್ತವೆ ಅಷ್ಟೆ!

ಪು.ರಾ.: ಹೋ! (ಸ್ವಲ್ಪ ಹೊತ್ತು ಮೌನ) ನಿನ್ನ ಮಾತು ನಾನು ನಂಬುವುದಿಲ್ಲ! ಹೂಗಳು ಪಾಪದವು; ನಿಷ್ಕಪಟ. ಸ್ವಯಂಸಾಂತ್ವನ ಜೀವಿಗಳು. ಅವು ಮುಳ್ಳುಗಳನ್ನು ಹಿಂಸೆಯ ಅಸ್ತ್ರಗಳೆಂದು ಭಾವಿಸುತ್ತವೆಂದರೆ............ ನೀನು ನಿಜವಾಗಿಯೂ ಹೂಗಳನ್ನು ಆ ರೀತಿಯವು ಎಂದು ನಂಬುತ್ತೀಯಾ....

ಪೈಲಟ್: (ತಾಳ್ಮೆ ಕಳೆದುಕೊಂಡವನಂತೆ ಜೋರಾದ ಧ್ವನಿಯಲ್ಲಿಯೇ ಹೇಳುತ್ತಾನೆ) ಹೋ ಇಲ್ಲ! ಇಲ್ಲ, ಇಲ್ಲ ಇಲ್ಲ! ನಾನು ಯಾವುದನ್ನೂ ನಂಬುವುದಿಲ್ಲ. ನನ್ನ ಮನಸ್ಸಿಗೆ ತೋಚಿದ್ದನ್ನು ಹೇಳಿದೆ ಅಷ್ಟೆ. ನೋಡಿಲ್ಲಿ, ಕಾಣುವುದಿಲ್ಲವೆ? ವಿಮಾನದ ರಿಪೇರಿ ಆಗದಿದ್ದಲ್ಲಿ ಇಲ್ಲೇ ಈ ಮರುಭೂಮಿಯಲ್ಲಿ ನಾನು ಸತ್ತೇ ಹೋಗುತ್ತೇನೆ. ನಾನು ಬಹಳ ಮುಖ್ಯ ವಿಷಯದಲ್ಲಿ ತಲೆಕೆಡಿಸಿಕೊಂಡಿಲ್ಲವೆ!

ಪು.ರಾ.: ಬಹಳ ಮುಖ್ಯ ವಿಷಯದಲ್ಲಿ! ನೀನೂ ದೊಡ್ಡವರ ರೀತಿಯೇ ಮಾತನಾಡುತ್ತಿದ್ದೀಯ! (ಬದಿಗೆ ಸರಿದು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತಾನೆ) ನನಗೆ ಗೊತ್ತಿರುವ ಗ್ರಹವೊಂದರಲ್ಲಿ ಕೆಂಪುಮುಖದ ಮನುಷ್ಯನೊಬ್ಬನಿದ್ದಾನೆ. ಆತನಿಗೆ ಹೂವಿನ ಸುವಾಸನೆ ಎಂದರೇನೆಂದು ತಿಳಿದಿಲ್ಲ. ಆತ ಮಿನುಗುವ ತಾರೆಯನ್ನು ತಲೆ ಎತ್ತಿ ನೋಡಿಲ್ಲ ಹಾಗೂ ಎಂದಿಗೂ ಯಾರನ್ನೂ ಪ್ರೀತಿಸಿಲ್ಲ. ಆತ ತನ್ನ ಬದುಕೆಲ್ಲಾ ಅಂಕಿ-ಸಂಖ್ಯೆಗಳನ್ನು ಕೂಡಿಕಳೆಯುವುದು ಬಿಟ್ಟರೆ ಮತ್ತೇನನ್ನೂ ಮಾಡಿಲ್ಲ. ಆತ ಪ್ರತಿ ದಿನ,

ಪ್ರತಿಕ್ಷಣ ನಿನ್ನ ಹಾಗೆ, ತಾನೂ ಬಹಳ ಮುಖ್ಯ ವಿಷಯಗಳಲ್ಲಿ ತೊಡಗಿದ್ದೇನೆ ಎನ್ನುತ್ತಿರುತ್ತಾನೆ. ಆ ಮಾತುಗಳನ್ನು ಹೇಳಲು ಆತನಿಗೇನೋ ಹೆಮ್ಮೆ. ಆತ ಮನುಷ್ಯನೇ ಅಲ್ಲ, ಆತ ಒಂದು ಅಣಬೆ!

ಪೈಲಟ್: (ಪುಟ್ಟ ರಾಜಕುಮಾರ ಬಿಕ್ಕಳಿಸಿ ಅಳಲು ಶುರುಮಾಡುತ್ತಾನೆ. ಪೈಲಟ್‌ನ ಕೈಯಲ್ಲಿದ್ದ ಸಲಕರಣೆಗಳು ಜಾರಿ ಬೀಳುತ್ತವೆ. ಪುಟ್ಟ ರಾಜಕುಮಾರನನ್ನು ಬರಸೆಳೆದು ಅಪ್ಪಿಕೊಳ್ಳುತ್ತಾನೆ) ಹೆದರಿಕೋಬೇಡ. ನಿನ್ನ ಪ್ರೀತಿಯ ಹೂವಿಗೆ ಯಾವುದೇ ಅಪಾಯ ಬರುವುದಿಲ್ಲ. ಹೂ ತಿನ್ನಲಾಗದಂತೆ ನಿನ್ನ ಕುರಿಗೊಂದು ಬಾಯಿಕುಕ್ಕೆ ಬರೆದುಕೊಡುತ್ತೇನೆ. ನಿನ್ನ ಹೂವಿನ ಸಸಿಯ ಸುತ್ತ ರಕ್ಷಣೆಗೆಂದು ಬೇಲಿ ಬರೆದುಕೊಡುತ್ತೇನೆ. (ಪುಟ್ಟ ರಾಜಕುಮಾರನನ್ನು ಸಂತೈಸಿದ ನಂತರ) ನನಗೆ ನಿನ್ನ ಹೂವಿನ ಕತೆ, ನಿನ್ನ ಕತೆ ಹೇಳು.

ದೃಶ್ಯ ೪:

ಗುಲಾಬಿ ಹೂವೊಂದು ಅರಳಿ ಆಕಳಿಸಿ, ಮೈಮುರಿದು ಹೇಳಿದಳು; ಆಹ್! ನನ್ನ ನಿದ್ದೆಯ ಮಂಪರಿನ್ನೂ ಹೋಗಿಲ್ಲ, ಕ್ಷಮಿಸು, ನನ್ನ ದಳಗಳು ಇನ್ನೂ ಸರಿಯಾಗಿ ಜೋಡಣೆಯಾಗಿಲ್ಲ.......

ಪು.ರಾ.: ಓಹ್! ಎಷ್ಟು ಸುಂದರವಾಗಿದ್ದೀಯ!

ಗುಲಾಬಿ: ಅಲ್ಲವೆ ಮತ್ತೆ, ಸೂರ್ಯ ಹುಟ್ಟಿದ ಕ್ಷಣವೇ ನಾನೂ ಹುಟ್ಟಿದ್ದು.....

ಪು.ರಾ.: ಈಗ ಉಪಾಹಾರದ ಸಮಯವಲ್ಲವೆ? ನಿನ್ನ ಅವಶ್ಯಕತೆಗಳ ಬಗ್ಗೆ ಗಮನ ಹರಿಸುವ ಕರುಣೆ ತೋರಬಲ್ಲೆಯಾ?

ಪು.ರಾ.: ಒಂದ್ನಿಮಿಷ (ಎಂದು ಹೇಳಿ ಓಡಿಹೋಗಿ ನೀರಿನ ಕ್ಯಾನ್ ತಂದು ಪುಷ್ಪಸುಂದರಿಗೆ ನೀರು ಹನಿಸಿದ.)

ಗುಲಾಬಿ: (ತನ್ನ ಮುಳ್ಳುಗಳನ್ನು ತೋರಿಸುತ್ತಾ) ಹುಲಿಗಳು ತಮ್ಮ ಪಂಜಗಳೊಂದಿಗೆ ನನ್ನ ಬಳಿ ಬರಲಿ, ನೋಡೋಣ!

ಪು.ರಾ.: ಇಲ್ಲಿ, ನನ್ನ ಗ್ರಹದಲ್ಲಿ ಹುಲಿಗಳೇ ಇಲ್ಲ. ಇದ್ದರೂ ಅವೇನೂ ಕಳೆಗಳನ್ನು ತಿನ್ನುವುದಿಲ್ಲವಲ್ಲ.

ಗುಲಾಬಿ: ನಾನೇನೂ ಕಳೆ ಅಲ್ಲವಲ್ಲ (ಬಳುಕುತ್ತಾ ಮಧುರಧ್ವನಿಯಲ್ಲಿ) ನಾನು ಹುಲಿಗಳಿಗೆಂದೂ ಹೆದರಿದವಳಲ್ಲ. ಆದರೆ ನನಗೆ ಬಿಸಿಲ ಬೇಗೆ ಎಂದರೆ ಹೆದರಿಕೆ. ನನಗೆ ನೆರಳು ಕೊಡುವಂತಹ ಪರದೆಯ ವ್ಯವಸ್ಥೆ ಮಾಡಬಲ್ಲೆಯಾ?

ಪು.ರಾ.: ಬಿಸಿಲ ಬೇಗೆಯ ಹೆದರಿಕೆ? ಗಿಡಗಳ ದುರದೃಷ್ಟ.

ಗುಲಾಬಿ: ರಾತ್ರಿ ನನ್ನ ಮೇಲೆ ಒಂದು ಗಾಜಿನ ಬೋಗುಣಿ ಹೊದಿಸುವೆಯಾ? ಇಲ್ಲಿ ಬಹಳ ಚಳಿಯಿದೆ. ಆದರೆ ನಾನು ಬಂದಿರುವ ಸ್ಥಳದಲ್ಲಿ.......

ಪು.ರಾ.: ನೀನು ಬಂದಿರುವ ಸ್ಥಳ ಎಂದೆಯಾ? ನೀನು ಬಂದಿರುವುದು ಎಲ್ಲಿಂದ?

ಗುಲಾಬಿ: (ಕೊಂಚ ಕಸಿವಿಸಿಗೊಂಡವಳಂತೆ. ಎರಡು ಮೂರು ಸಾರಿ ಕೆಮ್ಮಿ) ಅದೇ ನಾನು ಹೇಳಿದ ಪರದೆಯ ವಿಷಯ?

ಪು.ರಾ.: ಹಾ! ನಾನು ಅದನ್ನು ತರಲೆಂದೇ ಹೊರಟಿದ್ದೆ. ಅಷ್ಟರಲ್ಲಿ ನೀನೇ ಮಾತನಾಡಿದೆ....... (ಗುಲಾಬಿ ಮತ್ತೊಮ್ಮೆ ಕೆಮ್ಮುವಳು. ಪುಟ್ಟ ರಾಜಕುಮಾರ ತಡ ಮಾಡಿದಷ್ಟೂ ತನಗೆ ಶೀತ ಹೆಚ್ಚಾಗುತ್ತದೆಂದು ತೋರಿಸುವಂತೆ)

ಹಾಡು: ನಾನ್ಯಾರು ನನಗೇ ತಿಳಿದಿಲ್ಲ...

ಮಾತೇ ಎಲ್ಲ ತಪ್ಪು ಕಲ್ಪನೆಗೆ ಮೂಲ...

....

....

ಪು.ರಾ.: ನಾನು ಹೋಗುತ್ತಿದ್ದೇನೆ (ಗುಲಾಬಿ ಮಾತನಾಡಲಿಲ್ಲ.)

ಪು.ರಾ.: ನಾನು ಹೋಗುತ್ತಿದ್ದೇನೆ

ಗುಲಾಬಿ: (ಕೆಮ್ಮಿ) ನಾನು ತಿಳಿಗೇಡಿತನದಿಂದ ವರ್ತಿಸಿದೆ. ನನ್ನನ್ನು ಕ್ಷಮಿಸು. ನೀನು ಸಂತೋಷವಾಗಿರಲು ಪ್ರಯತ್ನಿಸು.........ನಾನೂ ನಿನ್ನನ್ನು ಪ್ರೀತಿಸುತ್ತೇನೆ. ಆದರೆ ಅದನ್ನು ನಾನು ವ್ಯಕ್ತಪಡಿಸದಿದ್ದುದು ನನ್ನ ತಪ್ಪು. ಇರಲಿ ಬಿಡು, ಅದು ಅಷ್ಟು ಮುಖ್ಯ ವಿಷಯವಲ್ಲ. ಆದರೆ ನೀನೂ ಸಹ ನನ್ನ ಹಾಗೆ ಮೂರ್ಖತನದಿಂದ ವರ್ತಿಸಿದ್ದೀಯೆ. ನೀನು ಸಂತೋಷವಾಗಿರು. ಆ ಗಾಜಿನಬೋಗುಣಿ ಬೇಡ. ನನಗದರ ಅವಶ್ಯಕತೆ ಇಲ್ಲ.

ಪು.ರಾ.: ಮತ್ತೆ ಥಂಡಿ ಗಾಳಿ.......

ಗುಲಾಬಿ: ನನಗೆ ನೆಗಡಿಯೇನೂ ಆಗಿಲ್ಲ. ರಾತ್ರಿಯ ಥಂಡಿ, ಗಾಳಿ ನನಗಿನ್ನೂ ಒಳ್ಳೆಯದೆ, ನಾನು ಹೂವಲ್ಲವೆ?

ಪು.ರಾ.: ಆದರೆ ಯಾವುದಾದರೂ ಪ್ರಾಣಿ......

ಗುಲಾಬಿ: ಮುಂದೆ ನನಗೆ ಚಿಟ್ಟೆಗಳ ಸಹವಾಸ ಬೇಕೆಂದರೆ ಈಗ ಕೆಲವು

ಕಂಬಳಿಹುಳುಗಳನ್ನು ಸಹಿಸಿಕೊಳ್ಳಲೇಬೇಕು. ಅವೂ ಸುಂದರ ಪ್ರಾಣಿಗಳೇ ಚಿಟ್ಟೆ, ಕಂಬಳಿಹುಳುಗಳಿಲ್ಲದಿದ್ದಲ್ಲಿ ನನ್ನನ್ನು ಅರಸಿಬರುವವರಾದರೂ ಬೇರೆ ಯಾರಿದ್ದಾರೆ? ನೀನಂತೂ ದೂರ ಹೋಗಿಬಿಟ್ಟಿರುತ್ತೀಯಾ.............. ಇನ್ನು ದೊಡ್ಡ ಪ್ರಾಣಿಗಳು, ನನಗೇನೂ ಅವುಗಳನ್ನು ಕಂಡರೆ ಹೆದರಿಕೆಯಿಲ್ಲ. ನನಗೆ ನನ್ನದೇ ಆದ ಪಂಜಗಳಿವೆ (ತನ್ನ ನಾಲ್ಕು ಮುಳ್ಳುಗಳನ್ನು ತೋರಿಸಿದಳು)........ಹೀಗೆ ಸುಮ್ಮನೆ ನಿಂತಿರಬೇಡ, ಹೇಗೂ ಇಲ್ಲಿಂದ ಹೊರಟುಬಿಡಬೇಕೆಂದು ನಿರ್ಧರಿಸಿದ್ದೀಯೆ, ಈಗಲೇ ಹೊರಟುಬಿಡು!

(ಪುಟ್ಟ ರಾಜಕುಮಾರ ಅತ್ತ ಹೊರಟೊಡನೆ, ಗುಲಾಬಿ ಮುಸಿ ಮುಸಿ ಅಳತೊಡಗಿದಳು).

ದೃಶ್ಯ ೫:

(ರಾಜನೊಬ್ಬ ಸಿಂಹಾಸನದ ಮೇಲೆ ಕೂತು ಗೊರಕೆ ಹೊಡೆಯುತ್ತಿರುತ್ತಾನೆ. ಪುಟ್ಟ ರಾಜಕುಮಾರ ಬರುವ ಸದ್ದು ಕೇಳಿ ಎಚ್ಚರಾಗಿ ತನ್ನ ಕಿರೀಟ, ಶಲ್ಯ ಸರಿಪಡಿಸಿಕೊಂಡು)

ರಾಜ: ಹಾ! ಇಲ್ಲೊಬ್ಬ ಪ್ರಜೆ ಬರುತ್ತಿದ್ದಾನೆ. (ಪುಟ್ಟ ರಾಜಕುಮಾರ ಹತ್ತಿರ ಬಂದನಂತರ) ಹತ್ತಿರ ಬಾ, ನಿನ್ನನ್ನು ಸರಿಯಾಗಿ ನೋಡೋಣ

(ಪುಟ್ಟ ರಾಜಕುಮಾರ ಕುಳಿತುಕೊಳ್ಳಲು ಸ್ಥಳಕ್ಕಾಗಿ ಅತ್ತ ಇತ್ತ ನೋಡಿದ. ಆದರೆ ಸ್ಥಳವಿಲ್ಲದೇ ಇದ್ದುದರಿಂದ ಆತ ನಿಂತುಕೊಂಡೇ ಇದ್ದ. ಪ್ರಯಾಣದಿಂದ ಸುಸ್ತಾಗಿದ್ದುದರಿಂದ ಆಕಳಿಸಿದ.)

ರಾಜ: (ಜೋರು ಧ್ವನಿಯಲ್ಲಿ) ರಾಜನ ಮುಂದೆ ಆಕಳಿಸುವುದು ಅಪರಾಧವೆಂದು ತಿಳಿದಿಲ್ಲವೆ? ಆಕಳಿಸಬೇಡ.

ಪು.ರಾ.: ನನ್ನ ಕೈಯಲ್ಲಿ ಅದನ್ನು ತಡೆಯುವುದು ಸಾಧ್ಯವಿಲ್ಲ. ಪ್ರಯಾಣದಿಂದ ಆಯಾಸವಾಗಿದೆ. ನನಗೆ ನಿದ್ದೆಯೇ ಇಲ್ಲ.

ರಾಜ: ಹೋ, ಹೌದೆ! ಹಾಗಾದರೆ ನೀನು ಆಕಳಿಸಬೇಕೆಂದು ಆಜ್ಞೆ ಮಾಡುತ್ತಿದ್ದೇನೆ. ಯಾರಾದರೂ ಆಕಳಿಸುವುದನ್ನು ನೋಡಿ ಎಷ್ಟೋ ವರ್ಷಗಳಾಗಿವೆ. ಆಕಳಿಕೆ ನನಗೊಂದು ಕುತೂಹಲಕಾರಿ ಕ್ರಿಯೆ. ಎಲ್ಲಿ, ಮತ್ತೊಮ್ಮೆ ಆಕಳಿಸು, ನೋಡೋಣ, ಇದು ರಾಜಾಜ್ಞೆ!

ಪು.ರಾ.: ನನಗೀಗ ಆಕಳಿಕೆ ಬರುತ್ತಿಲ್ಲ........

ರಾಜ: ಆಯಿತು, ಆಯಿತು. ಸ್ವಲ್ಪ ಹೊತ್ತು ಆಕಳಿಸು......... ಸ್ವಲ್ಪ ಹೊತ್ತು ಆಕಳಿಸಬೇಡ ಎಂದು ಆಜ್ಞಾಪಿಸುತ್ತಿದ್ದೇನೆ.

ಪು.ರಾ.: ನಾನು ಕುಳಿತುಕೊಳ್ಳಲೆ?

ರಾಜ: ಕುಳಿತುಕೊ ಎಂದು ಆಜ್ಞೆ ಮಾಡುತ್ತಿದ್ದೇನೆ (ರಾಜ ತನ್ನ ಸಿಂಹಾಸನದ ಪಕ್ಕ ಸ್ವಲ್ಪ ಜಾಗ ಮಾಡಿಕೊಡುತ್ತಾನೆ)

ಪು.ರಾ.: (ರಾಜನ ಬಳಿ ಕೂತನಂತರ) ಪ್ರಭುಗಳೆ, ಕ್ಷಮಿಸಿ, ನಿಮ್ಮನ್ನು ಒಂದು ಪ್ರಶ್ನೆ ಕೇಳಲೆ?

ರಾಜ: ನನ್ನನ್ನು ಪ್ರಶ್ನೆ ಕೇಳುವಂತೆ ಆಜ್ಞೆ ಮಾಡುತ್ತಿದ್ದೇನೆ.

ಪು.ರಾ.: ಸ್ವಾಮಿ......... ಇಲ್ಲಿ ನೀವು ಆಳುತ್ತಿರುವುದಾದರೂ ಯಾವುದನ್ನು?

ರಾಜ: (ಗತ್ತಿನಿಂದ) ಎಲ್ಲವನ್ನೂ.

ಪು.ರಾ.: ಎಲ್ಲವನ್ನೂ?

ರಾಜ: ಹೌದು, ಈ ಎಲ್ಲವನ್ನೂ (ರಾಜ ಕೈ ಬೀಸಿ ತನ್ನ ಸಾಮ್ರಾಜ್ಯ ತೋರಿಸಿದ. ಅದರಲ್ಲಿ ಆತನ ಗ್ರಹ, ಇತರ ಗ್ರಹ ಹಾಗೂ ತಾರೆಗಳೂ ಸೇರಿದ್ದವು)

ಪು.ರಾ.: ಈ ನಕ್ಷತ್ರಗಳು ನಿಮ್ಮ ಮಾತು ಕೇಳುತ್ತವೆಯೆ?

ರಾಜ: ಕೇಳಲೇಬೇಕು, ನಾನು ಅವಿಧೇಯತೆಯನ್ನು ಸಹಿಸುವುದಿಲ್ಲ.

ಪು.ರಾ.: ನನ್ನ ಒಂದು ಕೋರಿಕೆಯನ್ನು ನೆರವೇರಿಸಿಕೊಡುವಿರಾ? ನನಗೆ ಸೂರ್ಯಾಸ್ತ ನೋಡಬೇಕೆಂಬ ಆಸೆಯಾಗುತ್ತಿದೆ. . . . . . . ಸೂರ್ಯನಿಗೆ ಮುಳುಗುವಂತೆ ಆಜ್ಞೆ ಮಾಡುತ್ತೀರಾ. . . . . .?

ರಾಜ: ನನ್ನ ದಂಡನಾಯಕನೊಬ್ಬನಿಗೆ ನಾನು, ಚಿಟ್ಟೆಯಂತೆ ಹೂವಿಂದ ಹೂವಿಗೆ ಹಾರು ಎಂದರೆ ಅಥವಾ ಹಾರುವ ಪಕ್ಷಿಯಾಗಿ ಹಾರಿಕೊಂಡು ಹೋಗು ಎಂದು ಆಜ್ಞಾಪಿಸಿ, ಆ ದಂಡನಾಯಕ ಆ ಆಜ್ಞೆಗಳನ್ನು ಪಾಲಿಸದಿದ್ದಲ್ಲಿ ತಪ್ಪು ಅವನದೋ ಅಥವಾ ನನ್ನದೋ?

ಪು.ರಾ.: ನಿಮ್ಮದೆ.

ರಾಜ: ನೀನು ಹೇಳಿದ್ದು ಸರಿ. ಯಾರಿಂದಲಾದರೂ ಮಾಡಬಹುದಾದ ಕೆಲಸವನ್ನು ಮಾತ್ರ ನಾವು ನಿರೀಕ್ಷಿಸಬಹುದು. ಅಧಿಕಾರಕ್ಕೆ ವಿವೇಚನೆ ತುಂಬ ಮುಖ್ಯ. ನೀನೇನಾದರೂ ರಾಜನಾಗಿದ್ದು, ನಿನ್ನ ಪ್ರಜೆಗಳನ್ನು ಸಮುದ್ರಕ್ಕೆ ಹಾರಿ ಸಾಯಿರಿ ಎಂದರೆ ಅವರು ನಿನ್ನ ವಿರುದ್ಧವೇ ದಂಗೇಳುತ್ತಾರೆ. ನನಗೆ ವಿಧೇಯತೆಯನ್ನು ಅಪೇಕ್ಷಿಸುವ ಹಕ್ಕಿದೆ, ಏಕೆಂದರೆ ನನ್ನ ಆಜ್ಞೆಗಳಿಗೆ ವಿವೇಚನೆಯಿದೆ.

ಪ.ರಾ.: ಹಾಗಾದರೆ ನನ್ನ ಸೂರ್ಯಾಸ್ತಮಾನ?

ರಾಜ: ನೀನು ಸೂರ್ಯಾಸ್ತವನ್ನು ನೋಡಬಹುದು. ನಾನದಕ್ಕೆ ಆಜ್ಞೆ ಮಾಡುತ್ತೇನೆ. ಆದರೆ ನನ್ನ ಸರ್ಕಾರದ ವಿಜ್ಞಾನದ ಪ್ರಕಾರ ನಾವು ಪರಿಸ್ಥಿತಿ ಅನುಕೂಲಕರವಾಗುವವರೆಗೂ ಕಾಯಬೇಕು.

ಪು.ರಾ.: ಆ ಅನುಕೂಲಕರ ಪರಿಸ್ಥಿತಿ ಯಾವಾಗ ಬರುತ್ತದೆ?

ರಾಜ: (ಒಂದು ಬೃಹತ್ ಗ್ರಂಥದ ಹಾಳೆಗಳನ್ನು ತಿರುಗಿಸಿ ಓದಿ) ಹ್ಞೂಂ........ ಹ್ಞೂಂ........ ಆ ಸಮಯ ಈ ಸಂಜೆ ಆರು ಗಂಟೆಗೆ ಇಪ್ಪತ್ತು ನಿಮಿಷವಿರುವಾಗ ಬರುತ್ತದೆ. ಆಗ ನೋಡು. ನನ್ನ ಆಜ್ಞೆಯ ಪರಿಪಾಲನೆ ಹೇಗಾಗುತ್ತದೆ ಎಂಬುದನ್ನು.

(ಪುಟ್ಟ ರಾಜಕುಮಾರ ಆಕಳಿಸಿದ.)

ಪು.ರಾ.: ನನಗಿಲ್ಲಿ ಇನ್ನೇನೂ ಕೆಲಸವಿಲ್ಲ, ನನ್ನ ಪ್ರಯಾಣ ಮುಂದುವರೆಸುತ್ತೇನೆ.

ರಾಜ: ಹೋಗಬೇಡ ನಿಲ್ಲು ನನಗೆ ಸಿಕ್ಕಿದ್ದ ಪ್ರಜೆ ನೀನೊಬ್ಬನೆ. ಈಗ ಹೋಗುವೆನೆಂದರೆ ನಾನೇನು ಮಾಡಲಿ? ಹೋಗಬೇಡ, ನಿನಗೆ ಮಂತ್ರಿ ಪದವಿ ಕೊಡುತ್ತೇನೆ.

ಪು.ರಾ.: ಯಾವ ಮಂತ್ರಿ?

ರಾಜ: ಮಂತ್ರಿ.......... ನ್ಯಾಯ ಪರಿಪಾಲನಾ ಮಂತ್ರಿ

ಪು.ರಾ.: ನ್ಯಾಯ ಪರಿಪಾಲನೆಗೆ ಇಲ್ಲಿ ಬೇರಾರೂ ಇಲ್ಲವೇ ಇಲ್ಲ!

ರಾಜ: ನನಗೆ ಅದೆಲ್ಲ ತಿಳಿದಿಲ್ಲ. ನಾನಿನ್ನೂ ನನ್ನ ಸಾಮ್ರಾಜ್ಯದ ಸಂಪೂರ್ಣ ಪ್ರವಾಸ ಮಾಡಿಲ್ಲ. ನನಗೂ ವಯಸ್ಸಾಯಿತಲ್ಲ. ಇಲ್ಲಿ ನನ್ನ ಗ್ರಹದ ಮೇಲೆ ಗಾಡಿ ನಿಲ್ಲಿಸುವಷ್ಟು ಸ್ಥಳವಿಲ್ಲ. ನನಗೆ ನಡೆಯಲೂ ಸಾಧ್ಯವಿಲ್ಲ.

ಪು.ರಾ.: ಹೋ. ನಿಮ್ಮ ಸಾಮ್ರಾಜ್ಯವನ್ನೆಲ್ಲಾ ಆಗಲೇ ನೋಡಿದ್ದೇನೆ! (ಮತ್ತೊಮ್ಮೆ ಗ್ರಹದ ಆ ಕಡೆ ಈ ಕಡೆ ಇಣುಕಿ ನೋಡಿ) ನೋಡಿ, ಇಲ್ಲಿ ನಮ್ಮನ್ನು ಬಿಟ್ಟರೆ ಬೇರೆ ಯಾಗೂ ಇಲ್ಲವೇ ಇಲ್ಲ........ ಎಂದ.

ರಾಜ: ಹಾಗಿದ್ದಲ್ಲಿ ನಿನ್ನ ನ್ಯಾಯ ಪರಿಪಾಲನೆ ನೀನೇ ಮಾಡಿಕೊ. ಅದು ಎಲ್ಲಕ್ಕಿಂತ ಕಷ್ಟದ ಕೆಲಸ. ಇತರರ ನ್ಯಾಯಪರಿಪಾಲನೆಗಿಂತ ಸ್ವತಃ ತಮ್ಮ ನ್ಯಾಯ ಪರಿಪಾಲನೆ ಮಾಡಿಕೊಳ್ಳುವುದು ಬಹಳ ಕಷ್ಟದ ಕೆಲಸ. ನೀನು ಸರಿಯಾಗಿ ನಿನ್ನ ನ್ಯಾಯಪರಿಪಾಲನೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರೆ, ನೀನು ನಿಜವಾಗಿಯೂ ಒಬ್ಬ ವಿವೇಕಪೂರ್ಣ ವ್ಯಕ್ತಿಯಾಗುತ್ತೀಯ.

ಪು.ರಾ.: ಹೌದು. ಆದರೆ ನನ್ನ ನ್ಯಾಯಪರಿಪಾಲನೆಯನ್ನು ಎಲ್ಲಿ ಬೇಕಾದರೂ ಮಾಡಿಕೊಳ್ಳಬಹುದು. ಅದಕ್ಕಾಗಿ ನಾನು ಈ ಗ್ರಹದ ಮೇಲೆಯೇ ಇರಬೇಕಾಗಿಲ್ಲ.

ರಾಜ: ಹ್ಞಾಂ! ಹ್ಞಾಂ! ಈ ನನ್ನ ಗ್ರಹದ ಯಾವುದೋ ಮೂಲೆಯಲ್ಲಿ ಒಂದು ಮುದಿ ಇಲಿ ಇದೆಯೆಂದು ನನ್ನ ನಂಬಿಕೆ. ರಾತ್ರಿಯೆಲ್ಲಾ ಕಿಚಕಿಚ ಸದ್ದು ಮಾಡುತ್ತಿರುತ್ತದೆ. ನೀನು ಆ ಇಲಿಯ ನ್ಯಾಯನಿರ್ಣಯ ಮಾಡಬಹುದು. ಆಗಾಗ ಅದಕ್ಕೆ ಮರಣದಂಡನೆ ವಿಧಿಸು. ಹಾಗಾಗಿ ಅದರ ಜೀವ ನಿನ್ನ ತೀರ್ಪಿನ ಮೇಲೆ ಅವಲಂಬಿತವಾಗಿರುತ್ತದೆ. ಪ್ರತಿ ಸಾರಿಯೂ ಅದಕ್ಕೆ ಜೀವದಾನ ಮಾಡು: ಅದನ್ನು ಜೋಪಾನದಿಂದ ಕಾಪಾಡಬೇಕು. ಏಕೆಂದರೆ ನಮಗಿರುವುದು ಅದೊಂದೆ.

ಪು.ರಾ.: ಯಾರಿಗೂ ಮರಣದಂಡನೆ ವಿಧಿಸುವುದು ನನಗಿಷ್ಟವಿಲ್ಲ. ಈಗ, ನಾನು ಹೊರಡಬೇಕು (ಪುಟ್ಟ ರಾಜಕುಮಾರ ಹೊರಡಲು ಸಿದ್ಧವಾಗುತ್ತಾನೆ)

ರಾಜ: (ಬೇಸರದಿಂದ) ಹೋಗಬೇಡ.

ಪು.ರಾ.: ನಾನು ತಮ್ಮ ಆಜ್ಞೆಯನ್ನು ಪರಿಪಾಲಿಸಬೇಕಾದಲ್ಲಿ ತಾವು ಒಂದು ವಿವೇಚನಾಪೂರ್ಣ ಆಜ್ಞೆ ಹೊರಡಿಸಿ. ಉದಾಹರಣೆಗೆ, ನಾನು ಇನ್ನೊಂದು ನಿಮಿಷದಲ್ಲಿ ಇಲ್ಲಿಂದ ಹೊರಟುಬಿಡಬೇಕೆಂದು ಆಜ್ಞೆ ಮಾಡಿ. ಅದಕ್ಕೆ ಸಮಯ ಸೂಕ್ತವಾಗಿದೆಯೆಂದು ನನ್ನ ಭಾವನೆ............ (ರಾಜ ಏನೂ ಉತ್ತರಿಸುವುದಿಲ್ಲ. ಮುಖ ಮಗ್ಗುಲಿಗೆ ತಿರುಗಿಸಿಕೊಳ್ಳುತ್ತಾನೆ. ಒಂದರೆಕ್ಷಣ ಅಲ್ಲಿಯೇ ನಿಂತ ಪುಟ್ಟ ರಾಜಕುಮಾರ ಅಲ್ಲಿಂದ ಹೊರಡುತ್ತಾನೆ.)

ರಾಜ: (ಕೂಗಿ ಹೇಳುತ್ತಾನೆ) ನಿನ್ನನ್ನು ನನ್ನ ರಾಯಭಾರಿಯನ್ನಾಗಿ ಮಾಡಿದ್ದೇನೆ, ಹೋಗು.

ಪು.ರಾ.: ಈ ದೊಡ್ಡವರು ವಿಚಿತ್ರ ಜನ.

ದೃಶ್ಯ ೬:

(ಒಬ್ಬ ಅಹಂಕಾರಿ ಮನುಷ್ಯ ನಿಂತಿರುತ್ತಾನೆ. ಅತ ಪುಟ್ಟ ರಾಜಕುಮಾರನನ್ನು ನೋಡಿ.)

ಅಹಂಕಾರಿ ಮನುಷ್ಯ: ಆಹ್ಹಾ! ಆಹ್ಹಾ! ನನ್ನನ್ನು ಮೆಚ್ಚುವವನೊಬ್ಬ ಇತ್ತ ಬರುತ್ತಿದ್ದಾನೆ!

ಪು.ರಾ.: ನಮಸ್ಕಾರ, ನೀವು ಧರಿಸಿರುವ ಟೋಪಿ ವಿಶೇಷವಾಗಿದೆಯಲ್ಲ.

ಅ.ಮ.: ಇದು ವಂದಿಸಲು ಇರುವ ಟೋಪಿ. ಯಾರಾದರೂ ನನ್ನನ್ನು

ಹೊಗಳಿದಾಗಲೆಲ್ಲ ಅದನ್ನು ಎತ್ತಿ ವಂದಿಸುತ್ತೇನೆ. ನನ್ನ ದುರದೃಷ್ಟವೆಂದರೆ ಈ ಹಾದಿಯಲ್ಲಿ ಹಾದು ಹೋಗುವವರೇ ಇಲ್ಲ.

ಪು.ರಾ.: ನಿಮ್ಮ ಮಾತು ನನಗರ್ಥವಾಗುತ್ತಲಿಲ್ಲ?

ಅ.ಮ.: ಚಪ್ಪಾಳೆ ತಟ್ಟು. (ಪುಟ್ಟ ರಾಜಕುಮಾರ ಚಪ್ಪಾಳೆ ತಟ್ಟಿದ. ಅಹಂಕಾರಿ ಮನುಷ್ಯ ತನ್ನ ಟೋಪಿ ಎತ್ತಿ ವಂದಿಸಿದ.)

ಪು.ರಾ.: ರಾಜನ ಭೇಟಿಗಿಂತ ಈತನ ಭೇಟಿ ತಮಾಷೆಯಾಗಿದೆ. (ಪುಟ್ಟ ರಾಜಕುಮಾರ ಚಪ್ಪಾಳೆ ತಟ್ಟತೊಡಗಿದ. ಆತ ಟೋಪಿ ಎತ್ತಿ ಎತ್ತಿ ವಂದಿಸತೊಡಗಿದ.)

ಪು.ರಾ.: ನಿನ್ನ ಟೋಪಿ ಕೆಳಗೆ ಬರಬೇಕಾದರೆ ಏನು ಮಾಡಬೇಕು?

ಅ.ಮ.: ನನ್ನನ್ನು ನೀನು ನಿಜವಾಗಿಯೂ ಅಷ್ಟೊಂದು ಹೊಗಳುತ್ತೀಯ?

ಪು.ರಾ.: ಹೊಗಳಿಕೆ? ಹಾಗೆಂದರೇನು?

ಅ.ಮ: ಹೊಗಳಿಕೆ– ಎಂದರೆ ನೀನು ನನ್ನನ್ನು ಈ ಗ್ರಹದ ಅತ್ಯಂತ ಸುಂದರ, ಉತ್ತಮ ದಿರಿಸಿನ, ಅತ್ಯಂತ ಸಿರಿವಂತ ಹಾಗೂ ಮಹಾನ್ ಬುದ್ಧಿಶಾಲಿ ವ್ಯಕ್ತಿ ಎಂದು ಹೊಗಳುವುದು.

ಪು.ರಾ.: ಆದರೆ ಈ ಗ್ರಹದ ಮೇಲಿರುವ ವ್ಯಕ್ತಿ ನೀನೊಬ್ಬನೇ ಅಲ್ಲವೆ?

ಅ.ಮ.: ಹೌದು, ಅದಕ್ಕೇ ನನಗೊಂದು ಉಪಕಾರ ಮಾಡು, ನೀನು ನನ್ನನ್ನೇ ಹೊಗಳು

ಪು.ರಾ.: ಆಯಿತು, ನಾನು ನಿನ್ನನ್ನು ಮೆಚ್ಚಿ ಹೊಗಳುತ್ತೇನೆ. ಆದರೆ ಆ ಹೊಗಳಿಕೆಯಲ್ಲಿ ನೀನು ಮೆಚ್ಚುವಂತಹುದು ಏನಿದೆ? (ಅಹಂಕಾರಿ ಮನುಷ್ಯ ಉತ್ತರಿಸಲಿಲ್ಲ.)

ಪು.ರಾ.: (ಅಲ್ಲಿಂದ ಹೊರಟಂತೆ) ಈ ದೊಡ್ಡವರು ನಿಜವಾಗಿಯೂ ವಿಚಿತ್ರದ ಜನ.

ದೃಶ್ಯ – ೭

(ಕುಡುಕನೊಬ್ಬ ರಂಗದ ಮಧ್ಯೆ ಕುಡಿಯುತ್ತಿರುತ್ತಾನೆ. ಅವನ ಸುತ್ತ ಒಂದಷ್ಟು ಖಾಲಿ ಬಾಟಲುಗಳು ಬಿದ್ದಿರುತ್ತವೆ.)

ಪು.ರಾ.: (ಕುಡುಕನೆಡೆಗೆ ಬಾಗಿ ನೋಡಿ) ಏನು ಮಾಡುತ್ತಿದ್ದೀಯ?

ಕುಡುಕ: (ಅಮಲಿನಿಂದ) ನಾನು ಕುಡಿಯುತ್ತಿದ್ದೇನೆ.

ಪು.ರಾ.: ಏಕೆ ಕುಡಿಯುತ್ತಿದ್ದೀಯ?

ಕುಡುಕ: ಎಲ್ಲಾ ಮರೆಯಬೇಕೆಂದು.

ಪು.ರಾ.: ಯಾವುದನ್ನು ಮರೆಯಬೇಕೆಂದು?

ಕುಡುಕ: ನನಗೆ ನಾಚಿಕೆಯಾಗುತ್ತಿರುವುದನ್ನು ಮರೆಯಲು

ಪು.ರಾ.: ನಾಚಿಕೆ? ಯಾವುದಕ್ಕಾಗಿ?

ಕುಡುಕ: ನಾನು ಕುಡುಕನಾಗಿರುವುದಕ್ಕಾಗಿ – (ಕುಡುಕ ಅಲ್ಲೇ ಒರಗಿ ಕಣ್ಣು ಮುಚ್ಚುತ್ತಾನೆ)

ಪು.ರಾ.: ಈ ದೊಡ್ಡವರು ನಿಜವಾಗಿಯೂ ತುಂಬಾ ವಿಚಿತ್ರದವರು.

ದೃಶ್ಯ ೮

(ರಂಗದ ಮಧ್ಯೆ ಒಬ್ಬ ವ್ಯಾಪಾರಿ ಕೂತು ದೊಡ್ಡ ಪುಸ್ತಕವೊಂದನ್ನು ಹರಡಿ ಏನೋ ಲೆಕ್ಕ ಮಾಡುತ್ತಿರುತ್ತಾನೆ. ಅಲ್ಲಿಗೆ ಬರುವ ಪುಟ್ಟ ರಾಜಕುಮಾರನನ್ನು ಆತ ಗಮನಿಸುವುದಿಲ್ಲ.)

ಪು.ರಾ.: ನಮಸ್ಕಾರ. ನಿಮ್ಮ ಸಿಗರೇಟು ಆರಿ ಹೋಗಿದೆ.

ವ್ಯಾಪಾರಿ: ಮೂರು ಮತ್ತು ಎರಡು ಐದಾಗುತ್ತದೆ. ಐದು ಮತ್ತು ಏಳು ಹನ್ನೆರಡು ಹನ್ನೆರಡು ಮತ್ತು ಮೂರು ಹದಿನೈದು, ನಮಸ್ಕಾರ, ಹದಿನೈದು ಮತ್ತು ಏಳು ಇಪ್ಪತ್ತೆರಡು, ಇಪ್ಪತ್ತೆರಡು ಮತ್ತು ಆರು ಇಪ್ಪತ್ತೆಂಟು, ಸಿಗರೇಟು ಮತ್ತೆ ಹೊತ್ತಿಸಲು ನನಗೆ ಸಮಯವಿಲ್ಲ. ಇಪ್ಪತ್ತಾರು ಮತ್ತು ಐದು ಮುವ್ವತ್ತೊಂದು ಆಗುತ್ತದೆ. ಹೋ! ಹಾಗಾದರೆ ಒಟ್ಟು ಐವತ್ತು ಕೋಟಿ ಹದಿನಾರು ಲಕ್ಷ ಇಪ್ಪತ್ತೆರಡು ಸಾವಿರದ ಏಳು ನೂರಾ ಮುವ್ವತ್ತೊಂದು ಆಯಿತು...

ಪು.ರಾ.: ಐವತ್ತು ಕೋಟಿ ಏನು?

ವ್ಯಾಪಾರಿ: ಅರೆ! ನೀನಿನ್ನೂ ಇಲ್ಲೇ ಇದ್ದೀಯ? ಐವತ್ತು ಕೋಟಿ–ನಾನು ಲೆಕ್ಕ ನಿಲ್ಲಿಸುವ ಹಾಗಿಲ್ಲ........ ನನಗೆ ಬೇಕಾದಷ್ಟು ಕೆಲಸವಿದೆ! ಎಲ್ಲಾ ಬಹಳ ಮಹತ್ವದ ವಿಷಯಗಳು. ಸುಮ್ಮನೆ ಕೆಲಸಕ್ಕೆ ಬಾರದ ವಿಷಯದಲ್ಲಿ ಸಮಯ ಹಾಳುಮಾಡುವ ಹಾಗಿಲ್ಲ, ನನಗೆ ತೊಂದರೆ ಕೊಡಬೇಡ..... .

ಪು.ರಾ.: ಐವತ್ತು ಕೋಟಿ ಏನು?

ವ್ಯಾಪಾರಿ: (ತಲೆ ಎತ್ತಿ ಪುಟ್ಟ ರಾಜಕುಮಾರನನ್ನೇ ದಿಟ್ಟಿಸಿ ನೋಡಿ) ಈ ಗ್ರಹದಲ್ಲಿ ಕಳೆದ ಐವತ್ತನಾಲ್ಕು ವರ್ಷಗಳಿಂದ ಇರುವ ನನಗೆ ಲೆಕ್ಕಾಚಾರದಲ್ಲಿ ಕೇವಲ ಮೂರು ಸಾರಿ ಅಡಚಣೆ ಉಂಟಾಗಿದೆ. ಮೊದಲ ಸಾರಿ ಇಪ್ಪತ್ತೆರಡು ವರ್ಷಗಳ ಹಿಂದೆ. ನಿದ್ರಿಸುವ ಹದ್ದೊಂದು, ಯಾರಿಗೆ ಗೊತ್ತು ಎಲ್ಲಿತ್ತೋ.

ನನ್ನ ಮೇಲೆ ಬಿದ್ದಾಗ, ಆ ಪಕ್ಷಿ ಹೇಗೆ ಕೂಗಿತೆಂದರೆ, ಆ ಕೂಗು ಎಲ್ಲೆಲ್ಲೂ ಪ್ರತಿಧ್ವನಿಸಿ ನನ್ನ ಲೆಕ್ಕಾಚಾರದಲ್ಲಿ ನಾಲ್ಕು ತಪ್ಪು ಮಾಡಿದೆ. ಎರಡನೆಯದು ಹನ್ನೊಂದು ವರ್ಷಗಳ ಹಿಂದೆ, ನನಗೆ ಕೀಲು ನೋವು ಬಂದಾಗ, ನನಗಿಲ್ಲಿ ಯಾವುದೇ ವ್ಯಾಯಾಮವಿಲ್ಲವಲ್ಲ. ಅದಕ್ಕೆ ನನಗೆ ಸಮಯವೇ ಇಲ್ಲ, ಅದು ಬೇರೆ ಮಾತು. ಮೂರನೆಯದು ಈಗ, ನಿನ್ನಿಂದ ನಾನೇನು ಹೇಳುತ್ತಿದ್ದೆ? ಹ್ಞಾಂ ಐವತ್ತು ಕೋಟಿ..........

ಪು.ರಾ.: ಐವತ್ತು ಕೋಟಿಗಳು ಏನು?

ವ್ಯಾಪಾರಿ: ನೀನು ನನ್ನನ್ನು ಬಿಡುವ ಹಾಗೆ ಇಲ್ಲ. ಕೋಟಿಗಟ್ಟಲೆ ಇರುವ ಆ ಪುಟ್ಟ ವಸ್ತುಗಳು ಆಕಾಶದಲ್ಲಿ ಕಾಣುತ್ತವೆ ನೋಡು.

ಪು.ರಾ.: ನೊಣಗಳೆ?

ವ್ಯಾಪಾರಿ: ಅಲ್ಲ ಕಣಯ್ಯ, ಹೊಳೆಯುವ ವಸ್ತುಗಳು

ಪು.ರ.: ಜೇನುನೊಣಗಳೆ?

ವ್ಯಾಪಾರಿ: ಅಲ್ಲಯ್ಯ ಅಲ್ಲ, ಚಿನ್ನದಂತಹ ಪುಟ್ಟ ವಸ್ತುಗಳು, ಅದೇ ಸೋಮಾರಿ ಜನಗಳು, ಕವಿಗಳೂ ಅವುಗಳನ್ನು ನೋಡುತ್ತಾ ಕೆಲಸಕ್ಕೆ ಬಾರದ ಕನಸು ಕಾಣುತ್ತಾರಲ್ಲ, ಅವು. ನಾನಂತೂ ಮಹತ್ವದ ವಿಷಯದಲ್ಲಿ ತೊಡಗಿದ್ದೇನೆ. ನನ್ನ ಬದುಕಲ್ಲಿ ಕೆಲಸಕ್ಕೆ ಬಾರದ ಕನಸು ಕಾಣಲು ನನಗೆ ಸಮಯವೇ ಇಲ್ಲ.

ಪು.ರಾ.: ಹೋ! ಅಂದರೆ ನಕ್ಷತ್ರಗಳೆ?

ವ್ಯಾಪಾರಿ: ಹಾ, ಹೌದು, ನಕ್ಷತ್ರಗಳು

ಪು.ರಾ.: ಐವತ್ತು ಕೋಟಿ ನಕ್ಷತ್ರಗಳಿಂದ ನೀವೇನು ಮಾಡುತ್ತೀರಿ?

ವ್ಯಾಪಾರಿ: ಐವತ್ತು ಕೋಟಿ ಹದಿನಾರು ಲಕ್ಷ ಇಪ್ಪತ್ತೆರಡು ಸಾವಿರದ ಏಳುನೂರ ಮುವ್ವತ್ತೊಂದು, ನಾನು ಮಹತ್ವದ ವಿಷಯಗಳಲ್ಲಿ ತಲೆ ಕೆಡಿಸಿಕೊಂಡಿದ್ದೇನೆ ಹಾಗೂ ನನ್ನ ಲೆಕ್ಕ ಯಾವಾಗಲೂ ನಿಖರವಾಗಿರುತ್ತದೆ.

ಪು.ರಾ.: ಆ ನಕ್ಷತ್ರಗಳಿಂದ ನೀವೇನು ಮಾಡುತ್ತೀರಿ?

ವ್ಯಾಪಾರಿ: ನಾನೇನು ಮಾಡುತ್ತೀನಿ ಅಂತಾನಾ ಕೇಳುತ್ತಿರೋದು?

ಪು.ರಾ.: ಹೌದು.

ವ್ಯಾಪಾರಿ: ಏನೂ ಇಲ್ಲ. ನಾನು ಅವುಗಳ ಯಜಮಾನ

ಪು.ರಾ.: ಅಂದರೆ ಆ ನಕ್ಷತ್ರಗಳೆಲ್ಲಾ ನಿಮ್ಮವೆ?

ವ್ಯಾಪಾರಿ: ಹೌದು.

ಪು.ರಾ.: ಆದರೆ ಅವುಗಳೆಲ್ಲವುಗಳ ರಾಜನನ್ನು ನಾನು ಈಗಾಗಲೇ ನೋಡಿದ್ದೇನೆ......

ವ್ಯಾಪಾರಿ: ರಾಜರು ಅವುಗಳ ಯಜಮಾನರಲ್ಲ ಆದರೇನಿದ್ದರೂ ಅವುಗಳ ರಾಜ್ಯಭಾರ ಮಾಡುತ್ತಾರೆ. ಅವೆಲ್ಲ ಒಂದು ರೀತಿಯ ಕ್ಲಿಷ್ಟಕರ ವಿಷಯಗಳು ಬಿಡು. ನಿನಗರ್ಥವಾಗುವುದಿಲ್ಲ.

ಪು.ರಾ.: ನಕ್ಷತ್ರಗಳನ್ನು ಹೊಂದುವುದರಿಂದ ಲಾಭವೇನು?

ವ್ಯಾಪಾರಿ: ಅವು ನನ್ನನ್ನು ಸಾಹುಕಾರನನ್ನಾಗಿ ಮಾಡುತ್ತವೆ.

ಪು.ರಾ.: ಸಾಹುಕಾರನಾದರೆ, ಇನ್ನೂ ಮುಂದೆ ಕಂಡುಹಿಡಿಯಲ್ಪಡುವ ಹೊಸ ಹೊಸ ನಕ್ಷತ್ರಗಳನ್ನು ಕೊಳ್ಳಬಹುದು.

ಪು.ರಾ.: (ಪ್ರೇಕ್ಷಕರ ಕಡೆಗೆ ತಿರುಗಿ) ಈ ಮನುಷ್ಯನೂ ಆ ಕುಡುಕನ ವಿವೇಚನೆಯ ರೀತಿಯಲ್ಲಿಯೇ ಮಾತನಾಡುತ್ತಿದ್ದಾನೆ. (ಮತ್ತೆ ವ್ಯಾಪಾರಿಯ ಕಡೆಗೆ ತಿರುಗಿ) ತಾರೆಗಳ ಯಜಮಾನನಾಗುವುದು ಹೇಗೆ ಸಾಧ್ಯ?

ವ್ಯಾಪಾರಿ: ಅಂದರೆ? ಅವು ಇನ್ನು ಯಾರಿಗೆ ಸೇರಿರುತ್ತವೆ? (ಸಿಡುಕಿನಿಂದ ಕೇಳಿದ)

ಪು.ರಾ.: ನನಗೆ ಗೊತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಅವು ಯಾರಿಗೂ ಸೇರಿರುವುದಿಲ್ಲ.

ವ್ಯಾಪಾರಿ: ಹಾಗಾದರೆ ಅವು ನನಗೇ ಸೇರಿವೆ. ಏಕೆಂದರೆ ಅವುಗಳ ಒಡೆತನದ ಬಗ್ಗೆ ನಾನೇ ಮೊದಲಿಗೆ ಆಲೋಚಿಸಿದ್ದು.

ಪು.ರಾ.: ಅವುಗಳನ್ನು ಹೊಂದಲು ಒಡೆತನದ ಆಲೋಚನೆಯಷ್ಟೇ ಸಾಕೆ?

ವ್ಯಾಪಾರಿ: ಹೌದು ಮತ್ತೆ, ನಿನಗೆ ಯಾರಿಗೂ ಸೇರಿರದ ವಜ್ರದುಂಗುರ ನಿನಗೆ ಸಿಕ್ಕಿದರೆ ಅದು ನಿನ್ನದಲ್ಲವೆ? ಯಾರಿಗೂ ಸೇರಿರದ ದ್ವೀಪವೊಂದು ಕಂಡರೆ ಅದು ನಿನ್ನದೆ. ಬೇರೆಯವರಿಗಿಂತ ಮೊದಲು ನಿನಗೇ ಒಂದು ಹೊಸ ವಿಚಾರ ಹೊಳೆದರೆ ನೀನು ಪೇಟೆಂಟ್ ಮಾಡಿಸಿ ಅದನ್ನು ನಿನ್ನದಾಗಿಸಿಕೊಳ್ಳುವುದಿಲ್ಲವೆ? ಅದೇ ರೀತಿ ಈ ತಾರೆಗಳು ನನ್ನವು. ನನಗಿಂತ ಮೊದಲು ಯಾರೂ ಅವುಗಳನ್ನು ಹೊಂದುವ ಬಗ್ಗೆ ಆಲೋಚನೆ ಮಾಡಿಲ್ಲ.

ಪು.ರಾ.: ನೀವು ಹೇಳುವುದೇನೋ ಸರಿ. ಆದರೆ ಆ ತಾರೆಗಳನ್ನು ಏನು ಮಾಡುವಿರಿ?

ವ್ಯಾಪಾರಿ: ನನಗೆ ಅವುಗಳ ಮೇಲೆ ಅಧಿಕಾರವಿದೆ. ನಾನವುಗಳನ್ನು ಎಣಿಸುತ್ತೇನೆ. ಮತ್ತೆ ಮತ್ತೆ ಎಣಿಸುತ್ತೇನೆ. ಅದೇನೂ ಸುಲಭದ ಕೆಲಸವಲ್ಲ. ಆದರೆ ನಾನು ಮಹತ್ವದ ವಿಷಯಗಳಲ್ಲಿ ಸಹಜ ಆಸಕ್ತಿ ಉಳ್ಳವನು.

ಪು.ರಾ.: ನನ್ನ ಬಳಿ ಒಂದು ರೇಷ್ಮೆ ಕರವಸ್ತ್ರ ಇತ್ತು, ನಾನು ಅದನ್ನು ನನಗೆ ಬೇಕಾದಾಗ ನನ್ನ ಕೊರಳಿಗೆ ಕಟ್ಟಿಕೊಂಡು ಹೋಗುತ್ತಿದ್ದೆ. ನನ್ನ ಬಳಿ ಒಂದು ಸುಂದರ ಹೂವಿದ್ದರೆ, ನನಗೆ ಬೇಕಾದಾಗ ಅದನ್ನು ಕೊಯ್ದು ಕೊಂಡೊಯ್ಯಬಲೆ. ಆದರೆ ಆಕಾಶದಿಂದ ತಾರೆಗಳನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲವಲ್ಲ.....

ವ್ಯಾಪಾರಿ: ಇಲ್ಲ, ಆದರೆ ನಾನು ಅವುಗಳನ್ನು ಬ್ಯಾಂಕಿನಲ್ಲಿ ಇಡುತ್ತೇನೆ.

ಪು.ರಾ.: ಹಾಗೆಂದರೆ?

ವ್ಯಾಪಾರಿ: ಅಂದರೆ, ತಾರೆಗಳ ಸಂಖ್ಯೆಯನ್ನು ಒಂದು ಸಣ್ಣ ಹಾಳೆಯ ಮೇಲೆ ಬರೆದು ಅದನ್ನು ಲಾಕರ್‌ನಲ್ಲಿಟ್ಟು ಬೀಗ ಹಾಕುತ್ತೇನೆ.

ಪು.ರಾ.: ಅಷ್ಟೆಯೆ?

ವ್ಯಾಪಾರಿ: ಅದು ಬೇಕಾದಷ್ಟಾಯಿತು.

ಪು.ರಾ.: (ಪ್ರೇಕ್ಷಕರ ಕಡೆಗೆ ತಿರುಗಿ) ಒಳ್ಳೆ ತಮಾಷೆಯಾಗಿದೆ, ಒಂದು ರೀತಿ ಕಾವ್ಯಮಯವಾಗಿಯೂ ಇದೆ. ಆದರೆ ಇದು ಯಾವುದೇ ಮಹತ್ವದ ವಿಷಯವಲ್ಲ. (ವ್ಯಾಪಾರಿಯ ಕಡೆಗೆ ತಿರುಗಿ) ನನ್ನಲ್ಲಿ ನನ್ನದೇ ಆದ ಹೂವಿದೆ, ನಾನದಕ್ಕೆ ದಿನಾಲೂ ನೀರು ಹನಿಸುತ್ತೇನೆ. ನನ್ನ ಕೆಲಸದಿಂದ ಹೂವಿಗೆ ಸ್ವಲ್ಪವಾದರೂ ಉಪಯೋಗವಾಗುತ್ತದೆ. ಆದರೆ ನಕ್ಷತ್ರಗಳಿಗೆ ನಿಮ್ಮಿಂದ ಯಾವ ಉಪಯೋಗವೂ ಇಲ್ಲ........

ವ್ಯಾಪಾರಿ: (ಏನೋ ಹೇಳಲು ಹೊರಡುತ್ತಾನೆ, ಆದರೆ ಏನೂ ತೋಚದೆ ಸುಮ್ಮನಾಗುತ್ತಾನೆ)

(ಪುಟ್ಟ ರಾಜಕುಮಾರ ಅಲ್ಲಿಂದ ಹೊರಡುತ್ತಾ) ನಿಜವಾಗಿಯೂ ಈ ದೊಡ್ಡವರು ಬಹಳ ವಿಚಿತ್ರದವರು.

ದೃಶ್ಯ ೯

(ಒಂದು ಮೇಜಿನ ಮೇಲೆ ದೊಡ್ಡ ದೊಡ್ಡ ಗ್ರಂಥಗಳ ಮಧ್ಯೆ ತಲೆ ಹುದುಗಿಸಿಕೊಂಡಿದ್ದ ವೃದ್ಧ ಭೂಗೋಳಶಾಸ್ತ್ರಜ್ಞನೊಬ್ಬನಿದ್ದ. ಆತ ಪುಟ್ಟ ರಾಜಕುಮಾರನನ್ನು ನೋಡಿ,)

ಭೂ.ಶಾ.: ಹೋ ನೋಡಿಲ್ಲಿ! ಪರಿಶೋಧಕನೊಬ್ಬ ಬರುತ್ತಿದ್ದಾನೆ!! (ಅಲ್ಲೇ ಮೇಜಿನ ಕೊನೆಯಲ್ಲಿ ಕೂತ ಪುಟ್ಟ ರಾಜಕುಮಾರ ಏದುಸಿರು ಬಿಡುತ್ತಿದ್ದ, ಬೆವರು ಒರೆಸಿಕೊಂಡ.)

ಭೂ.ಶಾ.: ಎಲ್ಲಿಂದ ಬರುತ್ತಿದ್ದೀಯ?

ಪು.ರಾ.: ಆ ದೊಡ್ಡ ಪುಸ್ತಕ, ಏನದು? ನೀವೇನು ಮಾಡುತ್ತಿದ್ದೀರಿ?

ಭೂ.ಶಾ.: ನಾನೊಬ್ಬ ಭೂಗೋಳಶಾಸ್ತ್ರಜ್ಞ

ಪು.ರಾ.: ಹಾಗೆಂದರೆ?

ಭೂ.ಶಾ.: ಭೂಗೋಳಶಾಸ್ತ್ರಜ್ಞನೆಂದರೆ ಎಲ್ಲ ಸಾಗರಗಳ, ನದಿಗಳ, ನಗರಗಳ, ಪರ್ವತಗಳ ಹಾಗೂ ಮರುಭೂಮಿಗಳ ಸ್ಥಾನ ವಿವರಣೆ ತಿಳಿದಿರುವಂತಹ ವಿದ್ವಾಂಸ.

ಪು.ರಾ.: ಇದೊಂದು ಆಸಕ್ತಿಯ ವಿಷಯ. ಎಲ್ಲಿಯಾದರೂ ನಿಜವಾದ ವೃತ್ತಿಯನ್ನು ಕೈಗೊಂಡಿರುವ ಒಬ್ಬರಿದ್ದಾರೆ. ಈ ಗ್ರಹ ಬಹಳ ಸುಂದರವಾಗಿದೆ. ಇದರಲ್ಲಿ ಸಾಗರಗಳಿವೆಯಾ?

ಭೂ.ಶಾ.: ನಾನು ಹೇಳಲಾಗುವುದಿಲ್ಲ.

ಪು.ರಾ.: ಹೋ! ಹೋಗಲಿ, ಪರ್ವತಗಳಿವೆಯಾ?

ಭೂ.ಶಾ.: ನಾನು ಹೇಳಲಾಗುವುದಿಲ್ಲ.

ಪು.ರಾ.: ಹಾಗಾದರೆ ನಗರಗಳು, ನದಿಗಳು ಹಾಗೂ ಮರುಭೂಮಿಗಳು?

ಭೂ.ಶಾ.: ಅದನ್ನೂ ನಾನು ಹೇಳಲಾಗುವುದಿಲ್ಲ.

ಪು.ರಾ.: ಆದರೆ ನೀವು ಭೂಗೋಳಶಾಸ್ತ್ರಜ್ಞರಲ್ಲವೆ!

ಭೂ.ಶಾ.: ಹೌದು, ಆದರೆ ನಾನು ಪರಿಶೋಧಕನಲ್ಲವಲ್ಲ. ನನ್ನ ಗ್ರಹದಲ್ಲಿ ಒಬ್ಬ ಪರಿಶೋಧಕನೂ ಇಲ್ಲ. ನದಿ, ನಗರ, ಪರ್ವತ, ಸಾಗರ ಹಾಗೂ ಮರುಭೂಮಿಗಳನ್ನು ಎಣಿಸುತ್ತಾ ಹೋಗುವುದು ಭೂಗೋಳಶಾಸ್ತ್ರಜ್ಞನ ಕೆಲಸವಲ್ಲ. ಅವನಿಗೆ ಅಲ್ಲಿ ಇಲ್ಲಿ ಕೆಲಸವಿಲ್ಲದೆ ಅಲೆದಾಡುವುದಕ್ಕಿಂತ ಮಿಗಿಲಾದ ಬೇಕಾದಷ್ಟು ಕೆಲಸಗಳಿರುತ್ತವೆ. ಆತ ತನ್ನ ಕುರ್ಚಿ ಮತ್ತು ಮೇಜು ಬಿಟ್ಟು ಹೊರಡುವುದಿಲ್ಲ. ಆತ ತನ್ನ ಅಧ್ಯಯನದ ಸಮಯದಲ್ಲಿ ತನ್ನ ಬಳಿ ಬರುವ ಪರಿಶೋಧಕರನ್ನು ಸ್ವಾಗತಿಸುತ್ತಾನೆ: ಅವರ ಪ್ರಯಾಣದ ಬಗ್ಗೆ ವಿಚಾರಿಸಿ ಟಿಪ್ಪಣಿ ಮಾಡಿಕೊಳ್ಳುತ್ತಾನೆ. ಪರಿಶೋಧಕನಿಗೆ ಬಹಳ ಕುತೂಹಲವುಂಟು ಮಾಡಿದ ವಿಷಯಗಳು ಇದ್ದಲ್ಲಿ ಭೂಗೋಳಶಾಸ್ತ್ರಜ್ಞ ಪರಿಶೋಧಕನ ನೈತಿಕ ನಡವಳಿಕೆಯ ಬಗೆಗೆ ವಿಚಾರಣೆ ನಡೆಸಲು ಆದೇಶ ಹೊರಡಿಸುತ್ತಾನೆ.

ಪು.ರಾ.: ಅದೇಕೆ?

ಭೂ.ಶಾ.: ಏಕೆಂದರೆ, ಸುಳ್ಳು ಹೇಳುವ ಪರಿಶೋಧಕ ಭೂಗೋಳಶಾಸ್ತ್ರಜ್ಞನ ಪುಸ್ತಕಗಳಿಗೆ ಆಪತ್ತು ತರುತ್ತಾನೆ. ಅದೇ ರೀತಿ ಕುಡುಕಪರಿಶೋಧಕನೂ ಸಹ.

ಪು.ರಾ.: ಅದ್ಹೇಗೆ?

ಭೂ.ಶಾ: ಹೇಗೆಂದರೆ ಕುಡಿದ ಮತ್ತಿನಲ್ಲಿರುವ ಮನುಷ್ಯರಿಗೆ ಎಲ್ಲ ಎರಡೆರಡು ಕಾಣಿಸುತ್ತವೆ. ಅಂತಹವನ ಮಾತು ಕೇಳಿ ನಾನೇನಾದರೂ ಟಿಪ್ಪಣಿ ಮಾಡಿಕೊಂಡರೆ ಒಂದು ಪರ್ವತವಿರುವ ಕಡೆ ಎರಡು ಪರ್ವತಗಳಿವೆ ಎಂದು ಬರೆದುಕೊಳ್ಳಬೇಕಾಗುತ್ತದೆ.

ಪು.ರಾ.: ಕೆಟ್ಟ ಪರಿಶೋಧಕನಾಗಬಲ್ಲ ಒಬ್ಬಾತ ನನಗೆ ಪರಿಚಯವಿದ್ದಾನೆ.

ಭೂ.ಶಾ: ಇರಬಹುದು. ಪರಿಶೋಧಕನ ನೈತಿಕ ನಡವಳಿಕೆ ಸಚ್ಚಾರಿತ್ರ್ಯವಾದದ್ದೆಂದು ಕಂಡುಬಂದಲ್ಲಿ ಆತನ ಪರಿಶೋಧನೆಯ ಬಗೆಗೆ ವಿಚಾರಣೆ ನಡೆಸಲು ಆದೇಶ ಹೊರಡಿಸಲಾಗುತ್ತದೆ.

ಪು.ರಾ.: ಅದನ್ನು ನೋಡಲು ಅಲ್ಲಿಗೇ ಹೋಗುತ್ತಾರೆಯೆ?

ಭೂ.ಶಾ.: ಇಲ್ಲ, ಅದು ಕಷ್ಟಕರ ಕೆಲಸ. ಆದರೆ ಪರಿಶೋಧಕ ತನ್ನ ಪರಿಶೋಧನೆಯ ಬಗೆಗೆ ಸಾಕ್ಷಾಧಾರಗಳನ್ನು ಒದಗಿಸಬೇಕಾಗುತ್ತದೆ. ಉದಾಹರಣೆಗೆ, ಪರಿಶೋಧನೆ ಪರ್ವತದ ಬಗೆಗಾದರೆ, ಅಲ್ಲಿಂದ ದೊಡ್ಡ ಕಲ್ಲುಗಳನ್ನು ತಂದಿರಬೇಕಾಗುತ್ತದೆ. (ತಕ್ಷಣ ಭೂಗೋಳಶಾಸ್ತ್ರಜ್ಞನ ಕುತೂಹಲ ಹೆಚ್ಚಾಗಿ ಉದ್ರೇಕಗೊಂಡು) ನೀನು....... ನೀನು........ ಬಹಳ ದೂರದಿಂದ ಬಂದವನಲ್ಲವೆ! ನೀನೊಬ್ಬ ಪರಿಶೋಧಕ! ನಿನ್ನ ಗ್ರಹವನ್ನು ನನಗೆ ವಿವರಿಸಿ ಹೇಳು! (ತನ್ನ ದೊಡ್ಡ ರಿಜಿಸ್ಟರನ್ನು ತೆರೆದು ಭೂಗೋಳಶಾಸ್ತ್ರಜ್ಞ ತನ್ನ ಪೆನ್ಸಿಲನ್ನು ಬರೆಯಲು ಸಿದ್ಧಮಾಡಿಕೊಂಡ) ಹೇಳು.

ಪು.ರಾ.: ಓಹ್, ನಾನಿರುವ ಗ್ರಹ ಅಂತಹ ವಿಶೇಷವಾದದ್ದೇನಲ್ಲ. ಅದು ತುಂಬಾ ಸಣ್ಣ ಗ್ರಹ– ಅಲ್ಲಿ ಮೂರು ಅಗ್ನಿಪರ್ವತಗಳಿವೆ. ನನ್ನದೊಂದು ಹೂ ಸಹ ಇದೆ.

ಭೂ.ಶಾ.: ಆದರೆ ನಾವು ಹೂಗಳನ್ನು ದಾಖಲಿಸಿಕೊಳ್ಳುವುದಿಲ್ಲ.

ಪು.ರಾ.: ಅದೇಕೆ? ನನ್ನ ಗ್ರಹದಲ್ಲಿ ಅತ್ಯಂತ ಸುಂದರವಾಗಿರುವುದೇ ಆ ಹೂವು!

ಭೂ.ಶಾ.: ಹೂಗಳು ನಶ್ವರವಾದುವು, ಅವು ಶಾಶ್ವತವಲ್ಲ. ಆದುದರಿಂದ ನಾವು ಅವುಗಳನ್ನು ದಾಖಲಿಸುವುದಿಲ್ಲ.

ಪು.ರಾ.: ನಶ್ವರ–ಹಾಗೆಂದರೇನು?

ಭೂ.ಶಾ.: ಭೂಗೋಳಶಾಸ್ತ್ರದ ಪುಸ್ತಕಗಳೆಂದರೆ ಮಹತ್ವದ ವಿಷಯಗಳಿಗೆ ಸಂಬಂಧಿಸಿರುವಂತಹವು. ಅದರ ವಿಷಯಗಳೆಂದೂ ಹಳೆಯ ದಾಗುವುದಿಲ್ಲ. ಪರ್ವತ ತನ್ನ ಸ್ಥಾನ ಬದಲಿಸುವುದು ತೀರಾ ಅಪರೂಪ ವಲ್ಲವೆ? ಸಾಗರದ ನೀರು ಬರಿದಾಗುವುದೂ ತೀರಾ ಅಪರೂಪವಲ್ಲವೆ? ನಾವು ಶಾಶ್ವತ ಹಾಗೂ ನಿರಂತರವಿರುವ ವಸ್ತುಗಳ ಬಗ್ಗೆ ಮಾತ್ರ ದಾಖಲಿಸುತ್ತೇವೆ.

ಪು.ರಾ.: ಆದರೆ ನಿಷ್ಕ್ರಿಯ ಅಗ್ನಿಪರ್ವತ್ರಗಳು ಜೀವ ಪಡೆದುಕೊಳ್ಳಬಹುದು. ನಶ್ವರ–ಹಾಗೆಂದರೇನು?'

ಭೂ.ಶಾ.: ಅಗ್ನಿಪರ್ವತ ನಿಷ್ಕ್ರಿಯವಾಗಿರಬಹುದು ಅಥವಾ ಜೀವಂತವಾಗಿರಬಹುದು. ನಮಗೆ ಅವೆಲ್ಲಾ ಒಂದೇ, ನಮಗೆ ಮುಖ್ಯವಾದ ವಸ್ತುವೆಂದರೆ ಪರ್ವತ. ಅದು ಎಂದಿಗೂ ಬದಲಾಗುವುದಿಲ್ಲ.

ಪು.ರಾ.: ಆದರೆ, ನಶ್ವರ–ಹಾಗೆಂದರೇನು?

ಭೂ.ಶಾ.: ಹಾಗೆಂದರೆ, ಶೀಘ್ರ ಕಣ್ಮರೆಯಾಗುವ ಅಪಾಯದ ಅಂಚಿನಲ್ಲಿರುವ, ಎಂದರ್ಥ.

ಪು.ರಾ.: ನನ್ನ ಹೂವು ಶೀಘ್ರ ಕಣ್ಮರೆಯಾಗುವ, ಅಪಾಯದ ಅಂಚಿನಲ್ಲಿದೆಯೆ?

ಭೂ.ಶಾ.: ಖಂಡಿತವಾಗಿ ಹೌದು.

ಪು.ರಾ.: (ತನಗೆ ತಾನೇ ಹೇಳಿಕೊಳ್ಳುತ್ತಾನೆ) ನನ್ನ ಹೂ ನಶ್ವರವಾದದ್ದು. ಈ ಪ್ರಪಂಚವನ್ನು ಎದುರಿಸಲು ಆಕೆಯಲ್ಲಿ ನಾಲ್ಕು ಮಾತ್ರ ಮುಳ್ಳುಗಳಿವೆ. ನಾನು ಆಕೆಯನ್ನು ನನ್ನ ಗ್ರಹದಲ್ಲಿ ಒಬ್ಬಂಟಿಯಾಗಿ ಬಿಟ್ಟು ಬಂದಿದ್ದೇನೆ!! ನಾನು ಈಗ ಯಾವ ಸ್ಥಳಕ್ಕೆ ಭೇಟಿ ನೀಡಬೇಕೆಂಬುದು ನಿಮ್ಮ ಸಲಹೆ?

ಭೂ.ಶಾ.: ಭೂಮಿ ಎಂಬ ಗ್ರಹ, ಆ ಗ್ರಹಕ್ಕೆ ಒಳ್ಳೆಯ ಹೆಸರಿದೆ.

(ಪುಟ್ಟ ರಾಜಕುಮಾರ ಅಲ್ಲಿಂದ ಹೊರಡುತ್ತಾನೆ.)

ದೃಶ್ಯ ೧೦

(ಪುಟ್ಟ ರಾಜಕುಮಾರ ಒಂದು ಮರುಭೂಮಿಯಲ್ಲಿ ನಿಂತಿರುತ್ತಾನೆ. ಯಾರೂ ಜನ ಕಾಣುವುದಿಲ್ಲ. ಮರಳ ಮೇಲೆ ಬೆಳದಿಂಗಳ ಬೆಳಕಿನಲ್ಲಿ ಹಾವೊಂದು ಮಲಗಿರುತ್ತದೆ.)

ಪು.ರಾ.: ನಮಸ್ಕಾರ.

ಹಾವು: ನಮಸ್ಕಾರ.

ಪು.ರಾ.: ಈ ಗ್ರಹ ಯಾವುದು?

ಹಾವು: ಇದು ಭೂಮಿ; ಈಗ ನೀನಿರುವುದು ಆಫ್ರಿಕಾದಲ್ಲಿ.

ಪು.ರಾ.: ಹೋ! ಭೂಮಿಯ ಮೇಲೆ ಮನುಷ್ಯರ್‍ಯಾರೂ ಇಲ್ಲವೆ?

ಹಾವು: ಇದು ಮರುಭೂಮಿ. ಮರುಭೂಮಿಯಲ್ಲಿ ಮನುಷ್ಯರು ಇರುವುದಿಲ್ಲ. ಭೂಮಿ ತುಂಬಾ ದೊಡ್ಡದು. (ಪುಟ್ಟ ರಾಜಕುಮಾರ ಅಲ್ಲೇ ಒಂದು ಕಲ್ಲಿನ ಮೇಲೆ ಕೂತು, ತಲೆಯೆತ್ತಿ ಆಕಾಶದ ಕಡೆಗೆ ನೋಡಿದ.)

ಪು.ರಾ.: ಮೇಲೆ ಸ್ವರ್ಗದಲ್ಲಿ ನಕ್ಷತ್ರಗಳೆಲ್ಲಾ ಬೆಳಗುತ್ತಿವೆ, ಏಕೆಂದರೆ ನಮ್ಮ ದಾರಿ ನಾವು ಕಂಡುಕೊಳ್ಳುವುದು ಸುಲಭವಾಗಲೆಂದು...... ಅಲ್ಲಿ ನೋಡು, ನನ್ನ ಗ್ರಹ. ನಮ್ಮ ಮೇಲೆಯೆ ಇದೆ. ಆದರೆ ಎಷ್ಟು ದೂರ!!

ಹಾವು: ನಿನ್ನ ಗ್ರಹ ಎಷ್ಟು ಸುಂದರವಾಗಿದೆ. ನೀನು ಇಲ್ಲಿಗೆ ಬಂದದ್ದು ಏಕೆ?

ಪು.ರಾ.: ಒಂದು ಹಾವಿನೊಂದಿಗೆ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ.

ಹಾವು: ಓಹ್!! ಲವ್ ಕೇಸೂ.

(ಇಬ್ಬರೂ ಮೌನವಾಗಿದ್ದರು.)

ಪು.ರಾ.: ಮನುಷ್ಯರೆಲ್ಲಾ ಎಲ್ಲಿದ್ದಾರೆ? ಈ ಮರುಭೂಮಿಯಲ್ಲಿ ನಾನು ಒಂಟಿ ಎನ್ನಿಸುತ್ತಿದೆ......

ಹಾವು: ಮನುಷ್ಯರ ನಡುವೆಯೂ ಒಂಟಿ ಎನ್ನಿಸುತ್ತದೆ.

ಪು.ರಾ.: (ಹಾವನ್ನೇ ದಿಟ್ಟಿಸಿ ನೋಡುತ್ತಿದ್ದು ಕೊನೆಗೆ) ನೀನೊಂದು ತಮಾಷೆಯ ಪ್ರಾಣಿ, ಬೆರಳಿಗಿಂತ ದಪ್ಪವಿಲ್ಲ.

ಹಾವು: ಆದರೆ ನನಗೆ ರಾಜನ ಬೆರಳಿಗಿಂತ ಹೆಚ್ಚು ಶಕ್ತಿಯಿದೆ.

ಪು.ರಾ.: (ನಗುತ್ತಾ) ನಿನಗೆ ಶಕ್ತಿಯಿರಲು ಸಾಧ್ಯವೇ ಇಲ್ಲ. ನಿನಗೆ ಕಾಲುಗಳೂ ಇಲ್ಲ, ನಿನಗೆ ಚಲಿಸಲೂ ಆಗುವುದಿಲ್ಲ........

ಹಾವು: ನಾನು ನಿನ್ನನ್ನು ಯಾವುದೇ ಹಡಗು ಕೊಂಡೊಯ್ಯುವುದಕ್ಕಿಂತ ದೂರ ಕೊಂಡೊಯ್ಯಬಲ್ಲೆ. ನಾನು ಮುಟ್ಟಿದವರನ್ನೆಲ್ಲ, ಅವರು ಎಲ್ಲಿಂದ ಬಂದಿದ್ದಾರೋ ಅಲ್ಲಿಗೇ ಕಳುಹಿಸಿಬಿಡಬಲ್ಲೆ. ಆದರೆ ನೀನು ಪ್ರಾಮಾಣಿಕ

ಹಾಗೂ ಮುಗ್ಧ. ದೂರದ ಗ್ರಹವೊಂದರಿಂದ ಬಂದಿದ್ದೀಯ....... ನಿನ್ನನ್ನು ನೋಡಿದರೆ ಅಯ್ಯೋ ಎನ್ನಿಸುತ್ತದೆ– ಕಲ್ಲಿನ ಈ ಭೂಮಿಯ ಮೇಲೆ ನೀನು ಅಶಕ್ತ. ಆದರೆ ನಾನು ನಿನಗೆ ಸಹಾಯ ಮಾಡಬಲ್ಲೆ. ನಿನಗೆ ಎಂದಾದರೂ ನಿನ್ನ ಗ್ರಹಕ್ಕೆ ವಾಪಸ್ಸು ಹೋಗಲೇಬೇಕೆಂದರೆ ನಾನು ನಿನ್ನನ್ನು........

ಪು.ರಾ.: ಓಹ್! ನನಗೆಲ್ಲ ಅರ್ಥವಾಯಿತು ಬಿಡು. ಆದರೆ ನೀನೇಕೆ ಎಲ್ಲಾ ಒಗಟಿನ ರೀತಿ ಮಾತನಾಡುತ್ತೀಯ?

ಹಾವು: ಎಲ್ಲ ಒಗಟುಗಳನ್ನು ಬಿಡಿಸುವವನು ನಾನು.

(ಇಬ್ಬರೂ ಮೌನವಾದರು.)

ಪು.ರಾ.: (ಅಲ್ಲೇ ಒಂದು ಬದಿಗೆ ನಿಂತು ಅಂಗೈಯಲ್ಲಿ ಹಣೆಯ ಮೇಲೆ ಇರಿಸಿ ದೂರ ನೋಡುವವನಂತೆ ನೋಡಿ. ಜೋರಾದ ಧ್ವನಿಯಲ್ಲಿ) ಯಾರಾದರೂ ಇದ್ದೀರಾ?

ಪ್ರತಿಧ್ವನಿ: ಯಾರಾದರೂ ಇದ್ದೀರಾ? ಯಾರಾದರೂ ಇದ್ದೀರಾ?

ಪು.ರಾ.: ನೀನು ಯಾರು?

ಪ್ರತಿಧ್ವನಿ: ನೀನು ಯಾರು........ ನೀನು ಯಾರು........ ನೀನು ಯಾರು?

ಪು.ರಾ.: ನಾನು ಒಂಟಿಯಾಗಿದ್ದೇನೆ. ನನ್ನ ಗೆಳೆಯನಾಗುವೆಯಾ?

ಪ್ರತಿಧ್ವನಿ: ನನ್ನ ಗೆಳೆಯನಾಗುವೆಯಾ.......... ನನ್ನ ಗೆಳೆಯನಾಗುವೆಯಾ.......... ನನ್ನ ಗೆಳೆಯನಾಗುವೆಯಾ

ಪು.ರಾ.: ಇದು ಎಂಥ ವಿಚಿತ್ರ ಗ್ರಹ! ಎಲ್ಲೆಲ್ಲೂ ಬಣಭೂಮಿ, ಚೂಪಾದ ಶಿಖರಗಳು. ಇಲ್ಲಿ ಬದುಕುವುದೇ ಕಷ್ಟ. ಇಲ್ಲಿನ ಜನರಿಗೆ – ಸ್ವಂತ ಬುದ್ಧಿಯೇ ಇಲ್ಲ. ನಾವು ಹೇಳಿದ್ದನ್ನೇ ಪುನರುಚ್ಚರಿಸುತ್ತಾರೆ. ಅದೇ ನನ್ನ ಗ್ರಹದಲ್ಲಿ ನನ್ನ ಹೂವೊಂದಿತ್ತು; ಆಕೆಯೇ ಮೊದಲಿಗೆ ಮಾತನಾಡುತ್ತಿದ್ದಳು..........

(ಪುಟ್ಟ ರಾಜಕುಮಾರ ಮುಂದೆ ಸಾಗಿದ. ಒಂದು ಹೂವಿನ ಗಿಡ ಎದುರಾಯಿತು).

ಪು.ರಾ.: ನಮಸ್ಕಾರ

ಹೂವಿನ ಗಿಡ: ನಮಸ್ಕಾರ

ಪು.ರಾ.: ಯಾರೂ ಮನುಷ್ಯರೇ ಕಾಣ್ತಾ ಇಲ್ಲವಲ್ಲಾ. ಮನುಷ್ಯರೆಲ್ಲಾ ಎಲ್ಲಿದ್ದಾರೆ?

ಹೂವಿನ ಗಿಡ: ಮನುಷ್ಯರೆ? ಈ ಮರುಭೂಮಿಯಲ್ಲಿ ಆರೋ ಏಳೋ ಇರಬಹುದು. ಕೆಲವು ವರ್ಷಗಳ ಹಿಂದೆ ನೋಡಿದ್ದೆ. ಆದರೆ ಅವರೆಲ್ಲಿರುತ್ತಾರೆಂಬುದು ಯಾರಿಗೂ ತಿಳಿದಿರುವುದಿಲ್ಲ. ಗಾಳಿ ಬೀಸಿದ ಕಡೆ ಹೋಗುತ್ತಾರವರು. ಪಾಪ, ಅವರಿಗೆ ಬೇರುಗಳೇ ಇರೋದಿಲ್ಲ; ಅವರ ಬದುಕೇ ಕಷ್ಟ.

ಪು.ರಾ.: ಈ ಭೂಮಿ ಒಂದು ವಿಚಿತ್ರ ಗ್ರಹ (ಮುಂದೆ ನಡೆಯುತ್ತಾನೆ).

ದೃಶ್ಯ ೧೧

(ಪುಟ್ಟ ರಾಜಕುಮಾರ ಗುಲಾಬಿ ಉದ್ಯಾನವೊಂದನ್ನು ಪ್ರವೇಶಿಸುತ್ತಾನೆ. ಅದನ್ನು ನೋಡಿ ಸಂತೋಷದಿಂದ)

ಪು.ರಾ.: ಅರೆ, ನನ್ನ ಗ್ರಹದಲ್ಲಿನ ಗುಲಾಬಿಯಂತೆಯೇ ಇದ್ದೀರಾ. ನೀವೆಲ್ಲಾ ಯಾರು?

ಗುಲಾಬಿಗಳು: ನಾವು ಗುಲಾಬಿಗಳು.

ಪು.ರಾ.: (ತನಗೆ ತಾನೇ ಹೇಳಿಕೊಳ್ಳುತ್ತಾನೆ) ಇಡೀ ವಿಶ್ವದಲ್ಲೇ ನನ್ನ ಬಳಿ ಇರುವ ಹೂ ಮತ್ತೊಂದಿಲ್ಲ ಎಂದುಕೊಂಡಿದ್ದೆ. ಆದರೆ ಇಲ್ಲಿ ನೋಡಿದರೆ ಒಂದೇ ತೋಟದಲ್ಲಿ ಅವಳಂತೆಯೇ ಐದುಸಾವಿರ ಹೂಗಳಿವೆ! ನನ್ನ ಹೂವೇನಾದರೂ ಈ ಹೂಗಳನ್ನು ನೋಡಿದರೆ ಅವಳಿಗೆ ಬಹಳ ಜುಗುಪ್ಸೆಯಾಗಬಹುದು.......... ಸಿಕ್ಕಾಪಟ್ಟೆ ನೆಗಡಿಯಾದಂತೆ ಕೆಮ್ಮಬಹುದು, ತನ್ನನ್ನು ನೋಡಿ ಯಾರೂ ನಗದಿರಲೆಂದು ಸಾಯುತ್ತಿರುವಂತೆ ನಟಿಸಬಹುದು. ಆಗ ನಾನು ಅವಳನ್ನು ಸಂತೈಸುವಂತೆ, ಆರೈಕೆ ಮಾಡುವಂತೆ ನಟಿಸಬೇಕು. ಇಲ್ಲದಿದ್ದಲ್ಲಿ ಆಕೆ ನಿಜವಾಗಿಯೂ ಸತ್ತು ಹೋಗಿಬಿಡಬಹುದು. (ಅಲ್ಲೇ ಕೂತು ಬಿಕ್ಕಳಿಸತೊಡಗುತ್ತಾನೆ. ಅಲ್ಲಿಗೆ ನರಿಯೊಂದು ಪ್ರವೇಶಿಸುತ್ತದೆ. ರಾಜಕುಮಾರ ತಲೆತಗ್ಗಿಸಿ ಬಿಕ್ಕಳಿಸುತ್ತಿರುತ್ತಾನೆ. ನರಿ ಅವನ ಸುತ್ತಲೂ ಸುತ್ತು ಹಾಕಿ, ಅಲ್ಲೇ ಇದ್ದ ಮರದ ಹಿಂದೆ ಅವಿತು,)

ನರಿ: ನಮಸ್ಕಾರ.

ಪು.ರಾ.: (ತಲೆಯೆತ್ತಿ) ನಮಸ್ಕಾರ. (ಆತನಿಗೆ ಯಾರೂ ಕಾಣುವುದಿಲ್ಲ.)

ಪು.ರಾ.: ಯಾರದು ನನಗೆ ನಮಸ್ಕಾರ ಹೇಳಿದ್ದು?

ನರಿ: (ಹೊರಗೆ ಬರುತ್ತಾ) ನಾನು.

ಪು.ರಾ.: ಯಾರು ನೀನು? ನೋಡಲು ಎಷ್ಟು ಸುಂದರವಾಗಿದ್ದೀಯ!

ನರಿ: ನಾನೊಂದು ನರಿ.

ಪು.ರಾ.: ನನಗೆ ಬೇಸರವಾಗಿದೆ, ದುಃಖವಾಗಿದೆ. ನನ್ನ ಜೊತೆ ಆಟವಾಡುವೆಯಾ!

ನರಿ: ಇಲ್ಲ, ನಾನು ನಿನ್ನ ಜೊತೆ ಆಡುವುದು ಸಾಧ್ಯವಿಲ್ಲ, ನನ್ನನ್ನು ಪಳಗಿಸಿಲ್ಲ.

ಪು.ರಾ.: ಓಹ್! ನನ್ನನ್ನು ಕ್ಷಮಿಸು (ಸ್ವಲ್ಪ ಹೊತ್ತು ಹಾಗೇ ಆಲೋಚಿಸಿ) ಪಳಗಿಸುವುದು, ಹಾಗೆಂದರೇನು?

ನರಿ: ನೀನು ಇಲ್ಲಿನವನಲ್ಲ. ಇಲ್ಲೇನು ಹುಡುಕುತ್ತಿದ್ದೀಯ?

ಪು.ರಾ.: ನಾನು ಮನುಷ್ಯರನ್ನು ಹುಡುಕುತ್ತಿದ್ದೇನೆ, ಪಳಗಿಸುವುದು ಎಂದರೇನು?

ನರಿ: ಮನುಷ್ಯರನ್ನೇ? ಅವರ ಬಳಿ ಬಂದೂಕುಗಳಿರುತ್ತವೆ. ಅವರು ಬೇಟೆಯಾಡುತ್ತಾರೆ. ಅದು ತುಂಬಾ ನೋವಿನ ವಿಷಯ. ಅವರು ಕೋಳಿಗಳನ್ನೂ ಸಾಕುತ್ತಾರೆ. ಅಷ್ಟೇ ಅವರ ಆಸಕ್ತಿಗಳು. ನೀನು ಕೋಳಿಗಳನ್ನು ಹುಡುಕುತ್ತಿದ್ದೀಯೇನು?

ಪು.ರಾ.: ಇಲ್ಲ, ನಾನು ಗೆಳೆಯರಿಗಾಗಿ ಹುಡುಕುತ್ತಿದ್ದೇನೆ. ಪಳಗಿಸುವುದು ಎಂದರೇನು?

ನರಿ: ಹೋ, ಬಿಡು. ಅದೊಂದು ಬಹಳ ಉದಾಸೀನಕ್ಕೊಳಗಾದ ಕ್ರಿಯೆ. ಪಳಗಿಸುವುದು ಎಂದರೆ ಸಂಬಂಧಗಳನ್ನು ಸೃಷ್ಟಿಸುವುದು ಎಂದರ್ಥ.

ಪು.ರಾ.: ಸಂಬಂಧಗಳನ್ನು ಸೃಷ್ಟಿಸುವುದು?

ನರಿ: ಹೌದು, ಅಷ್ಟೇ ಅದರ ಅರ್ಥ. ನೀನು ನನಗೆ ಇನ್ನಿತರ ಸಾವಿರಾರು ಪುಟ್ಟ ಹುಡುಗರ ಹಾಗೆಯೇ ಒಬ್ಬ ಹುಡುಗ ಅಷ್ಟೆ. ನನಗೆ ನಿನ್ನ ಅವಶ್ಯಕತೆಯಿಲ್ಲ. ಅದೇ ರೀತಿ ನಿನಗೂ ನನ್ನ ಅವಶ್ಯಕತೆಯಿಲ್ಲ. ನಿನಗೆ ನಾನು ಸಾವಿರಾರು ನರಿಗಳ ರೀತಿ ಒಂದು ನರಿಯಷ್ಟೆ. ಅದೇ ನೀನು ನನ್ನನ್ನು ಪಳಗಿಸಿದರೆ ನಮಗಿಬ್ಬರಿಗೂ ಪರಸ್ಪರರ ಅವಶ್ಯಕತೆ ಇರುತ್ತದೆ. ನನಗೆ ನೀನು ಬೇಕಾದ ವ್ಯಕ್ತಿಯಾಗುತ್ತೀಯ. ಅದೇ ರೀತಿ ನಾನು ನಿನಗೆ ಬೇಕಾದ ಸಾಕು ಪ್ರಾಣಿಯಾಗುತ್ತೇನೆ......

ಪು.ರಾ.: ಈಗ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿದೆ, ನನ್ನದೂ ಒಂದು ಹೂವಿದೆ................. ಬಹುಶಃ ಅದು ನನ್ನನ್ನು ಪಳಗಿಸಿರಬಹುದೆನ್ನಿಸುತ್ತಿದೆ.............

ನರಿ: ಇರಬಹುದು. ಈ ಭೂಮಿಯ ಮೇಲೆ ಎಲ್ಲ ತರಹದ ಘಟನೆಗಳೂ ನಡೆಯುತ್ತವೆ.

ಪು.ರಾ.: ಓಹ್! ಇಲ್ಲ.. ಇಲ್ಲ. ಅದು ಭೂಮಿಯ ಮೇಲಲ್ಲ!

ನರಿ: (ಆಶ್ಚರ್ಯದಿಂದ) ಬೇರೆ ಗ್ರಹದಲ್ಲಿಯೇ?

ಪು.ರಾ.: ಹೌದು.

ನರಿ: ಆ ಗ್ರಹದಲ್ಲಿಯೂ ಬೇಟೆಗಾರರಿದ್ದಾರೆಯೆ?

ಪು.ರಾ.: ಇಲ್ಲ.

ನರಿ: ಹಾ! ಹಾಗಾದರೆ ಅದು ಒಳ್ಳೆಯ ಜಾಗವೆನ್ನಿಸುತ್ತದೆ! ಅಲ್ಲಿ ಕೋಳಿಗಳಿವೆಯೆ?

ಪು.ರಾ.: ಇಲ್ಲ.

ನರಿ: ಥತ್ತೇರಿ, ಯಾವುದೂ ಸರಿಯಿರುವುದಿಲ್ಲ ಬಿಡು (ಸ್ವಲ್ಪ ಹೊತ್ತು ಯೋಚಿಸಿ) ನನ್ನ ಬದುಕು ಏಕತಾನತೆಯಿಂದ ಕೂಡಿದೆ. ನಾನು ಕೋಳಿಗಳನ್ನು ಬೇಟೆಯಾಡುತ್ತೇನೆ, ಜನರು ನನ್ನನ್ನು ಬೇಟೆಯಾಡುತ್ತಾರೆ. ಎಲ್ಲ ಕೋಳಿಗಳೂ ಒಂದೇ ತರಹ ಇರುತ್ತವೆ, ಹಾಗೇ ಎಲ್ಲ ಮನುಷ್ಯರೂ ಒಂದೇ ತರಹ ಇರುತ್ತಾರೆ. ಈ ಏಕತಾನತೆ ಬೇಸರವಾಗಿದೆ. ನೀನು ನನ್ನನ್ನು ಪಳಗಿಸು. ಬೇರೆಯವರಿಗಿಂತ ಭಿನ್ನವಾದ ನಿನ್ನ ಹೆಜ್ಜೆಯ ಸಪ್ಪಳಕ್ಕೆ ನನ್ನ ಕಿವಿ ನಿಮಿರಿ ನಿಲ್ಲುವಂತಾಗಲಿ. ಬೇರೆಯವರ ಹೆಜ್ಜೆ ಸಪ್ಪಳ ನನ್ನನ್ನು ಹೆದರಿಸಿ ಪೊಟರೆಯಲ್ಲಿ ಅಡಗಿಕೊಳ್ಳುವಂತೆ ಮಾಡಿದರೆ, ನಿನ್ನದು ನನ್ನನ್ನು ಹೊರಕ್ಕೆ ಕರೆಯುವ ಸಂಗೀತವಾಗುತ್ತದೆ. ನೋಡಿಲ್ಲಿ, ದಿಗಂತದವರೆಗೂ ಹಬ್ಬಿರುವ ಗೋಧಿಯ ಹೊಲ. ನಾನು ರೊಟ್ಟಿ ತಿನ್ನುವವನಲ್ಲ. ಗೋಧಿ ನನಗ್ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಗೋಧಿಯ ಹೊಲಗಳಿಗೂ ನನ್ನಲ್ಲಿ ಪಿಸುಗುಟ್ಟಲು ಏನೂ ಇಲ್ಲ. ಅದು ಬೇಸರದ ಸಂಗತಿಯಲ್ಲವೆ? ನಿನ್ನ ತಲೆಗೂದಲು ನೋಡು, ಹೇಗೆ ಹೊಂಬಣ್ಣದಿಂದ ಹೊಳೆಯುತ್ತಿದೆ. ನೀನು ನನ್ನನ್ನು ಪಳಗಿಸಿದಲ್ಲಿ ಬದುಕೆಷ್ಟು ಸುಂದರವಾಗುತ್ತದೆ! ಗೋಧಿಯ ತೆನೆಯೂ ಹೊಂಬಣ್ಣ. ಅದರ ದೃಶ್ಯ ನಿನ್ನ ನೆನಪು ಮೂಡಿಸುತ್ತದೆ. ಆ ತೆನೆಗಳ ನಡುವೆ ಸುಳಿದಾಡುವ ತಂಗಾಳಿಯ ಪಿಸುಮಾತು ಆಲಿಸುತ್ತಾ ಕೂತಿರಬಲ್ಲೆ........

(ಪುಟ್ಟ ರಾಜಕುಮಾರ ಏನೂ ಹೇಳುವುದಿಲ್ಲ.)

ನರಿ: ಪ್ಲೀಸ್, ... ನನ್ನನ್ನು ಪಳಗಿಸು.

ಪು.ರಾ.: ಪಳಗಿಸಲು ನನಗೂ ಇಷ್ಟ. ಆದರೆ ಏನು ಮಾಡಲಿ? ನನಗೆ ಸಮಯವೇ ಇಲ್ಲ. ನಾನು ಗೆಳೆಯರ ಹುಡುಕಾಟದಲ್ಲಿ ತೊಡಗಿದ್ದೇನೆ. ಅಲ್ಲದೆ ನಾನು ಬಹಳಷ್ಟು ವಿಷಯಗಳನ್ನು ಅರಿಯಬೇಕಿದೆ.

ನರಿ: ತಾವು ಪಳಗಿಸುವುದನ್ನು ಮಾತ್ರ ಜನ ಅರಿಯಬಲ್ಲರು. ಮನುಷ್ಯರಿಗೆ ಯಾವುದನ್ನೂ ಅರಿಯಲು ಈಗ ಸಮಯವೇ ಇರುವುದಿಲ್ಲ. ಈಗ ಅವರು ಎಲ್ಲಾ ರೆಡಿಮೇಡ್ ವಸ್ತುಗಳನ್ನು ಅಂಗಡಿಗಳಿಂದಲೇ ಕೊಳ್ಳುತ್ತಾರೆ. ಆದರೆ ಗೆಳೆತನ ಮಾರುವ ಅಂಗಡಿ ಎಲ್ಲಿಯೂ ಇಲ್ಲವಲ್ಲ, ಹಾಗಾಗಿ ಈಗ ಮನುಷ್ಯರಿಗೆ ಗೆಳೆಯರೇ ಇಲ್ಲ. ನಿನಗೊಬ್ಬ ಗೆಳೆಯ, ಬೇಕಾದಲ್ಲಿ ನನ್ನನ್ನು ಪಳಗಿಸು........

ಪು.ರಾ.: ನಿನ್ನನ್ನು ಪಳಗಿಸಬೇಕಾದರೆ ನಾನೇನು ಮಾಡಬೇಕು?

ನರಿ: ನಿನಗೆ ಬಹಳಷ್ಟು ತಾಳ್ಮೆ ಇರಬೇಕು. ಮೊದಲಿಗೆ ನನ್ನಿಂದ ಸ್ವಲ್ಪ ದೂರದಲ್ಲಿ ಹುಲ್ಲಿನ ಮೇಲೆ ಕುಳಿತುಕೊಳ್ಳುತ್ತೀಯಾ........ ಹಾ! ಹಾಗೆ. ನಾನು ಓರೆಗಣ್ಣಿನಿಂದ ನಿನ್ನನ್ನು ನೋಡುತ್ತೇನೆ. ನೀನು ಏನೂ ಹೇಳುವುದಿಲ್ಲ. ಮಾತುಗಳೇ ತಪ್ಪು ಕಲ್ಪನೆಗಳಿಗೆ ಮೂಲವಲ್ಲವೆ? ದಿನಕಳೆದಂತೆ ನೀನು ನನ್ನ ಹತ್ತಿರ ಹತ್ತಿರ ಬರುತ್ತೀಯ........ ನೀನು ಒಂದೇ ಸಮಯಕ್ಕೆ ಬರಬೇಕು. ಉದಾಹರಣೆಗೆ, ನೀನು ಸಂಜೆ ನಾಲ್ಕು ಗಂಟೆಗೆ ಬಂದರೆ, ಮರುದಿನ ಮೂರು ಗಂಟೆಗೇ ನನ್ನೆದೆ ಢವಢವಗುಟ್ಟುತ್ತಿರುತ್ತದೆ. ನೀ ಬರುವ ಸಮಯ ಹತ್ತಿರ ಹತ್ತಿರ ಬಂದಂತೆ ಸಂತೋಷ ಹೆಚ್ಚುತ್ತಾ ಹೋಗುತ್ತದೆ. ನಾಲ್ಕು ಗಂಟೆಗೆ ಸರಿಯಾಗಿ ನಿನ್ನ ಬಗ್ಗೆ ಆಲೋಚಿಸಿ ಕುಣಿಯತೊಡಗುತ್ತೇನೆ. ನೀ ಬಂದ ಕೂಡಲೆ ನಾನೆಷ್ಟು ಸಂತೋಷವಾಗಿದ್ದೇನೆಂಬುದನ್ನು ನಿನಗೆ ತೋರಿಸಿಕೊಡುತ್ತೇನೆ! ಅದೇ ನೀನು ಸಮಯಪಾಲನೆ ಮಾಡದಿದ್ದರೆ ನಿನ್ನನ್ನು ಸ್ವಾಗತಿಸಲು ಯಾವಾಗ ತಯಾರಾಗಬೇಕೆಂದು ನನ್ನ ಹೃದಯಕ್ಕೆ ತಿಳಿಯುವುದಿಲ್ಲ......... ಸಮಯಪಾಲನೆ ಮಾಡಬೇಕು ಹಾಗೂ ಸರಿಯಾದ ಆಚರಣೆಯನ್ನು ಪಾಲಿಸಬೇಕು.

ಪು.ರಾ.: ಆಚರಣೆ – ಹಾಗೆಂದರೇನು?

ನರಿ: ಅದೂ ಸಹ ಒಂದು ರೀತಿ ಉದಾಸೀನಕ್ಕೊಳಗಾದ ಕ್ರಿಯೆ. ಈ ಆಚರಣೆಗಳಿಂದಲೇ ಒಂದು ದಿನ ಮತ್ತೊಂದು ದಿನದಿಂದ ಹಾಗೂ ಒಂದು ಗಂಟೆ ಮತ್ತೊಂದು ಗಂಟೆಯಿಂದ ಭಿನ್ನವಾಗಿರುವುದು. ಉದಾಹರಣೆಗೆ, ನನ್ನ ಬೇಟೆಗಾರರು ಒಂದು ಆಚರಣೆಯನ್ನು ಪಾಲಿಸುತ್ತಾರೆ. ಪ್ರತೀ ಗುರುವಾರ ತಪ್ಪದೆ ಅವರು ತಮ್ಮ ಹಳ್ಳಿಯ ಹುಡುಗಿಯರ ಜೊತೆಗೂಡಿ ನೃತ್ಯ ಮಾಡುತ್ತಾರೆ. ಹಾಗಾಗಿ ನನಗೆ ಗುರುವಾರವೆಂದರೆ ಹಬ್ಬದ ದಿನ! ಆ ದಿನ ನಾನು ಊರಿನ ಸಮೀಪದವರೆಗೂ ಹೋಗಬಹುದು. ಅದೇ

ಬೇಟೆಗಾರರು ಅವರಿಗಿಷ್ಟ ಬಂದ ದಿನ ನೃತ್ಯದಲ್ಲಿ ತೊಡಗುವ ಹಾಗಿದ್ದಲ್ಲಿ ನನಗೆ ಪ್ರತಿ ದಿನವೂ ಒಂದೇ ರೀತಿ ಇರುತ್ತಿತ್ತು; ನನಗೆ ರಜೆ ದಿನವೇ ಇರುತ್ತಿರಲಿಲ್ಲ. (ಪುಟ್ಟ ರಾಜಕುಮಾರ ನರಿಯ ಹತ್ತಿರ ಹೋಗಿ ಅದರ ತಲೆಯನ್ನು ನೇವರಿಸುತ್ತಾನೆ. ಅದು ಕುಣಿಯುತ್ತಾ ಅವನ ಸುತ್ತಾ ಕುಣಿದಾಡುತ್ತದೆ.)

ಪು.ರಾ.: ನಾನಿನ್ನು ಹೊರಡಬೇಕು.

ನರಿ: ಓಹ್! ನನಗೆ ದುಃಖವಾಗುತ್ತಿದೆ,

ಪು.ರಾ.: ಅದು ನಿನ್ನದೇ ತಪ್ಪು. ನಾನು ನಿನಗೆ ಎಂದೂ ಯಾವುದೇ ತೊಂದರೆ ಬಯಸಿದವನಲ್ಲ. ನೀನೇ ಪಳಗಿಸುವಂತೆ ಕೋರಿಕೊಂಡೆ........

ನರಿ: ಹೌದು, ನನ್ನದೇ ತಪ್ಪು.

ಪು.ರಾ.: ಹಾಗಾದರೆ ನಾನೀಗ ಹೊರಟು ಹೋದರೆ ನೀನು ಅಳುತ್ತೀಯ?

ನರಿ: ಹೌದು.

ಪು.ರಾ.: ಹಾಗಾದರೆ ಪಳಗಿದ್ದರಿಂದ ನಿನಗೇನೂ ಉಪಯೋಗವಾಗಲಿಲ್ಲ. ಬದಲಿಗೆ ನಿನಗೆ ದುಃಖವನ್ನೇ ತಂದಿದೆ.

ನರಿ: ಇಲ್ಲ, ನನಗೆ ಒಳ್ಳೆಯದಾಗಿದೆ. ಏಕೆಂದರೆ ಈ ಗೋಧಿಯ ಹೊಲದ ಹೊಂಬಣ್ಣ ಸದಾ ನಿನ್ನ ನೆನಪು ತರುತ್ತದೆ. ಈಗ ಹೋಗಿ ಗುಲಾಬಿಯ ತೋಟ ನೋಡು. ನಿನ್ನ ಗ್ರಹದಲ್ಲಿನ ಗುಲಾಬಿ ಏಕೆ ವಿಶಿಷ್ಟವಾದುದೆಂದು ನಿನಗರ್ಥವಾಗುತ್ತದೆ. ನಂತರ ಬಂದು ನನಗೆ ವಿದಾಯ ಹೇಳು. ಆಮೇಲೆ ನಾನು ನಿನಗೊಂದು ಗುಟ್ಟಿನ ಮಾತಿನ ಉಡುಗೊರೆ ಕೊಡುತ್ತೇನೆ.

ಪು.ರಾ.: ಮಾತಿನ ಉಡುಗೊರೆ?

ನರಿ: ಹೌದು.

ಪು.ರಾ.: ನೀವೆಲ್ಲಾ ನನ್ನ ಗುಲಾಬಿಯ ರೀತಿ ಇಲ್ಲವೇ ಇಲ್ಲ. ನೀವು ನನಗೆ ಯಾರೂ ಅಲ್ಲ, ನಿಮ್ಮನ್ನು ಯಾರೂ ಪಳಗಿಸಿಲ್ಲ ಹಾಗೂ ನೀವೂ ಯಾರನ್ನೂ ಪಳಗಿಸಿಲ್ಲ. ನಾನು ಮೊದಲಿಗೆ ನರಿಯನ್ನು ಭೇಟಿಯಾದಾಗ ಹೇಗಿದ್ದಿರೋ ಹಾಗೇ ಇದ್ದೀರಿ. ಆದರೆ ಈಗ ಆ ನರಿ ನನ್ನ ಗೆಳೆಯನಾಗಿದೆ, ಆದುದರಿಂದ ಅದು ನನಗೆ ಈ ಪ್ರಪಂಚದಲ್ಲೇ ಅತ್ಯಂತ ವಿಶಿಷ್ಟವಾದುದು. ನೀವು ಸುಂದರವಾಗಿದ್ದೀರಿ, ಆದರೆ ನಿಮ್ಮಲ್ಲಿ ಎಲ್ಲಾ ಖಾಲಿ ಖಾಲಿ. ನಿಮಗಾಗಿ

ತಹತಹಿಸುವವರು ಯಾರೂ ಇಲ್ಲ. ಹಾದಿಹೋಕನೊಬ್ಬ ನನ್ನ ಗುಲಾಬಿಯನ್ನು ನೋಡಿದರೆ ಆತನಿಗೂ ಹಾಗೇ ಅನ್ನಿಸಬಹುದು. ಇತರ ಎಲ್ಲ ಗುಲಾಬಿಗಳಿಗಿಂತ ಆಕೆಯೇ ನನಗೆ ಹೆಚ್ಚು ಮುಖ್ಯವಾದವಳು: ಏಕೆಂದರೆ ನಾನು ನೀರು ಹನಿಸಿರುವುದು ಆಕೆಗೆ. ರಕ್ಷಣೆಗಾಗಿ ಗಾಜಿನ ಜೋಗುಣಿ ಹೊದಿಸಿದ್ದು ಆಕೆಗೆ, ಬಾಡದಿರಲೆಂದು ನೆರಳ ಪರದೆ ಇರಿಸಿದ್ದು ಆಕೆಗೆ. ಆಕೆಗಾಗಿಯೇ ನಾನು ಚಿಟ್ಟೆಯಾಗಲೆಂದು ಎರಡೋ ಮೂರೋ ಉಳಿಸಿ ಉಳಿದ ಕಂಬಳಿಹುಳುಗಳನ್ನು ಕೊಂದೆ. ನಾನು ತಾಳ್ಮೆಯಿಂದ ಆಲಿಸಿದ್ದು ಆಕೆಯ ಮಾತು – ಆಕೆಯ ಗೊಣಗಾಟವಿರಬಹುದು, ಜಂಬ ಕೊಚ್ಚಿಕೊಳ್ಳುವುದಿರಬಹುದು ಅಥವಾ ಕೆಲವೊಮ್ಮೆ ಆಕೆಯ ಮೌನವನ್ನೇ ಆಲಿಸಿರಬಹುದು. ಏಕೆಂದರೆ ಆಕೆ ನನ್ನ ಗುಲಾಬಿ. (ನಂತರ ನರಿಯ ಬಳಿ ಹೋಗಿ,)

ಪು.ರಾ.: ಹೋಗಿ ಬರುತ್ತೇನೆ ಗೆಳೆಯಾ

ನರಿ: ಹೋಗಿ ಬಾ, ಹತ್ತಿರ ಬಾ, ನನ್ನ ಗುಟ್ಟಿನ ಮಾತು ಹೇಳುತ್ತೇನೆ – ಇದು ಬಹಳ ಸರಳವಾದ ವಿಷಯ, ನೆನಪಿನಲ್ಲಿಟ್ಟುಕೊ: ಹೃದಯ ತೆರೆದು ನೋಡಿದಾಗ ಮಾತ್ರ ಸತ್ಯ ಕಾಣುತ್ತದೆ; ಯಾವುದು ಸತ್ಯವೋ ಅದು ಬರಿಯ ಕಣ್ಣಿಗೆ ಕಾಣುವುದಿಲ್ಲ.

ಪು.ರಾ.: ಯಾವುದು ಸತ್ಯವೋ ಅದು ಬರಿಯ ಕಣ್ಣಿಗೆ ಕಾಣುವುದಿಲ್ಲ. ಯಾವುದು ಸತ್ಯವೋ ಅದು ಬರಿಯ ಕಣ್ಣಿಗೆ ಕಾಣುವುದಿಲ್ಲ.

ನರಿ: ನೀನು ನಿನ್ನ ಗುಲಾಬಿಗೋಸ್ಕರ ಕಳೆದ ಸಮಯವೇ, ನಿನ್ನ ಗುಲಾಬಿ ನಿನಗೆ ಅಷ್ಟೊಂದು ಮುಖ್ಯವಾಗಲು ಕಾರಣ.

ಪು.ರಾ.: ನಾನು ನನ್ನ ಗುಲಾಬಿಗೋಸ್ಕರ ಕಳೆದ ಸಮಯವೇ, ನನ್ನ ಗುಲಾಬಿ ನನಗೆ ಅಷ್ಟೊಂದು ಮುಖ್ಯವಾಗಲು ಕಾರಣ.

ನರಿ: ಮನುಷ್ಯರು ಈ ಸತ್ಯವನ್ನು ಮರೆತಿದ್ದಾರೆ. ಆದರೆ ನೀನು ಮಾತ್ರ ಇದನ್ನು ಮರೆಯಬೇಡ. ನೀನು ಪಳಗಿಸಿದ ಜೀವಕ್ಕೆ ಯಾವತ್ತೂ ನಿಷ್ಠನಾಗಿರಬೇಕು, ಅದರ ಬಗ್ಗೆ ನೀನು ಜವಾಬ್ದಾರನಾಗಿರಬೇಕು. ನಿನ್ನ ಗುಲಾಬಿಯ ಹೊಣೆಗಾರಿಕೆ ನಿನ್ನ ಮೇಲಿದೆ.

ಪು.ರಾ.: ನನ್ನ ಗುಲಾಬಿಯ ಹೊಣೆಗಾರಿಕೆ ನನ್ನ ಮೇಲಿದೆ. ನನ್ನ ಗುಲಾಬಿಯ ಹೊಣೆಗಾರಿಕೆ ನನ್ನ ಮೇಲಿದೆ.

ದೃಶ್ಯ ೧೨

(ಒಬ್ಬ ರೈಲ್ವೇ ಸ್ವಿಚ್‌ಮ್ಯಾನ್ ಕೂತು ಹೋಗಿ ಬರುವ ಟ್ರೈನುಗಳನ್ನು ನಿಯಂತ್ರಿಸುತ್ತಿರುತ್ತಾನೆ.)

ಪು.ರಾ.: ನಮಸ್ಕಾರ

ರೈ.ಸ್ವಿ: ನಮಸ್ಕಾರ

ಪು.ರಾ.: ಏನು ಮಾಡುತ್ತಿದ್ದೀರಿ?

ರೈ.ಸ್ವಿ: ಪ್ರಯಾಣಿಕರನ್ನು ಹೊತ್ತೊಯ್ಯುವ ಟ್ರೈನುಗಳನ್ನು ಒಮ್ಮೆ ಎಡದಿಕ್ಕಿಗೆ, ಒಮ್ಮೆ ಬಲದಿಕ್ಕಿಗೆ ಕಳುಹಿಸುತ್ತೇನೆ. (ಆಗ ಒಂದು ಪ್ರಖರ ದೀಪದ ಒಂದು ಟ್ರೈನು ಗಡಚಿಕ್ಕುವ ಗುಡುಗಿನಂತಹ ಶಬ್ದ ಮಾಡಿಕೊಂಡು ಸ್ವಿಚ್‌ಮ್ಯಾನ್ ಕ್ಯಾಬಿನನ್ನು ದಾಟ ವೇಗವಾಗಿ ಹಾದುಹೋಯಿತು. ಅದರ ವೇಗಕ್ಕೆ ಕ್ಯಾಬಿನ್ ಅಲುಗಾಡಿತು.)

ಪು.ರಾ.: ಅದೇಕೆ ಜನ ಅಷ್ಟೊಂದು ಅವಸರದಲ್ಲಿದ್ದಾರೆ? ಅವರೆಲ್ಲಾ ಏನು ಹುಡುಕುತ್ತಿದ್ದಾರೆ?

ರೈ.ಸ್ವಿ: ಅದು ಟ್ರೈನಿನ ಡ್ರೈವರನಿಗೂ ತಿಳಿದಿಲ್ಲ. (ಆಗ ಮತ್ತೊಂದು ಎಕ್ಸ್‌ಪ್ರೆಸ್ ಟ್ರೈನು ವೇಗವಾಗಿ ವಿರುದ್ಧ ದಿಕ್ಕಿನಲ್ಲಿ ಹಾದುಹೋಯಿತು.)

ಪು.ರಾ.: ಹೋದವರು ಆಗಲೇ ವಾಪಸ್ಸು ಬಂದುಬಿಟ್ಟರೆ?

ರೈ.ಸ್ವಿ: ಇಲ್ಲ, ಅದು ಬೇರೆ ಟ್ರೈನು ಅದು ಈ ದಿಕ್ಕಿಗೆ ಹೋಗುತ್ತದೆ.

ಪು.ರಾ.: ಒಂದೇ ಕಡೆ ಇದ್ದರೆ ಜನರಿಗೆ ತೃಪ್ತಿಯಾಗುವುದಿಲ್ಲವೆ?

ರೈ.ಸ್ವಿ: ಅವರವರಿರುವ ಸ್ಥಾನದಲ್ಲಿ ಯಾರಿಗೂ ತೃಪ್ತಿ ಇರುವುದಿಲ್ಲ. (ಆಗ ಮತ್ತೊಂದು ಟ್ರೈನು, ಅದೇ ರೀತಿ ಶಬ್ದ ಮಾಡಿಕೊಂಡು ವೇಗವಾಗಿ ಹಾದುಹೋಯಿತು.)

ಪು.ರಾ.: ಮೊದಲು ಹೋದ ಟ್ರೈನನ್ನು ಹಿಡಿಯಲು ಇವರು ಹೋಗುತ್ತಿದ್ದಾರೆಯೆ?

ರೈ.ಸ್ವಿ: ಅವರು ಏನನ್ನೂ ಹಿಡಿಯಲು ಹೋಗುತ್ತಿಲ್ಲ. ಪ್ರಯಾಣಿಕರೆಲ್ಲ ನಿದ್ದೆ ಮಾಡಿರಬಹುದು, ಇಲ್ಲವೇ ಆಕಳಿಸುತ್ತಿರಬಹುದು. ಮಕ್ಕಳು ಮಾತ್ರ ಟ್ರೈನಿನ ಕಿಟಕಿಗಳಲ್ಲಿ ಇಣುಕಿ ನೋಡುತ್ತಿರುತ್ತಾರೆ.

ಪು.ರಾ.: ತಾವು ಹುಡುಕುತ್ತಿರುವುದು ಏನೆಂದು ಮಕ್ಕಳಿಗೆ ಮಾತ್ರ ಗೊತ್ತಿದೆಯೆನ್ನಿಸುತ್ತದೆ

ರೈ.ಸ್ವಿ: ಅವರೇ ಅದೃಷ್ಟವಂತರು.

ದೃಶ್ಯ ೧೩

ವ್ಯಾಪಾರಿ: (ಕೂಗುತ್ತಿರುತ್ತಾನೆ) ಮಾತ್ರೆ, ಮಾತ್ರೆ. ಬಾಯಾರಿಕೆ ಇಂಗಿಸೋ ಮಾತ್ರೆ!

ಪು.ರಾ.: ನಮಸ್ಕಾರ

ವ್ಯಾಪಾರಿ: ನಮಸ್ಕಾರ, ನಿಮಗೆಷ್ಟು ಕೊಡಲಿ?

ಪು.ರಾ.: ಏನದು? ನೀವೇನು ಮಾರುತ್ತಿದ್ದೀರಿ?

ವ್ಯಾಪಾರಿ: ಇವು ಮಾತ್ರೆಗಳು. ಬಾಯಾರಿಕೆ ನೀಗಿಸೋ ಮಾತ್ರೆಗಳು. ನೀವು ವಾರಕ್ಕೊಂದು ಮಾತ್ರೆ ನುಂಗಿದರೆ ಸಾಕು. ನಿಮಗೆ ಇಡೀ ವಾರ ಬಾಯಾರಿಕೆಯಾಗೋದಿಲ್ಲ.

ಪು.ರಾ.: ನೀವು ಅದನ್ನು ಏಕೆ ಮಾರುತ್ತಿದ್ದೀರಿ?

ವ್ಯಾಪಾರಿ: ಏಕೆಂದರೆ, ಇದರಿಂದ ಬಹಳಷ್ಟು ಸಮಯ ಉಳಿತಾಯ ಆಗುತ್ತದೆ.

ಪರಿಣತರು ಲೆಕ್ಕಾ ಹಾಕಿ ಆ ಮಾತ್ರೆಗಳಿಂದ ಪ್ರತೀ ವಾರ ಐವತ್ತಮೂರು ನಿಮಿಷಗಳಷ್ಟು ಸಮಯ ಉಳಿಸಬಹುದೆಂದು ಹೇಳಿದ್ದಾರೆ.

ಪು.ರಾ.: ವಾರಕ್ಕೆ ಐವತ್ತಮೂರು ನಿಮಿಷ ಸಮಯ ಉಳಿಸಿದರೆ, ಆ ಸಮಯದಲ್ಲಿ ನಾನೇನು ಮಾಡಬಹುದು?

ವ್ಯಾಪಾರಿ: ನಿನಗಿಷ್ಟ ಬಂದದ್ದು........

ಪು.ರಾ.: ನನಗಿಷ್ಟ ಬಂದ ಹಾಗೆ ಕಳೆಯಲು ನನಗೇನಾದರೂ ಐವತ್ತಮೂರು ನಿಮಿಷಗಳ ಸಮಯ ಸಿಕ್ಕರೆ ಸಿಹಿನೀರು ಬಾವಿಯ ಬಳಿ ಆರಾಮವಾಗಿ ನಡೆದು ಹೋಗುತ್ತೇನೆ!

(ಪುಟ್ಟ ರಾಜಕುಮಾರ ಅಲ್ಲಿಂದ ಮುನ್ನಡೆದ.)

ದೃಶ್ಯ ೧೪

(ಪೈಲಟ್ ಮತ್ತು ಪುಟ್ಟ ರಾಜಕುಮಾರ ವಿಮಾನದ ಬಳಿ ಕೂತಿರುತ್ತಾರೆ.)

ಪೈಲಟ್: ನಿನ್ನ ಕತೆ ಅದ್ಭುತವಾಗಿದೆ. ನಿನ್ನ ನೆನಪುಗಳು ಸೊಗಸಾಗಿವೆ. ಆದರೆ ಇಲ್ಲಿ ಇನ್ನೂ ನನ್ನ ವಿಮಾನದ ರಿಪೇರಿಯಾಗಿಲ್ಲ; ಇದ್ದ ಕುಡಿಯುವ ನೀರೂ ಖಾಲಿಯಾಗಿದೆ. ಎಲ್ಲಾದರೂ ನೀರು ಸಿಗುವ ಹಾಗಿದ್ದಿದ್ದರೆ ತುಂಬ ಚೆನ್ನಾಗಿರುತ್ತಿತ್ತು.

ಪು.ರಾ.: ನನ್ನ ಗೆಳೆಯನಾಗಿದ್ದ ನರಿ..........

ಪೈಲಟ್: (ಅವನ ಮಾತನ್ನು ತಡೆದು) ನನ್ನ ಪ್ರೀತಿಯ ಪುಟ್ಟ ಮನುಷ್ಯನೆ, ಇದು ನರಿಯ ವಿಷಯ ಮಾತನಾಡುವ ಸಮಯವಲ್ಲ!

ಪು.ರಾ.: ಈಗ ಏಕೆ ಮಾತನಾಡಬಾರದು?

ಪೈಲಟ್: ಏಕೆಂದರೆ, ಈಗ ನಾನು ಬಾಯಾರಿಕೆಯಿಂದ ಸಾಯುತ್ತಿದ್ದೇನೆ......

ಪು.ರಾ.: ಸಾಯುವ ಹಾಗಿದ್ದರೂ ಗೆಳೆಯನೊಬ್ಬನಿರುವುದು ಒಳ್ಳೆಯದಲ್ಲವೆ? ಉದಾಹರಣೆಗೆ ನನ್ನನ್ನು ನೋಡು, ನರಿಯೊಂದು ನನ್ನ ಗೆಳೆಯನಾಗಿರುವುದು ಎಷ್ಟೊಂದು ಸಂತೋಷದ ವಿಷಯ.......... (ಪೈಲಟ್ ಏನೂ ಹೇಳುವುದಿಲ್ಲ. ಪುಟ್ಟ ರಾಜಕುಮಾರನನ್ನು ನೋಡುತ್ತಲೇ- ಇರುತ್ತಾನೆ.)

ಪು.ರಾ.: ನನಗೂ ಬಾಯಾರಿಕೆಯಾಗುತ್ತಿದೆ. ನಡೆ, ಬಾವಿಯೊಂದನ್ನು ಹುಡುಕೋಣ.....

ಪೈಲಟ್: ಈ ಮರುಭೂಮಿಯಲ್ಲಿ ಬಾವಿ ಹುಡುಕುವುದು ಮೂರ್ಖತನ. (ಇಬ್ಬರೂ ರಂಗದ ಮೇಲೆ ಆ ಕಡೆಯಿಂದ ಈ ಕಡೆ ನಿಧಾನವಾಗಿ ನಡೆದಾಡುತ್ತಾರೆ.)

ಪು.ರಾ.: ಎಲ್ಲೋ ಅಡಗಿರುವ ಒಂದು ಹೂವಿನಿಂದಾಗಿ ತಾರೆಗಳು ಎಷ್ಟು ಸುಂದರವಾಗಿವೆಯಲ್ಲಾ!

ಪೈಲಟ್: ಹೌದು.

ಪು.ರಾ.: ಈ ಮರುಭೂಮಿ ಎಷ್ಟು ಸುಂದರವಾಗಿದೆ, ಏಕೆ ಗೊತ್ತೆ? ಏಕೆಂದರೆ, ಅದು ತನ್ನಲ್ಲಿ ಎಲ್ಲೋ ಒಂದು ಸಿಹಿ ನೀರ ಬಾವಿಯನ್ನು ಅಡಗಿಸಿಕೊಂಡಿದೆ..........

ಪೈಲಟ್: ಹೌದು, ಮನೆ, ನಕ್ಷತ್ರಗಳು, ಮರುಭೂಮಿ ಎಲ್ಲಾ ಸುಂದರವಾಗಿವೆ ಏಕೆಂದರೆ ಅವುಗಳಲ್ಲಿ ಎಲ್ಲೋ ಏನೋ ಅಡಗಿದೆ!

ಪು.ರಾ.: ನನ್ನ ನರಿ ಹೇಳಿದ ಮಾತನ್ನು ನೀನು ಒಪ್ಪಿಕೊಳ್ಳುತ್ತಿರುವುದು ನನಗೆ ಸಂತೋಷ ತಂದಿದೆ. ಅಗೋ, ಅಲ್ಲಿದೆ ಬಾವಿ.

ಪೈಲಟ್: ಆಶ್ಚರ್ಯ! ಮರುಭೂಮಿಯಲ್ಲಿ ಸೇದು ಬಾವಿ! (ಬಾವಿಯ ಬಳಿ ಸಿದ್ಧವಿರುವ ಹಗ್ಗ ಬಿಂದಿಗೆಯಿಂದ ಪೈಲಟ್ ನೀರು ಸೇದಿ ತಾನು ಕುಡಿಯುತ್ತಾನೆ.)

ಪು.ರಾ.: ನನಗೂ ಈ ನೀರು ಕುಡಿಯುವ ಬಯಕೆಯಾಗಿದೆ. ನನಗೂ ಸ್ವಲ್ಪ ಕೊಡು.......... (ಪೈಲಟ್ ಬಿಂದಿಗೆಯಿಂದ ಹುಯ್ದ ನೀರನ್ನು ಪುಟ್ಟ ರಾಜಕುಮಾರ ಕುಡಿಯುತ್ತಾನೆ.)

ಪು.ರಾ.: ನಿನ್ನ ಭೂಮಿಯ ಮೇಲಿನ ಮನುಷ್ಯರು ಒಂದೇ ತೋಟದಲ್ಲಿ ಐದು ಸಾವಿರ ಗುಲಾಬಿ ಬೆಳೆಸುತ್ತಾರೆ- ಆದರೂ ಅವರು ಹುಡುಕುತ್ತಿರುವುದು ಅವುಗಳಲ್ಲಿ ಸಿಗುವುದಿಲ್ಲ.

ಪೈಲಟ್: ಹೌದು, ಅವರಿಗೆ ಸಿಗುವುದಿಲ್ಲ.

ಪು.ರಾ.: ಆದರೆ ಅವರು ಹುಡುಕುತ್ತಿರುವುದು ಒಂದೇ ಒಂದು ಗುಲಾಬಿಯಲ್ಲಿ ಅಥವಾ ಒಂದು ಬೊಗಸೆ ನೀರಿನಲ್ಲಿ ಸಿಗಬಹುದು.

ಪೈಲಟ್: ಹೌದು.

ಪು.ರಾ.: ಆದರೆ ಕಣ್ಣು ಕುರುಡಾಗಿದೆ. ನೋಡಬೇಕಿರುವುದು ಹೃದಯದಿಂದ....... ನೀನು ನಿನ್ನ ಮಾತು ಉಳಿಸಿಕೊಳ್ಳಬೇಕು.

ಪೈಲಟ್: ಯಾವ ಮಾತು?

ಪು.ರಾ.: ನಿನಗೆ ತಿಳಿದಿದೆ-ಅದೇ ನನ್ನ ಕುರಿಗೆ ಬಾಯಿಕುಕ್ಕೆ ಬರೆದು ಕೊಡುವ ವಿಷಯ....... ನನ್ನ ಹೂವಿನ ಜವಾಬ್ದಾರಿ ನನ್ನ ಮೇಲಿದೆ....... (ಪೈಲಟ್ ಪೆನ್ಸಿಲ್‌ನಿಂದ ಕುರಿಗೆ ಬಾಯಿಕುಕ್ಕೆಯ ಚಿತ್ರ ಬಿಡಿಸಿ ಕೊಡುತ್ತಾನೆ.)

ಪೈಲಟ್: ನಿನ್ನ ಮನಸ್ಸಿನಲ್ಲಿ ನನ್ನೊಡನೆ ಇನ್ನೂ ಹೇಳಿಕೊಳ್ಳದಿರುವ ಬೇರೆ ಯಾವುದೋ ವಿಚಾರವಿದ್ದಂತಿದೆ. (ಪುಟ್ಟ ರಾಜಕುಮಾರ ಉತ್ತರಿಸುವುದಿಲ್ಲ. ಸ್ವಲ್ಪ ಹೊತ್ತಿನ ನಂತರ.)

ಪು.ರಾ.: ನಿನಗೆ ಗೊತ್ತೇನು? ನಾಳೆಗೆ ನಾನು ಭೂಮಿಗೆ ಬಂದು ಒಂದು ವರ್ಷವಾಗುತ್ತದೆ. ನಾನು ಇಲ್ಲೇ ಎಲ್ಲೋ ಹತ್ತಿರದಲ್ಲೇ ಇಳಿದಿದ್ದು.

ಪೈಲಟ್: ಹಾಗಾದರೆ ಒಂದು ವಾರದ ಕೆಳಗೆ ನನ್ನನ್ನು ಭೇಟಿಯಾದದ್ದು ಆಕಸ್ಮಿಕವಾಗಿಯೆ? ಯಾವುದೇ ಮನುಷ್ಯರಿರುವ ಬಿಡಾರದಿಂದ ಸಾವಿರ ಮೈಲು ದೂರವಿರುವ, ನೀನು ಮೊದಲಿಗೆ ಇಳಿದಿದ್ದ ಜಾಗಕ್ಕೆ ಈಗ ಹೋಗುತ್ತಿದ್ದೀಯಾ? ಅಲ್ಲಿಂದ ನಿನ್ನ ಗ್ರಹಕ್ಕೆ ವಾಪಸ್ಸು ಹೋಗುತ್ತಿದ್ದೀಯ? (ಪುಟ್ಟ ರಾಜಕುಮಾರ ಉತ್ತರಿಸುವುದಿಲ್ಲ.)

ಪೈಲಟ್: ಓಹ್! ನನಗೇಕೋ ಹೆದರಿಕೆಯಾಗುತ್ತಿದೆ.......

ಪು.ರಾ.: ಈಗ ಹೋಗು, ನಿನ್ನ ವಿಮಾನದ ರಿಪೇರಿ ಕೆಲಸ ಮುಗಿಸಿ ಬಾ. ನಾನು ಇಲ್ಲೇ ಕಾಯುತ್ತಿರುತ್ತೇನೆ. (ಪೈಲಟ್ ಹೊರಹೋದಂತೆ ಪುಟ್ಟ ರಾಜಕುಮಾರ ಎದ್ದು ಪಕ್ಕಕ್ಕೆ ಹೋಗುತ್ತಾನೆ. ಅಲ್ಲೇ ಇದ್ದ ಕಟ್ಟೆಯೊಂದರ ಮೇಲೆ ಕೂತು ಆ ಕಡೆಗೆ ಇರುವ ಹಾವಿನ ಜೊತೆಯಲ್ಲಿ ಮಾತನಾಡಲು ತೊಡಗುತ್ತಾನೆ.)

ಪು.ರಾ.: ಅದು ಇದೇ ಸ್ಥಳವಲ್ಲವೇ? ಮರಳಿನಲ್ಲಿ ನನ್ನ ಹೆಜ್ಜೆಗುರುತು ಎಲ್ಲಿ ಆರಂಭವಾಗುತ್ತದೆಂಬುದು ನಿನಗೆ ಕಾಣುತ್ತದೆ. ನೀನು ಬೇರೇನೂ ಮಾಡಬೇಕಾಗಿಲ್ಲ, ಅಲ್ಲಿ ನನಗಾಗಿ ಕಾಯುತ್ತಿರು. ನಾನು ಅಲ್ಲಿಗೆ ಬರುತ್ತೇನೆ. ಆಮೇಲೆ, ನಿನ್ನದು ಒಳ್ಳೆಯ ವಿಷ ತಾನೆ? ನಾನು ಹೆಚ್ಚು ನರಳಬೇಕಾಗುವುದಿಲ್ಲವಲ್ಲ! ಈಗ ಹೊರಟುಹೋಗು.

ಪೈಲಟ್ : (ಆ ಮಾತು ಕೇಳಿಸಿಕೊಂಡು ಓಡಿಬರುತ್ತಾನೆ) ಏನದು? ಹಾವು! ಏನದು ಹುಡುಗಾಟ? ಹಾವುಗಳ ಜೊತೆ ಏಕೆ ಮಾತನಾಡುತ್ತಿದ್ದೀಯ?

ಪು.ರಾ. : ನಿನ್ನ ವಿಮಾನದ ಇಂಜನಿಯಲ್ಲಿಯ ತೊಂದರೆ ಸರಿಹೋದುದಕ್ಕೆ ನನಗೆ ಸಂತೋಷವಾಗಿದೆ. ನೀನಿನ್ನು ಮನೆಗೆ ಹೋಗಬಹುದು.

ಪೈಲೆಟ್: ಅರೆ, ಅದು ನಿನಗೆ ಹೇಗೆ ಗೊತ್ತಾಯಿತು? ನನ್ನ ವಿಮಾನ ಸರಿಹೋಗಿದೆಯೆಂದು ನಿನಗೆ ತಿಳಿಸಲೆಂದೇ ನಾನು ಇಲ್ಲಿಗೆ ಬಂದೆ.

ಪು.ರಾ : (ದುಃಖದಿಂದ) ನಾನೂ ಈ ದಿನ ಮನೆಗೆ ಹಿಂದಿರುಗುತ್ತಿದ್ದೇನೆ....... ಆದರೆ ನನ್ನದು ಬಹಳ ದೂರದ ಪಯಣ...... ಕಷ್ಟದ ಹಾದಿ....ನನ್ನ ಬಳಿ ನನ್ನ ಕುರಿಯಿದೆ, ಕುರಿಯ ಪೆಟ್ಟಿಗೆ ಇದೆ ಹಾಗೂ ಕುರಿಯ ಬಾಯಿಕುಕ್ಕೆ ಇದೆ...... ಅದ್ಯಾಕೋ ಈ ಸಂಜೆ ಇನ್ನೂ ಹೆಚ್ಚಿಗೆ ಹೆದರಿಕೆಯಾಗುತ್ತಿದೆ......... ಈ ರಾತ್ರಿಗೆ ಒಂದು ವರ್ಷವಾಗುತ್ತದೆ... ನನ್ನ ನಕ್ಷತ್ರ ನೇರವಾಗಿ ತಲೆಯ ಮೇಲಿರುತ್ತದೆ. ನಾನು ಬಂದ ದಿನ ಇದ್ದ ಹಾಗೆ..........

ಪೈಲೆಟ್ : ಪುಟ್ಟ ಮನುಷ್ಯನೆ, ಎಲ್ಲವನ್ನೂ ಕೆಟ್ಟಕನಸೆಂದು ಮರೆತುಬಿಡು. ಈ ಹಾವಿನೊಂದಿಗಿನ ಮಾತುಕತೆ,ಭೇಟಿಯ ಸ್ಥಳ, ನಿನ್ನ ತಾರೆ......

ಪು.ರಾ.: ರಾತ್ರಿ ಅಗಸದಲ್ಲಿನ ಮಿನುಗುವ ತಾರೆಗಳನ್ನು ನೋಡು. ಅಲ್ಲಿ ನಾನಿರುವ ಸ್ಥಳ ಎಷ್ಟು ಸಣ್ಣದೆಂದರೆ, ನನ್ನ ನಕ್ಷತ್ರ ಯಾವುದೆಂದು ಇಲ್ಲಿಂದ ತೋರಿಸಲು ಸಾಧ್ಯವಿಲ್ಲ. ಕಾಣದಿರುವುದೇ ಒಂದು ರೀತಿಯಲ್ಲಿ ಒಳ್ಳೆಯದು. ಈಗ ನನ್ನನ್ನು ಬಿಟ್ಟುಬಿಡು. ನಾನು ನನ್ನ ಹಾದಿ ಹಿಡಿಯುತ್ತೇನೆ. ಹಾವು ನನಗಾಗಿ ಕಾಯುತ್ತಿರಬಹುದು.

ಪೈಲೆಟ್ : ಇಲ್ಲ, ನಾನು ನಿನ್ನನ್ನು ಬಿಡುವುದಿಲ್ಲ.

ಪು.ರಾ.: ನಾನು ಯಾತನೆಯಿಂದ ನರಳುತ್ತಿರುವಂತೆ ನಿನಗೆ ಕಾಣಬಹುದು. ನಾನು ಸಾಯುತ್ತಿರುವಂತೆ ಕಾಣಬಹುದು. ಅದು ಹಾಗೆಯೇ. ಅವೆಲ್ಲವನ್ನು ನೋಡಲು ನೀನು ಬರಬೇಡ......

ಪೈಲೆಟ್ : ಇಲ್ಲ, ನಾನು ನಿನ್ನನ್ನು ಬಿಡುವುದಿಲ್ಲ. (ಪುಟ್ಟ ರಾಜಕುಮಾರ ಎದ್ದು ಹೊರಡುತ್ತಾನೆ. ಪೈಲೆಟ್ ಅವನ ಕೈ ಹಿಡಿದು ಕೂರಿಸುತ್ತಾನೆ.)

ಪು.ರಾ.: ನನ್ನನ್ನು ಹೋಗಲು ಬಿಡು, ನಿನಗೆ ಗೊತ್ತಿಲ್ಲ– ನನ್ನ ಹೂ......... ಅವಳ ಜವಾಬ್ದಾರಿ ನನ್ನ ಮೇಲಿದೆ. ಅವಳೆಷ್ಟು ದುರ್ಬಲಳು! ಅಷ್ಟೇ ಮುಗ್ಧಳು! ಆಕೆಯಲ್ಲಿ ಕೆಲಸಕ್ಕೆ ಬಾರದ ನಾಲ್ಕೇ ನಾಲ್ಕು ಮುಳ್ಳುಗಳಿವೆ. ಅವರಿಂದಲೇ ಆಕೆ ಜಗತ್ತನ್ನು ಎದುರಿಸಬೇಕು....... (ಪುಟ್ಟ ರಾಜಕುಮಾರ ಎದ್ದು ನಿಧಾನವಾಗಿ ಹೊರಡುತ್ತಾನೆ. ಪೈಲೆಟ್ ಕೈ ಚಾಚುತ್ತಾನೆ ಆದರೆ ಆತನಿಗೆ ಮೇಲಕ್ಕೇಳಲು ಆಗುವುದಿಲ್ಲ. ನೋಡ ನೋಡುತ್ತಿರುವಂತೆಯೇ, ಪುಟ್ಟ ರಾಜಕುಮಾರನ ಕಾಲಬಳಿ ಹಾವು ಬಂದು ಸರಕ್ಕನೆ ಕಚ್ಚಿ ಮಾಯವಾಗುತ್ತದೆ. ಆತ ಸಾವಕಾಶವಾಗಿ ಮರ ಉರುಳಿ ಬೀಳುವಂತೆ ನೆಲದ ಮೇಲೆ ಬೀಳುತ್ತಾನೆ.)

ದೃಶ್ಯ ೧೪.

(ವೇದಿಕೆಯ ಮೇಲೆ ಬೆಳಕು ಮೂಡಿದಾಗ, ಪೈಲೆಟ್ ಈ ನಾಟಕದ ಆರಂಭದಲ್ಲಿ ಕೂತಂತೆ ಕೂತಿರುತ್ತಾನೆ.)

ಪೈಲೆಟ್ : ನಾನು ಈ ಕತೆ ಆರು ವರ್ಷಗಳಿಂದ ಯಾರಿಗೂ ಹೇಳಿರಲಿಲ್ಲ. ಪುಟ್ಟ ರಾಜಕುಮಾರ ತನ್ನ ಗ್ರಹಕ್ಕೆ ಹಿಂದಿರುಗಿದ್ದಾನೆಂದು ನನಗೆ ಗೊತ್ತು ಏಕೆಂದರೆ ನಸುಕಿನಲ್ಲಿ ಆ ಮರುಭೂಮಿಯಲ್ಲಿ ಬಿದ್ದ ಕಡೆ ಆತನ ದೇಹ ಇರಲಿಲ್ಲ. ನಾನು ಹೇಳಲು ಮರೆತಿದ್ದ ಒಂದು ವಿಷಯವಿದೆ......... ಪುಟ್ಟ ರಾಜಕುಮಾರನ ಕುರಿಗೆ ಬಾಯಿಕುಕ್ಕೆ ಬರೆದುಕೊಟ್ಟಾಗ ಅದನ್ನು ಕಟ್ಟಲು ಬಳಸುವಂತಹ ಚರ್ಮದ ಪಟ್ಟಿಯನ್ನು ನಾನು ಬರೆದಿರಲಿಲ್ಲ, ಅದನ್ನು ಬರೆಯಲು ಮರೆತಿದ್ದೆ. ಆತ ಅದನ್ನು ತನ್ನ ಕುರಿಗೆ ಕಟ್ಟಲು ಎಂದಿಗೂ ಸಾಧ್ಯವಾಗುವುದಿಲ್ಲ. ಹಾಗಾಗಿ, ಆಗಾಗ ಯೋಚಿಸುತ್ತಿರುತ್ತೇನೆ : ಆತನ ಗ್ರಹದಲ್ಲಿ ಏನಾಗಿರಬಹುದು? ಕುರಿ ಹೂವನ್ನು ತಿಂದು ಹಾಕಿರಬಹುದೆ........ ಆದರೆ, ನನ್ನನ್ನು ನಾನೇ ಸಂತೈಸಿಕೊಳ್ಳುತ್ತೇನೆ: 'ಖಂಡಿತಾ ಇಲ್ಲ! ಪುಟ್ಟ ರಾಜಕುಮಾರ ಹೂವನ್ನು ಪ್ರತಿ ರಾತ್ರಿ ಗಾಜಿನ ಬೋಗುಣಿಯಿಂದ ಮುಚ್ಚುತ್ತಾನೆ ಹಾಗೂ ತನ್ನ ಕುರಿಯನ್ನು ಎಚ್ಚರದಿಂದ ಕಾಯುತ್ತಾನೆ........' ಹಾಗೇ ನನ್ನನ್ನು ನಾನೇ ಸಮಾಧಾನ ಮಾಡಿಕೊಳ್ಳುವುದು ನನಗೆ ತೃಪ್ತಿ ಕೊಡುತ್ತದೆ. ಆದರೂ ಕೆಲವೊಮ್ಮೆ ನನ್ನನ್ನು ಆತಂಕ ಆವರಿಸುತ್ತದೆ: ಎಲ್ಲರಿಗೂ ಮರೆವು ಸಹಜ. ಯಾವುದಾದರೂ ಸಂಜೆ ಆತ ಹೂವಿನ ಮೇಲೆ

ಗಾಜಿನ ಬೋಗುಣಿಯನ್ನು ಮುಚ್ಚಲು ಮರೆತಿದ್ದರೆ.....? ಕುರಿ ಸದ್ದಿಲ್ಲದೆ ರಾತ್ರಿ ತನ್ನ ಪೆಟ್ಟಿಗೆಯಿಂದ ಹೊರಬಂದಿದ್ದರೆ.....? ಇಲ್ಲೇ ಒಂದು ಅದ್ಭುತ ರಹಸ್ಯವಿರುವುದು. ಪುಟ್ಟ ರಾಜಕುಮಾರನನ್ನು ಪ್ರೀತಿಸುವ ನಿಮಗೂ ಹಾಗೂ ನನಗೂ, ಎಲ್ಲೋ, ನಾವು ಅರಿಯದ ಸ್ಥಳದಲ್ಲಿ, ನಾವು ನೋಡೇ ಇರದ ಕುರಿಯೊಂದು ಗುಲಾಬಿಯನ್ನು ತಿಂದುಬಿಟ್ಟ ಬಳಿಕ...... ಈ ವಿಶ್ವದಲ್ಲಿ ಎಲ್ಲವೂ ಮೊದಲಿನಂತಿರುವುದಿಲ್ಲ. ಆಗಸವನ್ನು ನೋಡಿ ನಿಮ್ಮನ್ನು ನೀವೇ ಕೇಳಿಕೊಳ್ಳಿ: ಹೌದೇ ಅಥವಾ ಇಲ್ಲವೆ? ಕುರಿ ಹೂವನ್ನು ತಿಂದು ಹಾಕಿದೆಯೆ? ನೀವು ನೋಡುನೋಡುತ್ತಿರುವಂತೆ ಕಣ್ಣೆದುರಿನಲ್ಲಿಯೇ ಎಲ್ಲವೂ ಬದಲಾಗುತ್ತಾ ಹೋಗುತ್ತದೆ. ಆದರೆ ಇದು ಎಷ್ಟು ಮುಖ್ಯವಾದ ವಿಷಯವೆಂದು ದೊಡ್ಡವರ್‍ಯಾರಿಗೂ ಎಂದಿಗೂ ಅರ್ಥವಾಗುವುದಿಲ್ಲ!

(ಮುಗಿಯಿತು)

ಆಂತ್ವಾನ್ ದ ಸೇಂತ್ – ಎಕ್ಸೂಪರಿ

ಆಂತ್ವಾನ್ ದ ಸೇಂತ್ – ಎಕ್ಸೂಪರಿ (೨೯.೦೬.೧೯೦೦ – ೩೧.೭.೧೯೪೪) ಉತ್ತಮ ಬರಹಗಾರನಾಗಿರುವಂತೆ ಅತ್ಯುತ್ತಮ ಪೈಲಟ್ ಸಹ ಆಗಿದ್ದನು. ಫ್ರಾನ್ಸ್‌ನವನಾದ ಈತ ಸಾಹಸ ಮತ್ತು ಅಪಾಯವನ್ನು ಕವಿದೃಷ್ಟಿಯಲ್ಲಿ ಕಂಡವನು. ಆದರೆ ಆತ ಪೈಲೆಟ್ ಆಗಬೇಕೆಂದುಕೊಂಡಿದ್ದವನಲ್ಲ. ಮೊದಲ ವಿಶ್ವಯುದ್ಧದ ಸಮಯದಲ್ಲಿ ಯುವಕನಾಗಿದ್ದ ಈತನನ್ನು ಮಿಲಿಟರಿಗೆ ಸೇರುವಂತೆ ಆದೇಶಿಸಿ, ಅಲ್ಲಿ ವಾಯುಪಡೆಗೆ ಸೇವೆ ಸಲ್ಲಿಸುವಂತೆ ಹೇಳಲಾಯಿತು. ಅಲ್ಲಿ ವಿಮಾನ ಮತ್ತು ವಿಮಾನಚಾಲನೆಯಲ್ಲಿ ಮೂಡಿದ ಆಸಕ್ತಿ ಅದನ್ನೇ ಆತನ ಬದುಕಾಗುವಂತೆ ಮಾಡಿತು.

ವಿಮಾನಚಾಲನೆಯಲ್ಲಿ ಸೇಂಟ್–ಎಕ್ಸ್ ಒಬ್ಬ ಹೀರೋ ಆಗಿದ್ದ. ಆಫ್ರಿಕಾದ ಕಷ್ಟಕರ ಹಾಗೂ ಅಪಾಯಕರ ಪ್ರದೇಶಗಳಲ್ಲೂ ಆತನ ಸಾಹಸಮಯ ವಿಮಾನಚಾಲನೆ ಆತನ ಸಹ–ಪೈಲೆಟ್‌ಗಳೂ ಸಹ ಬೆರಗಾಗುವ ಹಾಗಿತ್ತು. ೧೯೨೯ರಲ್ಲಿ ಆತ ಟೌಲೋಸ್ ಕಂಪೇನಿ ಲೇಟೆಕೋರೆ ಸೇರಿಕೊಂಡು ವಾಯುವ್ಯ ಆಫ್ರಿಕ, ದಕ್ಷಿಣ ಅಟ್ಲಾಂಟಿಕ್ ಮತ್ತು ದಕ್ಷಿಣ ಅಮೆರಿಕಗಳಲ್ಲಿ ವಿಮಾನ ಅಂಚೆಸೇವೆಯಲ್ಲಿ ತೊಡಗಿದ. ಆಗ ಮೆಡಿರೇನಿಯನ್ ದಾಟದಲ್ಲಿ ಎಲ್ಲವೂ ಶತ್ರುಪ್ರದೇಶವೇ ದಾರಿಯಲ್ಲಿನ ಮೊರೊಕ್ಕೊ, ರಿಯೋ ಡೆ ಓರೋ ಮತ್ತು ಮಾರಿಷಿಯಾನಿಯಾಗಳಲ್ಲೆಲ್ಲ ಅಂಚೆಚೀಲ ತಲುಪಿಸುವ / ಸಂಗ್ರಹಿಸುವ ಕಾರ್ಯ ಅಪಾಯಕಾರಿಯಾಗಿತ್ತು. ಈತನ ಸಾಹಸಮನೋಭಾವವನ್ನು ಕಂಡು ಆತನನ್ನು ವಾಶಿಂಗ್ಟನ್‌ನಲ್ಲಿನ ಪತ್ರಿಗಳ ನಡುವಿನ ಕ್ಯಾಂಪ್ ಜ್ಯೂಬಿಗೆ

ವರ್ಗಾಯಿಸಲಾಯಿತು. ಇಲ್ಲಿ ಅತನ ಕೆಲಸವಿಷ್ಟೆ: ಮರಳುಗಾಡಿನಲ್ಲಿ ಬಿದ್ದಿರುವ ಪೈಲೆಟ್‌ಗಳನ್ನು ನೂರಾರು ಕಿಲೋಮೀಟರ್ ವಿಸ್ತಾರದ ಪ್ರದೇಶದಲ್ಲಿ ಹುಡುಕಿ ಎರಡು ದಿನಗಳಲ್ಲಿ ರಕ್ಷಿಸಿ ಕ್ಯಾಂಪಿಗೆ ತರಬೇಕು. ಇಲ್ಲದಿದ್ದಲ್ಲಿ ಆ ಪೈಲೆಟ್‌ಗಳು ಶತ್ರುಗಳಿಂದ ಬದುಕಿ ಉಳಿಯುತ್ತಿರಲಿಲ್ಲ.

ಈ ಕ್ಯಾಂಪಿನಲ್ಲಿನ ತನ್ನ ಬದುಕಿನ ಬಗ್ಗೆ ೧೯೨೭ರಲ್ಲಿ ಒಮ್ಮೆ ತನ್ನ ತಾಯಿಗೆ ಪತ್ರ ಬರೆದಿದ್ದ: 'ಅಷ್ಟಗಲದ ಈ ದುರ್ಗಮ ಪ್ರದೇಶದಲ್ಲಿ, ಸ್ಪ್ಯಾನಿಷ್ ಸಹಾರಾದ ನಡುವೆ ನನ್ನದು ಎಂತಹ ಸಂನ್ಯಾಸಿಯ ಬದುಕು! ಸಮುದ್ರ ತೀರದಲ್ಲಿನ ಕೋಟೆ, ಪಾಳು ಮನೆ - ಇಷ್ಟೇ ನನ್ನ ಸುತ್ತ ಮುತ್ತ - ಎಂಟು ದಿನಕ್ಕೊಮ್ಮೆ ಒಂದು ವಿಮಾನ ಬಂದುಹೋಗುತ್ತದೆ. ಆ ಎಂಟುದಿನಗಳ ನಡುವೆ, ಬರೀ ನಿಶ್ಯಬ್ದ.....'

ಆ ನಿಶ್ಯಬ್ದದ ದಿನಗಳಲ್ಲಿಯೇ ಎರಡು ಪೀಪಾಯಿಗಳ ಮೇಲಿಟ್ಟ ಹಲಗೆಯನ್ನೇ ಮೇಜನ್ನಾಗಿಸಿ ಸೇಂತ್-ಎಕ್ಸ್ ಪ್ರತಿ ರಾತ್ರಿ ಬರೆದದ್ದು 'ಸದರನ್ ಮೇಲ್' (೧೯೨೯) ಎಂಬ ಕಾದಂಬರಿ.

'ಪುಟ್ಟ ರಾಜಕುಮಾರ'

ಮರಳುಗಾಡಿನಲ್ಲಿನ ಈ ರೀತಿಯ ಮತ್ತೊಂದು ಅನುಭವವೇ 'ಪುಟ್ಟ ರಾಜಕುಮಾರ' ಬರೆಯಲು ಪ್ರೇರೇಪಿಸಿತು. ವಿಶಿಷ್ಟ ಕಥಾವಸ್ತು ಹೊಂದಿರುವ ಈ 'ಪುಟ್ಟ ರಾಜಕುಮಾರ' ಒಂದು ಪ್ರಖ್ಯಾತ ಪುಸ್ತಕ. ಫ್ರೆಂಚ್ ಭಾಷೆಯಲ್ಲಿ ('ಲ ಪತಿ ಪ್ರಿನ್ಸ್') ೧೯೪೩ರಲ್ಲಿ ಮೊದಲು ಪ್ರಕಟವಾದ ಈ ಪುಸ್ತಕ ಈಗಾಗಲೇ ವಿಶ್ವದ ೧೨೫ ಭಾಷೆಗಳಿಗೆ ಅನುವಾದಗೊಂಡಿದೆ. ಈಗಲೂ ಪ್ರತಿ ವರ್ಷ ೧೦ ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗುತ್ತಿವೆ. ಮಕ್ಕಳಿಗಾಗಿ ಬರೆದ ಈ ಪುಸ್ತಕಕ್ಕೆ ಚಿತ್ರಗಳು ಬೇಕಿದ್ದುದರಿಂದ, ತನ್ನ ಕಲ್ಪನೆಗಳ ಸರಳತೆಯನ್ನು ಚಿತ್ರಿಸುವವರ್‍ಯಾರೂ ಸಿಗದಿದ್ದುದರಿಂದ ಚಿತ್ರಗಳನ್ನು ತಾನೇ ಬಿಡಿಸಿದ. ಆದರೆ ಈ ಪುಸ್ತಕ ನಿಜವಾಗಿಯೂ ಮಕ್ಕಳ ಪುಸ್ತಕವೆ? ಅಥವಾ ದೊಡ್ಡವರಿಗಾಗಿ ಬರೆದ ಮಕ್ಕಳ ಕತೆಯೆ? ಸೇಂತ್ ಎಕ್ಸೂಪರಿಯೇ ಹೇಳಿದಂತೆ, 'ಎಲ್ಲಾ ದೊಡ್ಡವರು ಮೊದಲು ಮಕ್ಕಳಾಗಿದ್ದವರೆ. ಆದರೆ, ಅದನ್ನು ನೆನಪಿನಲ್ಲಿಟ್ಟುಕೊಳ್ಳುವವರು ಕೆಲವರು ಮಾತ್ರ'. ಸುಖ ಸಂತೋಷದ ಬದುಕಿನ ಅವಶ್ಯಕತೆಗಳು ತೀರಾ ಸರಳವಾದುವು ಹಾಗೂ ನಿಃಸ್ವಾರ್ಥತೆಯೇ ಸಿರಿಸಂಪತ್ತು ಎಂಬ ಸಂದೇಶವನ್ನು 'ಪುಟ್ಟ ರಾಜಕುಮಾರ' ಸಾರುತ್ತಾನೆ.

'ಪುಟ್ಟ ರಾಜಕುಮಾರ' ಪುಸ್ತಕವನ್ನು ನಾವು ಮಕ್ಕಳ ಅಥವಾ ದೊಡ್ಡವರ ಪುಸ್ತಕ - ಏನೆಂದೇ ಪರಿಗಣಿಸಿದರೂ ಈ ಕತೆಯಲ್ಲಿ ಕೇಂದ್ರಿತವಾಗಿರುವ ಸಾವು, ಕೆಡುಕು ಹಾಗೂ ಒಲುಮೆಯ ಪ್ರತಿಮೆಗಳು ಓದಿದ ನಂತರವೂ ನಮ್ಮನ್ನು ಕಾಡುತ್ತಿರುತ್ತವೆ. ಈ ಕತೆಯ

ಯಾವುದೇ ಪಾತ್ರವೂ ಸಂತೋಷವಾಗಿಲ್ಲ. ಸೇಂತ್ – ಎಕ್ಸ್, ಒಂಟಿತನ ಕಾಡಲು ನಾವು ಒಂಟಿಯಾಗಿರಬೇಕಿಲ್ಲ. ಇತರರ ನಡುವೆಯೂ ನಮ್ಮನ್ನು ಒಂಟಿತನ ಕಾಡುತ್ತದೆ ಎಂಬುದನ್ನು ಒತ್ತಿ ಹೇಳುತ್ತಾರೆ. ಮನುಷ್ಯಸಂಪರ್ಕ ಯಾವುದೇ ಮುನ್ನೆಚ್ಚರಿಕೆ ಇಲ್ಲದೆ ರೊಯ್ಯೆಂದು ಹಾದು ಹೋಗುವ 'ಎಕ್ಸ್‌ಪ್ರೆಸ್ ಟ್ರೈನಿನ' ಹಾಗೆ ಕ್ಷಣಿಕವಾದದ್ದು. ಕೊನೆಗೆ ಯಾರನ್ನಾದರೂ ಗೆಳೆಯರನ್ನಾಗಿ ಮಾಡಿಕೊಂಡ ನಂತರವೂ ಪುಟ್ಟ ರಾಜಕುಮಾರ ಹೊರಡಲೇಬೇಕಾಗುತ್ತದೆ. ನರಿಯಂತಹ ಪಾತ್ರ ಸಾಂಗತ್ಯಕ್ಕಾಗಿ ಹತಾಶತೆಯಿಂದ ತನ್ನನ್ನು ತಾನೇ 'ಪಳಗಿಸಿಕೊಳ್ಳಲು' ಮುಂದಾಗುತ್ತದೆ.

ಮಕ್ಕಳು ಯಶಸ್ವಿಯಾಗುವ ಹಲವಾರು ಸನ್ನಿವೇಶಗಳಲ್ಲಿ ದೊಡ್ಡವರು ಸೋಲುತ್ತಾರೆ. ಪ್ರಪಂಚದಲ್ಲಿನ ಎಲ್ಲ ಕೆಡುಕಿಗೂ ದೊಡ್ಡವರೇ ಕಾರಣ, ಅದು ನಕ್ಷತ್ರಗಳನ್ನು ಹೊಂದುವುದಾಗಬಹುದು, ಕುಡುಕರಾಗುವುದಾಗಬಹುದು, ಇಲಿಗಳಿಗೆ ಮರಣದಂಡನೆ ವಿಧಿಸುವುದಾಗಬಹುದು ಅಥವಾ 'ಕೆಡಕನ್ನುಂಟುಮಾಡುವ' ಆನೆ ಹುಣಿಸೆ ಮರಗಳನ್ನು ಬೆಳೆಯಲು ಬಿಡುವುದಾಗಬಹುದು. ದೊಡ್ಡವರು ತಮ್ಮ ಹೃದಯವಂತಿಕೆಯಿಂದ ಜಗತ್ತನ್ನು ನೋಡಲು ಸಾಧ್ಯವಾಗದೆ ಅಂಕಿ ಅಂಶಗಳ ಮೂಲಕ ನೋಡುವುದು ಅವರನ್ನು ಬಲವಂತದ ಒಂಟಿತನಕ್ಕೆ ದೂಡುತ್ತದೆ. ಪುಟ್ಟ ರಾಜಕುಮಾರ ತನ್ನ ಕ್ಷುದ್ರಗ್ರಹದಲ್ಲಿ ಒಬ್ಬನೇ ಇದ್ದರೂ ಅವನಿಗೆ ತಾನು ಒಬ್ಬಂಟಿ ಎನ್ನಿಸಿರುವುದೇ ಇಲ್ಲ ಆದರೆ, ಎಂದು ದೊಡ್ಡವರ ಜಗತ್ತಿಗೆ ಕಾಲಿಡುತ್ತಾನೆಯೋ ಅಂದೇ ಅವನಿಗೆ ಒಂಟಿತನ ಕಾಡತೊಡಗುತ್ತದೆ.

ಆನೆಹುಣಿಸೆ ಮರಗಳ ಮೂಲಕ ಸೇಂತ್ – ಎಕ್ಸೂಪರಿ ನಾತ್ಸಿಗಳ ದೌರ್ಜನ್ಯವನ್ನು ಸೂಚ್ಯವಾಗಿ ತೋರಿಸುತ್ತಾನೆಂದು ಕೆಲವು ವಿಮರ್ಶಕರು ಹೇಳುತ್ತಾರೆ. ತಮ್ಮ ಸೋಮಾರಿತನದಿಂದ ಆನೆಹುಣಿಸೆ ಮರಗಳನ್ನು ಬೆಳೆಯಲು ಬಿಡುವುದರಿಂದಾಗುವ ಅನಾಹುತಗಳಿಗೆ ಅವರೇ ಹೊಣೆಗಾರರಾಗಬೇಕೆನ್ನುವ ಪುಟ್ಟ ರಾಜಕುಮಾರ ತಾನೆಂದೂ ಸೋಮಾರಿಯಲ್ಲ. ಕೆಟ್ಟ ಬೀಜದ ಸಸಿಗಳನ್ನು ಕಿತ್ತೆಸೆದು ತನ್ನ ಪುಟ್ಟ ಗ್ರಹವನ್ನು ಸ್ವಚ್ಛವಾಗಿಟ್ಟುಕೊಂಡಿರುತ್ತಾನೆ.

ಭರವಸೆ. ಸಾಂತ್ವನ ಹಾಗೂ ಪ್ರೀತಿಯ ಸಂದೇಶವನ್ನು ಸಾರಲು ಯತ್ನಿಸುವ ಸೇಂತ್–ಎಕ್ಸೂಪರಿಯ ಪ್ರಯತ್ನವೇ ಈ ಪುಸ್ತಕದ ಜೀವಾಳ. ಗುಲಾಬಿಯ ಬಗೆಗಿನ ರಾಜಕುಮಾರನ ಅನನ್ಯ ಪ್ರೇಮ ಆತನನ್ನು ಬದುಕಿನ ಅದೃಶ್ಯ ಸೌಂದರ್ಯವನ್ನು ಕಾಣುವಂತೆ ಮಾಡುತ್ತದೆ. ತನ್ನ ಪ್ರೀತಿಯಿಂದ ತನ್ನ ಅಸ್ತಿತ್ವದ ನಿರಾಕಾರ ಸತ್ಯವನ್ನು ಕಾಣುತ್ತಾನೆ. ಆ ಸತ್ಯವನ್ನು ಆತ ಕಣ್ಣಿಂದ ಕಾಣುವುದಿಲ್ಲ. ಬದಲಿಗೆ ಹೃದಯದಿಂದ ಕಾಣುತ್ತಾನೆ. ಕತೆಯಲ್ಲಿನ ಪೈಲಟ್ ಹಾಗೂ ಪುಟ್ಟರಾಜಕುಮಾರ [illegible] ಸ್ವಾತಂತ್ರ್ಯವನ್ನು

ಪ್ರತಿನಿಧಿಸುತ್ತಾರೆ-ಕಾಗದದ ಮೇಲಿನ ಚಿತ್ರಗಳು ಜೀವ ಪಡೆಯುತ್ತವೆ ಹಾಗೂ ಏನೂ ಇಲ್ಲದ ಮರುಭೂಮಿಯಲ್ಲಿ ನೀರಿನ ಬಾವಿ ಕಾಣಿಸಿಕೊಳ್ಳುತ್ತದೆ. ಅವರ ಪ್ರಯಾಣದಲ್ಲಿ ಸತ್ಯದ ಮುಗ್ಧತೆ, ಜ್ಞಾನೋದಯದ ಬೆಳಕು ಕಾಣತೊಡಗುತ್ತದೆ. ಆತ ಮಕ್ಕಳ ಹಾಗೂ ದೊಡ್ಡವರ ಜಗತ್ತುಗಳು ಬೇರೆ ಬೇರೆ ಎಂದು ಗುರುತಿಸುತ್ತಾನೆ. ಮಕ್ಕಳ ಕಲ್ಪನಾಲೋಕವನ್ನು ಭೇದಿಸಲು ಹಾಗೂ ಅದನ್ನು ಅರ್ಥೈಸಿಕೊಳ್ಳಲು ದೊಡ್ಡವರು ಪ್ರಯತ್ನಿಸುವುದೇ ಇಲ್ಲ. ದೊಡ್ಡವರ ಕೆಲಸಕಾರ್ಯಗಳೆಲ್ಲಾ ಅವರಿಗೆ 'ಬಹಳ ಮುಖ್ಯವಾದ ವಿಚಾರಗಳು' ಅವರು ಎಲ್ಲವನ್ನೂ ಅಂಕಿ ಸಂಖ್ಯೆಗಳ ಮೂಲಕ ಹಾಗೂ ಹಣದ ಮೌಲ್ಯದ ಮೂಲಕವೇ ನೋಡಲು ಪ್ರಯತ್ನಿಸುತ್ತಾರೆ. ಅದ್ದರಿಂದಲೇ ಸೇಂತ್-ಎಕ್ಸೂಪರಿ, ಎಲ್ಲಾ ದೊಡ್ಡವರು ಮೊದಲು ಮಕ್ಕಳಾಗಿದ್ದವರೆ. ಅವರೆ ಅದನ್ನು ನೆನಪಿನಲ್ಲಿಟ್ಟುಕೊಳ್ಳುವವರು ಕೆಲವರು ಮಾತ್ರ ಎಂದಿದ್ದಾನೆ.

ಆತನ ಇತರ ಕಾದಂಬರಿಗಳೆಂದರೆ, 'ನೈಟ್ ಫ್ಲೈಟ್' (೧೯೩೧), 'ವಿಂಡ್, ಸ್ಯಾಂಡ್ ಅಂಡ್ ಸ್ಟಾರ್ಸ್' (೧೯೩೯), 'ಫ್ಲೈಟ್ ಟು ಅರ್ರಾಸ್' (೧೯೪೨), 'ಲೆಟರ್ ಟು ಎ ಹೋಸ್ಟೇಜ್' (೧೯೪೪) ಹಾಗೂ ಮರಣಾನಂತರ ಪ್ರಕಟವಾದ 'ದ ವಿಸ್‌ಡಮ್ ಆಫ್ ದ ಸ್ಯಾಂಡ್ಸ್' (೧೯೪೮)

೧೯೪೦ರಲ್ಲಿ ಫ್ರಾನ್ಸಿನ ಪತನದ ನಂತರ ಉತ್ತರ ಅಮೆರಿಕಕ್ಕೆ ತಪ್ಪಿಸಿಕೊಂಡು ಹೋದ ಸೇಂತ್-ಎಕ್ಸ್ ೧೯೪೩ರಲ್ಲಿ ಉತ್ತರ ಆಫ್ರಿಕಾದ ವಾಯುಪಡೆಗೆ ಸೇರಿಕೊಂಡ. 'ಪುಟ್ಟ ರಾಜಕುಮಾರ' ಪ್ರಕಟಗೊಂಡ ಮರುವರ್ಷ, ಅಂದರೆ ೧೯೪೪ ಸೇಂತ್ ಎಕ್ಸ್ಯೂಪರಿ ಇದ್ದ ವಿಮಾನ ಕಣ್ಮರೆಯಾಯಿತು. ಎಕ್ಸೂಪರಿ ಸತ್ತ ಅರವತ್ತು ವರ್ಷಗಳ ನಂತರ ೨೦೦೪ರಲ್ಲಿ ಮೆಡಿಟರೇನಿಯನ್ ಸಮುದ್ರದ ಮಾರ್ಸೆಲ್ ತೀರದ ಬಳಿ ಆತನ ವಿಮಾನದ ಅವಶೇಷಗಳ ಸಿಕ್ಕಿವೆ. ೧೯೯೮ರಲ್ಲೇ ಮೀನುಗಾರರಿಗೆ ಸೇಂತ್-ಎಕ್ಸೂಪರಿಯ ಹೆಂಡತಿಯ ಹೆಸರು ಕೆತ್ತಿದ್ದ ಕಡಗವೊಂದು ಸಿಕ್ಕಿತ್ತು. ಆತನ ವಿಮಾನದ ಮೇಲೆ ಯಾವುದೇ ಬಂದೂಕದಿಂದ ಗುಂಡು ಹೊಡೆದ ಗುರುತುಗಳಿರಲಿಲ್ಲ. ಸೇಂತ್ ದಾಳಿಗೆ ಬಲಿಯಾದನೋ ಅಥವಾ ಅಪಘಾತಕ್ಕೀಡಾದನೋ ತಿಳಿದಿಲ್ಲ.



ಡಾ. ವೈರಮುತ್ತು ಅವರ ಕವನಗಳು

೧. ಕ್ಷಮೆ ಪರಿಹಾರವಲ್ಲ

ತಮಿಳು ಮೂಲ : ಡಾ. ವೈರಮುತ್ತು
ಕನ್ನಡಕ್ಕೆ : ಡಾ. ಮಲರ್ ವಿಳಿ ಕೆ

ರೋಸಿ.......
ಅವಳು.........
ಮಾರನೇ ಹಗಲ ಒಲೆಯುರಿಸಲು
ಪ್ರತಿ ರಾತ್ರಿಯೂ
ದೀಪವಾರಿಸುವಾಕೆ

ದಿನಾಂಕ ಮುಗಿದ
ಹಾಲಿನ ಕಾರ್ಡಿನಂತೆ
ಹಣವಾದ ಅವಳ ಮೈ
ವ್ರಣವಾದ ನಂತರ ....

ಅವಳ ಉಡುಪು ಮಾತ್ರ
ಅವಳನ್ನು
ಸ್ಪರ್ಶಿಸಲು ಸಮ್ಮತಿಸಿದ
ಒಂದು ಹೊತ್ತಲಿ

ಅವಳ ಬಾಳ
ಅಸ್ತಮಾನದಿ
ಅವಳ ಕಣ್ಣೀರೊಂದಿಗೆ
ಕರ್ತನ ಜ್ಞಾಪಕ
ಜಿನುಗಿತು

"ಎಸಗಿದ ಪಾಪಕ್ಕೆ
ನಾನೂ
ಶಿಲುಬೆಯ ಹೊರಬಹುದೇ?"

ಪಾಪ
ತನ್ನ
ಸ್ವಂತ ಬೆನ್ನ ಮೂಳೆಯನ್ನೇ
ತೊರಲಾರದವಳು
ಶಿಲುಬೆಯನ್ನೂ
ಸೇರಿಸಿ ಹೇಗೆ ತೊರಬಲ್ಲಳು?

ಮಲಗುವ ಸಂತೆಯಲಿ......
ರಾತ್ರಿ
ಹಗಲೂ
ನಲುಗಿ ನಲುಗಿ
[illegible] ಮೇಲೆ
[illegible] ನಂತರ......

ಆ [illegible]
ಕೊನೆಗೆ ಬಂತು
ಕರ್ತನ ಖಜಾನೆಗೆ
ಕರ್ತನು
ಅವಳಿಗಾಗಿ
ಮತ್ತೊಮ್ಮೆ ಪುನರುಜ್ಜೀವಿಸಿದ

"ಕರ್ತನೇ
ಈ ಬಾಚಿಗೆ
ಬಾಳು
ಪ್ರಾಪ್ತವೆಂದು ತಿಳಿದಿದ್ದರೆ

ನನ್ನ ತಾಯ
ಗರ್ಭದಲ್ಲೇ ನಾ
ಆತ್ಮಹತ್ಯೆಗೈದು ಕೊಳ್ಳುತ್ತಿದ್ದೆ
ನನ್ನ ರಕ್ಷಕನಿವಿರಾ?"

"ಅಳಬೇಡ ಮಗಳೆ
ನಿನ್ನ
ಕಣ್ಣೀರ ಒರಸಲು ಬಂದರೆ
ನನ್ನೀ
ಬೆರಳೂ ಅತ್ತು ಬಿಡುತ್ತೆ

"ನಿನ್ನೀ ಸ್ಥಿತಿಗೆ ಕಾರಣೀಭೂತರು ಯಾರಮ್ಮಾ?"
ಕಣ್ಣೀರ ಕಾಸುಗಳ
ಕರವಸ್ತ್ರದಿ
ಶೇಖರಿಸುತ್ತಲೇ
ತುಸು ತಲೆಯೆತ್ತಿದಳು.

"ಮೂವರು ಕರ್ತನೇ
ಮೂವರು"

"ಯಾರ್‍ಯಾರು ಮಗಳೇ?
ಯಾರ್‍ಯಾರು?"

"ಮರಣ ಯಾತ್ರೆಗೆ
ತಾಲೀಮು ನಡೆಸುತ್ತಿದ್ದ
ನನ್ನ ಮಾತೆಯೂ"

"ಬಾಳಿನ ಯಾತ್ರೆಗೆ
ತಾಲೀಮು ನಡೆಸುತ್ತಿದ್ದ
ನನ್ನ ಮಗನೂ.."

"ಮೂರನೆಯವರು
ಯಾರು ಮಗಳೇ?"

ಅವಳ
ಮುಂಜಾನೆಯ ಹಾಸುಗೆಯಂತೆ
ಅವಳ ಹಣೆಯಲಿ
ಸಾವಿರ ಸುಕ್ಕುಗಳು

ಅವಳ ತೋರ್‍ಬೆರಳ ಕೋವಿ
ಕರ್ತನನ್ನು ಗುರಿಯಿಟ್ಟಿತು

"ನೀನೇ ಕರ್ತ
ನೀನೇ
ಪಾಪಿಗಳ ರಕ್ಷಿಸುವುದಾಗಿ
ಪಾಪಕ್ಕೆ ನೀನೇ ಅಲ್ಲವೆ
ಅನುಮೋದನೆ ನೀಡಿದೆ"
ಕರ್ತನು

ಮತ್ತೊಮ್ಮೆ
ಪುನರುಜ್ಜೀವಿಸದಂತೆ ಕಾಲವಾದನು
'ಮತ'ವೆಂಬುದು
ರೋಸಿಯರಿಗೆ
ಕ್ಷಮೆಯನ್ನು ತಾನೇ ಒದಗಿಸುತ್ತಿದೆ
ಹೊಸ ಬಾಳನ್ನು....?

೨. ಯಾರಿಗೋ ಅರಳಿದ ಹೂಗಳು

(ವಿಶ್ವದಾದ್ಯಂತ ಪ್ರಸಿದ್ಧವಾಗಿರುವ ಒಂದು ಪುಸ್ತಕ ("Chicken soup for the soul") ಅತಿ ಸಣ್ಣ ಕಥೆಗಳ ಮೂಲಕ ಮನುಷ್ಯ ಮನಸ್ಸುಗಳನ್ನು ಬೆಳಗಿಸುವಂತಹದ್ದು. ಅದರಲ್ಲಿ ಒಂದು ಕಥೆಯನ್ನು ಓದಿದೆ. ಅದರಲ್ಲಿ ಕೊನೆಯ ಸಾಲು ಓದಿದಾಕ್ಷಣ ಎಡಗೈಯಿಂದ ಹೃದಯವನ್ನು ಒತ್ತಿ ಹಿಡಿದೆ. ಹೃದಯಕ್ಕೆ ಸೋಂಕಾಯಿತು ಆ ನೋವನ್ನೇ ನನ್ನ ಲೇಖನಿಯ ಮೂಲಕ ಹರಿಯಬಿಟ್ಟಿರುವೆ. ಒಂದು ಕಥೆ ಕವಿತೆಯಾಗಿ ಮೂಡಿಬಂದಿದೆ)

ತುಂಬು ಗರ್ಭಿಣಿಯಂದದಿ
ನಿಂತು ನಿಂತು ಚಲಿಸುವ ಬಸ್

ಒಳಗೆ
ಬಾಳಿನ ಹೆಜ್ಜಳವಾಗಿ ಒಬ್ಬ ಮುದುಕ
ಸಮೀಪದಲ್ಲೇ
ತಳಿರಿನ ತಂಗಿಯಂತೆ ಒಬ್ಬ ಬಾಲಕಿ
ಹೂವಿನ ಗುಚ್ಛದೆತ್ತರದಲಿ
ಒಂದು ಹೂ ಅವಳು
ಪ್ರತಿಯೊಂದು ಸೋಜಿಗ
ಅವಳಿಗೆ
ಅನ್ಯ ಗ್ರಹದಿಂದ ಭೂ ಗ್ರಹಕ್ಕೆ ಹೆಜ್ಜೆಯಿಟ್ಟ
ಮೊದಲಿಗಳಂದದಿ
ಚಂಚಲ ನೇತ್ರೆಯಾಗಿ
ಮುದುಕನ ಅಳೆದಳು

ನರೆ
ಹಾಲ್ಗಡಲ ನೊರೆ
ದೇಹ

ನನೆದ ಅರಳೆ
ಕಣ್ಣ ಕೆಳಗಿನ ಸುಕ್ಕು
ವಯೋ ಸೂಚಕ ಚಿಹ್ನೆ
ದಾಡಿ ಮೀಸೆಯೊಳಗೆ ಮುಳುಗಿ
ತಲೆ ಮಾತ್ರ ತೋರುವ ಮುಗುಳ್ನಗೆ

ಚಲಿಸಿದರೂ ಸದ್ದಿಲ್ಲದ
ನೆರಳಿನಂತೆ
ಶಬ್ದರಹಿತ ಗುನುಗುನಿಸುವ ತುಟಿಗಳು

ಮುದುಕನ ಮಡಿಲಲಿ
ಹೂ ಬುಟ್ಟಿಯೊಂದು
ಅದರಲಿ
ಪ್ರಭಾತದಿ ಮಿಂದು
ಇನ್ನೂ ದೇಹವನೊರಸದ ಸುಮಗಳು

ಮುದುಕ
ಬಾಲಕಿಯೆಡೆಗೆ ಕಣ್ಣ ಹಾಯಿಸಿದ

ಅವಳು
ಮೇಘವ ಕಿಡ್ಡಿ ಕೀಡಿದ
ಕಡುಬಿಸಿನಂತೆ

ಪುಟ್ಟಲಿಂಗ ಧರಿಸಿದ
ಅಜ್ಜರಿ

ನಿಷ್ಕಳಂಕ ನಯನಗಳು
ಹೊಗೆರಹಿತ ದೀಪಗಳು
ಅವಳು ಮೌನವಾಗಿದ್ದಳು.

ಸಂಕೋಚ ಅಂಜಿಕೆಯ
ನಡುವಿನೊಂದು ಭಾವನೆ

ಪರಸ್ಪರ ವಿಭಿನ್ನ ಮುಗುಳ್ನಗೆಯೊಂದಿಗೆ
ವಿಭಿನ್ನ ದಿಕ್ಕಿಗೆ ತಿರುಗಿದರು

ಬಾಲಕಿಗೆ ಕಾಣದಂತೆ

ನೋಡಿತು
ಮುದುಕನ ಓರೆ ಕಣ್ಣನೋಟ

ಬಾಲಕಿ ತನ್ನ ನೇತ್ರಗಳ
ಹೂ ಬುಟ್ಟಿಯೊಳಗೆ ಹಾಯಿಸಿದಳು

ಕಂದನ ನಿದ್ರೆಗೆ ಭಂಗ ಬಾರದಿ
ಮುತ್ತನ್ನಿಡುವ ಮಾತೆಯಂತೆ
ಸೋಕಿಯೂ ಸೋಕದಂತೆ
ಹೂಗಳ ನೇವರಿಸಿದಳು

ಹೂವ ಕಂಪನು ಮೂಸಲು ಬಾಗಿ
ಮುದುಕನ ಚಲನೆಯಲಿ ಹಿಂಜರಿದಳು
ಬಾಲಕಿಯ ಬಯಕೆಯರಿತ ಮುದುಕ
ಪೂರ್ಣ ಮುಖವ ಹೊರಳಿಸಿ
ಹೂವುಗಳಿಗೆ ಎಡೆಮಾಡಿ ಕೊಟ್ಟ

ಈಗ
ಹೂಗಳ ತಲೆ ನೇವರಿಸಿತು ಹೂವ್ರ
ಸ್ಪರ್ಶ, ನೇವರಿಸುವಿಕೆ, ಆಘ್ರಾಣಿಸುವಿಕೆ, ರಸಿಕತೆ,
ಸೋಜಿಗ, ಮುಟ್ಟುವಿಕೆ ಪ್ರೀತಿಸುವಿಕೆ ಹೂವಿನೊಂದಿಗೆ
ಎಷ್ಟೊಂದು ಕಸುಬುಗಳು

ಎದ್ದೆದ್ದು ಬಿತ್ತು
ಅಲರ್ಗಳಲಿ ಸಿಲುಕಿದ ಬಾಲಕಿಯ ಮನ

ಮನುಜ ರಚಿಸುವ ಕವಿತೆಗಳೋ
ವಿಭಿನ್ನ ಭಾಷೆಗಳಲಿ

ಪ್ರಕೃತಿಯ ಕವಿತೆಗೆ
ಒಂದೇ ಭಾಷೆ
ಸುಮವೆಂಬ ಭಾಷೆ

ಬಾಲಕಿಯ ಚರ್ಯೆಯ ಆಸ್ವಾದಿಸಿದ ಮುದುಕ
ಥಟ್ಟನೆ ತಿರುಗಲು
ಅವಳ ಮುಖದಿ ಜಿನುಗಿತು

ಆಸೆ ತುಂಬಿದ ಮುಗ್ಧತೆ
ಧೂಳಿಡಿದ
ಸಮಾಧಿ ಹೊಸ್ತಿಲಲಿ
ಬಸ್ ನಿಂತಿತು
ಮುದುಕ
ಮಂಡಿಯನೂರಿ ತಾನೆದ್ದ

ಹಂಬಲದಿ ನೋಡಿದ ಬಾಲಕಿಯ ಕೈಗೆ
ಹೂ ಬುಟ್ಟಿಯ ಬಲವಂತವಾಗಿಟ್ಟ

ವಿಸ್ಮಿತೆಯಾದಳು ಬಾಲಕಿ
ಮುದುಕ ನಕ್ಕನು

"ನೀನೇ ತೆಗೆದುಕೊ ಬಾಲಕಿ
ನನ್ನ ಪತ್ನಿಗಾಗಿ ಕೊಂಡದ್ದು

ಕೊಟ್ಟದ್ದು ನಿನಗೆಂದರೆ
ಕೋಪಿಸಿಕೊಳ್ಳಲಾರಳು ಅವಳು"

ತಡವರಿಸುತ್ತಲಿಳಿದು
ನಡೆದನು ಮುದುಕ
ಪತ್ನಿ ನಿದ್ರಿಸುವ ಸಮಾಧಿಯನ್ನರಸಿ

ಬಿದಿಗೆಯ ಚಂದ್ರ (ಸಣ್ಣ ಕಥೆ)

ಮೂಲ ಲೇಖಕ : ಬಾದ್ರೋ ಜೆ (ಚೀನೀ ಭಾಷೆ)
ಅನುವಾದ : ಡಾ. ಪ್ರಭಾಕರ ನಿಂಬರಗಿ

ಅದೋ. ಮತ್ತೊಮ್ಮೆ ಬಿದಿಗೆಯ ಚಂದ್ರ ಕಾಣುತ್ತಿದ್ದಾನೆ. ಅದೇ ಬೆಳ್ಳಿಯ ಬಂಗಾರದ ಬಣ್ಣದ. ತಿಳಿ [illegible] ಹಸುರುಗೊಂಡಿದ ಆಕಾರ. ಅದೇ ನೀಲಿ ಬಾನಿನಲ್ಲಿ ನೇತಾಡುತ್ತಿರುವ ಅದೇ ಬಾಗಿದ ಅದೇ ಬಣ್ಣದ [illegible] ಆಕಾರಗಳನ್ನು ತೋರಿಸುವ ನಾನು ಮಂದಿರದಲ್ಲಿಯೋ [illegible] ಬಯಸುವ ಮೂಲದ ಪಾಠಗಳನ್ನು ನೆನೆಯ ಸೂಕ್ಷ್ಮಗಳ ಒತ್ತಾಯದಿಂದ ತೆರೆಯುವಂತೆ ಈ ಚಂದ್ರ ಹೃದಯದಾಳದಲ್ಲಿ ಹುದುಗಿರುವ ಎಷ್ಟೊಂದು ನೆನಪುಗಳನ್ನು, ಎಷ್ಟೊಂದು ಭಾವನೆಗಳನ್ನು ಕೆದಕುತ್ತಾನಲ್ಲ!

೧

ಬಿದಿಗೆಯ ಚಂದ್ರನನ್ನು ಮೊದಲ ಬಾರಿಗೆ ನೋಡಿದ ನೆನಪು ಚಿಕ್ಕಂದಿನಿಂದಲೇ ನನಗಿರುವನ್ನು [illegible] ತಿಳಿದ. ಅದನ್ನು ನಿನ್ನ ತುಂಬಿದ ಕಣ್ಣುಗಳಿಂದ ನೋಡಿದ್ದು [illegible] ಬಿಡುವ ಸಾಗರ ನನ್ನಮ್ಮನೇ ಕೈಯಿಂದ ತೋರಿದ ಕೆಂಪು ಬಣ್ಣದ ಪಾಕಗಳು ಮತ್ತು ನೀಲಿ [illegible]

ಕ್ಯಾಪನ್ನು ಹಾಕಿಕೊಳ್ಳುವ ಏಳು ವರ್ಷದ ಹುಡುಗಿ. ಕ್ಯಾಪಿನ ಮೇಲೆ ಸಣ್ಣ ಹೂಗಳ ಚಿತ್ತಾರಗಳಿದ್ದವು. ನನಗೀಗಲೂ ನೆನಪಿದೆ, ಔಷಧಿಯ ವಾಸನೆ, ಆಡರಿದ ಹೊಗೆ, ಅಮ್ಮನ ಕಣ್ಣೀರು ಮತ್ತು ಮನೆಯಲ್ಲೆಲ್ಲ ತುಂಬಿರುವ ಜಡ್ಡಿನಿಂದ ಮಲಗಿದ ಅಪ್ಪನ ದೇಹದ ವಾಸನೆ, ಇವೆಲ್ಲವೂ ಸ್ಪಷ್ಟವಾಗಿ ನೆನಪಿವೆ. ನಾನು ನಮ್ಮ ಮನೆಯೆಂಬ ಚಿಕ್ಕ ಕೋಣೆಯ ಬಾಗಿಲಿಗೆ ಆನಿಸಿ ಮೆಟ್ಟಿಲುಗಳ ಮೇಲೆ ನಿಂತು ಆಕಾಶದತ್ತ ದೃಷ್ಟಿ ನೆಟ್ಟಿದ್ದು ನೆನಪಿದೆ. ಯಾರಿಗೂ ನನ್ನತ್ತ ಲಕ್ಷ್ಯವಿದ್ದಿಲ್ಲ. ಯಾರೂ ನನಗೆ ತಿಂಡಿಯನ್ನೂ ಕೊಟ್ಟಿರಲಿಲ್ಲ. ತಿನ್ನಲಿಕ್ಕೆ ಏನಾದರೂ ಮನೆಯಲ್ಲಿದ್ದರಲ್ಲವೇ ಕೊಡುವುದು? ಎಲ್ಲರ ಮಾತುಗಳಿಂದ ಮನೆಯಲ್ಲೇನೋ ದುರಂತ ಘಟಿಸಿದೆಯೆಂಬುದರ ಅರಿವಾಗುತ್ತಿತ್ತು, ಆದರೂ ನನಗೆ ನನ್ನ ಚಿಂತೆಯೇ ಹೆಚ್ಚಾಗಿತ್ತು. ಏಕೆಂದರೆ ಸುತ್ತಲೆಲ್ಲ ತುಂಬ ಚಳಿ ಇತ್ತು ಮತ್ತು ನನಗೆ ವಿಪರೀತ ಹಸಿವಾಗುತ್ತಿತ್ತು, ಆದರೆ ಯಾರಿಗೂ ನನ್ನತ್ತ ಗಮನವಿರಲಿಲ್ಲ.

ಅಮ್ಮ ದುಃಖ ಸೂಚಿಸುವ ಬಿಳಿಯ ಬಟ್ಟೆಗಳನ್ನು ತೊಟ್ಟುಕೊಂಡಳು. ನನ್ನ ಕೆಂಪು ಜಾಕೀಟಿನ ಮೇಲೂ ಒಂದು ಬಿಳಿಯ ಅರಿವೆಯನ್ನು ಹೊದಿಸಿದಳು. ನಾನದರಿಂದ ನೇತಾಡುತ್ತಿದ್ದ ದಾರದ ಎಳೆಗಳನ್ನು ಹರಿಯುತ್ತ ನಿಂತಿದ್ದೆ. ನಾನು ಬಿಕ್ಕಿ ಬಿಕ್ಕಿ ಅಳುತ್ತಿದ್ದರೂ ಅಮ್ಮನ ಅಳುವಿನಲ್ಲಿ ನಾನು ಅಳುವುದು ಯಾರಿಗೂ ಕೇಳಿಸುತ್ತಿರಲಿಲ್ಲ. ಅಪ್ಪ ಅಲುಗಾಡದೇ ಹಾಸಿಗೆಯ ಮೇಲೆ ಬಿದ್ದಿದ್ದ. ಅವನ ಮೇಲೊಂದು ಬಿಳಿಯ ಅರಿವೆಯನ್ನು ಹೊದಿಸಿದ್ದರೂ ಅದನ್ನು ಮೇಲೆತ್ತಿ ಅವನನ್ನು ನೋಡಬೇಕೆಂದರೆ ಧೈರ್ಯ ಸಾಲದಾಯಿತು. ಮನೆಯಲ್ಲಿ ನನಗೆ ಹೋಗಲಾಗಲಿಲ್ಲ, ಅಪ್ಪ ಇಡೀ ಕೋಣೆಯ ಸ್ಥಳವನ್ನೇ ಆವರಿಸಿದ್ದ ಮತ್ತು ಉಳಿದಿದ್ದ ಅಲ್ಪ ಜಾಗವನ್ನು ಅಳುವಿನ ಅಬ್ಬರ ತುಂಬಿಕೊಂಡಿತ್ತು. ಪ್ರತಿಯೊಬ್ಬರೂ ಏನೇನೋ ಮಾಡುತ್ತಿದ್ದರು. ನನಗೆ ಮಾತ್ರ ಯಾವ ಕೆಲಸವೂ ಇರಲಿಲ್ಲ. ಅಪ್ಪನನ್ನು ತೆಳುವಾದ ಬೋರ್ಡುಗಳಿಂದ ಮಾಡಿದ ಶವದ ಪೆಟ್ಟಿಗೆಯಲ್ಲಿರಿಸಿದರು. ಅದಕ್ಕೆ ಎಲ್ಲೆಡೆ ತೂತುಗಳು, ಮುಟ್ಟಿದಾಗಲೊಮ್ಮೆ ಸಪ್ಪಳ ಬರುತ್ತಿತ್ತು.

ಐದಾರು ಜನರು ಅದನ್ನೆತ್ತಿ ನಡೆದರು. ಅವರ ಹಿಂದೆ ನಾನು ಮತ್ತು ಅಳುತ್ತಿರುವ ನನ್ನಮ್ಮ. ಅಪ್ಪನ ನೆನಪು ನನಗಿದೆ. ಹಾಗೆಯೇ ಆ ಪೆಟ್ಟಿಗೆಯ ನೆನಪೂ ಇದೆ. ಆ ಪೆಟ್ಟಿಗೆಯೆಂದರೆ ಅವನ ಅಂತ್ಯ. ಅದನ್ನೊಡೆಯದೇ ನಾನವನನ್ನು ಮತ್ತೊಮ್ಮೆ ನೋಡಲಾರೆನೆಂಬುದರ ಅರಿವು ನನಗಾಗಿತ್ತು. ಅವರು ಅದನ್ನು ಸ್ಮಶಾನದ ಮೂಲೆಯಲ್ಲಿ ಹೂಳಿ ಮಣ್ಣನ್ನು ತುಂಬಿದರು. ಮಳೆಯ ಹನಿಯನ್ನು ನುಂಗುವಂತೆ ಭೂಮಿ ಅದನ್ನು ನುಂಗಿ ಹಾಕಿತ್ತು, ಮತ್ತೊಮ್ಮೆ ಆ ಪೆಟ್ಟಿಗೆಯನ್ನೂ ನೋಡಲಾರದಂತೆ.

೩.

ಮತ್ತೊಮ್ಮೆ ನಾನು ಮತ್ತು ಅಮ್ಮ ಬಿಳಿಯ ಗೌನುಗಳನ್ನು ಹಾಕಿಕೊಂಡ ದಿನವೂ

ಅದೇ ಬಿದಿಗೆಯ ಚಂದ್ರ ಕಾಣಿಸಿದ್ದ. ಅವತ್ತೂ ತುಂಬ ಚಳಿಯಿತ್ತು. ಅಮ್ಮ ನನ್ನನ್ನು ಅಪ್ಪನ ಸಮಾಧಿಗೆ ಕರೆದುಕೊಂಡು ಹೋಗುವವಳಿದ್ದಳು. ಅವನನ್ನು ಪರಲೋಕಕ್ಕೆ ವಿದಾಯ ಮಾಡಲಿಕ್ಕೆಂದೇ ಅವನ ಸಮಾಧಿಯ ಮೇಲೆ ಉರಿಸಲು ಬಂಗಾರ ಮತ್ತು ಬೆಳ್ಳಿಯ ಬಣ್ಣದ ಹಾಳೆಗಳ ಚಿಕ್ಕ ಚಿಕ್ಕ ಡಬ್ಬಿಗಳನ್ನು ತಂದಿದ್ದಳು. ಅವತ್ತು ಅವಳು ನನಗೆ ಬಹಳ ಪ್ರೀತಿ ತೋರಿಸಿದ ನೆನಪಿದೆ. ನಡೆದು ನಡೆದು ನನಗೆ ದಣಿವಾಗಿದೆಯೆಂದಾಗ ನನ್ನನ್ನು ಹೆಗಲ ಮೇಲೆ ಕೂರಿಸಿದ್ದಳು. ಊರ ಹೊರಗೆ ಬಂದಾಗ ನನಗೆ ಬಿಸಿ ಬಿಸಿ ಹುರಿಗಡಲೆ ಕೊಡಿಸಿದ್ದಳು. ಅವನ್ನು ತಿನ್ನದೇ ಅವುಗಳಿಂದ ನನ್ನ ಅಂಗೈಗಳನ್ನು ಬೆಚ್ಚಗಾಗಿಸಿದ್ದೂ ನೆನಪಿದೆ.

ನಾವೆಷ್ಟು ದೂರ ನಡೆದೆವೆಂದು ನೆನಪಿಲ್ಲ. ಬಹಳ ದೂರ ನಡೆದಿದ್ದೆವು. ಅಪ್ಪನನ್ನು ಮಣ್ಣು ಮಾಡಿದ ದಿನ ಅದೇ ಹಾದಿ ಇಷ್ಟೊಂದು ದೂರವೆನಿಸಿರಲಿಲ್ಲ. ಅವತ್ತು ಬಹಳ ಜನರಿದ್ದುದಕ್ಕಾಗಿಯೋ ಏನೋ. ಆದರೆ ಇವತ್ತು ನಾನು ಮತ್ತು ಅಮ್ಮ ಇಬ್ಬರೇ. ಅವಳೂ ಮಾತಾಡಲಿಲ್ಲ. ನನಗೂ ಮಾತಾಡಬೇಕೆನಿಸಿರಲಿಲ್ಲ. ಸುತ್ತಲೂ ಮೌನ. ಹಳದೀ ಮಣ್ಣಿನ ರಸ್ತೆಯಲ್ಲೂ ಏನೂ ಸಪ್ಪಳವಿರಲಿಲ್ಲ. ಹೋಗಲಿ, ಹುಲ್ಲುಕಡ್ಡಿ ಅಲುಗಾಡಿದ ಸದ್ದೂ ಇರಲಿಲ್ಲ. ಚಳಿಗಾಲದ ದಿನಗಳಾದ್ದರಿಂದ ಹಗಲುಗಳು ಚಿಕ್ಕವು. ಸ್ಮಶಾನ ತಲುಪುವಷ್ಟರಲ್ಲಿ ಸೂರ್ಯ ಕ್ಷೀಣಿಸುತ್ತಿದ್ದ. ನೋಡಿದತ್ತಲೆಲ್ಲ ಮಣ್ಣುಗುಪ್ಪೆಗಳು. ಅನೇಕ ಗುಪ್ಪೆಗಳು ಸಮತಟ್ಟಾಗುತ್ತಿದ್ದವು. ಮೂಲೆಯಲ್ಲಿದ್ದ ಅಪ್ಪನ ಸಮಾಧಿಯ ಗುಪ್ಪೆಯನ್ನು ನೋಡಿದ ಅಮ್ಮ ನನ್ನ ಕೈ ಬಿಟ್ಟು ಎರಡೂ ಕೈಗಳಿಂದ ಅದನ್ನು ತಬ್ಬಿ ಜೋರಾಗಿ ಅಳತೊಡಗಿದಳು. ಕೈಯಲ್ಲಿ ಹುರಿಗಡಲೆ ಹಿಡಿದು ನಾನಲ್ಲಿಯೇ ಕುಳಿತೆ. ಸ್ವಲ್ಪ ಹೊತ್ತು ಅತ್ತ ನಂತರ, ಚೀಲದಲ್ಲಿದ್ದ ಬಣ್ಣದ ಹಾಳೆಗಳ ಡಬ್ಬಿಗಳನ್ನು ಸಮಾಧಿಯ ಮೇಲಿಟ್ಟು ಬೆಂಕಿ ತಾಗಿಸಿದಳು. ಗಾಳಿ ಇರದಿದ್ದರೂ ಬೂದಿಯ ಕಣಗಳು ಸುರುಳಿಯಾಗಿ ಮೇಲೆ ಚಿಮ್ಮಿದವು. ಒಂದೊಂದಾಗಿ ಮೆಲ್ಲನೆ ನೆಲದ ಮೇಲೆ ಇಳಿದವು. ಸೂರ್ಯ ಮುಳುಗಿದಂತೆ ಚಳಿ ಹೆಚ್ಚಾಗತೊಡಗಿತು.

ಇಷ್ಟೊತ್ತು ಸುಮ್ಮನಿದ್ದ ಅಮ್ಮ ಮತ್ತೆ ಅಳತೊಡಗಿದಳು. ನನಗೂ ಅಪ್ಪನ ನೆನಪಾದರೂ ಅವನಿಗಾಗಿ ಅಳಬೇಕೆನಿಸಲಿಲ್ಲ. ಆದರೆ ಅಮ್ಮನ ದಯನೀಯ ಅಳುವನ್ನು ನೋಡಿ ನನ್ನ ಕಣ್ಣುಗಳೂ ಹನಿಯೊಡೆದವು. ಅಳಬೇಡಮ್ಮ, ಅಳಬೇಡಮ್ಮ ಎನ್ನುತ್ತ ಅವಳ ಕೈ ಹಿಡಿದೆ. ಅವಳು ಮತ್ತಷ್ಟು ಬಿಕ್ಕುತ್ತ ನನ್ನನ್ನು ತನ್ನ ಎದೆಗೆ ತಬ್ಬಿಕೊಂಡಳು. ಕತ್ತಲೆಯಾವರಿಸತೊಡಗಿತು. ದೂರದೂರದವರೆಗೆ ಯಾರೂ ಕಾಣುತ್ತಿದ್ದಿಲ್ಲ. ಅಮ್ಮನಿಗ ಹೆದರಿಕೆಯಾದಂತೆನಿಸಿ ನನ್ನ ಕೈ ಹಿಡಿದು ಮನೆಯತ್ತ ನಡೆದಳು. ಸ್ವಲ್ಪ ದೂರ ಸಾಗಿ, ಸ್ಮಶಾನದತ್ತ ಹೊರಳಿ ನಿಂತು ಅಪ್ಪನ ಸಮಾಧಿಗಾಗಿ ನೋಡಿದಳು. ನಾನೂ ನೋಡಿದೆ. ಅಪ್ಪನನ್ನು ನುಂಗಿದ ಗುಪ್ಪೆಯನ್ನು ಬೇರೆ ಮಾಡಲಾಗಲಿಲ್ಲ. ದಿನ್ನೆಯ ಮೇಲಿನಿಂದ

ಕೆಳಗಿನವರೆಗೆ ಮಣ್ಣುಗುಪ್ಪೆಗಳೇ. ಅಮ್ಮ ನಿಟ್ಟುಸಿರು ಬಿಟ್ಟಳು. ಮತ್ತೆ ನಡೆದೆವು. ನಡೆಯುತ್ತಲೇ ಹೋದೆವು. ಸ್ವಲ್ಪ ಹೊತ್ತು ಬೀಡುಬೀಸಾಗಿ, ಹಲವೊಮ್ಮೆ ನಿಧಾನವಾಗಿ ಊರ ಸರಹದ್ದನ್ನು ತಲುಪಿ ತಲೆ ಮೇಲೆತ್ತಿದರೆ, ಅದೇ ಬಿದಿಗೆಯ ಚಂದ್ರ ಕಾಣಬೇಕೇ? ತಣ್ಣನೆಯ ತಿಳಿಬೆಳಕು ಚೆಲ್ಲುತ್ತಿದ್ದ. ನಮ್ಮ ಸುತ್ತಲೆಲ್ಲ ಕಗ್ಗತ್ತಲು ಮತ್ತು ಘೋರ ನೀರವ ಮೌನ. ಸಂಪೂರ್ಣವಾಗಿ ದಣಿದಿದ್ದೆ ನಾನು, ಅಮ್ಮ ನನ್ನನ್ನೆತ್ತಿಕೊಂಡು ನಡೆದಳು. ಮನೆ ತಲುಪಿದ್ದು ನೆನಪಿಲ್ಲ ನನಗೆ. ನೆನಪಿನಲ್ಲುಳಿದಿದ್ದು ಆಕಾಶದಲ್ಲಿದ್ದ ಬಿದಿಗೆಯ ಚಂದ್ರ ಮಾತ್ರ.

೪.

ಒಂದು ವರ್ಷ ಕಳೆಯುವಷ್ಟರಲ್ಲಿ ಸಾಮಾನುಗಳನ್ನು ಗಿರವಿ ಅಂಗಡಿಗೆ ಒಯ್ಯುವಷ್ಟು ದೊಡ್ಡವಳಾದೆ. ಹಣವಿಲ್ಲದೇ ಮರಳಿದರೆ, ಆ ರಾತ್ರಿ ನನಗೆ ಮತ್ತು ಅಮ್ಮನಿಗೆ ಉಪವಾಸವೆಂದು ಅರಿವಾಗಿತ್ತು. ತಡೆಯಲಾರದಂತಹ ಸಂದರ್ಭಗಳಲ್ಲಿ ಮಾತ್ರ ಅಮ್ಮ ನನ್ನನ್ನಲ್ಲಿಗೆ ಕಳಿಸುತ್ತಿದ್ದಳು. ಯಾವುದಾದರೂ ಸಾಮಾನನ್ನು ಅರಿವೆಯ ಚಿಂದಿಯಲ್ಲಿ ಸುತ್ತಿ ಕೊಟ್ಟಳೆಂದರೆ, ಅವತ್ತು ನಮ್ಮ ಅಡಿಗೆಮನೆಯ ಗಡಿಗೆಯ ತಳದಲ್ಲಿ ತಿಳಿಗಂಜಿಯೂ ಇಲ್ಲವೆಂದರ್ಥ. ಎಷ್ಟೋ ಸಲ ಅದು ಕನ್ನಡಿಗಿಂತ ಸ್ವಚ್ಛವಾಗಿರುತ್ತಿತ್ತು.

ಕನ್ನಡಿ ಎಂದರೆ ನೆನಪಾಗುತ್ತಿದೆ. ನಮ್ಮಲ್ಲಿದ್ದ ಒಂದೇ ಒಂದು ಕನ್ನಡಿಯನ್ನು ಅರಿವೆಯಲ್ಲಿ ಸುತ್ತಿ ಕೊಟ್ಟಳು. ಅದನ್ನು ಅಮ್ಮ ಪ್ರತಿದಿನ ಉಪಯೋಗಿಸುತ್ತಿದ್ದಳು. ಆದರೂ ಆಗಿನ ಪರಿಸ್ಥಿತಿಯಲ್ಲಿ ಕಳೆದುಕೊಳ್ಳಬಹುದಾಗಿದ್ದ ವಸ್ತು ಅದೊಂದೇ ಆಗಿತ್ತೇನೋ. ತುಂಬ ಎಚ್ಚರಿಕೆಯಿಂದ ಬಲುಬೇಗ ನಾನು ಗಿರವಿ ಅಂಗಡಿಯನ್ನು ತಲುಪಿದೆ. ಅದಾಗಲೇ ತೆರೆದಿತ್ತು. ಅದರ ಕೆಂಪು ಬಾಗಿಲು ಮತ್ತು ಎತ್ತರವಾದ ಕೌಂಟರ್ ನನ್ನನ್ನು ಹೆದರಿಸುತ್ತಿದ್ದವು. ಅವುಗಳ ಹಿಂದೆ ಹೋದ ವಸ್ತು ಯಾವುದೂ ಮರಳಿ ಬರುತ್ತಿದ್ದಿಲ್ಲ. ಸಾಧ್ಯವಾದಷ್ಟು ತುದಿಗಾಲಿನ ಮೇಲೆ ನಿಂತು ನನ್ನ ಕೈಯಲ್ಲಿದ್ದ ವಸ್ತುವನ್ನು ಕೌಂಟರ್ ಮೇಲಿಟ್ಟು ಹೇಳುತ್ತಿದ್ದೆ 'ಇದನ್ನು ಗಿರವಿ ಇಡಬೇಕು.' ಅಂಗಡಿಯವ ಅದನ್ನು ತಿರುಗಿಸಿ ಪರೀಕ್ಷಿಸಿ ದುಡ್ಡು ಮತ್ತು ಗಿರವಿ ಚೀಟಿಯನ್ನು ಕೊಟ್ಟಾಗ ಅವನ್ನು ಕೈಯಲ್ಲಿ ಭದ್ರವಾಗಿ ಹಿಡಿದೇ ಮನೆಯತ್ತ ನನ್ನ ಓಟ. ಅಮ್ಮ ಮನೆಯಲ್ಲಿ ನನಗಾಗಿ ಮತ್ತು ದುಡ್ಡಿಗಾಗಿ ಕಾಯುತ್ತಿದ್ದಳು. ಆದರೆ ಈ ಸಲ ಅವನು ಕನ್ನಡಿಯನ್ನು ತೆಗೆದುಕೊಳ್ಳಲಿಲ್ಲ. ಇದರೊಂದಿಗೆ ಮತ್ತೊಂದೇನಾದರೂ ಸಾಮಾನು ಬೇಕು ಎಂದು ಹೇಳಿದ. ಕನ್ನಡಿಯನ್ನು ನನ್ನ ಫ್ರಾಕಿನಲ್ಲಿ ಮುಚ್ಚಿಟ್ಟು ಮನೆಗೆ ಓಡಿದೆ. ಒತ್ತೆಯಿಡಲು ಮತ್ತೇನೂ ಇಲ್ಲವೆಂದು ಅಮ್ಮ ಕಣ್ಣೀರು ಸುರಿಸಿದಳು. ಇಲ್ಲಿಯ ತನಕ ನಮ್ಮ ಮನೆಯಲ್ಲಿ ಬಹಳ ಸಾಮಾನುಗಳಿವೆ ಎಂಬ ಭ್ರಮೆ ನನಗಿತ್ತು. ಆದರೆ ಒಂದು ಹೊಸ ಬಟ್ಟೆಯ ತುಣುಕೂ ಸಿಗದಾಗ ನಮ್ಮಲ್ಲೇನೂ ಇಲ್ಲವೆಂಬುದರ ಅರಿವಾಗಿತ್ತು ನನಗೆ. ಗಿರವಿಅಂಗಡಿಗೆ ಮತ್ತೊಮ್ಮೆ ನನ್ನನ್ನು ಕಳಿಸಬಾರದು ಎಂದು ಅಮ್ಮ ಹೇಳಿದಳು. ನನ್ನ ಬಾಯಿಯಿಂದ ಹೊರಬಿದ್ದ ಮಾತೆಂದರೆ

ಅಮ್ಮನ ಬಗ್ಗೆ ಕೆಡುಕೆನಿಸಿದಷ್ಟು. ನನಗೆ ಬಿದಿಗೆಯ ಚಂದ್ರನ ಮೇಲಿನ ಪ್ರೀತಿ ಮತ್ತಷ್ಟು ಹೆಚ್ಚುತ್ತಿತ್ತು. ಅವನನ್ನು ನೋಡಿದಾಗ ನನ್ನ ತಾಪಗಳು ಕಡಿಮೆಯಾಗುತ್ತಿದ್ದವು. ಬೇಸಿಗೆಯಲ್ಲಂತೂ ಅದೆಷ್ಟು ಖುಷಿ ಕೊಡುತ್ತಿದ್ದ. ಬರ್ಫದಷ್ಟು ತಂಪು ಅವನ ಬೆಳಕು. ಅವನು ಸೃಷ್ಟಿಸುವ, ಕಂಡೂ ಕಾಣದಂತಿರುವ ನೆರಳುಗಳು ನನ್ನ ಮನಸ್ಸನ್ನು ಸೆಳೆಯುತ್ತಿದ್ದವು. ನಮ್ಮ ಪಕ್ಕದವರ ಮನೆಯಲ್ಲಿ ಕೆಲವೊಂದು ಹೂವಿನ ಗಿಡಗಳಿದ್ದವು. ಬೆಳದಿಂಗಳಲ್ಲಿ ಕೆಲ ಹೂಗಳು ನಮ್ಮ ಮನೆಯ ಅಂಗಳದಲ್ಲಿ ಉದುರಿ ನಮ್ಮ ಮನೆ ತುಂಬ ಸುವಾಸನೆ ಪಸರಿಸುತ್ತಿತ್ತು. ಸನಿಹದಲ್ಲಿರುವ ಎತ್ತರವಾದ ಕ್ಯಾರಬ್ ಮರದಿಂದ ಬೀಳುವ ಹೂಗಳಂತೂ ಮಂಜು ಬಿದ್ದಿದೆಯೇನೋ ಎಂಬ ಭಾವನೆಯನ್ನು ಮೂಡಿಸುತ್ತಿದ್ದವು.

೬.

ಅಮ್ಮನ ಅಂಗೈಗಳ ತುಂಬ ಸಿಬಿರುಗಳೆದ್ದು ಬಿರುಸಾಗಿದ್ದವು. ನನ್ನ ಬೆನ್ನು ತುರಿಸುವಾಗ ನನಗೆ ಹಾಯೆನಿಸಿದರೂ ಅವಳಿಗೆ ತಂದರೆ ಕೊಡಲು ನನಗೆ ಇಷ್ಟವಿರಲಿಲ್ಲ. ಅವಳು ತೆಳ್ಳಗೆ ಇದ್ದಳು ನಿಜ. ಆದರೆ ಸದಾ ನೀರಲ್ಲಿ ಕೈಯಾಡಿಸಿ ಅವಳ ಹಸ್ತಗಳು ದಪ್ಪವಾಗಿದ್ದವು. ಕೆಲಸವಿಲ್ಲದಾಗ ಸದಾ ತನ್ನ ಕೈಗಳ ಮೇಲೆ ಕೈಯಾಡಿಸುತ್ತ ಏನೋ ಯೋಚಿಸುತ್ತ ಕೂಡುತ್ತಿದ್ದಳು. ಇದರಿಂದ ಹೊರಬರಲು ಚಿಂತಿಸುತ್ತಿದ್ದಳೆಂದು ನನಗೆ ಅನಿಸುತ್ತಿತ್ತು. ಕೆಲವೊಮ್ಮೆ ತಾನು ಒಗೆಯುತ್ತಿದ್ದ ಬಟ್ಟೆಗಳನ್ನೂ ದೂರ ಸರಿಸಿ ಚಿಂತಿಸುತ್ತಿದ್ದಳು. ಹಲವೊಮ್ಮೆ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುತ್ತಿದ್ದಳು. ಅವಳ ಮನದಲ್ಲೇನಿತ್ತು, ನನಗಂತೂ ಗೊತ್ತಾಗಲೇ ಇಲ್ಲ.

೭.

ಅವನನ್ನು 'ಅಪ್ಪ' ಎಂದು ಕರೆಯಲು ಅಮ್ಮ ಹೇಳಿದಳು. ನನಗಾಗಿ ಬೇರೊಬ್ಬ ಅಪ್ಪನನ್ನೇ ಹುಡುಕಾಡಿದ್ದಳಂತೆ. ಇದನ್ನು ಹೇಳುವಾಗ ನನ್ನ ಕಣ್ಣಲ್ಲಿ ಕಣ್ಣಿಟ್ಟು ಹೇಳುವುದು ಅವಳಿಂದಾಗಿರಲಿಲ್ಲ. ಅವಳ ಕಣ್ಣುಗಳು ಹನಿಯಾಡಿದ್ದವು. ಅವಳು ಹೇಳಿದ್ದು ಇಷ್ಟೇ. 'ನಿನ್ನನ್ನು ಉಪವಾಸ ಕೆಡವಬಾರದಲ್ಲ ನಾನು' ಇದರ ಹೊರತು ಮತ್ತೇನನ್ನೂ ಹೇಳಿರಲಿಲ್ಲ. ಅಂದರೆ, ನಾನು ಉಪವಾಸವಿರಬಾರದು ಎಂದು ಬೇರೊಬ್ಬ ಅಪ್ಪನನ್ನು ತಂದಳಾ ಅವಳು? ನನಗರ್ಥವಾಗಲಿಲ್ಲ. ಆದರೆ ಮನದಲ್ಲೊಂದು ಅವ್ಯಕ್ತ ಭಯ ಮೂಡಿದ್ದಂತೂ ನಿಜ. ಅದೇ ಹೊತ್ತಿನಲ್ಲಿ ಇನ್ನು ಉಪವಾಸವಿರುವುದು ತಪ್ಪುವುದಲ್ಲ ಎಂಬ ವಿಚಾರ ಮೂಡಿ ಸಂತೋಷವೆನಿಸಿದ್ದೂ ನಿಜ.

ಎಂತಹ ಕಾಕತಾಳೀಯತೆ! ನಾನು ಬೆಳೆದಿದ್ದ ಮನೆಯನ್ನು ಬಿಡುವಾಗ ಅದೇ ಬಿದಿಗೆಯ ಚಂದ್ರ ಆಕಾಶದಲ್ಲಿ ಅದೇ ತರಹ ನೇತಾಡುತ್ತಿದ್ದ. ಆವತ್ತು ಅದೇಕೋ ಬಹಳ ಹೊಳೆಯುತ್ತಿದ್ದನಾದರೂ, ಹಿಂದೆಂದೂ ಕಂಡಿರದ ಭೀಕರತೆ ಅವನಲ್ಲಿತ್ತು. ಅಮ್ಮ

ಹೂವಿನಿಂದ ಸಿಂಗರಿಸಿದ ಕೆಂಪುಬಣ್ಣದ ಜಟಕಾಬಂಡಿಯಲ್ಲಿ ಕೂತಿದ್ದಳು. ಅದರ ಮುಂದೆ ಕೆಲವರು ಬ್ಯಾಂಡು ಬಾರಿಸುತ್ತ ನಡೆಯುತ್ತಿದ್ದರು. ಅಪಶೃತಿಯ ಹಾಡುಗಳನ್ನು ನುಡಿಸುತ್ತಿದ್ದರು. ರಸ್ತೆಯಲ್ಲಿ ಜನಬರದೇ ಹೋದರೂ ಇದ್ದ ಹಲವಾರು ಬೀಡಾಡಿ ನಾಯಿಗಳು ಬ್ಯಾಂಡಿನವರತ್ತ ಮುಖ ಮಾಡಿ ಕರ್ಕಶವಾಗಿ ಬೊಗಳುತ್ತಿದ್ದವು. ಜಟಕಾ ಬಂಡಿ ಓಡುತ್ತಿತ್ತೇನೋ. ನನ್ನ ಹೊಸ ಅಪ್ಪ ನನ್ನ ಕೈ ಹಿಡಿದು ಎಳೆದುಕೊಂಡು ಹೋಗುವಂತೆ ನಡೆಯುತ್ತಿದ್ದ. ಅವನ ಕೈ ಬೆವರುತ್ತ ತಣ್ಣಗೆ ಕೊರೆಯುತ್ತಿತ್ತು. ಅಮ್ಮನನ್ನು ಕೂಗಬೇಕೆಂದರೂ ಧೈರ್ಯ ಸಾಲಲಿಲ್ಲ. ಸ್ವಲ್ಪ ಸಮಯದ ನಂತರ ಬಂಡಿ ಚಿಕ್ಕ ಗಲ್ಲಿಯೊಂದರಲ್ಲಿ ನುಗ್ಗಿತು.

೮

ಮುಂದಿನ ಮೂರ್ನಾಲ್ಕು ವರ್ಷ ಚಂದ್ರನತ್ತ ನನ್ನ ಲಕ್ಷ್ಯ ಹೋಗಲಿಲ್ಲ. ನನ್ನ ಹೊಸ ಅಪ್ಪ ನನ್ನೊಂದಿಗೆ ತುಂಬ ಒಳ್ಳೆಯವನಾಗಿ ನಡೆದುಕೊಳ್ಳುತ್ತಿದ್ದ. ಮನೆಯ ಎರಡು ಕೋಣೆಗಳು. ಅಮ್ಮನೊಂದಿಗೆ ಅವನು ಒಳಗಿನ ಕೋಣೆಯಲ್ಲಿ ಮಲಗಿದರೆ ನಾನು ಹೊರಗಿನ ಚಿಕ್ಕ ಕೋಣೆಯಲ್ಲಿ ಮಲಗುತ್ತಿದ್ದೆ. ಪ್ರಾರಂಭದಲ್ಲಿ ನಾನೂ ಅಮ್ಮನೊಂದಿಗೆ ಒಳಗೇ ಮಲಗಲು ಬಯಸುತ್ತಿದ್ದೆನಾದರೂ, ಅದನ್ನು ಕೇಳುವ ಧೈರ್ಯ ಸಾಲಲಿಲ್ಲ ನನಗೆ. ದಿನಗಳು ಉರುಳಿದಂತೆ ನನ್ನ ಚಿಕ್ಕ ಕೋಣೆಯ ಸ್ವಚ್ಛ ಮತ್ತು ಸುಣ್ಣ ಬಳಿದ ಗೋಡೆಗಳು, ಅಲ್ಲಿದ್ದ ಟೇಬಲ್ ಮತ್ತು ಖುರ್ಚಿ, ಇವೆಲ್ಲ ನನ್ನವೇ ಎಂದೆನಿಸತೊಡಗಿ ಇದೇ ಕೋಣೆಯನ್ನು ಪ್ರೀತಿಸತೊಡಗಿದೆ. ನಿಧಾನವಾಗಿ ಅಮ್ಮನ ತೂಕ ಹೆಚ್ಚತೊಡಗಿತು, ಮುಖದ ಮೇಲೆ ಕಳೆ ಬರತೊಡಗಿತು ಮತ್ತು ಅಂಗೈಗಳು ಮೃದುವಾಗತೊಡಗಿದವು. ಗಿರವಿ ಅಂಗಡಿಯತ್ತ ಹೋಗುವುದರ ಅವಶ್ಯಕತೆ ಇರಲಿಲ್ಲ ಈಗ. ನನ್ನ ಹೊಸ ಅಪ್ಪ ನನಗೆ ಶಾಲೆಗೆ ಹೋಗಲು ಅನುವು ಮಾಡಿಕೊಟ್ಟು ಆಗಾಗ ನನ್ನೊಂದಿಗೆ ಆಟವನ್ನು ಆಡುತ್ತಿದ್ದ. ನನಗೆ ತುಂಬ ಹಿಡಿಸುತ್ತಿದ್ದ ಅವನು. ಆದರೂ ಅವನನ್ನು ಅಪ್ಪನೆಂದು ನನ್ನಿಂದ ಕರೆಯಲಾಗಲಿಲ್ಲ. ಅವನಿಗೂ ಅರ್ಥವಾಗಿತ್ತೇನೋ. ಅವನೆಂದೂ ನನ್ನನ್ನು ಒತ್ತಾಯಿಸಲಿಲ್ಲ. ಅಮ್ಮ ಮಾತ್ರ ನಾನೊಬ್ಬಳೇ ಇದ್ದಾಗ ಪದೇಪದೇ ಒತ್ತಾಯಿಸುತ್ತಿದ್ದಳು. ಅವನಿಂದಾಗಿಯೇ ನಮಗೆ ಹೊಟ್ಟೆ ತುಂಬ ಊಟ ಮಾಡಲು ಮತ್ತು ಒಳ್ಳೆಯ ಬಟ್ಟೆಗಳನ್ನು ಧರಿಸುವುದು ಸಾಧ್ಯವಾಗಿತ್ತು ಎಂಬುದರ ಅರಿವು ನನಗಾಗಿತ್ತು.

ಮೂರ್ನಾಲ್ಕು ವರ್ಷ ಅವನನ್ನು ನೋಡಲಿಲ್ಲ. ಆದರೂ, ನನ್ನಪ್ಪ ಸತ್ತ ದಿನ ಮತ್ತು ನನ್ನಮ್ಮ ಮದುವಣಗಳಾಗಿ ಹೊರಟ ದಿನ ಮೂಡಿದ್ದ ತಂಪನೆಯ ಕ್ರೂರ ಆಕೃತಿಯನ್ನು ಈಗಲೂ ಮರೆಯಲಾಗದು. ಕೆಲವೊಮ್ಮೆ ಅದು ನನ್ನ ಕೈ ಮುಟ್ಟಿ ಅದರ ಶೀತಲತೆಯ ಅನುಭವವಾಗುತ್ತಿದೆಯೇನೋ ಎಂದೆನಿಸುತ್ತದೆ.

೯

ಶಾಲೆಯೆಂದರೆ ನನಗಿಷ್ಟ. ಅದರ ಇಡೀ ಅಂಗಳದಲ್ಲಿ ಹೂಗಳೇ ಇರುತ್ತವೆಯೆಂಬ ಭಾವನೆ ಅದೇಕೋ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಗಾಢವಾಗಿ ಮೂಡಿತ್ತು. ಅವಾಸ್ತವವೆನಿಸಿದರೂ, ಅಪ್ಪನ ಸಾವು ನೆನಪಾದಾಗ ಆಕಾಶದಲ್ಲಿ ನೇತಾಡುತ್ತಿರುವ ವಕ್ರ ಚಂದ್ರನ ಬಿಂಬ ಮನದಲ್ಲಿ ಬಂದಂತೆ, ಶಾಲೆಯೆಂದಾಕ್ಷಣ ಹೂಗಳನ್ನು ಕಲ್ಪಿಸಿಕೊಳ್ಳುವದೆಂದರೆ ನನಗೆ ಬಲು ಇಷ್ಟ. ಅಮ್ಮನಿಗೂ ಹೂಗಳೆಂದರೆ ಪ್ರೀತಿ. ಅವನ್ನು ಖರೀದಿಸುವ ಶಕ್ತಿ ಇಲ್ಲವಾದರೂ ಯಾವಾಗಲಾದರೊಮ್ಮೆ ಹೂ ಸಿಕ್ಕರೆ ಹಿನ್ನಿನಿಂದ ಕೂದಲರಾಶಿಯಲ್ಲಿ ಮುಡಿಯುವಳು. ಒಂದೆರಡು ಸಲ ನಾನು ಕೆಲ ಹೂಗಳನ್ನು ಕಿತ್ತಿ ತಂದಿದ್ದೆ. ಅವನ್ನು ಮುಡಿದಾಗ ಅವಳು ಹಿಂಬದಿಯಿಂದ ತುಂಬ ಚಿಕ್ಕವಳಂತೆ ಕಾಣಿಸುವಳು. ಅವಳಿಗೆ ತುಂಬ ಖುಷಿಯಾಗಿತ್ತು. ಅವಳು ಖುಷಿಯಾದುದನ್ನು ನೋಡಿ ನನಗೂ ಖುಷಿ.

ಶಾಲೆಗೆ ಹೋಗುವುದೆಂದರೆ ನನಗೆ ಬಲು ಸಂತೋಷ. ಶಾಲೆಯ ನೆನಪಾದಾಗಲೊಮ್ಮೆ ಹೂಗಳ ನೆನಪಾಗುವುದು ಬಹುಶಃ ಇದೇ ಕಾರಣಕ್ಕಾಗಿಯೇ ಏನೋ.

೧೦

ನನ್ನ ಹೈಸ್ಕೂಲು ಅಭ್ಯಾಸ ಮುಗಿಸುವ ವರ್ಷವೇ ಅಮ್ಮ ಮತ್ತೆ ನನ್ನನ್ನು ಗಿರವಿ ಅಂಗಡಿಗೆ ಕಳಿಸಿದಳು. ಹೊಸ ಅಪ್ಪನೇಕೆ ನಮ್ಮನ್ನು ಬಿಟ್ಟು ಹೋದ ಎಂಬುದೇ ಅರ್ಥವಾಗಲಿಲ್ಲ. ಅಮ್ಮನಿಗೂ ಅವನೆಲ್ಲಿ ಹೋದ ಎಂಬುದು ಗೊತ್ತಾಗಲಿಲ್ಲ. ಅವನು ಮತ್ತೆ ಬರುತ್ತಾನೆ. ನೀನು ಶಾಲೆಗೆ ಹೋಗುವುದು ಬಿಡಬೇಡ ಎಂದೇ ನನಗೆ ಹೇಳಿದಳು. ಎಷ್ಟೋ ದಿನಗಳುರುಳಿದವು. ಅವನ ಸುಳಿವೇ ಇರಲಿಲ್ಲ. ಕನಿಷ್ಠ ಒಂದು ಪತ್ರವನ್ನೂ ಬರೆಯಲಿಲ್ಲ ಆತ. ಅಮ್ಮನಿಗೆಲ್ಲಿ ಮತ್ತೊಮ್ಮೆ ಆ ಹೊಲಸು ಕಾಲ್ಚೀಲಗಳನ್ನು ಒಗೆಯುವ ಪ್ರಸಂಗ ಬರುತ್ತದೆಯೇನೋ ಎಂಬ ಭಯ ಮನಸ್ಸಿನಲ್ಲಿ ಮೂಡಿ ಹೆದರಿಕೆಯಾಗಿದ್ದೂ ನಿಜ.

ಆದರೆ ಅಮ್ಮನ ಯೋಜನೆಗಳು ಬೇರೆಯೇ ಇದ್ದವು. ಈಗಲೂ ಚೆನ್ನಾಗಿ ಡ್ರೆಸ್ ಮಾಡುತ್ತಿದ್ದಳು. ಸದಾ ಹೂಗಳನ್ನೂ ಮುಡಿಯುತ್ತಿದ್ದಳು. ಆಶ್ಚರ್ಯದ ಸಂಗತಿಯೆಂದರೆ, ಅವಳೀಗ ಅಳುತ್ತಲಿರಲಿಲ್ಲ. ಸದಾ ಮುಗುಳ್ನಗು ಬೀರುತ್ತಲೇ ಇರುತ್ತಿದ್ದಳು. ಶಾಲೆಯಿಂದ ಮನೆಗೆ ಬಂದಾಗಲೆಲ್ಲ ಅವಳು ಬಾಗಿಲಲ್ಲೇ ನಿಂತಿರುವದನ್ನೇ ಕಾಣುತ್ತಿದ್ದೆ. ಹೀಗೆಯೇ ಹಲವು ದಿನಗಳು, ತಿಂಗಳುಗಳು ಉರುಳಿದವು. ನಂತರ ರಸ್ತೆಯಲ್ಲಿ ಭೆಟ್ಟಿಯಾದ ಗಂಡಸರು ನನ್ನನ್ನು ಕೀಡಾಗ ಹೇಳಲು ಪ್ರಾರಂಭಿಸಿದರು.

'ಬೇಡ, ನಾನು ಬೇಗನೆ ಬರುತ್ತೇನೆಂದು ನಿನ್ನಮ್ಮನಿಗೆ ಹೇಳು'

'ಇವೊತ್ತು ನಿನ್ನ ಪಾಳಿ ಇದೆಯಾ?'

ಅವಮಾನದಿಂದ ಮತ್ತಷ್ಟು ಬಾಗಿಸಲಾಗದಷ್ಟು ಕೆಳಗೆ ನನ್ನ ತಲೆ ಬಾಗಿಸುತ್ತಿದ್ದೆ. ಮೇಲೆ ನೋಡುವುದಾಗುತ್ತಿರಲಿಲ್ಲ. ಎಲ್ಲವೂ ನನಗರ್ಥವಾಗುತ್ತಿತ್ತು. ಆದರೆ ನಾನೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಮ್ಮನನ್ನು ಪ್ರಶ್ನಿಸುವ ಧೈರ್ಯವೂ ನನಗಿರಲಿಲ್ಲ. ಆದರೆ, ಅವಳು ಮಾತ್ರ ನನಗೆ ಯಾವಾಗಲೂ ಅಭ್ಯಾಸ ಮಾಡಲು ಒತ್ತಾಯಿಸುತ್ತಿದ್ದಳು. ವಿಪರ್ಯಾಸವೆಂದರೆ ಅವಳಿಗೆ ಒಂದಕ್ಷರವನ್ನೂ ಓದಲು ಬರೆಯಲು ಬರುತ್ತಿರಲಿಲ್ಲ. ಆದರೂ ಅವಳೇಕೆ ನನಗೆ ಅಭ್ಯಾಸ ಮಾಡು ಎಂದು ಒತ್ತಾಯಿಸುತ್ತಿದ್ದಾಳೆ? ಇದು ಯಕ್ಷ ಪ್ರಶ್ನೆಯಾಯಿತು. ನನ್ನನ್ನೇನು ಮಾಡಬೇಕೆಂದಿದ್ದಾಳೆ. ಈ ಸಂಶಯ ನನ್ನ ತಲೆಯಲ್ಲಿ ಗುಂಗೀಹುಳದಂತೆ ಕೊರೆಯತೊಡಗಿತು. ಆದರೂ ಇದನ್ನು ಬಿಟ್ಟರೆ ಅವಳಿಗೆ ಬೇರೆ ಯಾವ ದಾರಿಯೂ ಇಲ್ಲವೆಂದು ನನಗೆ ಅನಿಸುತ್ತಿತ್ತು. ಈ ಸಂಶಯ ಮೂಡಿದಾಗಲೆಲ್ಲ ಅವಳನ್ನು ತಣಿಸಬೇಕೆಂದೆನಿಸುತ್ತಿತ್ತು. ಬೇರೆ ವೇಳೆಯಲ್ಲಿ ಅವಳನ್ನು ಅಪ್ಪಿಕೊಂಡು ನನ್ನನ್ನು ಈ ರೀತಿ ಪರಿವರ್ತಿಸಬೇಡವೆಂದು ಬೇಡಿಕೊಳ್ಳಬೇಕೆನಿಸುತ್ತಿತ್ತು.

ಸದ್ಯಕ್ಕಂತೂ ಅಮ್ಮನಿಗೆ ನಾನ್ಯಾವ ರೀತಿಯಿಂದಲೂ ಸಹಾಯ ಮಾಡಲಾಗುತ್ತಿರಲಿಲ್ಲ. ಇದಕ್ಕಾಗಿ ನನಗೆ ಕೆಡುಕೆನಿಸುತ್ತಿತ್ತು. ಹೈಸ್ಕೂಲು ಮುಗಿಸಿದ ನಂತರ ನಾನ್ಯಾವ ರೀತಿಯಲ್ಲಿ ಸಹಾಯ ಮಾಡಬಲ್ಲೆ ಎಂದು ಚಿಂತಿಸತೊಡಗಿದೆ. ಹೈಸ್ಕೂಲು ಮುಗಿಸಿದ ಕೆಲವು ಹುಡುಗಿಯರು ಕೆಲವರ ರಖೈಲ ಆಗಿಯೂ ಇನ್ನು ಹಲವರು ಕೆಂಪು ದೀಪದ ರಸ್ತೆಯಲ್ಲಿದ್ದಾರೆಂದು ನನ್ನ ಕ್ಲಾಸಿನ ಕೆಲವು ಹುಡುಗಿಯರು ಗುಪ್ತವಾಗಿ ಮಾತಾಡುವುದನ್ನು ಕೇಳಿದ್ದೆ. ಅವರ ಮಾತಿನರ್ಥ ನನಗೆ ತಿಳಿಯದಿದ್ದರೂ ಅವರು ಕಣ್ಣು ಕೆಂಪಗೆ ಮಾಡಿಕೊಂಡು ಮಾತಾಡುವ ಪಿಸುಮಾತಿನಿಂದ ಇದೇನೋ ಕೆಟ್ಟ ಕೆಲಸವೆಂಬುದು ನನಗೆ ಅರಿವಾಗಿತ್ತು.

ಅಮ್ಮನ ಮನಸ್ಸಿನಲ್ಲೇನಿದೆ. ನಾನೂ ಅವರಂತೆಯೇ ಆಗಲೆಂದು ಹೈಸ್ಕೂಲ್ ಅಭ್ಯಾಸ ಮುಗಿಸುವುದನ್ನೇ ಕಾಯುತ್ತಿದ್ದಾಳೇನೋ ಎನ್ನುವ ಸಂಶಯ ಹೆಚ್ಚುತ್ತಲೇ ಹೋಯಿತು. ಈ ಸಂಶಯ ಮನದಲ್ಲಿ ಹೊಕ್ಕಿದಾಗ ನನಗೆ ಮಧ್ಯಾಹ್ನ ಮನೆಗೆ ಹೋಗಲೂ ಅಂಜಿಕೆಯಾಗುತ್ತಿತ್ತು. ಅವಳೊಂದಿಗೆ ಮುಖಾಮುಖಿಯಾಗಲೂ ಹೆದರಿಕೆಯಾಗುತ್ತಿತ್ತು. ಮಧ್ಯಾಹ್ನ ತಿಂಡಿಗಾಗಿ ಅವಳು ಕೊಡುವ ಕಾಸುಗಳನ್ನು ಖರ್ಚು ಮಾಡದೇ ಉಳಿಸುತ್ತಿದ್ದೆ. ಪಿಟಿ ಕ್ಲಾಸಿಗೂ ಹಸಿದ ಹೊಟ್ಟೆಯಲ್ಲಿ ಹೋಗುತ್ತಿದ್ದೆ. ಕೆಲವೊಮ್ಮೆ ಬವಳಿ ಬಂದು ಬಿದ್ದಿದ್ದೆ. ತಿಂಡಿ ತಿನ್ನುತ್ತಿದ್ದ ಗೆಳತಿಯರನ್ನು ನೋಡಿ ಹೊಟ್ಟೆಕಿಚ್ಚು, ಆದರೂ ಸಹಿಸಲೇಬೇಕಿತ್ತು. ಹಣ ಉಳಿಸಲೇಬೇಕಿತ್ತು. ಅಮ್ಮನೇನಾದರೂ ತನ್ನ ವಿಚಾರಕ್ಕೇ ಅಂಟಿಕೊಂಡರೆ, ಓಡಿ ಹೋಗಲು ನನ್ನ ಹತ್ತಿರ ಸ್ವಲ್ಪವಾದರೂ ದುಡ್ಡಿರಬೇಕಲ್ಲವೇ?

ಎಷ್ಟೇ ಪ್ರಯತ್ನಿಸಿದರೂ ಹತ್ತರಿಂದ ಹದಿನೈದು ಸೆಂಟುಗಳಿಗಿಂತ ಹೆಚ್ಚಿಗೆ ಉಳಿಸಲಾಗಲಿಲ್ಲ. ಇತ್ತೀಚೆಗೆ ದಿನದಲ್ಲೂ ಬಿದಿಗೆಯ ಚಂದ್ರನನ್ನು ನೋಡಲೆಂದು ಆಕಾಶವನ್ನೇ ನೋಡುತ್ತಿದ್ದೆ. ಯಾಕೆಂದರೆ, ಯಾವುದೇ ತರಹದ ಸಹಾಯವಿಲ್ಲದೇ ಜೋಲುಮುಖದೊಂದಿಗೆ ಅಲ್ಲಿ ನೇತಾಡುತ್ತ ತಾನು ಕಳಿಸಿದ ಕ್ಷೀಣ ಕಿರಣಗಳನ್ನು ಭೂಮಿಯ ಮೇಲಿನ ಕತ್ತಲೆ ನುಂಗಿ ಹಾಕುವುದನ್ನು ಅಸಹಾಯಕತೆಯಿಂದ ಗಮನಿಸುತ್ತ ಕೂಡುವ ಆ ಬಿದಿಗೆಯ ಚಂದ್ರನೊಂದಿಗೆ ಮಾತ್ರ ನನ್ನ ಈಗಿನ ಪರಿಸ್ಥಿತಿಯನ್ನು ಹೋಲಿಸಬಹುದಾಗಿತ್ತು.

೧೧.

ನಾನೀಗ ಅಮ್ಮನನ್ನು ದ್ವೇಷಿಸಲು ಕಲಿತಿದ್ದೆ, ಈ ವಿಷಯ ನನ್ನನ್ನು ಮತ್ತಷ್ಟು ಚಿಂತೆಗೀಡು ಮಾಡಿತ್ತು. ಅಪ್ಪನ ಸಮಾಧಿಗೆ ಹೋಗುವಾಗ ಅಮ್ಮ ನನ್ನನ್ನೆತ್ತಿಕೊಂಡದ್ದು ನೆನಪಾದಾಗ ಆ ದ್ವೇಷ ಮಾಯವಾಗುತ್ತಿತ್ತು. ಆದರೂ ಅವಳನ್ನು ದ್ವೇಷಿಸಲೇಬೇಕೆಂದು ಅನಿಸುತ್ತಿತ್ತು. ತುಂಬ ಇಕ್ಕಟ್ಟಿನಲ್ಲಿತ್ತು. ನನ್ನ ಮನಸ್ಸು. ಮತ್ತೆ ನನ್ನ ಹೃದಯವಂತೂ ಅಸೀಮ ಕಗ್ಗತ್ತಲೆಯಲ್ಲಿ ಕೆಲಕಾಲ ಕ್ಷೀಣ ಬೆಳಕನ್ನು ಸೂಸುತ್ತ ಹೊಳೆಯುತ್ತಿರುವ ಬಿದಿಗೆ ಚಂದ್ರನಂತಿತ್ತು.

ಅಮ್ಮನ ಕೋಣೆಗೀಗ ಪುರುಷರು ಸತತವಾಗಿ ಬರತೊಡಗಿದ್ದರು. ಇದನ್ನೀಗ ನನ್ನಿಂದ ಮುಚ್ಚಿಡಲು ಅವಳು ಪ್ರಯತ್ನಿಸುತ್ತಿರಲಿಲ್ಲ. ಆದರೆ, ಗಂಡಸರ ಕಣ್ಣುಗಳು ಸದಾ ನನ್ನತ್ತಲೇ ಅಮ್ಮನಿಗಿಂತ ರುಚಿಕರ ತಿಂಡಿಯಂತೆ ಅವರಿಗೆ ಕಾಣಿಸುತ್ತದ್ದೆನೇನೋ, ನಾಲಿಗೆ ಇಳಿಬಿಟ್ಟು ಜೊಲ್ಲು ಸುರಿಸುವ ನಾಯಿಗಳಂತೆ ಗೋಚರಿಸುತ್ತಿದ್ದರು ನನಗೆ ಇತ್ತೀಚೆಗೆ ಅತಿ ಅಲ್ಪ ಸಮಯದಲ್ಲಿ ಬಹಳಷ್ಟು ಅರ್ಥ ಮಾಡಿಕೊಳ್ಳತೊಡಗಿದ್ದೆ, ನನ್ನನ್ನು ನಾನೇ ರಕ್ಷಿಸಿಕೊಳ್ಳಬೇಕಾಗಿದೆ ಎಂದೆನಿಸುತ್ತಿತ್ತು. ಇತ್ತೀಚೆಗೆ ನನ್ನ ಶರೀರದಲ್ಲೇನೋ ಬದಲಾವಣೆಯಾಗಿದೆ, ಅಪೂರ್ವವಾದುದೇನೋ ನನ್ನಲ್ಲಿದೆಯೆಂದು ಅನಿಸತೊಡಗಿತ್ತು. ನನ್ನ ಶರೀರದ ಸುವಾಸನೆಯ ಅರಿವು ನನಗೂ ಆಗತೊಡಗಿತ್ತು. ನನಗೇ ಮುಜುಗರವೆನಿಸುತ್ತಿತ್ತು. ಬಹಳಷ್ಟು ಸಲ ಒಂದೊಂದಾಗಿ ಮುಗಿಬೀಳುವ ಭಾವನೆಗಳ ತಾಕಲಾಟದಲ್ಲಿ ನಾನು ಸೋತು ಸುಣ್ಣವಾಗುತ್ತಿದ್ದೆ. ಒಮ್ಮೊಮ್ಮೆ ನನ್ನನ್ನು ರಕ್ಷಿಸಿಕೊಳ್ಳಬಲ್ಲೆ, ನಾನು ಸಬಲೆ, ಸಶಕ್ತೆಯೆಂದೆನಿಸಿದರೆ, ಮತ್ತೊಮ್ಮೆ ನಾನು ಅಬಲೆ, ಅಸಹಾಯಕ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿರುವವಳಂತೆ ನನಗನಿಸುತ್ತಿತ್ತು. ಸದಾ ಭಾವನೆಗಳ ತಾಕಲಾಟವೇ.

ಅಮ್ಮನ ಪ್ರೀತಿ ಬೇಕಿತ್ತು, ಅವಳಿಂದ ಬಹಳಷ್ಟನ್ನು ತಿಳಿದುಕೊಳ್ಳಬೇಕಾಗಿತ್ತು. ಅವಳ ಆರ್ದ್ರ ಸಾಂತ್ವನೆ ನನಗೆ ಅತ್ಯವಶ್ಯವಿತ್ತು. ಆದರೆ, ಇದೇ ಸಮಯ ಅವಳನ್ನು ತ್ಯಜಿಸಬೇಕಾಗಿತ್ತು, ಇಲ್ಲದೇ ಹೋದರೆ ನನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗಿತ್ತು. ರಾತ್ರಿ ನಿದ್ದೆಯಿಲ್ಲದೇ ಹಾಸಿಗೆಯಲ್ಲಿ ಹೊರಳಾಡುತ್ತ ಶಾಂತವಾಗಿ ಇಡೀ ವಾಸ್ತವತೆಯನ್ನು

ಅವಲೋಕಿಸುತ್ತಿದ್ದೆ. ಅಮ್ಮ ನಿಜವಾಗಿಯೂ ಅನುಕಂಪಕ್ಕೆ ಅರ್ಹಳೆಂದೆನಿಸುತ್ತಿತ್ತು. ನಮ್ಮಿಬ್ಬರ ಆಹಾರವನ್ನು ಅವಳೇ ಗಳಿಸಬೇಕಾಗಿತ್ತಲ್ಲವೇ? ಅದೂ ಈ ರೀತಿಯಲ್ಲಿ ಗಳಿಸಿದ ಆಹಾರವನ್ನು ನಾನೆಂತು ಸೇವಿಸಬಲ್ಲೆ? ಈ ರೀತಿ ನನ್ನ ಮನದ ಕೊಳದಲ್ಲಿ ಚಳಿಗಾಲದ ತಂಗಾಳಿಯಂತೆ ಕೆಲವೊಮ್ಮೆ ಶಾಂತ, ಕೆಲವೊಮ್ಮೆ ಮೈ ಕೊರೆಯುವ ಭಾವನೆಗಳ ಅಲೆಗಳು ಎದ್ದೇಳುತ್ತಿದ್ದುವು. ನನ್ನ ಅಸಹಾಯಕತೆಗಾಗಿ ಹಲವೊಮ್ಮೆ ರೋಷ ಉಕ್ಕುತ್ತಿತ್ತು. ಅದಕ್ಕೆ ತಡೆಯೊಡ್ಡುವ ಶಕ್ತಿ ನನ್ನಲ್ಲಿರಲಿಲ್ಲ.

೧೨.

ಇದಕ್ಕೊಂದು ಪರಿಹಾರವನ್ನು ಹುಡುಕುವುದರ ಮೊದಲೇ ಪರಿಸ್ಥಿತಿ ಕೈ ಮೀರಿತ್ತು. ಅವತ್ತು ಅಮ್ಮ ಕೇಳಿಯೇ ಬಿಟ್ಟಳು. 'ಇವರ ಬಗ್ಗೆ ನಿನಗೇನು ಅನಿಸುತ್ತದೆ?' ಇಷ್ಟಕ್ಕೇ ನಿಲ್ಲಲಿಲ್ಲ. ಮುಂದುವರೆಸಿದಳು. ನಾನವಳನ್ನು ನಿಜವಾಗಿಯೂ ಪ್ರೀತಿಸುತ್ತಿದ್ದರೆ ಅವಳಿಗೆ ಸಹಾಯ ಮಾಡಬೇಕು, ಇಲ್ಲವಾದರೆ ಅವಳಿಗೆ ನನ್ನ ಕಾಳಜಿ ತೆಗೆದುಕೊಳ್ಳಲಾಗದು, ಎಂದೆಲ್ಲ ನುಡಿದಳು. ಇವೆಲ್ಲ ಅಮ್ಮ ಹೇಳುವ ಮಾತುಗಳಂತೆ ಅನಿಸಲಿಲ್ಲ. ಆದರೂ ಅವಳು ಹೇಳಿದ್ದು ಸತ್ಯ. ಪರಿಸ್ಥಿತಿಯನ್ನು ಇನ್ನೂ ಸ್ಪಷ್ಟವಾಗಿ ವಿವರಿಸಿದಳು. 'ನೋಡು, ನನಗೂ ವಯಸ್ಸಾಗ್ತಾ ಇದೆ. ಇನ್ನೊಂದೆರಡು ವರ್ಷಗಳಲ್ಲಿ ನಾನು ಪುಕ್ಕಟೆಯಾಗಿ ಸಿಗುತ್ತೇನೆ ಎಂದರೂ ಯಾರೂ ಬರುವುದಿಲ್ಲ' ಇದೂ ಕಠೋರ ಸತ್ಯವೇ. ಇತ್ತೀಚೆಗೆ ಮುಖಕ್ಕೆ ಎಷ್ಟು ಪೌಡರ್ ಬಳಿದರೂ ನೆರಿಗೆಗಳು ತಮ್ಮ ಅಸ್ತಿತ್ವವನ್ನು ಢಾಳಾಗಿ ಸಾರುತ್ತಿದ್ದುವು. ಬಹಳಷ್ಟು ಗಂಡಸರೊಂದಿಗೆ ಏಗುವ ಶಕ್ತಿ, ಸಾಮರ್ಥ್ಯ ಅವಳಲ್ಲಿ ಉಳಿದಿರಲಿಲ್ಲ. ಒಬ್ಬನೊಂದಿಗೇ ಇರುವುದರ ಕುರಿತು ಚಿಂತಿಸುತ್ತಿದ್ದಳು. ಬ್ರೆಡ್ ಅಂಗಡಿಯವನೊಬ್ಬ ಇದಕ್ಕೆ ತಯಾರಾಗಿ ಕಾಯುತ್ತಿದ್ದ. ಅವನೊಂದಿಗೆ ಅವಳು ಹೋಗಬಹುದಾಗಿತ್ತು. ಆದರೆ ನಾನು? ನಾನೀಗ ದೊಡ್ಡವಳಾಗಿದ್ದೆ. ಮುಂಚಿನಂತೆ ಅಮ್ಮನನ್ನು ಹಿಂಬಾಲಿಸಲಾರೆ. ನನ್ನ ಜವಾಬ್ದಾರಿಯೀಗ ನನ್ನದೇ. ಅವಳು ಹೇಳಿದಂತೆ ಮಾಡಲು ಒಪ್ಪಿದ್ದಲ್ಲಿ, ಅವಳು ಅವನೊಂದಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ನಾವಿಬ್ಬರ ಸಲುವಾಗಿ ಹಣ ಗಳಿಸಬಹುದಾಗಿತ್ತು.

ಹಣ ಗಳಿಸುವುದಕ್ಕೆ ನನ್ನ ಅಭ್ಯಂತರವಿರಲಿಲ್ಲ. ಆದರೆ ಅಮ್ಮ ಹೇಳಿದ ರೀತಿಯಲ್ಲಲ್ಲ. ನಖಶಿಖಾಂತ ನಡುಗಿದೆ ನಾನು. ಮಧ್ಯವಯಸ್ಕ ಹೆಂಗಸಿನಂತೆ ನಾನು ಹೇಗೆ ಕಾಲ ಕಳೆಯಬಲ್ಲೆ? ಅಮ್ಮ ಕಲ್ಲಾಗಿದ್ದಳು. ಆದರೆ ಹಣದ ಅವಶ್ಯಕತೆ ವಜ್ರಕಠೋರವಾಗಿತ್ತು. ಆದರೂ, ನಾನು ಇದೇ ಹಾದಿಯನ್ನು ಹಿಡಿಯಬೇಕೆಂದು ಪಟ್ಟು ಹಿಡಿಯಲಿಲ್ಲ, ಆಯ್ಕೆಯನ್ನು ನನಗೇ ಬಿಟ್ಟಿದ್ದಳು. ಒಂದೋ ಅವಳ ಜೊತೆಯಾಗಿ ನಿಲ್ಲಬೇಕು, ಇಲ್ಲವೇ ಇಬ್ಬರೂ ತಮ್ಮ ತಮ್ಮ ಹಾದಿ ತುಳಿಯಬೇಕು. ಅವಳು ಅಳಲಿಲ್ಲ. ಅವಳ ಕಣ್ಣುಗಳೆಂದೋ ಬತ್ತಿ ಹೋಗಿದ್ದುವು. ನಾನೇನು ಮಾಡಲಿ?

೧೩.

ನನ್ನ ಶಾಲೆಯ ಮುಖ್ಯಾಧ್ಯಾಪಕಿಯೊಂದಿಗೆ ಮಾತಾಡಿದೆ. ಅಂದಾಜು ನಲವತ್ತು ನಲವತ್ತೈದರ ಧಡೂತಿ ಶರೀರದ ಮಹಿಳೆ ಅವಳು. ಆದರೂ ಹೃದಯದಿಂದ ಬಲು ಮೆದು. ಅವಳಿಗೆ ನನ್ನ ಪರಿಚಯ ಅಷ್ಟಿರಲಿಲ್ಲ. ನಾನು ನನ್ನ ತಾಳ್ಮೆಯ ಸೀಮೆಯನ್ನು ದಾಟಿದ್ದೆನೇನೋ. ಇಲ್ಲದಿದ್ದರೆ ಅಮ್ಮನ ಬಗ್ಗೆ ಅಷ್ಟೇಗೆ ಹೇಳುತ್ತಿದ್ದೆ ನಾನು? ಪ್ರತಿಯೊಂದು ಶಬ್ದ ಬೆಂಕಿಯುಂಡೆಯಂತೆ ನನ್ನ ಗಂಟಲನ್ನು ಉರಿಸುತ್ತ ಹೊರಗೆ ಬರುತ್ತಿತ್ತು. ತಡವರಿಸುತ್ತ ಹೇಳಲು ಬಹಳ ಸಮಯವನ್ನೇ ತೆಗೆದುಕೊಂಡೆ. ಶಾಂತವಾಗಿ ಕೇಳಿದಳವಳು. ನನಗೆ ಸಹಾಯ ಮಾಡುತ್ತೇನೆಂದು ಹೇಳಿದಳು. ಹಣ ಕೊಡಲಾಗದಿದ್ದರೂ ಎರಡು ಹೊತ್ತು ಊಟ ಮತ್ತು ಶಾಲೆಯ ವೃದ್ಧ ಸೇವಕಿಯೊಂದಿಗೆ ಇರಲು ಸ್ಥಳದ ವ್ಯವಸ್ಥೆ ಮಾಡುವೆನೆಂದಳು. ನನ್ನ ಹಸ್ತಾಕ್ಷರ ಸುಧಾರಿಸಿದ ನಂತರ ಶಾಲೆಯ ಕ್ಲರ್ಕನಿಗೆ ಪತ್ರವ್ಯವಹಾರ ಮತ್ತು ಲೆಕ್ಕಪತ್ರಗಳನ್ನಿಡುವುದರಲ್ಲಿ ಸಹಾಯ ಮಾಡಬೇಕು ಎಂದು ಹೇಳಿದಳು.

ಎರಡು ಹೊತ್ತು ಊಟ ಮತ್ತು ಇರಲು ಸ್ಥಳ, ಇದರಿಂದ ನನ್ನ ಅತಿ ದೊಡ್ಡ ಸಮಸ್ಯೆಯೇ ಬಗೆ ಹರಿಯಿತು. ಅಮ್ಮನಿಗೆ ಭಾರವಾಗುವ ಸಂದರ್ಭ ತಪ್ಪಿತು. ಈ ಸಲ ಅಮ್ಮ ಮದುವಣಗಿತ್ತಿಯಂತೆ ಮೆರವಣಿಗೆಯಲ್ಲಿ ಹೋಗಲಿಲ್ಲ, ಒಂದು ರಾತ್ರಿ ಎಲ್ಲರ ಕಣ್ಣು ತಪ್ಪಿಸಿ ರಿಕ್ಷಾದಲ್ಲಿ ಕುಳಿತು ಹೊರಟು ಹೋದಳು. ಅಳಬಾರದೆಂದಿದ್ದಳೇನೋ, ಆದರೂ ಕಣ್ಣೀರ ಕಟ್ಟೆಯೊಡೆಯಿತು. ಮಗಳಾಗಿದ್ದೂ ಅವಳನ್ನು ಭೆಟ್ಟಿಯಾಗಲು ಹೋಗಲಾರದ ಸ್ಥಿತಿ ನನ್ನದು. ಅಳುವನ್ನೇ ಮರೆತಿದ್ದೆ, ಬಾಯ್ತೆರೆದರೆ ಧ್ವನಿಯೇ ಹೊರಡಲಿಲ್ಲ, ದಳದಳ ಕಣ್ಣೀರು ಹರಿಯಿತಷ್ಟೇ. ಏನೇ ಆದರೂ ನಾನವಳ ಮಗಳು, ಗೆಳತಿ, ಎಷ್ಟೋ ಸಲ ಅವಳ ಭಾವೋದ್ರೇಕಗಳಿಗೆ ಉಪಶಮನವಾಗಿದ್ದೆ. ಆದರೀಗ ಸಹಾಯಹಸ್ತವನ್ನು ನೀಡುವಂತಿರಲಿಲ್ಲ. ಹಾಗೆ ಮಾಡಬೇಕಿದ್ದರೆ, ನಾನವಳ ನಿರ್ದೇಶನದಂತೆ ನಡೆದುಕೊಳ್ಳಬೇಕಾಗಿತ್ತು.

ಅವಳು ಹೋದ ನಂತರ ನಾನು ಬಹಳ ಹೊತ್ತು ಸುಮ್ಮನೇ ಕುಳಿತೆ, ಯೋಚಿಸಿದೆ. ನಾವಿಬ್ಬರು, ತಾಯಿ ಮತ್ತು ಮಗಳು, ಇಬ್ಬರೂ ಜೋಡಿ ಬೀದಿನಾಯಿಗಳಂತೆ ಕೇವಲ ನಮ್ಮ ಬಾಯಿಗಾಗಿ ಎಲ್ಲ ತೊಂದರೆಗಳನ್ನು ಸಹಿಸಿಕೊಳ್ಳಬೇಕಾಗಿತ್ತು. ನಮ್ಮ ಶರೀರಗಳ ಉಳಿದ ಯಾವ ಅಂಗಗಳಿಗೂ ಯಾವುದೇ ತರಹದ ಮಹತ್ವವಿರಲಿಲ್ಲ. ಬಾಯಲ್ಲಿ ಅನ್ನವನ್ನು ತುರುಕಿಕೊಳ್ಳಲು ನಮ್ಮ ಇಡೀ ಶರೀರವನ್ನು ಮಾರಾಟಕ್ಕಿಡಲೇಬೇಕಾದ ಪರಿಸ್ಥಿತಿ ನಮ್ಮದು. ಇಲ್ಲ, ನಮ್ಮ ಅಮ್ಮನನ್ನು ದ್ವೇಷಿಸಲಾರೆ. ಇದರಲ್ಲಿ ಅವಳ ತಪ್ಪೇನೂ ಇಲ್ಲ. ಅವಳಿಗೆ ಬಾಯಿಯಿರುವುದು ಅವಳ ತಪ್ಪೇ? ತಪ್ಪೆಲ್ಲ ಆಹಾರದ್ದೇ, ತನ್ನ ಯಾವ ಅಧಿಕಾರಬಲದಿಂದ ಅದು ನಮ್ಮಿಂದ ದೂರವಿದೆ?

ನಾವು ಜೊತೆಯಾಗಿ ಅನುಭವಿಸಿದ್ದ ಎಲ್ಲ ತೊಂದರೆಗಳ ನೆನಪುಗಳು ಉಕ್ಕಿ ಬಂದವು. ಆದರೆ ನನ್ನ ಕಣ್ಣೀರಿನ ಜೊತೆಗಾರನಾಗಿರುತ್ತಿದ್ದ ಬಿದಿಗೆಯ ಚಂದ್ರ ಮಾತ್ರ ಅವತ್ತು ಮೂಡಲೇ ಇಲ್ಲ. ಕಗ್ಗತ್ತಲು ಕವಿದಿತ್ತು. ಮಿಣುಕುಹುಳುಗಳ ಮಿಂಚು ಸಹ ಕಾಣುತ್ತಿರಲಿಲ್ಲ. ಇಂತಹ ಕಾರ್ಗತ್ತಲೆಯಲ್ಲಿ ನಿಶ್ಶಬ್ದವಾಗಿ ನೆರಳಿನವದಾದ ಭೂತದಂತೆ ಅಮ್ಮ ಕಣ್ಮರೆಯಾಗಿದ್ದಳು. ಅವಳೇನಾದರೂ ಮರುದಿನವೇ ಸಾವನ್ನಪ್ಪಿದರೆ, ಅವಳ ಅಂತ್ಯಕ್ರಿಯೆ ಅಪ್ಪನ ಸಮಾಧಿಯ ಬದಿಯಾಗುತ್ತಿರಲಿಲ್ಲ. ಅವಳ ಸಮಾಧಿಯನ್ನೂ ನನ್ನಿಂದ ಹುಡುಕಾಡುವಾಗುತ್ತಿರಲಿಲ್ಲ. ಅವಳು ನನ್ನೊಬ್ಬಳೇ ಅಮ್ಮ, ನನ್ನ ಒಬ್ಬಳೇ ಗೆಳತಿ. ಆದರಿವತ್ತು ಜಗತ್ತಿನಲ್ಲಿ ನಾನು ಒಬ್ಬಂಟಿ.

೧೪.

ಅಮ್ಮನನ್ನು ಮತ್ತೆ ಕಾಣಲಾಗಲಿಲ್ಲ. ಕೊರೆಯುವ ಮಂಜಿನಿಂದ ಅರಳುತ್ತಿರುವ ಮೊಗ್ಗು ಮುರುಟಿಹೋದಂತೆ ನನ್ನೆದೆಯಲ್ಲಿಯ ಪ್ರೀತಿ ಮುರುಟತೊಡಗಿತು. ಕ್ಲರ್ಕನ ಕೆಲಸದಲ್ಲಿ ಕೈಗೂಡಿಸುವುದಕ್ಕಾಗಿ ನನ್ನ ಕೈಬರಹದತ್ತ ಲಕ್ಷ್ಯ ಕೊಡಬೇಕಾಯಿತು. ನಾನು ತಿನ್ನುವ ಕೂಳು ಬಿಟ್ಟಿಯದಾಗಬಾರದು. ನನ್ನ ಕ್ಲಾಸಿನಲ್ಲಿರುವ ಹುಡುಗಿಯರು ಉಳಿದವರು ಏನು ಮಾಡುತ್ತಿದ್ದಾರೆ, ಏನನ್ನು ತಿನ್ನುತ್ತಾರೆ ಎಂಬುದನ್ನೇ ಗಮನಿಸುತ್ತಿದ್ದರು. ಆದರೆ, ನಾನು ಹಾಗೆಲ್ಲ ಮಾಡಬಾರದು. ನನ್ನ ಪ್ರೀತಿ, ಗದರಿಸುವಿಕೆ, ತೆಗಳುವಿಕೆ, ಹೊಗಳಿಕೆ, ಎಲ್ಲದರ ಕೇಂದ್ರಬಿಂದು ನಾನೇ ಆಗಿದ್ದೆ. ನನ್ನ ನೆರಳೇ ನನ್ನ ಗೆಳತಿ. ಇತ್ತೀಚೆಗಂತೂ ನನ್ನಿಂದಲೇ ನಾನು ಬೇರೆಯಾಗಿ ಕುಳಿತು ನನ್ನನ್ನೇ ಅರ್ಥೈಸಿಕೊಳ್ಳಲು, ವಿಮರ್ಶಿಸಿಕೊಳ್ಳಲು ಪ್ರಾರಂಭಿಸಿದ್ದೆ.

ವರ್ತಮಾನವೊಂದೇ ನನ್ನ ಬಳಿಯಿತ್ತು, ಭವಿಷ್ಯತ್ತಿಗೆ ಯಾವ ಸ್ಥಳವಿದ್ದಿಲ್ಲ. ಕಾರಣ ಮುಂದಾಲೋಚನೆ ಮಾಡುವುದನ್ನೂ ತ್ಯಜಿಸಿದ್ದೆ. ಸಮಯದ ಬಗ್ಗೆ ಮಾತ್ರ ಯೋಚಿಸಬೇಕಾಗಿತ್ತು, ಬೇರೆಯವರು ಕೊಡುತ್ತಿರುವ ಅನ್ನ ತಿನ್ನುತ್ತಿರುವುದರಿಂದ ಮಧ್ಯಾಹ್ನ ಮತ್ತು ಸಂಜೆಗಳು ಯಾವಾಗ ಎಂಬುದನ್ನು ತಿಳಿದುಕೊಳ್ಳಲೇಬೇಕಾಗಿತ್ತು. ಇಲ್ಲದಿದ್ದರೆ ಸಮಯದ ಬಗ್ಗೆ ಯೋಚಿಸುತ್ತಲೇ ಇರಲಿಲ್ಲ. ಆಸೆ, ನಿರೀಕ್ಷೆಗಳಿಲ್ಲದಿದ್ದರೆ ಸಮಯಕ್ಕೆ ಯಾವ ಕಿಮ್ಮತ್ತೂ ಇಲ್ಲ. ದಿನ – ತಿಂಗಳುಗಳಿಲ್ಲದ ಸ್ಥಳದಲ್ಲಿ ನಾನು ಬಂಧಿಯಾಗಿರುವೆನೇನೋ ಎಂದೆನಿಸುತ್ತಿತ್ತು. ಅಮ್ಮನ ಜೊತೆ ನಾನಿದ್ದಿದ್ದು ಬಹುಶಃ ಹದಿನೈದು ಹದಿನಾರು ವರ್ಷಗಳಷ್ಟು ಇದ್ದಿರಬಹುದೇನೋ. ನನ್ನ ಸಹಪಾಠಿಗಳು ಹಬ್ಬ, ಹುಣ್ಣಿಮೆ, ಹೊಸ ವರ್ಷದ ರಜೆ, ಬೇಸಿಗೆ ರಜೆ, ಇವುಗಳಿಗಾಗಿ ಕಾತುರತೆಯಿಂದ ಕಾಯುತ್ತಿದ್ದರು. ಆದರೆ ಇವೆಲ್ಲವುಗಳಿಂದ ನನಗೇನು ಉಪಯೋಗ?

ನನ್ನ ಶರೀರದಲ್ಲಿ ಆಗುತ್ತಿರುವ ಬದಲಾವಣೆಗಳು ನನ್ನನ್ನು ಹೆದರಿಸುತ್ತಿದ್ದವು.

ಅದೇ ಸಮಯದಲ್ಲಿ ನನಗೊಂದು ತರಹ ಖುಷಿಯೂ ಆಗುತ್ತಿತ್ತು. ಅಂಗಾಂಗಗಳ ಮೇಲೆ ಕೈಯಾಡಿಸಿದಾಗ ಮೆದುವಾದ ಹೂಗಳನ್ನು ಸ್ಪರ್ಶಿಸಿದಂತೆ ಅನಿಸುತ್ತಿತ್ತು. ನನ್ನ ಶರೀರ ಬಲಿಯುತ್ತಿರುವಂತೆ ನನ್ನ ಮಾನಸಿಕ ಸ್ಥಿತಿಯೂ ಸಂದಿಗ್ಧವಾಗತೊಡಗಿತು. ನನ್ನ ಮೇಲಿನ ನಂಬಿಗೆಯನ್ನೇ ಕಳೆದುಕೊಳ್ಳಲಾರಂಭಿಸಿದೆ. ಸುಂದರಿಯಾಗುತ್ತಿರುವ ಅನುಭೂತಿಯಾಗುತ್ತಿತ್ತು. ಸೌಂದರ್ಯದೊಂದಿಗೆ ನನ್ನ ಸಾಮಾಜಿಕ ಸ್ತರ ಹೆಚ್ಚುತ್ತಲಿದೆಯೆಂದೆನಿಸಿತು. ಇದೊಂದು ರೀತಿಯ ಸಾಂತ್ವನ ನಿಜ. ಆದರೆ ಈ ಮೊದಲು ನನ್ನ ಸಾಮಾಜಿಕ ಸ್ತರವೇನಿತ್ತು? ಈ ವಿಚಾರ ಬಂದೊಡನೆ ಈ ಸಾಂತ್ವನೆಯೂ ಕಹಿಯಾಗುತ್ತಿತ್ತು. ಇದೆಲ್ಲ ಏನೇ ಇದ್ದರೂ, ನನ್ನ ಚೆಲುವಿನ ಬಗ್ಗೆ ನನ್ನಲ್ಲಿ ಗರ್ವ ಮೂಡಲಾರಂಭಿಸಿತು. ಬಡವಿ ಆದರೂ ಸುಂದರಿ, ಎಂತಹ ವಿಪರ್ಯಾಸ? ತಕ್ಷಣ ಬೆನ್ನುಹುರಿಯನ್ನೇ ಕಲಕುವಂತಹ ವಿಷಯ ನೆನಪಾಯಿತು. ಅಮ್ಮನೂ ಇಷ್ಟೇ ಸುಂದರಿಯಾಗಿದ್ದಳಲ್ಲವೇ!

೧೫.

ಬಹಳ ದಿನಗಳವರೆಗೆ ಬಿದಿಗೆಯ ಚಂದ್ರನನ್ನು ನೋಡಲಿಲ್ಲ. ಅವನು ಮೂಡಿದಾಗಲೆಲ್ಲ ನೋಡಬೇಕೆನಿಸಿದರೂ ಕೆತ್ತೆತ್ತುವ ಧೈರ್ಯವಾಗಿರಲಿಲ್ಲ. ನನ್ನ ಹೈಸ್ಕೂಲ್ ಅಭ್ಯಾಸ ಮುಗಿದಿದ್ದರೂ ನಾನು ಶಾಲೆಯಲ್ಲಿಯೇ ಇರುತ್ತಿದ್ದೆ. ಸಂಜೆಯಿಂದ ಇಬ್ಬರು ಮುದಿ ಸೇವಕಿಯರೇ ನನ್ನ ಸಂಗಾತಿಗಳು. ನಾನು ವಿದ್ಯಾರ್ಥಿನಿಯೂ ಅಲ್ಲ, ಶಿಕ್ಷಕಿಯೂ ಅಲ್ಲ, ಸೇವಕಿಯಂತೆ ಕಂಡು ಬಂದರೂ ಸೇವಕಿಯಲ್ಲ. ನನ್ನೊಂದಿಗೆ ಹೇಗೆ ವರ್ತಿಸಬೇಕು ಎನ್ನುವುದೇ ಸಂದಿಗ್ಧವಾಗಿತ್ತವರಿಗೆ.

ಸಂಜೆ ಒಬ್ಬಳೇ ಶಾಲೆಯ ಅಂಗಳದಲ್ಲಿ ತಿರುಗಾಡುತ್ತಿದ್ದೆ. ಬಿದಿಗೆಯ ಚಂದ್ರ ಮೂಡುವ ಮುನ್ನ ನನ್ನ ರೂಮು ಸೇರಿಕೊಳ್ಳುತ್ತಿದ್ದೆ. ಅವನನ್ನು ನೋಡುವ ಧೈರ್ಯ ನನಗಿರಲಿಲ್ಲ. ರೂಮಿನಲ್ಲಿದ್ದರೂ ನನಗೆ ಅವನದೇ ವಿಚಾರ. ಹೊರಗಿನಿಂದ ಸೂಸಿ ಬರುವ ತಂಗಾಳಿ ಅವನ ಕ್ಷೀಣಬೆಳಕನ್ನು ನನ್ನತ್ತ ತರುತ್ತದೆ ಎಂದೆನಿಸುತ್ತಿತ್ತು. ಅದರೊಂದಿಗೆ ನನ್ನ ಭೂತಕಾಲದ ಕಹಿ ನೆನಪುಗಳನ್ನು ಕರೆತಂದು ನನ್ನ ಭವಿಷ್ಯದ ಕೇಡಿನ ಮುನ್ಸೂಚನೆಗಳನ್ನು ತರುತ್ತದೆಯೆಂದೆನಿಸುತ್ತಿತ್ತು. ನನ್ನಲ್ಲಿ ಯಾವುದೇ ಆಶೆ ಉಳಿದಿರಲಿಲ್ಲ. ಭವಿಷ್ಯದಲ್ಲಿ ಕಗ್ಗತ್ತಲೆಯೊಂದೇ ನನ್ನ ಸಂಗಾತಿ ಎಂದೆನಿಸುತ್ತಿತ್ತು. ಆದರೂ ನಾನು ಅಳುತ್ತಿರಲಿಲ್ಲ. ಮೊಂಡುಧೈರ್ಯದಿಂದ ಈ ಯೋಚನೆಗಳನ್ನು ಹೊಡೆದೋಡಿಸುತ್ತಿದ್ದೆ.

೧೬.

ಆಗಾಗ ಹಲವು ಹುಡುಗಿಯರ ಸ್ವೆಟರುಗಳನ್ನು ಹೆಣೆದು ಕೊಟ್ಟು ಸ್ವಲ್ಪ ಹಣ ಕೂಡಿಸಿದ್ದೆ, ಯಾಕೆಂದರೆ ಎಲ್ಲರಿಗೂ ಹೆಣೆಯಲು ಬರುತ್ತಿತ್ತು ಮತ್ತು ತಮಗೆ ಬೇರೆ

ಕೆಲಸದ ಒತ್ತಡವಿದ್ದಾಗ ಮಾತ್ರ ನನ್ನ ಹತ್ತಿರ ಬರುತ್ತಿದ್ದರು. ನನ್ನಲ್ಲೊಂದು ಕ್ಷೀಣ ಆಸೆ ಮೂಡತೊಡಗಿತು. ಈಗ ಅಮ್ಮ ಬಂದರೆ ಅವಳನ್ನು ನೋಡಿಕೊಳ್ಳಬಹುದೆಂಬುದೇ ಆ ಆಶಾಕಿರಣ. ನಂತರ ಒಮ್ಮೆ ವರ್ಷವಿಡೀ ಗಳಿಸಿದ ಹಣವನ್ನು ಎಣಿಸಿದಾಗ ನನ್ನ ಆಸೆ ಎಷ್ಟು ದುರ್ಬಲವಿತ್ತೆಂಬುದರ ಅರಿವಾಯಿತು. ಆದರೂ ನನಗೊಂದಿಷ್ಟು ಸಮಾಧಾನ. ಈಗಲೂ ಅವಳು ಬಂದರೆ ಹೇಗಾದರೂ ಜೀವನ ಸಾಗಿಸಬಹುದು. ಕಷ್ಟ ಪಟ್ಟು ದುಡಿಯಬಹುದು ಎಂದೆಲ್ಲ ಅನಿಸುತ್ತಿತ್ತು. ಸದಾ ಅಮ್ಮನ ಬಗ್ಗೆಯೇ ಯೋಚಿಸುತ್ತ ಅವಳನ್ನು ಕನಸಿನಲ್ಲೂ ಕಂಡಿದ್ದೆ.

ಹೀಗೆ ಒಂದು ದಿನ ಹುಡುಗರ ಗುಂಪಿನೊಂದಿಗೆ ಹಳ್ಳಿಗಾಡಿನತ್ತ ಹೋಗಿದ್ದೆ. ಬರುವಾಗ ಕತ್ತಲೆಯಾಗುತ್ತಿದೆಯೆಂದು ಶಹರನ್ನು ಒಂದು ಸಣ್ಣ ಗಲ್ಲಿಯ ಮೂಲಕ ಪ್ರವೇಶಿಸಿದೆವು. ಅಲ್ಲಿ ಅಮ್ಮನನ್ನು ಕಂಡೆ. ಅದೊಂದು ಹಳೆ ಬಣ್ಣ ಬಳಿದ ಪ್ರತಿಷ್ಠಿತ ಆಕೃತಿಯೊಂದು ಆ ಮನೆಯ ಮುಂದಿತ್ತು. ಅದರ ಪಕ್ಕದಲ್ಲಿಯೇ ಕುಳಿತು, ಒಳಗಿನ ಕೋಣೆಯಲ್ಲಿರುವ ನೀರನ್ನು ಕಾಯಿಸಲು ಅವಳು ಕುಲುಮೆಯ ತುದಿಯನ್ನು ಊದುತ್ತಿದ್ದಳು. ಅವಳು ಗೋಡೆಯ ಬಳಿ ಕುಳಿತು, ತನ್ನ ತಲೆಯನ್ನು ಕೆಳಗೆ ಬಾಗಿಸಿಟ್ಟಿದ್ದಳು. ಬಹು ದೂರದಿಂದ ಅವಳನ್ನು ಹಿಂದಿನಿಂದಲೇ ಗುರುತಿಸಿದ್ದೆ. ಅವಳನ್ನು ದಾಟಿ ಹೋಗುವಾಗ ನಾನೂ ತಲೆ ಬಾಗಿಸಿ ವಾರೆ ನೋಟದಿಂದ ನೋಡಿದೆ. ಅವಳು ಮುಖ ಮೇಲೆತ್ತಲಿಲ್ಲ. ಮನಸ್ಸಿದ್ದರೂ ನಾನೂ ಅವಳತ್ತ ಹೋಗಲಿಲ್ಲ. ಇಂತಹ ಅಮ್ಮ ನನಗಿದ್ದಾಳೆಂದು ಇವರಿಗೆ ಗೊತ್ತಾದರೆ, ನಗಲಿಕ್ಕಿಲ್ಲವೇ ಇವರು, ನನ್ನನ್ನು ಹೀಯಾಳಿಸಲಿಕ್ಕಿಲ್ಲವೇ? ದೂರ ಹೋದ ನಂತರ ಮತ್ತೆ ಹೊರಳಿ ನೋಡಿದೆ. ಅವಳು ತಲೆ ಕೆಳಗೆ ಮಾಡಿ ಕುಲುಮೆಯ ತುದಿಯನ್ನೇ ಊದುತ್ತಿದ್ದಳು. ಆ ಗಲ್ಲಿಯ ಹೆಸರನ್ನು ಮನನ ಮಾಡಿಕೊಂಡೆ.

೧೭.

ಮನಸ್ಸಿನ ಒತ್ತಡ ಹೆಚ್ಚಾಗುತ್ತಲೇ ಹೋಯಿತು. ಅಮ್ಮನನ್ನು ನೋಡದಿದ್ದರೆ ಮನಸ್ಸಿಗೆ ಶಾಂತಿ ಇಲ್ಲವೆಂದು ಅನಿಸತೊಡಗಿತು. ಶಾಲೆಯಲ್ಲಿಯೂ ಬದಲಾವಣೆಗಳಾಗುತ್ತಿದ್ದವು. ಹೊಸ ಮುಖ್ಯಾಧ್ಯಾಪಕಿ ಬರುವವಳಿದ್ದಳು. ಅವಳು ನನಗೆ ಆಹಾರ ಮತ್ತು ವಸತಿ ಕೊಡಲು ಒಪ್ಪಲಿಕ್ಕಿಲ್ಲವೆಂದೂ, ನನ್ನ ವ್ಯವಸ್ಥೆಯನ್ನು ನಾನೇ ನೋಡಿಕೊಳ್ಳುವುದು ಒಳಿತು ಎಂದೂ ಸದ್ಯದ ಮುಖ್ಯಾಧ್ಯಾಪಕಿ ನನಗೆ ತಿಳಿಸಿದಳು. ನನ್ನಲ್ಲಿರುವ ಹಣವನ್ನು ಎಣಿಸಿದೆ. ಎರಡು ಡಾಲರ್ ಮತ್ತು ಇಪ್ಪತ್ತು ಸೆಂಟುಗಳಿದ್ದವು. ಇದಿಷ್ಟು ನನಗೆ ಕೆಲ ದಿನಗಳ ಊಟ ಒದಗಿಸುತ್ತದೆ. ಆದರೆ ನಾನು ಎಲ್ಲಿರಬೇಕು? ಚಿಂತಿಸುತ್ತ ಕುಳಿತರೆ ಏನೂ ಪ್ರಯೋಜನವಿಲ್ಲ. ಏನಾದರೂ ಮಾಡಲೇಬೇಕು.

ನನಗೆ ಹೊಳೆದ ಪ್ರಥಮ ವಿಚಾರವೆಂದರೆ ಅಮ್ಮನನ್ನು ಭೆಟ್ಟಿಯಾಗಬೇಕು. ಆದರೆ, ತನ್ನೊಂದಿಗೆ ಇರಲು ನನಗೆ ಒಪ್ಪಿಗೆ ಕೊಡದೇ ಹೋದರೆ? ಈ ವಿಚಾರದಲ್ಲಿ ಅವಳ ಮತ್ತು ಬ್ರೆಡ್ ಅಂಗಡಿಯವನ ಮಧ್ಯೆ ಜಗಳವಾದರೆ, ಅವಳಿಗೆ ಕೆಡುಕೆನಿಸೀತು. ಈಗ ನನ್ನ ಪ್ರತಿ ಹೆಜ್ಜೆಯನ್ನು ಅವಳ ದೃಷ್ಟಿಕೋನದಿಂದ ಅಳೆಯಬೇಕಾಗಿತ್ತು. ನನ್ನಮ್ಮನಾದರೂ ಅವಳು ನನ್ನಮ್ಮನಾಗಿ ಉಳಿದಿರಲಿಲ್ಲ. ನಮ್ಮಿಬ್ಬರ ನಡುವೆ ಬಡತನದ ಅಡ್ಡಗೋಡೆ ಬೆಳೆದಿತ್ತು. ಬಹಳ ವಿಚಾರ ಮಾಡಿ ಅವಳಲ್ಲಿ ಹೋಗುವ ವಿಚಾರ ತೆಗೆದು ಹಾಕಿದೆ. ನನ್ನನ್ನು ನಾನೇ ಸಂಭಾಳಿಸಕೊಳ್ಳಬೇಕು. ಆದರೆ ಹೇಗೆ, ಇದುವೇ ಮುಖ್ಯ ಪ್ರಶ್ನೆ . ಜಗತ್ತು ಬಹಳ ಚಿಕ್ಕದೆನಿಸತೊಡಗಿತ್ತು, ನನಗೆ ಮತ್ತು ನನ್ನ ಸಣ್ಣ ಅರಿವೆ-ಅಂಚಡಿಯ ಗಂಟಿಗೆ ಸ್ಥಳ ಸಿಗುತ್ತಿಲ್ಲ. ಬೀದಿನಾಯಿಯೇ ಸುಖಿ, ಅದು ಎಲ್ಲಿ ಬೇಕೆನಿಸಿದಲ್ಲಿ ಮಲಗಬಹುದು. ನನಗೆ ರಸ್ತೆ ಬದಿಯಲ್ಲಿ ಮಲಗಲೂ ಅನುಮತಿಯಿಲ್ಲ. ಏಕೆಂದರೆ ನಾನು ಮನುಷ್ಯಳು, ಆದರೂ ನಾಯಿಗಿಂತ ಕಡೆ. ನಾನೊಂದು ವೇಳೆ ಹೊರಗೆ ಹೋಗಲು ನಿರಾಕರಿಸಿದರೆ. ಹೊಸ ಮುಖ್ಯಾಧ್ಯಾಪಕಿ ನನ್ನನ್ನು ಹೊರಗೆ ಹಾಕುವಳೇ? ಇಲ್ಲ, ನಾನು ಅದಕ್ಕಾಗಿ ಕಾಯಬಾರದು.

ವಸಂತನ ಆಗಮನವಾಗಿತ್ತು, ಎಲ್ಲಿ ನೋಡಿದಲ್ಲೆಲ್ಲ ಹಸಿರು, ಮತ್ತು ನಾನು ಬಹಳ ಪ್ರೀತಿಸುತ್ತಿದ್ದ ಹೂಗಳೇ. ಆದರೂ ಮನಸ್ಸಿಗೆ ಸಮಾಧಾನವಿಲ್ಲ. ಹೂಗಳ ಕೆಂಪು ಮತ್ತು ಎಲೆಗಳ ಹಸಿರು ನನಗೀಗ ಕೇವಲ ಬಣ್ಣಗಳಾಗಿದ್ದು ಮತ್ತೇನಲ್ಲ. ನನ್ನ ಹೃದಯದ ವಸಂತನಂತೂ ಶವದಂತೆ ಕಟು ಶೀತಲನಾಗಿದ್ದ. ನನಗೆ ಅಳುವುದು ಬೇಕಾಗಿದ್ದಿಲ್ಲವಾದರೂ. ಕಣ್ಣೀರು ತಾನೇ ಹರಿದು ನನ್ನ ಕಪೋಲಗಳನ್ನು ತೋಯಿಸಿತ್ತು.

೧೮.

ಅಮ್ಮನ ಹತ್ತಿರ ಹೋಗಲಿಲ್ಲ, ಹೋಗಲೂಕೂಡದು. ಯಾರನ್ನೂ ಅವಲಂಬಿಸಬಾರದು ನಾನು. ನನ್ನ ಅನ್ನವನ್ನು ನಾನೇ ಗಳಿಸಿಕೊಳ್ಳಬೇಕು. ಇಡೀ ಎರಡು ದಿನ ಬಹಳ ಆಶೆಯಿಂದ ಕೆಲಸ ಹುಡುಕಾಡಿದೆ. ನಾನು ಗಳಿಸಿದ್ದು ಬರೀ ಕಾಲು ನೋವು ಮತ್ತು ನಿರಾಶೆಯ ಕಣ್ಣೀರು.

ಅಮ್ಮನನ್ನೀಗ ಸಂಪೂರ್ಣವಾಗಿ ಅರ್ಥ ಮಾಡಿಕೊಂಡೆ, ಅವಳನ್ನು, ಅವಳ ತಪ್ಪುಗಳನ್ನು, ಕ್ಷಮಿಸಲೇಬೇಕು. ಅವಳು ಹೊಲಸು ನಾರುವ ಕಾಲ್ಚೀಲಗಳನ್ನಾದರೂ ತೊಳೆಯಬಲ್ಲವಳಾಗಿದ್ದಳು, ನನ್ನಿಂದ ಅದೂ ಆಗುತ್ತಿರಲಿಲ್ಲ. ಅವಳು ಕೊನೆಗೆ ತನಗುಳಿದಿದ್ದ ಒಂದೇ ಒಂದು ಹಾದಿಯನ್ನು ಆರಿಸಿದಳು.

ಶಾಲೆಯಲ್ಲಿ ಕಲಿತ ವಿದ್ಯೆ ಮತ್ತು ನೈತಿಕತೆಯ ಜ್ಞಾನ ಹೊಟ್ಟೆ ತುಂಬಿದವರ ಆಟಿಗೆ ಸಾಮಾನುಗಳು, ನನಗೋ ಅವು ಈಗ ಕೇವಲ ಹಾಸ್ಯಾಸ್ಪದ ವಿಷಯಗಳಾಗಿದ್ದವು. ನನ್ನ ಅಮ್ಮನಂಥವಳನ್ನು, ನನ್ನ ಅಮ್ಮನೆಂದು ಅವರು ಒಪ್ಪಲು ತಯಾರಿರಲಿಲ್ಲ. ತನ್ನನ್ನೇ

ಮಾರಿಕೊಳ್ಳುವವರೆಂದರೆ ಅವರಿಗೆ ಘೃಣೆಯ ವಸ್ತು. ಅವರ ದೃಷ್ಟಿಯಲ್ಲಿ ಅವರು ತಿಳಿದುಕೊಂಡಷ್ಟು ಸರಿಯಿರಬಹುದು. ಯಾಕೆಂದರೆ ಅವರಿಗೆ ಪ್ರತಿದಿನ ಹೊಟ್ಟೆ ತುಂಬ ಊಟ ಸಿಗುತ್ತದೆ.

ನನ್ನ ಮನಸ್ಸನ್ನು ಗಟ್ಟಿ ಮಾಡಿಕೊಂಡೆ. ಯಾರಾದರೂ ನನಗೆ ಹೊಟ್ಟೆ ತುಂಬ ಊಟ ಕೊಡುವವರಾದರೆ ನಾನು ಏನನ್ನಾದರೂ ಮಾಡಬಲ್ಲೆ. ಆತ್ಮಹತ್ಯೆಯ ಯೋಚನೆ ಸುಳಿದದ್ದೂ ನಿಜ. ಆದರೆ ನಾನೀಗ ಸಾಯಬಯಸುತ್ತಿಲ್ಲ. ನಾನು ಚಿಕ್ಕವಳು, ಸುಂದರಿ, ನಾನು ಬದುಕಲೇಬೇಕು. ಈಗ ಅಮ್ಮ ಆಕರ್ಷಕ ವ್ಯಕ್ತಿಯಾಗಿ ತೋರುತ್ತಿದ್ದಾಳೆ.

೧೯.

ನಿರ್ಧಾರ ತೆಗೆದುಕೊಂಡ ನಂತರ ಮನಸ್ಸು ಹಗುರವಾಯಿತು, ಒಂದು ಕೆಲಸವೇ ಸಿಕ್ಕಂತಾಯಿತು. ಬೆಳದಿಂಗಳು ಮೂಡಿದಾಗಲೆಲ್ಲ ಶಾಲೆಯ ಅಂಗಳದಲ್ಲಿ ಅಲೆದಾಡಲು ಧೈರ್ಯ ಬಂದಿತು. ವಸಂತಋತುವಿನ ಬಿದಿಗೆಯ ಚಂದ್ರ ಆಕಾಶದಲ್ಲಿ ವಿರಾಜಮಾನನಾಗಿದ್ದ. ಸುಂದರವಾದ ನೀಲಿ ಆಕಾಶ, ಒಂದು ಚಿಕ್ಕ ಮೋಡದ ತುಣುಕೂ ಕಾಣುತ್ತಿರಲಿಲ್ಲ. ಚಂದ್ರ ತನ್ನ ಶಾಂತಬೆಳಕಿನಿಂದ ಗಿಡ ಮರಗಳ ಟೊಂಗೆ – ಎಲೆಗಳನ್ನು ಬೆಳಗಿಸುತ್ತಿದ್ದ. ಹೂಗಳ ಮಧುರ ಸುವಾಸನೆಯನ್ನು ಹೊತ್ತ ತಂಗಾಳಿ ಮೆಲ್ಲನೆ ಬೀಸುತ್ತ ಗಿಡಮರಗಳ ಟೊಂಗೆಗಳನ್ನು ಬೆಳಕು ಕತ್ತಲೆಯ ನಡುವೆ ಹೊಯ್ದಾಡಿಸುತ್ತಿತ್ತು. ತಂಗಾಳಿ ಹಿತಕರವಾಗಿತ್ತು. ನಡುಕ ಹುಟ್ಟಿಸುವಷ್ಟು ತಣ್ಣಗಿರಲಿಲ್ಲ. ಚಂದ್ರನ ಮಂದ ಬೆಳಕಿನಲ್ಲಿ ನೆರಳುಗಳು ಅಸ್ಪಷ್ಟವಾಗಿ ಹರಡಿದ್ದವು. ಗಿಡಗಳ ಮಿತಿಯನ್ನು ದಾಟಿ ನೋಡಿದರೆ, ನೀಲಿಯಾಕಾಶದಲ್ಲಿ ವಕ್ರನಾದ ಚಂದ್ರನನ್ನು ಮತ್ತು ಗಿಡಗಳನ್ನು ನೋಡಿ ತುಂಟ ದೇವತೆಯೊಬ್ಬಳು ತನ್ನ ಕಣ್ಣುಗಳನ್ನು ಮಿಟುಕಿಸುತ್ತಿರುವ ಹಾಗೆ ಹೊಳೆಯುತ್ತಿದ್ದ ಎರಡು ನಕ್ಷತ್ರಗಳು ಕಾಣುತ್ತಿದ್ದವು. ಚಂದ್ರನತ್ತ ಮುಖ ಮಾಡಿದ ಎತ್ತರವಾದ ಗಿಡದ ಅರ್ಧ ಭಾಗವಂತೂ ಬಿಳಿ ಹೂಗಳ ಅಲಂಕಾರದಿಂದ ಬೆಳದಿಂಗಳಲ್ಲಿ ಕಂಗೊಳಿಸುತ್ತಿತ್ತು. ಎಂತಹ ಸುಂದರ ರಮ್ಯ ದೃಶ್ಯ! ನಿಸರ್ಗದೇವತೆಯೇ ಮೈವೆತ್ತಂತಿತ್ತು.

ಇದೇ ಬಿದಿಗೆಯ ಚಂದ್ರನೊಂದಿಗೆ ನನ್ನ ಸುಂದರ ಆಶೋತ್ತರಗಳು ಆರಂಭವಾಗಲಿ.

೨೦

ನನಗೆ ಇಲ್ಲಿಯವರೆಗೆ ಸಹಾಯ ಮಾಡಿದ ಮುಖ್ಯಾಧ್ಯಾಪಕಿಯನ್ನು ಮತ್ತೊಮ್ಮೆ ಭೆಟ್ಟಿಯಾಗಲೆಂದು ನಾನು ಹೋದೆ. ಅವಳು ಮನೆಯಲ್ಲಿರಲಿಲ್ಲ. ಒಬ್ಬ ಸುಂದರ ಯುವಕ ಬಾಗಿಲು ತೆರೆದು ನನ್ನನ್ನು ಒಳಗೆ ಕೂಡಿಸಿದ. ಅವನ ಮುಖದಲ್ಲಿ ಆಕರ್ಷಕ ಮಿತ್ರತ್ವಭಾವ ಹೊಮ್ಮುತ್ತಿತ್ತು. ಗಂಡಸರಿಗೆ ಹೆದರುವ ನನಗೆ, ಇವನನ್ನು ನೋಡಿದಾಗ

ಹೆದರಿಕೆಯನಿಸಲೇ ಇಲ್ಲ. ಅವನು ಕೇಳಿದ ಪ್ರಶ್ನೆಗಳಿಗೆ ನಿರುತ್ತರಳಾಗಿ ಕೂಡಲಾಗಲಿಲ್ಲ. ನಾನ್ಯಾಕೆ ಬಂದಿದ್ದೇನೆ ಎಂಬುದನ್ನು ವಿವರಿಸಿದೆ. ನಾನು ಹೇಳಿದ್ದುದೆಲ್ಲವನ್ನೂ ಗಮನವಿಟ್ಟು ಕೇಳಿ, ಸಹಾಯ ಮಾಡುತ್ತೇನೆಂದು ಭಾಷೆ ಕೊಟ್ಟ.

ಅಂದೇ ರಾತ್ರಿ ನಾನಿದ್ದಲಿಗೆ ಎರಡು ಡಾಲರ್ ಕೊಟ್ಟ. ನಾನು ಬೇಡವೆನ್ನಲು ಅದನ್ನು ತನ್ನ ಚಿಕ್ಕಮ್ಮನಾಗಿರುವ ಮುಖ್ಯಾಧ್ಯಾಪಿಕೆ ಕೊಟ್ಟದ್ದೆಂದೂ ಅವಳು ನನಗಾಗಿ ಇರಲು ಸ್ಥಳದ ವ್ಯವಸ್ಥೆ ಮಾಡಿದ್ದಾಳೆ. ನಾನು ನಾಳೆ ಅಲ್ಲಿಗೆ ಹೋಗಬಹುದೆಂದೂ ಹೇಳಿದ. ಮೊದಲಿಗೆ ನನಗೆ ಸ್ವಲ್ಪ ಸಂಶಯ ಬಂದರೂ ಅವನ ಮುಗುಳ್ನಗೆ ಅದನ್ನು ಓಡಿಸಿತು. ಇಷ್ಟು ಕಾಳಜಿ ವಹಿಸುವ ಸುಂದರ ವ್ಯಕ್ತಿಯನ್ನು ಹೇಗೆ ಸಂಶಯಿಸಲಿ?

೨೧.

ಸ್ವಲ್ಪ ಹೊತ್ತಿನ ನಂತರ ಅವನ ಮಂದಹಾಸ ಬೀರುವ ತುಟಿಗಳು ನನ್ನ ಕೆನ್ನೆಯ ಮೇಲಿದ್ದವು. ಅವನ ತಲೆಗೂದಲ ಹಿಂದೆ ಆಕಾಶದಲ್ಲಿ ಮುಗುಳ್ನಗುತ್ತಿರುವ ಬಿದಿಗೆಯ ಚಂದ್ರ ಇಣುಕಿ ನೋಡುತ್ತಿದ್ದ. ಜಗತ್ತಿನ ಮಾದಕತೆಯನ್ನೆಲ್ಲ ತನ್ನಲ್ಲಿ ತುಂಬಿಕೊಂಡಂತಿರುವ ತಂಗಾಳಿ ಆಕಾಶದಲ್ಲಿರುವ ಮೋಡಗಳನ್ನು ಚದುರಿಸಿ ಚಂದ್ರನನ್ನು ಮತ್ತು ಕಣ್ಣು ಮಿಟುಕಿಸುತ್ತಿರುವ ಆ ಎರಡು ತುಂಟ ನಕ್ಷತ್ರಗಳನ್ನು ಬಯಲಿಗೆ ತಂದಿದ್ದವು. ನದೀತೀರದಲ್ಲಿರುವ ಗಿಡ–ಮರಗಳ ಟೊಂಗೆಗಳು ತಂಗಾಳಿಯಲ್ಲಿ ಮೆಲ್ಲನೆ ಹೊಯ್ದಾಡುತ್ತ ಮಧುರ ನಾದವನ್ನು ಹೊಮ್ಮಿಸುತ್ತಿದ್ದವು. ಕಪ್ಪೆಗಳೂ ಹಿಂದುಳಿದಿರಲಿಲ್ಲ. ತಮ್ಮ ಪ್ರೇಮಗೀತೆಯನ್ನು ಎಡಬಿಡದೇ ಹಾಡುತ್ತಿದ್ದವು. ಮೆಲ್ಲನೆ ಬೀಸುವ ತಂಗಾಳಿ ತನ್ನೊಂದಿಗೆ ನದೀತೀರದಲ್ಲಿ ಬೆಳೆಯುತ್ತಿರುವ ಹೊಸಜೊಂಡಿನ ಸುವಾಸನೆಯನ್ನೂ ತರುತ್ತಿತ್ತು. ವಸಂತನ ಆಗಮನ ಎಲ್ಲರಿಗೂ ಬಹು ನಿರೀಕ್ಷಿತ ಹುರುಪು ತಂದಿತ್ತು.

ನನ್ನ ಅಸ್ತಿತ್ವವನ್ನೇ ಮರೆತಿದ್ದೆ. ವಸಂತಋತುವಿನ ಮಧುರ ತಂಗಾಳಿಯಲ್ಲಿ ಮತ್ತು ಬಿದಿಗೆಯ ಚಂದ್ರನ ಮತ್ತೇರಿಸುವ ಕಿರಣಗಳಲ್ಲಿ ಕರಗಿ ಹೋಗಿದ್ದೆ. ಹಠಾತ್ತಾಗಿ ಬಂದ ಕರಿಮೋಡವೊಂದು ಚಂದ್ರನನ್ನು ಆವರಿಸಿತು. ನಾನು ಚಂದ್ರನನ್ನೂ ಕಳೆದುಕೊಂಡೆ. ಅವನೊಂದಿಗೆ ನನ್ನನ್ನೂ. ನಾನೂ ಈಗ ಅಮ್ಮನಂತೆಯೇ!

೨೨

ನನಗಾಗ ಕೆಡುಕೂ ಅನಿಸಿತ್ತು, ಮನಸ್ಸು ಹಗುರವೂ ಆಗಿತ್ತು. ಒಂದೆಡೆ ಅಳು, ಮತ್ತೊಂದೆಡೆ ಆಹ್ಲಾದ, ತುಂಬ ಸಂದಿಗ್ಧ ಸ್ಥಿತಿ. ಇಲ್ಲಿಂದ ಬಲು ದೂರ ಹೋಗಿ ಅವನನ್ನು ಮರೆತು ಬಿಡಬೇಕು. ಮತ್ತೊಮ್ಮೆ ನೋಡಬಾರದು ಎಂದೆನಿಸುತ್ತಿತ್ತು. ಆದರೆ ನನ್ನ ಮನಸ್ಸನ್ನೆಲ್ಲ ಅವನೇ ಆವರಿಸಿದ್ದ. ಅವನಿಲ್ಲದೇ ನಾನು ಅಪೂರ್ಣಳೆಂದೆನಿಸುತ್ತಿತ್ತು.

ಚಿಕ್ಕ ಕೋಣೆಯೊಂದು ನನ್ನ ಮನೆಯಾಯಿತು. ಪ್ರತಿರಾತ್ರಿ ಅವನು ಬರುತ್ತಿದ್ದ.

ಯಾವಾಗಲೂ ಅದೇ ಮುಗುಳ್ನಗು. ಅದೇ ಮಧುರ ಭಾವನೆ. ನನಗೆ ಅಪಾರ ಮತ್ತು ಬಟ್ಟೆಬರೆಯನ್ನು ಒದಗಿಸುತ್ತಿದ್ದ. ಹೊಸ ಡ್ರೆಸ್ಸನ್ನು ಹಾಕಿಕೊಂಡಾಗಲೆಲ್ಲ ನಾನು ಸುಂದರಿಯೆನ್ನುವುದು ನನಗೇ ಗೋಚರವಾಗುತ್ತಿತ್ತು. ಅವ ತಂದ ಬಟ್ಟೆಬರೆಗಳನ್ನು ದ್ವೇಷಿಸಲಾರಂಭಿಸಿದೆ. ಆದರೂ ಅವನ್ನು ಸ್ವೀಕರಿಸದೇ ಇರಲು ಸಾಧ್ಯವಾಗಲಿಲ್ಲ.

ಯೋಚಿಸುವುದರಲ್ಲೂ ಸೋಮಾರಿಯಾಗಿದ್ದೆ. ಯೋಚಿಸುವ ಸ್ಥೈರ್ಯವೂ ಉಡುಗಿತ್ತು. ಸದಾ ಯಾವುದೋ ಮಂಪರಿನಲ್ಲಿರುತ್ತಿದ್ದೆನಾದರೂ ನನ್ನ ಮುಖದ ಮೇಲೆ ತುಂಟತನ ಲಾಸ್ಯವಾಡುತ್ತಿತ್ತು. ಈಗ ನನಗಿದ್ದ ಕೆಲಸವೊಂದೇ. ಬೇರೆ ಬೇರೆ ಡ್ರೆಸ್ಸುಗಳನ್ನು ಹಾಕಿಕೊಳ್ಳುವುದು ಮತ್ತು ನನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿ ಆಸ್ವಾದಿಸುವುದು. ಇದೇ ನನ್ನ ಸಮಯ ಕಳೆಯಲು ಇರುವ ಹವ್ಯಾಸ. ಆದರೂ ನನ್ನ ಮೇಲೆಯೇ ನನಗೆ ಏಕೋ ಏನೋ ಘೃಣೆ ಮೂಡುತ್ತಿತ್ತು.

ನನ್ನ ಕಣ್ಣುಗಳು ಬಹುವೇಗ ನೀರಾಡುತ್ತಿದ್ದವು. ಆದರೂ ನಾನು ಅಳದಿರಲು ಪ್ರಯತ್ನಿಸಿ ಅದರಲ್ಲಿ ಸಫಲಳೂ ಆಗುತ್ತಿದ್ದೆ. ಅವನು ಹೇಳುತ್ತಿದ್ದ. ನಿನ್ನ ಹಸಿ ಕಣ್ಣುಗಳು ಯಾವಾಗಲೂ ಹೊಳೆಯುತ್ತವೆ. ಸುಂದರ— ಸುಸ್ತವೆ ಎಂದೇ ಮುಗುಳ್ನಗುತ್ತ ಹೇಳುತ್ತಿದ್ದ. ಅವನನ್ನು ಹುಚ್ಚಿಯಂತೆ ಮುದ್ದಾಡುತ್ತಿದ್ದೆ. ನಂತರ ಅವನನ್ನು ದೂರ ನೂಕುತ್ತಿದ್ದೆ ಕೂಡ. ನಾನು ಏನೇ ಮಾಡಿದರೂ ಅವನು ಮುಗುಳ್ನಗುವುದನ್ನು ಎಂದೂ ನಿಲ್ಲಿಸಲಿಲ್ಲ.

೨೩

ನನ್ನ ಜೀವನ ಈ ಘಟ್ಟ ಪ್ರಾರಂಭವಾದಾಗಲಿಂದಲೇ ನನಗೆ ಸಂಪೂರ್ಣ ಅರಾಭಾವನೆಯಿದ್ದಿಲ್ಲ. ಒಂದು ಚಿಕ್ಕ ಮೋಡವೂ ಬಿದಿಗೆಯ ಚಂದ್ರನನ್ನು ಮರೆಮಾಡಬಹುದು. ನನ್ನ ಭವಿಷ್ಯವನ್ನು ಕತ್ತಲೆಯಲ್ಲಿ ನೂಕಬಹುದು. ಇದಕ್ಕೆ ಬಹಳ ಕಾಲ ಹಿಡಿಯಲಿಲ್ಲ. ಆ ವಸಂತ ಕಾಲಿಕ್ಕಿ ಬೇಸಿಗೆಗೆ ಅನುವು ಮಾಡಿಕೊಡುವ ಸಮಯದಲ್ಲಿ ನನ್ನ ಸುಮಧುರ ಹಗಲುಗನಸು ಕೊನೆಗೊಂಡಿತು.

ಒಂದು ದಿನ ಮಧ್ಯಾಹ್ನ ಒಬ್ಬ ಯುವತಿ ನನ್ನನ್ನು ಭೇಟಿಯಾಗಲು ಬಂದಳು. ಸುಂದರಿ ಅವಳು. ಸುಂದರ ಡ್ರೆಸ್ಸನ್ನು ಧರಿಸಿ ತಿದ್ದಿ ತೀಡಿದ ಗೊಂಬೆಯಂತೆ ಕಾಣುತ್ತಿದ್ದಳು. ಒಳಗೆ ಹೆಜ್ಜೆಯಿಟ್ಟ ತಕ್ಷಣವೇ ಅಳಲು ಪ್ರಾರಂಭಿಸಿದಳು. ಅವಳೇನೂ ಹೇಳುವುದು ಬೇಕಾಗಿರಲಿಲ್ಲ. ನನಗೆ ಅದೆಲ್ಲ ಗೊತ್ತಾಗಿತ್ತು. ಜಗಳವಾಡಲು ಬಂದಿರಲಿಲ್ಲ ಅವಳು. ನನಗೂ ಅದರ ಇಚ್ಛೆಯಿರಲಿಲ್ಲ. ನನ್ನ ಕೈ ಹಿಡಿದು ಬಿಕ್ಕಿ ಬಿಕ್ಕಿ ಅಳುತ್ತ ಹೇಳಿದಳು, ನೇರ ಮಾತಿನಲ್ಲಿ. 'ನಮ್ಮಿಬ್ಬರನ್ನೂ ಮೋಸಗೊಳಿಸುತ್ತಿದ್ದಾನೆ ಅವನು !'ನನ್ನಂತೆಯೇ ಅವಳೂ ಅವನ ಪ್ರೇಯಸಿಯರಲ್ಲೊಬ್ಬಳು ಎಂದುಕೊಂಡಿದ್ದೆ. ಇಲ್ಲ. ಅವನ ಹೆಂಡತಿಯಾಗಿದ್ದಳು.

ನನ್ನನ್ನು ದೂಷಿಸಲಿಲ್ಲ ಅವಳು. ಅವಳದೊಂದೇ ಮಾತು. 'ದಯಮಾಡಿ ಅವನನ್ನು ಬಿಡು. ಬಿಟ್ಟು ಬಿಡು.' ಏನು ಹೇಳಬೇಕೆಂಬುದೇ ಗೊತ್ತಾಗಲಿಲ್ಲ ನನಗೆ. ಅವಳ ಮೇಲೆ ಕನಿಕರ ಉಕ್ಕಿ ಬರತೊಡಗಿತು. ನಾನೊಪ್ಪಲೇಬೇಕಾಯಿತು. ತಕ್ಷಣ ಅವಳು ಮುಗುಳ್ನಕ್ಕಳು. ವಂಚನೆಯ ಭಾವ ಅವಳ ಮುಖದಲ್ಲಿರಲಿಲ್ಲ. ನೇರ ಸ್ವಭಾವದವಳೆಂದು ಹೇಳಿದ್ದೆನಲ್ಲವೇ? ಅವಳಿಗೆ ಬೇಕಾಗಿದ್ದುದು ಒಂದೇ, ಅವಳ ಗಂಡ.

೨೪.

ಗಂಟೆಗಟ್ಟಲೆ ಬೀದಿ ಬೀದಿಗಳಲ್ಲಿ ಅಲೆಯುತ್ತ ಹೋದೆ. ಯಾವುದೇ ದಿಕ್ಕು ದೆಸೆಯಿಲ್ಲದೇ. ನಿರ್ದಿಷ್ಟ ಗುರಿಯಿಲ್ಲದೇ.

ಅವಳು ಹೇಳಿದ್ದನ್ನು ಒಪ್ಪಿಕೊಳ್ಳುವದು ತುಂಬ ಸರಳವಿತ್ತು. ಆದರೆ ಇನ್ನು ಮುಂದೇನು ಎಂಬುದೇ ಯಕ್ಷಪ್ರಶ್ನೆಯಾಗುಳಿಯಿತು. ಇನ್ನು ಅವನಿಂದ ದೂರವಾಗಬೇಕು. ಸಂಪೂರ್ಣವಾಗಿ ದೂರವಾಗಬೇಕು. ಅವನು ನನಗೆ ಕೊಟ್ಟ ವಸ್ತುಗಳು ಬೇಡವಾಗಿದ್ದವಲ್ಲವೇ, ಅವುಗಳನ್ನು ತ್ಯಜಿಸು ಎಂದು ಒಂದು ಮನಸ್ಸು ಹೇಳಿತು. ಇನ್ನೊಂದು ಮನಸ್ಸು, ಹೇಗೂ ಇವೆಲ್ಲ ನಿನಗಾಗಿವೆ. ಕೊಂಚ ಬೆಲೆಯನ್ನಾದರೂ ಹೊಂದಿವೆ, ಕಾರಣ ಇಟ್ಟುಕೋ ಎಂದು. ಆಗ ಗಿರವಿ ಅಂಗಡಿಗೆ ಹೋಗುತ್ತಿದ್ದುದರ ನೆನಪಾಯಿತೇನೋ. ನನಗೆ ಬೇರೆ ಯಾವ ಹಾದಿಯೂ ಇರಲಿಲ್ಲ. ಕಾರಣ ಅವನ್ನು ಇಟ್ಟುಕೊಳ್ಳಲು ನಿಶ್ಚಯಿಸಿದೆ.

ಯಾರಿಗೂ ತಿಳಿವು ಕೊಡದೇ ಅಲ್ಲಿಂದ ಹೊರಟು ಹೋದೆ. ಹೋಗುವುದಕ್ಕೆ ವ್ಯಥೆಯಿಲ್ಲವಾದರೂ ಮನಸ್ಸು ಖಾಲಿಯಾಗಿತ್ತು. ಈಗ ನಾನೊಂದು ದಿಕ್ಕು – ದೆಸೆಯಿಲ್ಲದ ಒಂಟಿ ಮೋಡ. ದೂರದಲ್ಲೊಂದು ಚಿಕ್ಕ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡೆ. ಇಡೀ ದಿನ ಮಲಗಿಯೇ ಕಳೆದೆ.

೨೫.

ಚಿಕ್ಕಂದಿನಿಂದ ನನಗೆ ಹಣದ ಬೆಲೆ ಗೊತ್ತಿತ್ತು. ನನ್ನ ಹತ್ತಿರ ಕೆಲವು ಡಾಲರುಗಳು ಉಳಿದಿದ್ದರೂ ಆದಷ್ಟು ಬೇಗ ಯಾವುದಾದರೂ ಕೆಲಸ ಹುಡುಕಲೇ ಬೇಕು. ಕೆಲಸ ಸಿಗುತ್ತದೆಯೆಂದು ಹೆಚ್ಚು ಭರವಸೆ ಇರಲಿಲ್ಲವಾದರೂ, ಪ್ರಯತ್ನ ಮಾಡುವದು ಮಾತ್ರ ನನ್ನ ಕರ್ತವ್ಯವಾಗಿತ್ತು.

ಕೆಲಸ ಸಿಗುವದು ಸರಳವಾಗಿರಲಿಲ್ಲ. ಮೊದಲಿಗಿಂತ ನಾನು ಒಂದೆರಡು ವರ್ಷ ದೊಡ್ಡವಳಾಗಿದ್ದೆ ಅಷ್ಟೆ. ಆದರೂ ಕೆಲಸ ಹುಡುಕುತ್ತಲೇ ಹೋದೆ. ಜೀವನ ಸಾಗಿಸುವದು ಮಹಿಳೆಗೇಕೆ ಇಷ್ಟು ದುರ್ಭರ? ಅಮ್ಮನದೇ ಸರಳವಾದ ಸರಿಯಾದ ಮಾರ್ಗ,

ಮಹಿಳೆಗಾಗಿ ತೆರೆದಿದ್ದ ಆ ಹಾದಿಯನ್ನೇ ಸರಳವಾಗಿ ಆರಿಸಿದ್ದಳು ಅವಳು. ಇದನ್ನೇ ನಾನೂ ಅನುಸರಿಸಬಹುದಾದರೂ ಈಗಲೇ ಈ ಮಾರ್ಗ ಬೇಡ ನನಗೆ. ಮೊದಲು ಕೆಲಸ ಹುಡುಕಬೇಕು. ಅದು ಮಾತ್ರ ಪ್ರಯತ್ನ ಪಟ್ಟಷ್ಟು ಕೃಷ್ಣಪಕ್ಷದ ಚಂದ್ರನಂತೆ ದಿನೇದಿನೇ ಕ್ಷೀಣಿಸುತ್ತಲೇ ಹೋಯಿತು. ನನಗೆ ಹೆದರಿಕೆಯಾಗತೊಡಗಿತು.

ಎರಡು ವಾರಗಳ ನಂತರ ಇನ್ನು ಪ್ರಯತ್ನ ಮಾಡುವುದರಲ್ಲಿ ಪ್ರಯೋಜನವಿಲ್ಲವೆಂದು ಹಿಂದೆ ಸರಿಯುವಷ್ಟರಲ್ಲೇ, ಆಶೆಯ ಕ್ಷೀಣಕಿರಣ ಗೋಚರವಾಯಿತು. ಒಂದು ಚಿಕ್ಕ ಹೋಟೆಲಿನ ಮುಂದಿದ್ದ ಹುಡುಗಿಯರ ಉದ್ದನೆಯ ಸಾಲನ್ನು ನೋಡಿ ನಾನೂ ನಿಂತುಕೊಂಡೆ. ಅದು ಅಲ್ಲಿ ಖಾಲಿ ಇದ್ದ ಒಂದು ಅಸಿಸ್ಟಂಟ ವೇಟಟ್ ಕೆಲಸಕ್ಕಾಗಿ ಇತ್ತು. ಸಾಲಿನಲ್ಲಿದ್ದ ಎಲ್ಲ ಹುಡುಗಿಯರೂ ಹೈಸ್ಕೂಲ್ ಅಭ್ಯಾಸ ಮುಗಿಸಿದರವೇ ತಮ್ಮಲ್ಲಿಯ ಯಾರನ್ನಾದರೂ ಒಬ್ಬರನ್ನು ಈ ಕೆಲಸಕ್ಕಾಗಿ ಆಯ್ದುಕೊಳ್ಳುತ್ತಾರೇನೋ ಎಂಬ ಆಶೆ ಹೊತ್ತು ನಿಂತಿದ್ದರು. ಎಲ್ಲರೂ ಕನಿಷ್ಠ ಒಂದು ಗಂಟೆಯಾದರೂ ಕಾಯ್ದಿರಬೇಕು. ಗಂಟೆಗಟ್ಟಲೇ ಕಾಯ್ದ ನಂತರ, ಹೋಟೆಲಿನ ದಢೂತಿ ಮಾಲಿಕ ಹೊರಗೆ ಬಂದ. ಎಲ್ಲರಿಗೂ ಅವನೊಬ್ಬ ರಾಜನಂತೆ ಕಾಣುತ್ತಿದ್ದ. ಎಲ್ಲರನ್ನೂ ಅಡಿಯಿಂದ ಮುಡಿಯವರೆಗೆ ಕೂಲಂಕುಶವಾಗಿ ನೋಡಿದ. ಕೊನೆಗೆ ನನ್ನನ್ನು ಆಯ್ದ. ಎಲ್ಲರೂ ತಮ್ಮ ನಶೀಬವನ್ನು ಹಳಿದುಕೊಳ್ಳುತ್ತ ಹೊರಟರು. ಅವರ ಬಾಯಲ್ಲಿ ಒಂದೇ ಮಾತು. 'ಹೆಣ್ಣಿಗೆ ಬೆಲೆ ಇಲ್ಲವೇ? ಏನೂ ಕಿಮ್ಮತ್ತಿಲ್ಲವೇ?' ಆದರೆ ನನಗೆ ಈ ಕೆಲಸ ಸಿಕ್ಕಿದ್ದು ಬಹಳ ಸಂತೋಷದ ಮಾತಾಗಿರಲಿಲ್ಲ. ಏನೂ ಇಲ್ಲದಿರುವಾಗ ಸಿಕ್ಕಿದ್ದೇ ಇರಲಿ ಎಂದುಕೊಂಡೆ.

೨೬

ನನ್ನ ಕೆಲಸವೆಂದರೆ, ಹೆಡ್‌ವೇಟರಳ ಸಹಾಯಕಿಯಾಗಿ ಕೆಲಸ ನಿರ್ವಹಿಸುವದು, ಬಂದ ಗಿರಾಕಿಗಳ ಹತ್ತಿರ ಹೋಗಿ ಅವರ ಆರ್ಡರ್ ತೆಗೆದುಕೊಳ್ಳುವದು. ಇದರ ಬಗ್ಗೆ ಏನೂ ಅನುಭವವಿಲ್ಲದ ಕಾರಣ ಹೆದರಿಕೆಯಾಗಿತ್ತು. ಆದರೆ, ಹೆಡ್‌ವೇಟರಳು ನನಗೆ ಸಮಾಧಾನ ಹೇಳಿದಳು. ಸಪ್ಲಾಯರ್ ಎಲ್ಲವನ್ನೂ ನೋಡಿಕೊಳ್ಳುತ್ತಾನೆ, ನನ್ನ ಕೆಲಸವೆಂದರೆ ಕೊನೆಯಲ್ಲಿ ಅವರಿಗೆ ಚಹಾ ಕೊಟ್ಟು ಕೈ ಮತ್ತು ಮುಖ ಒರೆಸಿಕೊಳ್ಳಲು ನ್ಯಾಪ್‌ಕಿನ್ ಕೊಡುವದು ಮತ್ತು ನಂತರ ಬಿಲ್ಲನ್ನು ಕೊಡುವದು.

ಸುಮಾರು ಮೂವತ್ತರ ಆಸುಪಾಸಿನ ಹೆಣ್ಣುಮಗಳು ಅವಳು. ಅವಳಲ್ಲಿ ಕೆಲವೊಂದು ವಿಚಿತ್ರ ವರ್ತನೆಗಳಿದ್ದವು. ತನ್ನ ಶರ್ಟಿನ ತೋಳನ್ನು ಮೊಳಕೈವರೆಗೆ ಮಡಿಚಿರುತ್ತಿದ್ದಳು. ಒಂದು ಬಣ್ಣದ ಉದ್ದನೆಯ ಬಟ್ಟೆಯನ್ನು ಸೊಂಟದ ಪಟ್ಟಿಯಂತೆ ಬಳಸುತ್ತಿದ್ದಳು. ಆಗಾಗ ತನ್ನ ಮುಖಕ್ಕೆ ಪೌಡರ್ ಮತ್ತು ದಪ್ಪನೆಯ ತುಟಿಗಳಿಗೆ ಲಿಪ್‌ಸ್ಟಿಕ್

ಹಚ್ಚುತ್ತಿದ್ದಳು. ಕೆಲವೊಂದು ಗ್ರಾಹಕರ ಸಿಗರೇಟಿಗೆ ಬೆಂಕಿ ಹಚ್ಚುವಾಗ ತನ್ನ ಮೊಣಕಾಲನ್ನು ಬೇಕೆಂತಲೇ ಅವರ ತೊಡೆಗೆ ತಾಕಿಸುತ್ತ ನಿಲ್ಲುವಳು ಮತ್ತು ಡ್ರಿಂಕ್ಸಗಳನ್ನು ಗ್ಲಾಸಿಗೆ ಹಾಕಿ ಕೊಡುವಾಗ ತಾನೂ ಒಂದು ಗುಟುಕು ಕುಡಿಯುವಳು. ಹಲವರೊಂದಿಗೆ ಅತಿ ಸಲಿಗೆಯಿಂದಿದ್ದರೆ ಇನ್ನುಳಿದವರತ್ತ ಹೋಗುತ್ತಲೇ ಇರಲಿಲ್ಲ. ಅಂತಹ ಗ್ರಾಹಕರನ್ನು ಸತ್ಕರಿಸುವದು, ಬಿಡುವದು ನನ್ನ ವಿವೇಚನೆಗೆ ಬಿಟ್ಟ ವಿಷಯವಾಗಿತ್ತು.

೨೭.

ಹೆಡ್‌ವೇಟರ್ ಬೆಳಿಗ್ಗೆ ಒಂಬತ್ತಕ್ಕೆ ಕೆಲಸಕ್ಕೆ ಬಂದಾಗ ನಾನು ಬಂದು ಆಗಲೇ ಎರಡು ಗಂಟೆಗಳಷ್ಟು ಸಮಯವಾಗಿತ್ತು. ಮುಖ ಗಂಟಿಕ್ಕಿ ಹೇಳಿದಳು, 'ತಿಂಡಿ ತಿನ್ನಲು ಇಷ್ಟು ಬೇಗ ಯಾರೂ ಬರುವದಿಲ್ಲ. ನೀನಿಷ್ಟು ಬೇಗ ಬರುವ ಅವಶ್ಯಕತೆ ಇಲ್ಲ. ಇನ್ನೊಂದು ವಿಷಯ, ಯಾವಾಗಲೂ ಹೀಗೆ ಜೋಲು ಮುಖ ಮಾಡಿಕೊಂಡಿರಬೇಡ. ಹೀಗೆ ಮುಖ ಮಾಡಿದರೆ, ಯಾರು ಮತ್ತೆ ಮತ್ತೆ ಡ್ರಿಂಕ್ಸಗಳಿಗಾಗಿ ಆರ್ಡರ್ ಕೊಡುತ್ತಾರೆ? ನೀನೇಕೆ ಕೆಲಸಕ್ಕಿರುವೆ ಇಲ್ಲಿ? ನಿನ್ನ ಡ್ರೆಸ್ ಕೂಡ ಸರಿಯಿಲ್ಲ. ನಿನ್ನ ಶರ್ಟಿಗೆ ಕೊಂಚ ಎತ್ತರವಿರುವ ಕಾಲರ್ ಬೇಕು. ಮತ್ತೆ ನಿನ್ನ ಕರವಸ್ತ್ರವೆಲ್ಲಿ? ವೇಟರ್ ತರಹ ನೀನು ಕಾಣುವುದೇ ಇಲ್ಲ.'

ಅವಳು ಹೇಳಿದ್ದು ಒಳ್ಳೆಯದಕ್ಕೇ ಎನ್ನುವದು ಗೊತ್ತಿತ್ತು. ನಾನು ಯಾವಾಗಲೂ ಮುಗುಳ್ನಗುತ್ತ ಇರದಿದ್ದರೆ, ಇಬ್ಬರಿಗೂ ಲುಕ್ಸಾನಿನ ವಿಷಯವೇ. ಏಕೆಂದರೆ ನಾವು ದಿನದ ಕೊನೆಯಲ್ಲಿ ಗಿರಾಕಿಗಳು ಕೊಟ್ಟ ಟಿಪ್ಸನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದೆವು. ಅವಳನ್ನು ಕೀಳೆಂದು ನಾನು ಭಾವಿಸುತ್ತಿರಲಿಲ್ಲ; ಒಂದು ರೀತಿಯಲ್ಲಿ ನಾನವಳನ್ನು ಮೆಚ್ಚುತ್ತಿದ್ದೆನೆಂದೇ ಹೇಳಬಹುದು, ಅವಳಿಗೆ ಹಣ ಗಳಿಸುವುದು ಹೇಗೆಂದು ಗೊತ್ತಿತ್ತಲ್ಲವೇ? ಗಂಡಸರೊಂದಿಗೆ ಚೆಲ್ಲಾಟವಾಡುವುದು, ಇದೊಂದೇ ಅಲ್ಲವೇ ಹೆಣ್ಣಿಗಿರುವ ಹಾದಿ?

ನನ್ನ ಅನ್ನ, ನಾನು ಗಳಿಸಲು ಅವಳಿಗಿಂತ ಹೆಚ್ಚು ಬಿಡುಬೀಸಾಗಿ, ಸ್ವಚ್ಛಂದವಾಗಿ ನಾನು ವರ್ತಿಸಬೇಕಾದ ದಿನ ಬಹಳ ದೂರವಿಲ್ಲ ಎಂದು ನನಗೆ ಗೊತ್ತಿದ್ದರೂ, ಸದ್ಯ ಅವಳಂತೆ ವರ್ತಿಸಲು ನನ್ನಿಂದಾಗುತ್ತಿರಲಿಲ್ಲ. ನಾನದನ್ನೆಲ್ಲ ಮಾಡಬೇಕಾಗಿದ್ದು ಎಲ್ಲ ಹಾದಿಗಳು ಮುಚ್ಚಿದ ನಂತರವಲ್ಲವೇ? 'ಕೊನೆಯ ಮಾರ್ಗ'ವಂತೂ ನಾವು ಹೆಂಗಸರಿಗಾಗಿ ಕಾಯುತ್ತಲೇ ಇರುತ್ತದಲ್ಲವೇ? ಅದು ಇನ್ನೂ ಕೊಂಚ ಹೊತ್ತು ಹೆಚ್ಚಿಗೆ ಕಾಯುತ್ತಿರಲಿ ಎಂದೇ ನಾನು ಪ್ರಯತ್ನಿಸುತ್ತಿದ್ದೆ.

ಸಿಟ್ಟಿನಿಂದ ನನ್ನ ಹಲ್ಲು ಕಡಿಯುತ್ತ ನನ್ನ ಕೆಲಸ ಮುಂದುವರಿಸಿದೆ. ಆದರೆ ಹೆಣ್ಣಿನ ಹಣೆಬರಹ ಅವಳ ಕೈಗಳಲ್ಲಿಲ್ಲ. ಮೂರೇ ದಿನಗಳ ನಂತರ ನಮ್ಮ ಮಾಲಿಕ ನನಗೆ ಎಚ್ಚರಿಕೆ ಕೊಟ್ಟ. ನನ್ನ ನೌಕರಿ ಉಳಿಸಿಕೊಳ್ಳಬೇಕಾದರೆ ಎರಡು ದಿನಗಳಲ್ಲಿ ನಾನು

ಹವ್ಯಾಸಿಗಳಂತೆಯೇ ನಡೆದುಕೊಳ್ಳಬೇಕು. ಮುಸಿನಗೆ ಬೀರುತ್ತ ಅವಳೂ ನನಗೆ ಒಂದು ಮಾತು ಗುಟ್ಟಿನಲ್ಲಿ ಹೇಳಿದಳು: "ಒಬ್ಬ ಗಿರಾಕಿ ನಿನ್ನ ಬಗ್ಗೆ ವಿಚಾರಿಸುತ್ತಿದ್ದಾನೆ. ನೀನ್ಯಾಕೆ ಹೀಗೆ ಏನೂ ತಿಳಿಯದಂತೆ ಸುಮ್ಮನಿದ್ದೀಯಾ? ಎಷ್ಟೋ ಬೆಡಗಿಯರುಗಳು ಬ್ಯಾಂಕಿನ ಮ್ಯಾನೇಜರುಗಳನ್ನೂ ಮದುವೆಯಾಗಿದ್ದಾರೆ. ಗೊತ್ತೇ ನಿನಗೆ? ನಾವಷ್ಟು ಕ್ಷುಲ್ಲಕ ಹೆಂಗಸರಲ್ಲ. ಬಹಳ ಒಂದೇಟು ಹಾಕಿದ್ದರೆ ನಾವೂ ಕಾರಿನಲ್ಲಿ ಜುಮ್ಮೆಂದು ಓಡಾಡಬಹುದು."

ನನ್ನ ಬುದ್ಧಿ ನೆತ್ತಿಗೇರಿತು. ಅವಳಿಗೆ ಬೈಗಿದೆ. "ನೀನ್ಯಾವಾಗ ಕಾರಿನಲ್ಲಿ ಓಡಾಡಿದ್ದೀಯ?"

ಅವಳು ಜೋರಾಗಿ ತನ್ನ ಬಾಯಿಯನ್ನು ಎಷ್ಟರ ಮಟ್ಟಿಗೆ ತೆರೆದಳೆಂದರೆ ಅವಳ ಕೆಳದವಡೆಯೇ ಬಿದ್ದು ಹೋಗುತ್ತೇನೋ ಎಂದೆನಿಸಿತು. ತಕ್ಷಣವೇ ಅವಳೂ ದಬಾಯಿಸಿದಳು. : "ನಿನ್ನ ಉಪದೇಶವನ್ನು ಮುಚ್ಚಿಕೊ. ನೀನೇನು ಮಹಾಸಭ್ಯ ಹೆಂಗಸಲ್ಲ. ಹಾಗಿದ್ದರೆ, ನೀನಿಲ್ಲಿಗೆ ಬರುತ್ತಲೇ ಇರಲಿಲ್ಲ."

ನಾನು ಅಲ್ಲಿಂದ ಹೊರಟೆ. ಅಲ್ಲಿಯ ಲೆಕ್ಕ ಚುಕ್ತಾ ಮಾಡಿಕೊಂಡು. ಒಂದು ಡಾಲರ್ ಮತ್ತು ಐದು ಸೆಂಟುಗಳು ಮನೆಗೆ ಹೋದೆ.

ಅಂತಿಮ ವಿಶ್ಲೇಷಣೆಯ ಕಲ್ಪನೆಗಳು ನನ್ನತ್ತ ದೊಡ್ಡದೊಂದು ದಾಪುಗಾಲಿಟ್ಟೇ ಜಿಗಿದು ಬಂದಿತ್ತು. ಅದನ್ನು ತಪ್ಪಿಸಬೇಕೆಂದರೆ, ಮೊದಲಿಗೆ ನಾನೇ ಅದರ ಹತ್ತಿರ ಹೋಗಬೇಕು. ಕೆಲಸ ಕಳೆದುಕೊಂಡಿದ್ದ ನನಗೆ ಸಮಸ್ಯೆಯಿರಲಿಲ್ಲ. ನನಗೆ ಹೆದರಿಕೆಯಿದ್ದದ್ದು ಆ ಕಷ್ಟ ನರಕದ್ದು. ನನ್ನನ್ನು ಹೇಗೆ ಮಾರಿಕೊಳ್ಳಬೇಕು ಎನ್ನುವುದು ನನಗೆ ಚೆನ್ನಾಗಿ ಗೊತ್ತಿತ್ತು. ನನ್ನ ಮೊದಲಿನ ಸಂಬಂಧದ ನಂತರ ನನಗೆ ಗಂಡು ಹೆಣ್ಣಿನ ಸಂಬಂಧಗಳ ಬಗ್ಗೆ ಸ್ವಲ್ಪ ಅರಿವಾಗಿತ್ತು. ಹುಡುಗಿಯು ತನ್ನ ಬಿಗುವನ್ನು ಸ್ವಲ್ಪ ಸಡಿಲಗೊಳಿಸಬೇಕಾಗಿತ್ತು. ಗಂಡಸರಿಗೆ ಅದರ ವಾಸನೆ ಹತ್ತಿ ಜಿಗಿದೋಡಿ ಬರುತ್ತವೆ. ಅವರಿಗೆ ಬೇಕಾದ್ದು ಕೇವಲ ಮಾಂಸಖಂಡಗಳು. ಅವರ ಕಾಮ ಶಮನವಾದ ನಂತರ ಊಟ-ಬಟ್ಟೆ ಕೊಟ್ಟು ಕೆಲಕಾಲ ನೋಡಿಕೊಳ್ಳುತ್ತಾರೆ. ನಂತರ ಬೈದು ಮಾಡಿ ಹೊಡೆದುಬಿಡಬಹುದು ಹಾಗೂ ಹಣ ಕೊಡುವುದನ್ನೇ ನಿಲ್ಲಿಸಬಹುದು.

ಹೆಣ್ಣು ತನ್ನನ್ನು ಮಾರಿಕೊಳ್ಳುವಾಗ ಇದೇ ಆಗುವುದು. ಹಲವೊಮ್ಮೆ ಅವಳಿಗೆ ಅತೀವ ಸಂತೃಪ್ತಿಯೂ ಆಗಬಹುದು. ಆ ಭಾವನೆ ನನಗೂ ಉಂಟಾಗುತ್ತಿಲ್ಲವೇ? ಮೊದಮೊದಲಿಗೆ ಎಲ್ಲವೂ ಸುಂದರ ಪ್ರೀತಿಯ ಮಾತೇ. ನಂತರ ವಿಷಾದ ಆವರಿಸುತ್ತದೆ ಹಾಗೂ ವೇದನೆ ಹರಡುತ್ತದೆ. ಒಬ್ಬನಿಗೆ ಮಾತ್ರ ಮಾರಿಕೊಂಡಾಗ, ನಿಮಗೆ ಪ್ರೇಮದ

ಮತ್ತು ಸಾಂತ್ವನೆಯ ಮಾತುಗಳು ಕೇಳಿಬರಬಹುದು. ಮುಕ್ತ ಮಾರಾಟಕ್ಕೆ ಲಭ್ಯಯವಾದಾಗ ಇದೂ ಸಿಗದು. ಆಗ ಅಮ್ಮ ಕೂಡ ಮಾತನಾಡಲೂ ಹೇವರಿಸುತ್ತಿದ್ದ ಮಾತುಗಳನ್ನು ಕೇಳಿಸಿಕೊಳ್ಳಲೇಬೇಕಾಗುತ್ತದೆ.

ಹೇವರಿಕೆಯ ಮಟ್ಟವೂ ಬೇರೆಯೇ ಆಗಿತ್ತು. ಹೆಡ್‌ವೇಟರ್‌ಳ ಸಲಹೆಯನ್ನು ಒಪ್ಪಿಕೊಳ್ಳಲು ನನಗಾಗಿರಲಿಲ್ಲ. ಆದರೂ ಒಂದೇ ಗಂಡಿನೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಲು ನನಗ್ಯಾವ ಸಮಸ್ಯೆಯಿರಲಿಲ್ಲ. ನನ್ನ ದೇಹದ ಮಾರಾಟ ಮಾಡಲೇಬೇಕು ಎಂದು ನನಗಂತೂ ಖಚಿತವಾಗಿ ಅನಿಸಿರಲಿಲ್ಲ. ಅಷ್ಟಾಗಿಯೂ ನನ್ನ ವಯಸ್ಸು ಎಷ್ಟು, ಇಪ್ಪತ್ತಕ್ಕಿಂತ ಕಡಿಮೆ ಇತ್ತು ಆಗ ಮತ್ತು ನನಗೆ ಗಂಡಸು ಬೇಕೇ ಬೇಕು ಎಂದು ಅನಿಸಿರಲಿಲ್ಲ. ಒಂದೇ ಗಂಡಿನೊಂದಿಗೆ ಚಕ್ಕಂದವಾಡಿದರೆ ಚೆನ್ನ ಎಂದು ಅನಿಸಿತ್ತು. ಹೊಸಬನೊಂದಿಗೆ ಕೆಲವೇ ಸಲ ಓಡಾಡಿದರೆ ಅವನು ಏನೆಲ್ಲವನ್ನು ನನ್ನಿಂದ ಬಯಸಬಹುದು ಎಂದೆನಿಸಿದ್ದಂತೂ ನಿಜ.

ಒಮ್ಮೆ ನಾನು ವಸಂತದ ತಂಗಾಳಿಗೆ ಮೈಮರೆತದ್ದು ಹಾಗೂ ಆ ಯುವಕ ತನ್ನಿಚ್ಛೆಯಂತೆ ನನ್ನೊಂದಿಗೆ ನಡೆದುಕೊಂಡದ್ದು ನಿಜ. ಜೇನಿನಂತಹ ಸಿಹಿಯಾದ ಮಾತುಗಳಿಂದ ನನ್ನನ್ನು ಸಮ್ಮೋಹಕ್ಕೊಳಪಡಿಸಿ ನನ್ನ ಮುಗ್ಧತೆಯನ್ನು ದುರುಪಯೋಗ ಪಡಿಸಿಕೊಂಡ ಅವನು ಎಂದು ನಂತರ ನನಗನಿಸಿತ್ತು. ಆ ಮಂಪರಿನಿಂದ ಎಚ್ಚರವಾದಾಗ ಅದು ಯಾವ ಅರ್ಥವೂ ಇಲ್ಲದ ಬರಿಗನಸು, ಅದರ ಉಪಯೋಗವೆಂದರೆ ಕೆಲವು ದಿನಗಳ ಊಟ ಮತ್ತು ಕೆಲವು ಹೊಸ ಬಟ್ಟೆಗಳಲ್ಲದೇ ಮತ್ತೇನಲ್ಲ ಎಂಬುದರ ಅರಿವಾಗಿತ್ತು. ನನ್ನ ಆಹಾರವನ್ನು ಮತ್ತದೇ ರೀತಿಯಲ್ಲಿ ಗಳಿಸುವುದು ನನಗಿಷ್ಟವಿಲ್ಲವಾಗಿತ್ತು. ನಿಸ್ಸಂಶಯವಾಗಿ ಆಹಾರವು ಅತಿ ಮುಖ್ಯವಸ್ತು. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಗಳಿಸಬೇಕು. ನಮ್ಮೆಲ್ಲ ಪ್ರಯತ್ನಗಳು ನಿಷ್ಫಲವಾದರೆ, ಹೆಣ್ಣು ತಾನು ಹೆಣ್ಣೆಂಬುದನ್ನು ಒಪ್ಪಿಕೊಳ್ಳಬೇಕು ಮತ್ತು ತನ್ನ ದೇಹವನ್ನು ಮಾರಿಕೊಳ್ಳಬಹುದು.

ತಿಂಗಳಾಯಿತು. ಹೊಸ ಕೆಲಸವನ್ನು ನಾನು ಪಡೆಯಲಾಗಲಿಲ್ಲ.

೨೯.

ನನ್ನ ಹಳೆಯ ಸಹಪಾಠಿಗಳನ್ನು ಭೇಟಿಯಾದೆ. ಹಲವರು ವಿದ್ಯಾಭ್ಯಾಸ ಮುಂದುವರೆಸಿದ್ದರು. ಇನ್ನು ಹಲವರು ಮನೆಯಲ್ಲಿಯೇ ಇದ್ದರು. ನನಗವರಲ್ಲಿ ಯಾವ ಅಭಿರುಚಿಯೂ ಉಳಿದಿರಲಿಲ್ಲ. ಅವರೊಂದಿಗೆ ಮಾತಾಡಿದಾಗ ನಾನೇ ಅವರಿಗಿಂತ ಹೆಚ್ಚು ಜಾಣಳೆಂದೆನಿಸಿತು. ಶಾಲೆಯಲ್ಲಿ ಅವರು ಜಾಣರೆನಿಸಿಕೊಂಡಿದ್ದರು. ಜೀವನದಲ್ಲಿ ನಾನು. ಅವರೆಲ್ಲ ಕನಸಿನ ಸಾಮ್ರಾಜ್ಯದಲ್ಲಿರುವಂತೆ ಕಂಡರು. ಚೆನ್ನಾದ ಬಟ್ಟೆಗಳನ್ನು ಹಾಕಿಕೊಂಡು ಅಂಗಡಿಗಳಲ್ಲಿಯ ಸರಕುಗಳಂತೆ ಕಾಣುತ್ತಿದ್ದರು. ಯಾರಾದರೂ

[illegible]
ಗುಂಗಿನಲ್ಲಿ ಕರಗಿ ಹೋಗುತ್ತಿದ್ದವು.

[illegible]

೩೦

[illegible] ಅವಾಗಿನಿಂದ ಅವನನ್ನು ಕಂಡೇ ಇಲ್ಲ ನಾನು."

[illegible] ಪಡುತ್ತಿದ್ದೇನೆಂದೂ ಹೇಳಿದಳು ಅವಳು.

ಅಂತೂ ನನ್ನನ್ನು ಅಸೂಯೆ ಪಡುವವರು ಇದ್ದಾರಲ್ಲ! ನನಗೆ ನಗಬೇಕೆನಿಸಿತು. ನನ್ನ ಸ್ವಾತಂತ್ರ್ಯ! ಎಂತಹ ಅಪಹಾಸ್ಯ! ಅವಳಿಗೆ ಆಹಾರದ ಕೊರತೆಯಿರಲಿಲ್ಲ, ನನಗೆ ಸ್ವಾತಂತ್ರ್ಯದ ಕೊರತೆಯಿರಲಿಲ್ಲ; ಅವಳಿಗೆ ಸ್ವಾತಂತ್ರ್ಯವಿರಲಿಲ್ಲ, ನನಗೆ ಆಹಾರವಿಲ್ಲ! ಇಬ್ಬರೂ ಹೆಂಗಸರೇ, ಆದರೂ ನಿರಾಶೆಗೊಂಡವರೇ! ಇಬ್ಬರಿಗೂ ಒಂದಿದ್ದರೆ ಮತ್ತೊಂದಿಲ್ಲ, ಎಂತಹ ಸಮಾನತೆ ನಮ್ಮಲ್ಲಿ!

೩೧.

ಗೊಂಬೆಮುಖದವಳನ್ನು ಭೇಟಿಯಾದ ನಂತರ, ಒಬ್ಬನಿಗೇ ನನ್ನನ್ನು ಮಾರಿಕೊಳ್ಳುವ ವಿಚಾರವನ್ನು ಕಿತ್ತೆಸೆದೆ. ನನ್ನ ಮನಸ್ಸು ಚಕ್ಕಂದವಾಡಲು ಬಯಸಿತು, ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ನನ್ನ 'ಪ್ರೀತಿ'ಯನ್ನು ನನ್ನ ಆಹಾರ ಗಳಿಸುವ ಮಾರ್ಗವಾಗಿಸಿಕೊಳ್ಳಲು ಇಚ್ಛಿಸಿದೆ. ಹಸಿವು ತಾಂಡವವಾಡುವಾಗ, ನೈತಿಕತೆಯ ವಿಚಾರ ಸಲ್ಲದು.

'ಪ್ರೀತಿ'ಯು ಹಸಿವೆಯನ್ನು ತಣಿಸುತ್ತದೆ. ಅದೇ ಹೊತ್ತಿನಲ್ಲಿ 'ಪ್ರೀತಿ'ಯಲ್ಲಿ ಮಗ್ನವಾಗಲು ತುಂಬಿದ ಹೊಟ್ಟೆ ಬೇಕು. ಯಾವುದೇ ಬಿಂದುವಿನಿಂದ ಪ್ರಾರಂಭಿಸಿದರೂ, ಇದೊಂದು ಪರಿಪೂರ್ಣ ವರ್ತುಲ, ವಿಷವರ್ತುಲವೇ ಸರಿ.

ನನ್ನ, ನನ್ನ ಸಹಪಾಠಿಗಳ ಮತ್ತು ಆ ಗೊಂಬೆ ಮುಖದವಳ ನಡುವೆ ಹೇಳಿಕೊಳ್ಳುವಂತಹ ವ್ಯತ್ಯಾಸಗಳಿರಲಿಲ್ಲ. ಅವರಿಗೆ ಕೆಲವೊಂದು ಭ್ರಮೆಗಳಿದ್ದವು. ನಾನಾದರೋ ಕೊಂಚ ನೇರ ಸ್ವಭಾವದವಳು. ಖಾಲಿ ಹೊಟ್ಟೆಗಿಂತ ಮಿಗಿಲಾದ ಸತ್ಯಾವ್ಯಾವುದೂ ಇಲ್ಲ. ನನ್ನದೇ ಆದ ಕೆಲವೊಂದು ವಸ್ತುಗಳನ್ನು ಮಾರಾಟ ಮಾಡಿ ಹೊಸ ಬಟ್ಟೆಗಳನ್ನು ಖರೀದಿಸಿದೆ. ಅಷ್ಟಾಗಿಯೂ, ನಾನು ಕುರೂಪಿಯಲ್ಲವೇ ಅಲ್ಲ. ನಂತರ ನಾನು ವ್ಯಾಪಾರಕ್ಕಿಳಿದೆ.

೩೨.

ಪ್ರೀತಿಯ ಆಟದಲ್ಲಿ ನಾನು ಚಕ್ಕಂದವಾಡಬಹುದು ಎಂದುಕೊಂಡಿದ್ದೆ. ನನ್ನೆಣಿಕೆ ತಪ್ಪಾಗಿತ್ತು. ನಾನೆಣಿಸಿದಷ್ಟು ನನಗೆ ಜಗತ್ತಿನ ಬಗ್ಗೆ ತಿಳುವಳಿಕೆಯಿರಲಿಲ್ಲ. ಗಂಡಸರು ಅಷ್ಟು ಸರಳವಾಗಿ ಬಲೆಗೆ ಬೀಳುವುದಿಲ್ಲ. ಒಂದೆರಡು ಮುತ್ತುಗಳಿಂದ ತೃಪ್ತರಾಗುವ ಸುಸಂಸ್ಕೃತ ಗಂಡಸರನ್ನು ನಾನು ಬಯಸುತ್ತಿದ್ದೆ. ಇದು ಸಾಧ್ಯವಿಲ್ಲದ ಮಾತಾಯಿತು. ಮೊದಲನೆಯ ಭೆಟ್ಟಿಯಲ್ಲಿಯೆ ಸಂಪೂರ್ಣ ತೃಪ್ತಿಯನ್ನು ಬಯಸುತ್ತಿದ್ದರು. ಅಷ್ಟೇ ಅಲ್ಲ, ಸಿನೆಮಾ ನೋಡಲೋ, ಅಥವಾ ತಿರುಗಾಡಲೋ ಇಲ್ಲವೇ ಐಸ್‌ಕ್ರೀಂ ತಿನ್ನಲು ಮಾತ್ರ ಆಹ್ವಾನಿಸುತ್ತಿದ್ದರು. ಮತ್ತೆ ನಾನು ಹಸಿದ ಹೊಟ್ಟೆಯಲ್ಲಿ ಮನೆಗೆ ಮರಳುತ್ತಿದ್ದೆ. ಸುಸಂಸ್ಕೃತರೆಂದು ಕರೆಯಲ್ಪಡುವ ಈ ಜನ ಮಾತ್ರ ನಾನು ಕಲಿತ ಶಾಲೆಯ ಬಗ್ಗೆ, ನನ್ನ

ಕುಟುಂಬದ ವ್ಯವಹಾರದ ಬಗ್ಗೆ ಪ್ರಶ್ನೆ ಕೇಳುತ್ತಿದ್ದರು. ಒಂದಂತೂ ಖಚಿತವಿತ್ತು. ನಿಮ್ಮ ಹತ್ತಿರ ಕೊಡಲು ಗಟ್ಟಿಯಾದದ್ದು ಏನೂ ಇಲ್ಲದಿದ್ದರೆ ನೀವವರಿಗೆ ಬೇಡವೇ ಬೇಡ. ನಿಜವಾದ ಲಾಭ ಕೊಡಲು ಸಾಧ್ಯವಿರದಿದ್ದರೆ, ಒಂದು ಮುತ್ತಿನ ಬೆಲೆಯಿಂದು ಬಹಳವೆಂದರೆ ಹತ್ತು ಸೆಂಟುಗಳ ಐಸ್‌ಕ್ರೀಂ ಕೊಡಿಸಬಹುದು ಅವರು. ಗೊಂಬೆ ಮುಖಕ್ಕೆ ಅರ್ಥವಾಗದ ಮಾತಿದು. ಆದರೆ ನನಗರ್ಥವಾಗಿತ್ತು. ನನ್ನಮ್ಮನಿಗೆ ಅರ್ಥವಾಗಿತ್ತು. ಇತ್ತೀಚೆಗೆ ಅಮ್ಮನ ನೆನಪು ಬಹಳವಾಗುತ್ತಿತ್ತು.

೩೩.

ಉಳಿದವರು ಹೇಳುವಂತೆ ಕೇವಲ ಚೆಲ್ಲಾಟವಾಡುತ್ತ ಜೀವನ ನಡೆಸುವದು ನನಗೆ ಸಾಧ್ಯವಾಗಲಿಲ್ಲ. ಬಹುಶಃ ಅದಕ್ಕೆ ಬೇಕಾದ ಬಂಡವಾಳ ನನ್ನಲ್ಲಿರಲಿಲ್ಲವೇನೋ. ಹೀಗಾಗಿ, ಈ ವಿಚಾರವನ್ನು ನಾನು ಕೈ ಬಿಡಬೇಕಾಯಿತು. ಸೀದಾ ವ್ಯಾಪಾರಕ್ಕೆ ಇಳಿಯಬೇಕಾಯಿತು. ಆದರೆ ಮನೆಮಾಲಿಕ ನನಗೆ ಮನೆ ಬಿಡಲು ಹೇಳಿದ. ಗೌರವವುಳ್ಳ ವ್ಯಕ್ತಿಯಲ್ಲವೇ ಅವನು? ಮರು ಮಾತಾಡಲಿಲ್ಲ ನಾನು. ನನ್ನ ಅಮ್ಮ ಮತ್ತು ಮೊದಲನೆಯ ಹೊಸ ಅಪ್ಪ ಉಳಿದುಕೊಂಡಿದ್ದ ಮನೆಗೆ ಹೋದೆ. ಈ ಮನೆಮಾಲಿಕ ಗೌರವದ ಬಗ್ಗೆ ಯಾವ ಮಾತನ್ನೂ ಆಡಲಿಲ್ಲ. ತುಂಬ ಒಳ್ಳೆಯವ ಮತ್ತು ನೇರ ಸ್ವಭಾವದ ಪ್ರಾಮಾಣಿಕ.

ವ್ಯಾಪಾರವಂತೂ ಚೆನ್ನಾಗಿ ನಡೆಯಿತು. ಮಾರಾಟಕ್ಕೆ ಲಭ್ಯಳಿದ್ದೇನೆಂದು ಗೊತ್ತಾದ ಕ್ಷಣ ಸುಸಂಸ್ಕೃತರೆಂದು ಹೇಳಿಕೊಳ್ಳುವವರೂ ಬಂದರು. ಅವರೆಲ್ಲ ನನ್ನನ್ನು ಖರೀದಿಸಲು ತಯಾರಿದ್ದರು. ಈ ವ್ಯವಸ್ಥೆಯ ಕಾರಣ ಅವರಿಗೆ ಅವರ ಹಣಕ್ಕೆ ಸರಿಯಾದ ಸರಕು ಸಿಗುತ್ತಿತ್ತು. ಅವರ ಸಾಮಾಜಿಕ ಸ್ಥಾನಮಾನಕ್ಕೂ ಯಾವ ಧಕ್ಕೆಯೂ ಆಗುತ್ತಿರಲಿಲ್ಲ. ಪ್ರಾರಂಭದಲ್ಲಿ ನನಗೆ ಹೆದರಿಕೆಯೇನೋ ಆಗುತ್ತಿತ್ತು. ಯಾಕೆಂದರೆ ನನಗಿನ್ನೂ ಇಪ್ಪತ್ತಾಗಿದ್ದಿಲ್ಲ. ಕೆಲವೇ ದಿನಗಳ ನಂತರ ನನ್ನ ಹೆದರಿಕೆ ಓಡಿ ಹೋಯ್ತು. ಅವರನ್ನು ಬಟ್ಟೆಯಂತೆ ಹಿಂಡಿ ಹಿಪ್ಪೆ ಮಾಡಬಲ್ಲವಳಾದೆ. ಸಂತೋಷದಿಂದ ಮತ್ತು ಸಂತೃಪ್ತಿಯಿಂದ ಅವರು ನನ್ನ ಬಗ್ಗೆ ತಮ್ಮ ಗೆಳೆಯರಲ್ಲೂ ಹೇಳಿಕೊಳ್ಳತೊಡಗಿದರು. ಕೆಲವೇ ತಿಂಗಳಲ್ಲಿ ನಾನು ಸಾಕಷ್ಟು ನುರಿತಿದ್ದೆ. ಮೊದಲ ಬಾರಿ ನೋಡಿದಾಗಲೇ ಗಂಡಸನ್ನು ಅಳೆಯಲು ನನಗೆ ಸುಲಭವಾಯಿತು. ಶ್ರೀಮಂತಗಿರಾಕಿಗಳು ನನ್ನ ಹಿನ್ನೆಲೆಯ ಬಗ್ಗೆ ವಿಚಾರಿಸುವದನ್ನು ಮರೆಯುತ್ತಿರಲಿಲ್ಲ. ಅದೇ ವೇಳೆ ನನಗೆ ಸೂಕ್ತ ಬೆಲೆಯನ್ನು ನೀಡಲು ಸಿದ್ಧರೆಂಬುದನ್ನೂ ತಿಳಿಸುತ್ತಿದ್ದರು. ಅವರಲ್ಲಿ ಅಸೂಯೆ ಮನೆ ಮಾಡಿತ್ತು. ಸೂಳೆಯ ಮನೆಯಲ್ಲೂ ತಮ್ಮ ಏಕಸ್ವಾಮ್ಯವನ್ನು ಮೆರೆಯಬಯಸುತ್ತಿದ್ದರು. ಯಾಕೆಂದರೆ ಅವರಲ್ಲಿ ಹಣವಿತ್ತು. ಇಂಥವರೊಂದಿಗೆ ನಾನು ವಿನಯದಿಂದ ನಡೆದುಕೊಳ್ಳುತ್ತಿದ್ದೆ. ಅವರು ಸಿಟ್ಟಿಗೇರಿದರೂ ನಾನು ಹೆದರುತ್ತಿರಲಿಲ್ಲ. ಅವರ ಹೆಂಡತಿಗೆ ಹೇಳುತ್ತೇನೆಂಬ ಬೆದರಿಕೆ

ಹಾಕುತ್ತಿದ್ದೆ. ನಾನು ಶಾಲೆಗೆ ಹೋಗಿದ್ದು ವ್ಯರ್ಥವಾಗಲಿಲ್ಲ. ಅಂತೂ ಶಿಕ್ಷಣದಿಂದ ಪ್ರಯೋಜನವಿದೆ ಎನ್ನುವದು ನನಗೆ ಮನದಟ್ಟಾಗಿತ್ತು. ಇನ್ನು ಕೆಲವರು ಮೋಸ ಹೋದೇವೆಂಬ ಭಯದಿಂದ ಕೇವಲ ಒಂದು ಡಾಲರ್ ಇಟ್ಟುಕೊಂಡು ಬರುತ್ತಿದ್ದರು. ಇಂತವರಿಗೆ ನಾನು ನನ್ನ ವ್ಯಾಪಾರದ ನಿಬಂಧನೆಗಳನ್ನು ಸರಿಯಾಗಿ ತಿಳಿಸಿ ಹೇಳುತ್ತಿದ್ದೆ. ಆವರು ತೆಪ್ಪಗೆ ಮನೆಗೆ ಮರಳಿ ಮತ್ತಷ್ಟು ಹಣ ತೆಗೆದುಕೊಂಡು ಬರುತ್ತಿದ್ದರು. ಇದೊಂದು ಗೊಂದಲದ ವ್ಯಾಪಾರವೇ ಸರಿ.

ಇನ್ನು, ನನಗೆ ಅತಿ ಕೆಟ್ಟ ಅನುಭವವಾಗಿದ್ದು ಚಿಕ್ಕಪುಟ್ಟ ಪುಂಡ ಗಿರಾಕಿಗಳಿಂದ. ಅವರು ಹಣವನ್ನೂ ಖರ್ಚು ಮಾಡಲು ತಯಾರಿದ್ದಿಲ್ಲ. ಹೋಗುವಾಗ ಸಿಗರೇಟಿನ ಪಾಕೀಟನ್ನೋ ಕೋಲ್ಡ ಕ್ರೀಮಿನ ಬಾಟಲನ್ನೋ ಕದ್ದೊಯ್ಯುತ್ತಿದ್ದರು. ಇವರೊಂದಿಗೆ ಗುದ್ದಾಡಿ ಏನೂ ಪ್ರಯೋಜನವಿರಲಿಲ್ಲ. ಏಕೆಂದರೆ ಅವರಿಗೆ ಅಲ್ಲಿ ಸಂಪರ್ಕಗಳಿದ್ದವು. ಅವರನ್ನೆದುರಿಸಿದರೆ, ಪೋಲೀಸರನ್ನು ಛೂ ಬಿಡುವರು. ಇಂತಹವರನ್ನು ಬೆದರಿಸಲು ಹೋಗಲಿಲ್ಲ. ಹೇಗೋ ಒಬ್ಬ ಪೋಲೀಸ ಅಧಿಕಾರಿಯ ಪರಿಚಯ ಮಾಡಿಕೊಂಡು ನಂತರ ಅವರನ್ನು ಒಬ್ಬೊಬ್ಬರನ್ನಾಗಿ ದೂರ ಸರಿಸಿದೆ. ಈ ಜಗತ್ತಿನಲ್ಲಿ ಒಂದು ನಾಯಿ ಮತ್ತೊಂದನ್ನು ತಿನ್ನಲೇಬೇಕು. ತೊಂದರೆಗಳು ಹೆಚ್ಚಾದಷ್ಟು ಹೋರಾಡಲು ಹೆಚ್ಚು ಕೆಚ್ಚು ಬರುತ್ತದೆ.

ನನಗೆ ಹೆಚ್ಚು ಕರುಣೆ ಬರುತ್ತಿದ್ದುದು ಹದಿವಯಸ್ಸಿನ ವಿದ್ಯಾರ್ಥಿಗಳ ಮೇಲೆ. ಒಂದು ಡಾಲರ ಮತ್ತೊಂದಿಷ್ಟು ಚಿಲ್ಲರೆಯೊಂದಿಗೆ ಬಂದು, ಹೆದರಿಕೆಯಿಂದ ಮೂಗಿನ ಮೇಲೆ ಹನಿಗಳನ್ನು ಹೊತ್ತು ಸಾಲಾಗಿ ನಿಲ್ಲುತ್ತಿದ್ದರು. ಕರುಣೆ ಬರುತ್ತಿದ್ದುದೇನೋ ನಿಜ. ಆದರೂ ಅವರಿಂದ ಹಣವನ್ನು ಕಿತ್ತದೇ ಬಿಡುತ್ತಿರಲಿಲ್ಲ. ಮತ್ತೇನು ಮಾಡಬಲ್ಲವಳಾಗಿದ್ದೆ ನಾನು?

ವಯಸ್ಸಾದವರೂ ಬರುತ್ತಿದ್ದರು. ಅವರೆಲ್ಲ ಗೌರವದ ಬಾಳು ಬಾಳಿದವರು. ಅವರಲ್ಲಿ ಹಲವಾರು ಅಜ್ಜಂದಿರೂ ಇರುತ್ತಿದ್ದರು. ಅವರೊಂದಿಗೆ ಹೇಗೆ ನಡೆದುಕೊಳ್ಳಬೇಕೆನ್ನುವದು ನನಗರ್ಥವಾಗಿರಲಿಲ್ಲ. ಆದರೆ ಅವರ ಹತ್ತಿರ ಹಣವಿತ್ತು. ಬಹುಶಃ ತಮ್ಮನ್ನು ಸೃಷ್ಟಿಸಿದ ದೇವರನ್ನು ಭೆಟ್ಟಿಯಾಗುವ ಮೊದಲು ಕೊಂಚ ನೆಮ್ಮದಿಯನ್ನು ಪಡೆದುಕೊಳ್ಳಬೇಕೆಂದಿದ್ದರೇನೋ, ಆದ್ದರಿಂದ ಅವರಿಗೆ ಏನು ಬೇಕಾಗಿತ್ತೋ, ಅದನ್ನು ಅವರಿಗೆ ನೀಡಿದವಳು ನಾನು. ನೆಮ್ಮದಿ ಅವರಿಗೆ, ಹಣ ನನಗೆ.

ಇವೆಲ್ಲ ಅನುಭವಗಳು ನನಗೆ ಹಣದ ಮತ್ತು ಮನುಷ್ಯನ ನೈಜರೂಪವನ್ನು ತೋರಿಸಿದವು. ಹಣವೇ ಹೆಚ್ಚು ಬಲಿಷ್ಠ. ಮನುಷ್ಯನನ್ನು ಪ್ರಾಣಿಯೊಂದಿಗೆ ಹೋಲಿಸಿದರೆ, ಹಣ ಅವನ ಧೈರ್ಯದ ಸಂಕೇತ.

ನನಗೆ ಅಂಟುರೋಗ ಬಂದದ್ದರ ಅರಿವಾಯಿತು. ನನಗೆ ಬಹಳ ತೊಂದರೆಯಾಯಿತು. ಸಾಯುವದೇ ಮೇಲು ಎಂದೆನಿಸಿತು. ಕೆಲದಿನ ವ್ಯಾಪಾರ ಬಿಟ್ಟೆ, ಗಲ್ಲಿಗಳಲ್ಲೆಲ್ಲ ಗುರಿಯಿಲ್ಲದೇ ಅಲೆದಾಡಿದೆ. ಅಮ್ಮನಿಗಾಗಿ ಪರಿತಪಿಸಿದೆ. ಅವಳು ನನಗೆ ಕೊಂಚವಾದರೂ ಸಾಂತ್ವನ ನೀಡುತ್ತಿದ್ದಳೇನೋ. ನನ್ನ ಜೀವಿತಾವಧಿ ಅತ್ಯಲ್ಪವೆಂದು ಭಾವಿಸಿದೆ.

ಬ್ರೆಡ್ ಮಾಡುವವನ ಮನೆಯೆದುರು ಕುಲುಮೆ ಊದುತ್ತ ಅವಳು ಕುಳಿತಿದ್ದ ಆ ಚಿಕ್ಕ ಓಣಿಗೂ ಹೋದೆ. ಆದರೆ ಆ ಬ್ರೆಡ್ ಅಂಗಡಿಯೀಗ ಮುಚ್ಚಲಾಗಿತ್ತು. ಅವರೆಲ್ಲಿ ಹೋದರೋ ಯಾರಿಗೂ ಗೊತ್ತಿರಲಿಲ್ಲ. ಆದರೂ ನನ್ನ ಪ್ರಯತ್ನ ಬಿಡಲಿಲ್ಲ. ಅವಳನ್ನು ಹೇಗಾದರೂ ಕಂಡು ಹಿಡಿಯಲೇ ಬೇಕಿತ್ತು. ಬಹಳ ದಿನಗಳವರೆಗೆ ದೆವ್ವದಂತೆ ಆ ಓಣಿಯಿಂದ ಈ ಓಣಿ, ಈ ರಸ್ತೆಯಿಂದ ಆ ರಸ್ತೆಗೆ ಅಲೆದಾಡುತ್ತಲೇ ಹೋದೆ. ಏನೂ ಉಪಯೋಗವಾಗಲಿಲ್ಲ. ಎಲ್ಲಿ ಹೋದರೋ ಏನೋ. ಅವಳು ಜೀವಂತವಿದ್ದಾಳೋ ಇಲ್ಲವೋ. ಅವರು ಊರನ್ನೇ ಬಿಟ್ಟು ನೂರಾರು ಮೈಲಿ ದೂರ ಹೋದರೋ ಏನೋ. ಒಂದೂ ಗೊತ್ತಾಗಲಿಲ್ಲ. ವಿಷಣ್ಣಳಾಗಿ ನಾನು ಎದೆಯೊಡೆದುಕೊಂಡೆ. ಅಳುತ್ತ ಕುಳಿತೆ. ಕೊನೆಗೊಂದು ದಿನ, ನನ್ನಲ್ಲಿದ್ದ ಅತ್ಯುತ್ತಮ ಪೋಷಾಕನ್ನು ಹಾಕಿಕೊಂಡೆ. ನನ್ನ ಮುಖಕ್ಕೆ ಮೇಕಪ್ ಬಳಿದುಕೊಂಡೆ ಹಾಗೂ ಹಾಸಿಗೆಯ ಮೇಲೆ ಮಲಗಿ ಸಾವಿನ ಬರುವಿಕೆಯ ಕಾಯತೊಡಗಿದೆ. ನಾನು ಬಹುಕಾಲ ಉಳಿಯಲಾರೆ ಎಂಬುದು ನನಗೆ ಖಾತ್ರಿಯಾಗಿತ್ತು.

ಆದರೆ ನಾನು ಸಾಯಲಿಲ್ಲ. ಬಾಗಿಲು ತಟ್ಟಿದ ಸಪ್ಪಳವಾಯಿತು. ನನ್ನನ್ನೇ ಹುಡುಕಿಕೊಂಡು ಯಾವನೋ ಬಂದಿದ್ದ. ಬರಲಿ ಎಂದು ಒಳಗೆ ಕರೆದುಕೊಂಡೆ. ನನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ, ನನ್ನ ರೋಗದಲ್ಲಿ ಒಳ್ಳೆಯ ಪಾಲನ್ನೇ ಅವನಿಗೆ ನೀಡಿದೆ. ನಾನು ತಪ್ಪು ಮಾಡುತ್ತಿದ್ದೇನೆಂದು ನನಗಿಸಲೇ ಇಲ್ಲ. ಹೇಗೂ, ಇದೆಲ್ಲವೂ ನನ್ನ ತಪ್ಪಿನಿಂದ ಆಗಿರಲಿಲ್ಲ ಅಲ್ಲವೇ?

ಮಾನಸಿಕವಾಗಿ ನಾನು ಸ್ಥೈರ್ಯವನ್ನು ಮರಳಿಸಿಕೊಂಡೆ. ಸಿಗರೇಟು ಸೇದಿದೆ, ಸೆರೆ ಕುಡಿದೆ ಮತ್ತು ಮೂವತ್ತು ಅಥವಾ ನಲವತ್ತರ ಹೆಂಗಸಿನಂತೆ ವರ್ತಿಸತೊಡಗಿದೆ. ಕಣ್ಣುಗಳ ಕೆಳಗೆ ಕಪ್ಪು ವರ್ತುಲಗಳು ಮೂಡಿದ್ದವು. ಅಂಗೈಗಳು ಜ್ವರ ಬಂದ ಹಾಗೆ ಬೆಚ್ಚಗಾಗಿ ಉಳಿದಿದ್ದವು. ನಾನು ಇದ್ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಹಣವೇ ಮುಖ್ಯವಲ್ಲವೇ? ಮೊದಲು ಹೊಟ್ಟೆ ತುಂಬ ಊಟ ಮಾಡು, ನಂತರ ಉಳಿದವುಗಳ ಬಗ್ಗೆ ಯೋಚಿಸು. ಇದನ್ನೇ ಅನುಸರಿಸಿದೆ. ನಾನೇಕೆ ಒಳ್ಳೆಯ ಊಟ ಮಾಡಬಾರದು? ಒಳ್ಳೆಯ ಊಟ ಮಾಡು, ಒಳ್ಳೆಯ ಬಟ್ಟೆ ಧರಿಸು. ಈ ರೀತಿ ಮಾತ್ರ ನಾನು ಸ್ವಲ್ಪವಾದರೂ ನನಗೆ ನ್ಯಾಯ ಒದಗಿಸಿಕೊಳ್ಳಬಲ್ಲೆ.

೩೫.

ಇತ್ತೀಚೆಗೆ ನಾನೇಕೋ ಆಲಸಿಯಾಗತೊಡಗಿದ್ದೆ. ಮಧ್ಯಾಹ್ನದವರೆಗೂ ತಯಾರಾಗುತ್ತಿರಲಿಲ್ಲ. ನಿದ್ದೆಯಿಂದ ಎದ್ದ ಮೇಲೂ ತಾಸುಗಟ್ಟಲೇ ಯೋಚಿಸುತ್ತ ಅಥವಾ ಏನೂ ಯೋಚಿಸದೇ ಸುಮ್ಮನೇ ಹಾಸಿಗೆಯ ಮೇಲೆ ಎದ್ದು ಕುಳಿತಿರುತ್ತಿದ್ದೆ. ಒಂದು ದಿನ ಬೆಳಗ್ಗೆ ಸುಮಾರು ಹತ್ತು ಗಂಟೆಗೆ ನಾನು ಅದೇ ನಿದ್ದೆಯಿಂದ ಎಚ್ಚೆತ್ತು ಕುಳಿತಿದ್ದೆ. ಅವತ್ತೇಕೋ ಉದ್ದನೆಯ ನೈಟಿ ಹಾಕಿಕೊಂಡಿದ್ದೆ. ಹೀಗೆ ಕುಳಿತಿದ್ದಾಗ. ಹೊರಗಡೆ ಹೆಜ್ಜೆ ಸಪ್ಪಳ ಕೇಳಿಸಿದವು. ನನ್ನ ಬಾಗಿಲತ್ತಲೇ ಸಾವಕಾಶವಾಗಿ ಬಂದವು. ಒಂದು ಜೋಡಿ ಕಣ್ಣುಗಳು ಬಾಗಿಲಲ್ಲಿಯ ಗ್ಲಾಸಿನಿಂದ ಇಣುಕಿದವು. ಮರುಕ್ಷಣ ಮರೆಯಾದವು. ಕೆಲ ನಿಮಿಷಗಳ ನಂತರ ಮತ್ತೆ ಆ ಜೋಡಿ ಕಣ್ಣುಗಳು ಇಣುಕಿ ನೋಡಿದವು. ಈ ಸಲ ಅವುಗಳನ್ನು ಗುರುತಿಸಿದೆ. ಎದ್ದು ನಿಂತು ಬಾಗಿಲನ್ನು ಸಾವಕಾಶವಾಗಿ ತೆರೆದೆ. "ಓ ಅಮ್ಮಾ!"

೩೬.

ಮುಂದೇನಾಯಿತು ಎಂಬುದನ್ನು ನಾನು ಸರಿಯಾಗಿ ವಿವರಿಸಲಾರೆ. ಎಷ್ಟು ಹೊತ್ತು ಇಬ್ಬರೂ ಅಳುತ್ತ ಕುಳಿತಿದ್ದೆವೋ ಅದೂ ನನಗೆ ನೆನಪಿಲ್ಲ. ಅಮ್ಮನೀಗ ಬಹಳ ವಯಸ್ಸಾದವಳಂತೆ ಕಾಣುತ್ತಿದ್ದಾಳೆ. ಟ್ರೇಡ್ ಮಾಡುವ ಅವಳ ಗಂಡ ಅವಳನ್ನು ಬಿಟ್ಟು ತನ್ನ ಹಳ್ಳಿಗೆ ಓಡಿದ್ದ. ಅವಳಿಗಾಗಿ ಬಿಡಿಗಾಸನ್ನೂ ಬಿಟ್ಟಿರಲಿಲ್ಲವಂತೆ. ಅಂಗಡಿಯಲ್ಲಿದ್ದ ಹಲವು ಸಲಕರಣೆಗಳನ್ನು ಮಾರಾಟ ಮಾಡಿ. ಅಂಗಡಿಯನ್ನು ಮನೆಮಾಲಿಕನಿಗೆ ಬಿಟ್ಟುಕೊಟ್ಟು ಒಂದು ಕಡಿಮೆ ಬಾಡಿಗೆಯ ಕೋಣೆಗೆ ಹೋಗಿದ್ದಳಂತೆ.

ನನಗಾಗಿ ಹದಿನೈದು ದಿನಗಳಿಂದ ಹುಡುಕುತ್ತಲೇ ಇದ್ದಳಂತೆ. ಕೊನೆಗೆ ಈ ಸ್ಥಳಕ್ಕೆ ಬಂದು ನೋಡುವ ವಿಚಾರ ಬಂದಿತಂತೆ. ಅಂತೂ ನಾನಿಲ್ಲಿಯೇ ಇದ್ದೆನಲ್ಲ! ನನ್ನನ್ನು ಕಂಡರೂ ಅವಳಿಗೆ ಮಾತನಾಡುವ ಧೈರ್ಯವಿರಲಿಲ್ಲವಂತೆ. ನಾನು. ಆ ಹೊತ್ತಿನಲ್ಲಿ ಕರೆಯದೇ ಹೋಗಿದ್ದರೆ ಮತ್ತೆ ಹೊರಟೇ ಹೋಗುತ್ತಿದ್ದಳೇನೋ.

ಅಳು ನಿಂತ ಮೇಲೆ, ನಾನು ಉನ್ಮಾದದಿಂದ ನಗತೊಡಗಿದೆ. ಎಂತಹ ವಿಪರ್ಯಾಸವಿದು! ಅಮ್ಮನಿಗೆ ಮಗಳು ಸಿಕ್ಕಳು. ಅದೂ ಎಂತಹ ಸ್ಥಿತಿಯಲ್ಲಿ. ಆವಾಗ ಸೂಳೆ! ನನ್ನ ಪಾಲನೆ ಮಾಡಲಿಕ್ಕೆ ಅವಳು ಸೂಳೆಯಾಗಲೇಬೇಕಾಗಿತ್ತು. ಈಗ ಅವಳ ಪಾಲನೆ ಮಾಡುವದು ನನ್ನ ಸರದಿಯಾಗಿತ್ತು. ಕಾರಣ ನಾನು ಒಬ್ಬ ಸೂಳೆಯಾಗಿಯೇ ಉಳಿದುಕೊಳ್ಳಲೇಬೇಕು!

ಮಾನವನ ಇತಿಹಾಸದ ಅತ್ಯಂತ ಪುರಾತನ ಕಸುಬು ಆ ಬಂಧಿತವಾಗಿಯೂ ಅನುವಂಶಿಕ. ಇದು ಹೆಣ್ಣಿನ ವೈಶಿಷ್ಟ್ಯ!

೩೭.

ಶಾಂತ್ನನ ಬಗೆ ಮಾತನ್ನಾಡಿದ್ದು ನನಗೆ ಗೊತ್ತಿದ್ದ ಸಂಗತಿಯೇ. ಅದನ್ನೂ ಅಮ್ಮನಿಂದ ಕೇಳಿಯಾಗಿದ್ದೆ. ಅಮ್ಮ ಜನರನ್ನು ಮೂರ್ಖರನ್ನಾಗಿಸುವುದರಲ್ಲಿ ಜಾಣಳಾಗಿದ್ದಳು. ಮತ್ತು ಅವಳು ಪುಸಲಾಯಿಸುವುದನ್ನು ನಾನು ಶಾಂತ್ನನದೆಂದುಕೊಂಡಿದ್ದೆ. ಅದಲ್ಲಾಗ. ಈಗ ಅಮ್ಮ ಅದೆಲ್ಲವನ್ನು ಮರೆತಿದ್ದಳೇನೋ. ಅವಳು ಮನದಿಂದ ಭಯಭೀತಳಾಗಿದ್ದಳು. ಶಾಂತ್ನನೆಂದೂ ಒಂದು ಮಾತನ್ನೂ ಹೇಳಲಿಲ್ಲ. ಇದಕ್ಕೆ ಅವನನ್ನು ದೂಷಿಸಬಯಸಲಿಲ್ಲ.

ನನ್ನಲ್ಲಿದ್ದ ಎಲ್ಲ ವಸ್ತುಗಳನ್ನು ಅವಳು ಪರಿಶೀಲಿಸಿದಳು. ನನ್ನ ಗಳಿಕೆಯೆಷ್ಟು ಖರ್ಚು ಎಷ್ಟು ಎಂದೆಲ್ಲ ಪ್ರಶ್ನಿಸಿದಳು. ಬಹುಶಃ ಅವಳಿಗೆ ನನ್ನ ಕಸುಬಿನಿಂದ ಯಾವುದೇ ರೀತಿಯ ಮುಜುಗರವಾಗಿರಲಿಲ್ಲವೆಂಬುದು ನನಗೆ ಅನಿಸಿತು. ನನಗೆ ರೋಗ ಅಂಟಿಕೊಂಡಿದ್ದನ್ನು ಅವಳಿಗೆ ಹೇಳಿದೆ. ಇದನ್ನು ಹೇಳುವಾಗ ಅವಳು ನನಗೆ ಕೆಲದಿನ ವಿಶ್ರಾಂತಿ ತೆಗೆದುಕೊಳ್ಳಲು ಹೇಳಬಹುದೆಂದುಕೊಂಡಿದ್ದೆ. ಅಂತಹದೇನೂ ಘಟಿಸಲಿಲ್ಲ. ಕೆಲವು ಔಷಧಿಗಳನ್ನು ತಂದು ಕೊಡುವುದಾಗಿ ಅವಳು ಹೇಳಿದಳು ಅಷ್ಟೇ. ಮತ್ತೇನೂ ಹೇಳಲಿಲ್ಲ.

"ನಾವು ಯಾವಾಗಲೂ ಇದೇ ವ್ಯವಹಾರದಲ್ಲಿ ಉಳಿದುಕೊಳ್ಳಬೇಕೇ, ಅಮ್ಮ?" ನಾನ ಕೇಳಿದೆ. ಅವಳು ಉತ್ತರಿಸಲಿಲ್ಲ.

ಆದರೂ, ಒಂದು ರೀತಿಯಲ್ಲಿ ಅವಳು ನನ್ನನ್ನು ನಿಜವಾಗಿಯೂ ಪ್ರೀತಿಸುತ್ತಿದ್ದಳು ಹಾಗೂ ನನ್ನನ್ನು ತೊಂದರೆಗಳಿಂದ ರಕ್ಷಿಸಲು ಬಯಸುತ್ತಿದ್ದಳು. ನನಗೆ ಸರಿಯಾಗಿ ಊಟ ಮಾಡಿಸುತ್ತಿದ್ದಳು. ನನ್ನ ಆರೋಗ್ಯ ಸುಧಾರಿಸುವಂತೆ ನೋಡಿಕೊಳ್ಳುತ್ತಿದ್ದಳು. ತಾಯಿಯು ತನ್ನ ಚಿಕ್ಕ ಮಗುವನ್ನು ಗಮನಿಸುವಂತೆ ಸದಾ ನನ್ನತ್ತ ಗಮನ ಕೊಡುತ್ತಿದ್ದಳು. ಎಲ್ಲ ತಾಯಂದಿರಂತೆ ನನ್ನನ್ನು ಪಾಲಿಸಿದಳು, ಆದರೆ ನನ್ನ ಈ ಕಸಬನ್ನು ಬಿಡು ಎಂದು ಮಾತ್ರ ಹೇಳಲಿಲ್ಲ.

ಈ ಕೆಲಸವನ್ನು ಬಿಟ್ಟು ಬೇರಾವುದೇ ಕೆಲಸ ನನ್ನಿಂದಾಗದು ಎಂದು ನನಗೆ ಖಂಡಿತವಾಗಿಯೂ ಗೊತ್ತಿತ್ತು. ಇದನ್ನು ಹೇಳಲು ನನಗೆ ಸಂಕೋಚವೂ ಅನಿಸುವುದಿಲ್ಲ. ದುಃಖವೂ ಅನಿಸುವುದಿಲ್ಲ. ಅಮ್ಮನಿಗೆ ಮತ್ತು ನನಗೆ ಊಟ ಮತ್ತು ಬಟ್ಟೆ-ಬರೆ ಬೇಕೇ ಬೇಕು. ಇದೊಂದೇ ಎಲ್ಲವನ್ನೂ ನಿರ್ಧರಿಸುತ್ತಿತ್ತು. ಅಮ್ಮನಿರಲಿ ಅಥವಾ ಮಗಳಿರಲಿ, ಗೌರವ ಸಿಗಲಿ ಅಥವಾ ಸಿಗದೇ ಹೋಗಲಿ. ಹಣದ ಅವಶ್ಯಕತೆ ಅತ್ಯಂತ ಜರೂರಿಯಾಗಿತ್ತು.

೨೮

ನಾನು ಚೆನ್ನಾಗಿರುವಂತೆ ಅಮ್ಮ ನನ್ನನ್ನು ನೋಡಿಕೊಳ್ಳಬೇಕೆಂದಿದ್ದಳು. ಆದರೆ

ನಾನು ಹಾಳಾಗುವುದನ್ನು ನೋಡುತ್ತ ಅವಳು ಸುಮ್ಮನಿರಬೇಕಾಗಿದೆ. ಅವಳು ಎಷ್ಟೋ ಸಲ ನನಗೇ ಕಿರಿಕಿರಿ ಮಾಡುತ್ತಿದ್ದಳು. ಹಣದ ವಿಷಯ ಬಂದಾಗಲೆಲ್ಲ ತಾನೇ ಮುಖ್ಯಸ್ಥಿಕೆ ವಹಿಸಬೇಕು, ತನ್ನ ಮಾತೇ ನಡೆಯಬೇಕು ಎಂದು ಜಿದ್ದು ಮಾಡುತ್ತಿದ್ದಳು. ಅವಳ ಕಣ್ಣುಗಳ ಯೌವನದ ಕಾಂತಿ ಕಳೆದು ಹೋಗಿದ್ದರೂ. ಹಣವನ್ನು ನೋಡುತ್ತಲೇ ಅವು ಫಳಫಳ ಹೊಳೆಯುತ್ತಿದ್ದವು. ಗಿರಾಕಿಗಳಿದ್ದಾಗ ನೌಕರರಂತೆ ವರ್ತಿಸುತ್ತಿದ್ದಳು, ಯಾರಾದರೂ ಒಪ್ಪಿಕೊಂಡಿದ್ದಕ್ಕಿಂತ ಕಡಿಮೆ ಹಣವನ್ನು ಕೊಟ್ಟರೆ ಅವರಿಗೆ ಚೆನ್ನಾಗಿ ಬೈದು ಮಾಡಿ. ಅವಹೇಳನಗೊಳಿಸುತ್ತಿದ್ದಳು.

ಕೆಲವೊಮ್ಮೆ ಅವಳ ಈ ಸ್ವಭಾವದಿಂದ ನನಗೆ ಮುಜುಗರವಾಗುತ್ತಿತ್ತು. ನಾನು ಈ ಕಸಬಿಗೆ ಇಳಿದಿದ್ದು ಹಣಕ್ಕಾಗಿಯೇ ಎಂಬುದು ಖಂಡಿತವಾಗಿಯೂ ಸತ್ಯ. ಆದರೆ ಹಣಕ್ಕಾಗಿ ಜನರೊಂದಿಗೆ ಕ್ರೂರವಾಗಿ ವರ್ತಿಸಬೇಕಾಗಿಲ್ಲ. ಕೆಲ ಗಿರಾಕಿಗಳೊಂದಿಗೆ ಕಠೋರವಾಗಿ ವರ್ತಿಸುತ್ತಿದ್ದೆ. ಆದರೆ ನನ್ನದೇ ಆದ ರೀತಿಯಲ್ಲಿ ಅವರನ್ನು ಅನುನಯಿಸಿ ಸರಿಯಾದ ಹಾದಿಗೆ ತರಬಲ್ಲೆ. ಆದರೆ, ಅಮ್ಮನದು ನಿಜವಾಗಿಯೂ ಅತಿ ಕಠೋರ ವರ್ತನೆ: ಅವಳು ಅವರನ್ನು ತುಂಬಾ ಅವಹೇಳನಗೊಳಿಸುತ್ತಿದ್ದಳು. ಕೇವಲ ಹಣಕ್ಕಾಗಿ ನಾವು ಹೀಗೆ ವರ್ತಿಸಬೇಕಾಗಿಲ್ಲ ಎನ್ನುವದು ನನ್ನ ಖಚಿತ ಅಭಿಪ್ರಾಯ. ನಾನು ಚಿಕ್ಕವಳಾದ ಕಾರಣದಿಂದಲೂ ಹೀಗೆ ಯೋಚಿಸುತ್ತೇನೇನೋ. ಅಮ್ಮ ಹಣಕ್ಕೆ ಮಾತ್ರ ಬೆಲೆ ಕೊಡುತ್ತಾಳೆ, ಬಹುಶಃ ಅವಳು ಹಾಗೆ ಇರಲೇಬೇಕೇನೊ. ಪ್ರಾಯಶಃ ಇನ್ನೊಂದು ಹಲವು ವರ್ಷಗಳಲ್ಲಿ ನಾನೂ ಅವಳಂತೆಯೇ ಆಗಲೂ ಬಹುದು. ವರ್ಷಗಳು ಕಳೆದಂತೆ ಹೃದಯವೂ ಬೆಳ್ಳಿಯ ಡಾಲರಿನಂತೆ ಕಠೋರ ಮತ್ತು ಬಿರುಸಾಗಬಹುದು.

ಅಮ್ಮನಿಗೆ ಅತಿಥಿ. ಅಭ್ಯಾಗತ ಎನ್ನುವ ಭಾವನೆಯಿರಲಿಲ್ಲ. ಯಾರಾದರೂ ನಿರ್ಧಾರ ಮಾಡಿದ ಹಣ ಕೊಡದಿದ್ದರೆ, ಅವರ ಬ್ರೀಫ್‌ಕೇಸು, ಹ್ಯಾಟು ಅಥವಾ ಕೊಂಚವೇ ಬೆಲೆಯಿರುವ ಕೈಗವಸಗಳನ್ನು ಇಲ್ಲವೇ ಊರುಗೋಲನ್ನು ಇಟ್ಟುಕೊಂಡು ಬಿಡುತ್ತಿದ್ದಳು. “ನಮ್ಮಿಂದಾದಷ್ಟು ಡಾಲರುಗಳನ್ನು ನಾವು ಗಳಿಸಲೇಬೇಕು. ಕಸಬಿನಲ್ಲಿ ಪ್ರತಿವರ್ಷ ಹತ್ತು ವರ್ಷಗಳಷ್ಟು ವಯಸ್ಸಾಗುತ್ತದೆ. ನೀನು ಅರವತ್ತು ಎಪ್ಪತ್ತು ವಯಸ್ಸಾದವಳಂತೆ ಕಾಣುವಾಗ ನಿನ್ನನ್ನು ಯಾರು ಬಯಸುತ್ತಾರೆ?” ಇದು ಅವಳ ಖಚಿತ ತೀರ್ಪು. ಗಿರಾಕಿಯೇನಾದರೂ ಹೆಚ್ಚು ಕುಡಿದು ಜ್ಞಾನ ಕಳೆದುಕೊಂಡರೆ, ಯಾರೂ ಇಲ್ಲದ ಸ್ಥಳಕ್ಕೆ ಎಳೆದೊಯ್ದು ಅವರ ಬಟ್ಟೆ ಬರೆ, ಬೂಟು ಎಲ್ಲವನ್ನೂ ಕಳಚಿಕೊಳ್ಳುತ್ತಿದ್ದಳು. ವಿಚಿತ್ರವೆಂದರೆ ಆ ಗಿರಾಕಿ ಮತ್ತೆಂದೂ ಅದರ ಬಗ್ಗೆ ಸೊಲ್ಲೆತ್ತುತ್ತಿರಲಿಲ್ಲ. ಬಹುಶಃ ಇದೆಲ್ಲ ಹೇಗಾಯ್ತು ಎನ್ನುವದು ಅವನಿಗೆ ಗೊತ್ತಾಗುತ್ತಿರಲಿಲ್ಲವೇನೋ, ಅಥವಾ ಚಳಿಯಿಂದ ಅವನಿಗೆ ನ್ಯೂಮೋನಿಯಾ ಬರುತ್ತಿತ್ತೇನೋ ಗೊತ್ತಾದರೂ ಸಹ ಯಾರ ಮುಂದೆಯೂ ಹೇಳದಷ್ಟು ಅವನಿಗೆ ಮುಜುಗರವಾಗುತ್ತಿತ್ತೇನೋ!

೩೯.

ಒಂದೇ ವರ್ಷದಲ್ಲಿ ಹತ್ತು ವರ್ಷ ವಯಸ್ಸು ಹೆಚ್ಚಾಗುತ್ತದೆ ಎಂದು ಹೇಳಿದಳಲ್ಲವೇ, ಅವಳು ಹೇಳಿದ್ದು ಸತ್ಯ. ಎರಡು ಮೂರು ವರ್ಷಗಳಲ್ಲಿಯೇ ನನ್ನಲ್ಲಾದ ಬದಲಾವಣೆ ನನಗೆ ಅಚ್ಚರಿ ತಂದಿತು. ನನ್ನ ಚರ್ಮ ಒರಟಾಯಿತು. ತುಟಿಗಳು ಒಡೆದು ಹೋಗಿದ್ದವು, ನನ್ನ ಕಣ್ಣುಗಳಲ್ಲಂತೂ ರಕ್ತ ಚಿಮ್ಮಿ ಬರುತ್ತಿತ್ತು. ತಡ ಮಾಡಿ ಎದ್ದರೂ, ನಾನು ಯಾವಾಗಲೂ ದಣಿದವಳಂತೆ ಇರುತ್ತಿದ್ದೆ. ನನಗಂತೂ ಇವೆಲ್ಲದರ ಅರಿವಾಗುತ್ತಿತ್ತು. ನನ್ನ ಗಿರಾಕಿಗಳು ಸಹ ಕುರುಡರಾಗಿದ್ದಿಲ್ಲ. ಮುಂಚಿನ ಗಿರಾಕಿಗಳು ಬರುವುದನ್ನು ಕಡಿಮೆ ಮಾಡಿದರು. ಹೊಸ ಗಿರಾಕಿಗಳನ್ನು ತೃಪ್ತಿಗೊಳಿಸಲು ನಾನೆಷ್ಟು ಪ್ರಯತ್ನ ಪಟ್ಟರೂ ಸಾಧ್ಯವಾಗುತ್ತಿರಲಿಲ್ಲ. ಕೆಲವೊಮ್ಮೆ ನನ್ನ ತಾಳ್ಮೆ ಕಳೆದುಕೊಂಡು ಏನೇನೋ ಮಾತನಾಡುತ್ತಿದ್ದೆ. ಒದರಾಡುತ್ತಿದ್ದೆ. ಈ ರೀತಿಯ ಒದರಾಟ ನನಗೆ ಸಹಜವಾಗತೊಡಗಿತು.

ನನ್ನ 'ಸುಸಂಸ್ಕೃತ'ರೆಂದು ಹೇಳಿಕೊಳ್ಳುವ ಗಿರಾಕಿಗಳಿಗೆ ನನ್ನಲ್ಲಿ ಅಭಿರುಚಿ ಕಡಿಮೆಯಾಗತೊಡಗಿತ್ತು. ಯಾಕೆಂದರೆ, ಕಾವ್ಯಮಯ ಭಾಷೆಯಲ್ಲಿ ಅವರು ನನ್ನಲ್ಲಿ ಕಾಣುತ್ತಿದ್ದ 'ಚಿತ್ತಾಕರ್ಷಕ ಪ್ರೇಮಪುತ್ಥಳಿ' ಮಾಯವಾಗಿದ್ದಳು. ದಪ್ಪನೆಯ ಮೇಕಪ್ ಮಾಡಿಕೊಂಡು, ತುಟಿಗಳಿಗೆ ಗಾಢವಾಗಿ ಲಿಪ್‌ಸ್ಟಿಕ್ ಹಚ್ಚಿಕೊಂಡರೆ ಮಾತ್ರ ಒರಟು ಮತ್ತು ಅನಕ್ಷರಸ್ಥ ಕಾರ್ಮಿಕರನ್ನು ಸೆಳೆಯುವಲ್ಲಿ ಸಫಲಳಾಗುತ್ತಿದ್ದೆ. ಕಡುಗೆಂಪು ಲಿಪ್‌ಸ್ಟಿಕ್ ಹಚ್ಚಿದ ತುಟಿಗಳಿಂದ ಅವರ ಗಲ್ಲ ಕಚ್ಚಿದರೆ, ಅವರಿಗೆ ಖುಷಿಯಾಗುತ್ತಿತ್ತು.

ಪ್ರತಿಕ್ಷಣ ನಾನು ಸಾಯುತ್ತಿರುವುದರ ಆಭಾಸವೆನಿಸುತ್ತಿತ್ತು ನನಗೆ. ನಾನು ಗಳಿಸಿದ ಪ್ರತಿಯೊಂದು ಡಾಲರಿನೊಂದಿಗೆ ನಾನು ಮೃತ್ಯುವಿನ ಸಮೀಪ ಹೋಗುವುದರ ಅರಿವಾಗುತ್ತಿತ್ತು. ಹಣವು ಜೀವನಕ್ಕೆ ಅವಶ್ಯ. ಜೀವನವನ್ನು ಉಳಿಸುತ್ತದೆ ಎಂದು ಹೇಳಲಾಗುತ್ತದೆ. ಆದರೆ, ನಾನು ಹಣ ಗಳಿಸಲು ಹಿಡಿದ ದಾರಿಯ ಕಾರಣ ಅದು ನನ್ನ ಮೇಲೆ ವಿರುದ್ಧದ ಪ್ರಭಾವ ತೋರುತ್ತಿತ್ತು. ನಾನು ಸಾವಿಗಾಗಿ ಕಾಯಲು ಪ್ರಾರಂಭಿಸಿದೆ. ಈ ಮನಃಸ್ಥಿತಿಯಲ್ಲಿ ಮತ್ತಾವುದರ ಬಗ್ಗೆ ಯೋಚಿಸಲೂ ಇಚ್ಛಿಸಲಿಲ್ಲ. ಅದರ ಅವಶ್ಯಕತೆಯೂ ಇರಲಿಲ್ಲವೆನ್ನಿ. ಪ್ರತಿದಿನವನ್ನು ಜೀವಿಸುವುದು, ಇದಿಷ್ಟೇ ನನ್ನ ಜೀವನದ ಗುರಿಯಾಗಿತ್ತು.

ಅಮ್ಮನಂತೂ ನನ್ನ ಮುಂಬರುವ ದಿನಗಳಿಗೆ ಹಿಡಿದ ಕನ್ನಡಿಯಾಗಿದ್ದಳು. ತನ್ನ ದೇಹವನ್ನು ವರ್ಷಗಳ ಕಾಲ ಮಾರಿಕೊಂಡಿದ್ದರಿಂದ ಅವಳಲ್ಲಿ ಉಳಿದದ್ದೇನೆಂದರೆ ಬಿಳಿಯಾಗಿದ್ದ ಜೊಂಪೆ ಕೂದಲು ಮತ್ತು ಅತಿಯಾಗಿ ಮುದುಡಿದ, ಕಾಂತಿಹೀನ ಚರ್ಮ. ಜೀವನವು ಹೀಗೆಯೇ.

೪೦

ನಗುವಂತೆ, ಒರಟೊರಟಾಗಿ ವರ್ತಿಸುವಂತೆ ನನ್ನನ್ನೇ ನಾನು ಒತ್ತಾಯಿಸಿದೆ. ಕೆಲ ಹನಿ ಕಣ್ಣೀರು ಸುರಿಸಿದರೂ ನನ್ನ ಮನದ ಕಹಿ ತೊಳೆದು ಹೋಗದು, ಅಲ್ಲವೇ? ನನ್ನ ಜೀವನಶೈಲಿಯಲ್ಲಿ ಯಾವ ಅಭಿರುಚಿಯೂ ಉಳಿದಿರಲಿಲ್ಲ. ಆದರೂ ಇದು ಜೀವನವಲ್ಲವೇ? ಅದನ್ನು ನಾನಷ್ಟು ಸುಲಭವಾಗಿ ಬಿಟ್ಟುಕೊಡಕೂಡದು. ಅಷ್ಟಾಗಿಯೂ ನಾನು ಮಾಡುತ್ತಿರುವುದು ನನ್ನ ತಪ್ಪು ಅಲ್ಲವೇ ಅಲ್ಲ. ಸಾವು ಹೆದರಿಕೆ ಹುಟ್ಟಿಸುವಂತೆ ಕಾಣುತ್ತಿದ್ದರೆ, ಅದು ನಾನು ಜೀವನವನ್ನು ಅತಿಯಾಗಿ ಪ್ರೀತಿಸುವುದರಿಂದ ಮಾತ್ರ. ಸಾವು ತರುವ ನೋವಿಗೆ ನಾನು ಹೆದರುತ್ತಿಲ್ಲ. ಏಕೆಂದರೆ ನನ್ನ ಜೀವನವೇ ಯಾವುದೇ ತರಹದ ಸಾವಿಗಿಂತ ಭೀಕರವಾಗಿದೆ. ನನ್ನ ಜೀವನವನ್ನು ಪ್ರೀತಿಸುತ್ತೇನೆ ನಿಜ, ಆದರೆ ಜೀವನವನ್ನು ಸಾಗಿಸುವ ಪರಿಯನ್ನಲ್ಲ.

ನಾನೊಂದು ಆದರ್ಶ ಜೀವನದ ಕನಸು ಕಾಣುತ್ತಿದ್ದೆ. ಅದು ಕನಸಾಗಿಯೇ ಉಳಿಯುತ್ತಿತ್ತು. ಕಠೋರ ವಾಸ್ತವದ ಅರಿವಾದೊಡನೆ, ಅದು ಬೇಗನೆ ಕರಗಿ ಹೋಗುತ್ತಿತ್ತು. ಹಾಗೂ ನನಗೆ ಬಹಳ ಕೆಡುಕೆನಿಸುತ್ತಿತ್ತು. ಜಗತ್ತು ಕನಸಲ್ಲವೇ ಅಲ್ಲ. ಅದು ಜೀವಂತ ನರಕ. ಅಮ್ಮನಿಗೆ ನನ್ನ ವೇದನೆಯು ಅರಿವಾಗುತ್ತಿತ್ತು. ಅವಳು ನನಗೆ ಮದುವೆಯಾಗು ಎಂದು ಒತ್ತಾಯಿಸುವಳು. ಗಂಡ ನನಗೆ ಒದಗಿಸುತ್ತಾನೆ ಮತ್ತು ಅವಳಿಗೆ ಮುದಿಜೀವನಕ್ಕಾಗಿ ಹಣಸಿಗುತ್ತಿತ್ತು. ನಾನೊಬ್ಬಳೇ ಅವಳ ಆಶಾಕಿರಣವಾಗಿದ್ದೆ. ಆದರೆ, ಯಾರು ನನ್ನನ್ನು ಮದುವೆಯಾದಾರು?

೪೧.

ಅದೆಷ್ಟೋ ಗಂಡಸರ ಪರಿಚಯವಿತ್ತು. ನಾನೀಗಾಗಲೇ ಪ್ರೀತಿಯ ಅರ್ಥವನ್ನೇ ಮರೆತಿದ್ದೇನೆ. ನಾನು ನನ್ನನ್ನೇ ಪ್ರೀತಿಸುತ್ತಿದ್ದೆ. ಇಲ್ಲ, ಈಗ ನನ್ನನ್ನು ಪ್ರೀತಿಸುವುದನ್ನೂ ತ್ಯಜಿಸಿದ್ದೆ. ಪರಿಸ್ಥಿತಿ ಹೀಗಿದ್ದಾಗ, ಬೇರೆಯವರನ್ನು ಹೇಗೆ ಪ್ರೀತಿಸಬಲ್ಲೆ? ನಾನು ಮದುವೆಯಾಗಬೇಕಾಗಿದ್ದರೆ, ನಾನು ಅವನನ್ನು ಪ್ರೀತಿಸುತ್ತಿದ್ದೇನೆಂದು ಮತ್ತು ಉಳಿದ ಜೀವನವನ್ನು ಅವನೊಂದಿಗೆ ಸಾಗಿಸಲು ಸಿದ್ಧಳೆಂದು ಹೇಳಬೇಕಾದರೂ ನಟಿಸಬೇಕಾಗುತ್ತಿತ್ತು. ಹಲವಾರು ಜನರಿಗೆ ಈ ಮಾತು ಹೇಳಿದೆ, ಪ್ರಮಾಣ ಕೂಡ ಮಾಡಿದೆ. ಆದರೆ ನನ್ನನ್ನು ಮದುವೆಯಾಗಲು ಯಾರೂ ಸಿದ್ಧರಿರಲಿಲ್ಲ. ಹಣದ ವಿಷಯ ಬಂದಾಗ ಜನರು ಚುರುಕಾಗುತ್ತಾರೆ. ನನ್ನೊಡನೆ ಅಲ್ಪ ಕಾಲ ಕಳೆಯಲು ಸಿದ್ಧರು. ಏಕೆಂದರೆ ವೇಶ್ಯಾಗೃಹಕ್ಕೆ ಹೋಗುವುದು ಹೆಚ್ಚು ಖರ್ಚಿನ ಬಾಬತ್ತು.

ಆದರೂ, ಹಣ ಖರ್ಚು ಮಾಡುವ ಅವಶ್ಯಕತೆಯಿರಲಿಲ್ಲವಾದರೆ. ಪ್ರತಿಯೊಬ್ಬ ಗಂಡಸೂ ನನ್ನನ್ನು ಪ್ರೀತಿಸುತ್ತೇನೆ ಎಂದು ಹೇಳಲು ಒಂದೇಟು ಹಾಕುವುದರಲ್ಲಿ ಎನ್ನುವುದನ್ನು ನಾನು ಖಚಿತವಾಗಿ ಹೇಳಬಲ್ಲೆ.

೪೨

ಅಂದಾಜು ಇದೇ ಹೊತ್ತಿನಲ್ಲಿ ನನ್ನನ್ನು ಪೊಲೀಸರು ಬಂಧಿಸಿದರು. ಹೊಸ ಪೊಲೀಸ ಮುಖ್ಯಸ್ಥನೊಬ್ಬ ನಮ್ಮ ನಗರಕ್ಕೆ ಬಂದಿದ್ದ. ಅವನು ನೈತಿಕತೆ, ಕಾಯದೆ ಕಾನೂನುಗಳಿಗೆ ಬಹಳ ಮಹತ್ವ ಕೊಡುವವ. ನಗರದಲ್ಲಿದ್ದ ನೋಂದಣಿಯಾಗದ ಎಲ್ಲ ವೇಶ್ಯಾಗೃಹಗಳನ್ನು ಮುಚ್ಚಬೇಕೆಂದು ಅವನು ಕಟ್ಟುನಿಟ್ಟಾಗಿ ಕ್ರಮ ಕೈಗೊಂಡ. ಲೈಸೆನ್ಸ ಪಡೆದಿರುವ ಹೆಂಗಸರು ತಮ್ಮ ಕಸಬನ್ನು ಮುಂದುವರೆಸಬಹುದು. ಯಾಕೆಂದರೆ ಅವರು ಸರಕಾರಕ್ಕೆ ತೆರಿಗೆ ಸಲ್ಲಿಸುತ್ತಾರೆ, ಅಲ್ಲವೇ? ಬಂಧನದ ನಂತರ ನನ್ನನ್ನು ಸುಧಾರಣಾಗೃಹಕ್ಕೆ ಕಳಿಸಲಾಯಿತು. ಅಲ್ಲಿ ನನಗೆ ಬಟ್ಟೆಗಳನ್ನು ಒಗೆಯುವುದು, ಅಡುಗೆ ಮಾಡುವುದು, ಹೆಣೆಯುವುದನ್ನು ಕಲಿಸಲಾಯಿತು. ಆದರೆ ಇವೆಲ್ಲ ಕೆಲಸಗಳನ್ನು ನಾನು ಮಾಡಬಲ್ಲವಳಾಗಿದ್ದೆ. ಇವುಗಳ ಪೈಕಿ ಯಾವುದಾದರೂ ಕೆಲಸದಿಂದ ನನ್ನ ಜೀವನವನ್ನು ನಿರ್ವಹಿಸಬಲ್ಲವಳಾಗಿದ್ದರೆ, ನಾನು ನನ್ನ ಈ ಕಹಿ ಕಸಬನ್ನು ಖಂಡಿತವಾಗಿಯೂ ಎಂದೋ ಬಿಟ್ಟಿರುತ್ತಿದ್ದೆ. ಈ ಮಾತನ್ನು ನಾನು ಅವರಿಗೆ ಹೇಳಿದೆ. ಅವರು ನಂಬಲಿಲ್ಲ. ಅವರು ನನ್ನನ್ನು ಸೋಮಾರಿ, ಅನೈತಿಕತೆಯುಳ್ಳ ಹೆಂಗಸು ಎಂದು ಜರೆದರು. ಇವುಗಳಲ್ಲಿ ಯಾವುದಾದರೂ ಕೆಲಸವನ್ನು ಕಲಿತಿದ್ದಷ್ಟೇ ಅಲ್ಲ, ಕೆಲಸ ಮಾಡುವುದನ್ನು ಪ್ರೀತಿಸಿದ್ದರೆ ನಾನು ಸ್ವಸಮರ್ಥಳಾಗಿರುತ್ತಿದ್ದೆ, ಯಾವನಾದರೊಬ್ಬ ಗಂಡನನ್ನು ಪಡೆದು ಕೊಳ್ಳುತ್ತಿದ್ದೇನೆಂದು ಹೇಳಿದರು.

ಬಹಳ ಆಶಾವಾದಿಗಳು ಅವರು. ಅವರ ದೃಢನಂಬಿಕೆ ನನ್ನಲ್ಲಿರಲಿಲ್ಲ. ಅವರು ಆದಾಗಲೇ ಅಂದಾಜು ಒಂದು ಡಜನ್ನಿನಷ್ಟು ಹೆಂಗಸರನ್ನು 'ಸುಧಾರಿಸಿ' ಅವರಿಗೆ ಗಂಡಂದಿರನ್ನೂ ದೊರಕಿಸಿ ಕೊಟ್ಟಿದ್ದಕ್ಕೆ ಅವರಿಗೆ ಹೆಮ್ಮೆ ಇತ್ತು. ಯಾವನಾದರೂ ಎರಡು ಡಾಲರ್ ಫೀಸು ಮತ್ತು ಒಬ್ಬ ಜವಾಬ್ದಾರಿ ಅಂಗಡಿಯ ಮಾಲಿಕನ ಭರವಸೆ ಕೊಟ್ಟರೆ ಸಾಕು, ಅವನು ಸುಧಾರಣಾಗೃಹಕ್ಕೆ ಬಂದು ಒಬ್ಬ ಹೆಂಡತಿಯನ್ನು ಆಯ್ಕೆ ಮಾಡಬಹುದಿತ್ತು. ಅವನಿಗೆ ನಿಜವಾಗಿಯೂ ಇದು ಲಾಭದ ವ್ಯವಹಾರವಲ್ಲವೇ?

ನನಗೆ ಇದು ಅಪಹಾಸ್ಯವೆನಿಸಿತು. ಖಡಾಖಂಡಿತವಾಗಿ ನಾನು 'ಸುಧಾರಿಸಲು' ಒಪ್ಪಲಿಲ್ಲ. ನಮ್ಮೆಲ್ಲರ ಹಿಂದು-ಮುಂದುಗಳನ್ನು ವಿಚಾರಿಸಲು ಹಿರಿಯ ಅಧಿಕಾರಿ ಬಂದಾಗ, ನಾನು ಅವನ ಮುಖಕ್ಕೆ ಉಗಿದೆ. ಆದರೂ ಅವರು ನನ್ನನ್ನು ಬಿಡುಗಡೆ ಮಾಡಲಿಲ್ಲ. ನಾನು ಸಮಾಜಕ್ಕೇ ಅಪಾಯಕಾರಿ ವ್ಯಕ್ತಿಯಾಗಿದ್ದೇನಂತೆ, ಕಾರಣ ನನ್ನನ್ನವರು ಮತ್ತೊಂದು ಸ್ಥಳಕ್ಕೆ ಕಳಿಸಿದರು, ಜೈಲಿಗೆ.

೪೩.

ನಿಜವಾಗಿಯೂ ಜೈಲು ಒಳ್ಳೆಯ ಸ್ಥಳ, ಮಾನವನಿಗೆ ಯಾವ ಭವಿಷ್ಯವೂ

ಇಲ್ಲವೆಂದು ಅದು ನಿಮ್ಮನ್ನು ನಂಬಿಸುತ್ತದೆ. ಇಷ್ಟು ಹೇವರಿಕೆಯಾಗುವಂತಹ ಸ್ಥಳವನ್ನು ನಾನು ಕನಸಿನಲ್ಲಿಯೂ ಕಂಡಿರಲಿಕ್ಕಿಲ್ಲ. ಆದರೆ, ನಾನೊಮ್ಮೆ ಇಲ್ಲಿಗೆ ಬಂದ ನಂತರ, ಇಲ್ಲಿಂದ ಹೊರಹೋಗುವ ವಿಚಾರವನ್ನು ಕೈಬಿಟ್ಟೆ. ಹೊರಗಿನ ಜಗತ್ತು ಇದಕ್ಕಿಂತ ಹೆಚ್ಚು ಸುಧಾರಿಸಿದ್ದಲ್ಲವೆನ್ನುವುದು ನನ್ನ ಅನುಭವದ ಮಾತು. ಇದಕ್ಕಿಂತ ಉತ್ತಮಸ್ಥಳ ದೊರೆಯುವಂತಿದ್ದರೆ ನಾನು ಇಲ್ಲಿ ಸಾಯಲು ಬಯಸುವುದಿಲ್ಲ. ಹಾಗೆ ನೋಡಿದರೆ, ಎಲ್ಲಿ ಸತ್ತರೂ ಒಂದೇ.

ಅಮ್ಮ ಏನು ಮಾಡುತ್ತಿದ್ದಾಳೋ ಏನೋ?

ಇಲ್ಲಿ, ಇಲ್ಲಿಯೇ ನನ್ನ ಹಳೆಯ ಗೆಳೆಯ ಬಿದಿಗೆಯ ಚಂದ್ರನನ್ನು ಮತ್ತೊಮ್ಮೆ ಕಂಡೆ. ಬಹಳ ಕಾಲದಿಂದ ಅವನನ್ನು ನಾನು ಗಮನಿಸಿದ್ದಿಲ್ಲ.

ಅದೆ ಬಿದಿಗೆಯ ಚಂದ್ರ ಎಲ್ಲವನ್ನು ಮರುಕಳಿಸುತ್ತಿದ್ದಾನೆ.

* * *

ಲಾವೋ ಶೇ ಬಗ್ಗೆ ಒಂದಿಷ್ಟು

ಮೂಲನಾಮ : ಶು ಕ್ವಿಂಗ್‌ಚುನ್ (೧೮೯೯–೧೯೬೬) ೨೦ನೆಯ ಶತಮಾನದ ಚೀನೀಯ ಸಾಹಿತ್ಯಕ್ಷೇತ್ರದ ಗಮನಾರ್ಹ ಮತ್ತು ಪ್ರಖ್ಯಾತ ಲೇಖಕ, ಕಥೆಗಾರ, ಕಾದಂಬರಿಕಾರ ಹಾಗೂ ನಾಟಕಕಾರ. ಯುದ್ಧದಲ್ಲಿ ಕಾವಲು ಸೈನಿಕನಾದ ತಂದೆಯ ಮರಣದ ನಂತರ ಬಡತನದ ಜೀವನ. ೧೯೧೮ರಲ್ಲಿ ಪದವಿ ಪಡೆದ ನಂತರ ೧೯೧೮ರಿಂದ ೧೯೨೪ರ ವರೆಗೆ ಬೀಜಿಂಗ್ ಮತ್ತು ಟಿಯಾನ್‌ಜಿನ್‌ನ ಪ್ರೌಢಶಾಲೆಗಳಲ್ಲಿ ಆಡಳಿತಗಾರ ಮತ್ತು ಶಿಕ್ಷಕನಾಗಿ ಕೆಲಸ ಮಾಡಿದನು. ೧೯೧೯ರಲ್ಲಿ ಮೇ ಫೋರ್ತ್ ಚಳುವಳಿಯಿಂದ ಆಕರ್ಷಿತನಾಗಿ ಅವನ ವಿಚಾರ, ಪದ್ಧತಿಯಲ್ಲಿ ಅತೀವ ಬದಲಾವಣೆಯಾಯಿತು. ೧೯೨೪ರಿಂದ ೧೯೨೯ರ ವರೆಗೆ ಲಂಡನ್ ವಿಶ್ವವಿದ್ಯಾಲಯದ ಪೌರ್ವಾತ್ಯ ವಿಭಾಗದಲ್ಲಿ ಚೈನೀಸ್ ಸಾಹಿತ್ಯದ ಶಿಕ್ಷಕ. ಅಲ್ಲಿ ಇಂಗ್ಲೀಷ್ ಸಾಹಿತ್ಯದ ಅಭ್ಯಾಸ ಹಾಗೂ ತನ್ನ ಲೇಖನಗಳಲ್ಲಿ ಪಾದಾರ್ಪಣೆ. ೧೯೨೯ರಲ್ಲಿ ಸಿಂಗಾಪೂರಿನಲ್ಲಿ ಶಿಕ್ಷಕನಾಗಿ ಸೇರ್ಪಡೆ. ೧೯೩೦–೧೯೩೭ರ ಅವಧಿಯಲ್ಲಿ ಚೀಲೂ ಮತ್ತು ಶಾನ್‌ಡುಂಗ್ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕ. ಚೀನಾದ ಸಾಹಿತಿಗಳ ಜಪಾನೀ ವಿರೋಧಿ ಚಳುವಳಿಯಲ್ಲಿ ಮುಂಚೂಣಿ ಪಾತ್ರ ವಹಿಸಿದನು. ೧೯೪೬ರಿಂದ ೧೯೪೯ರವರೆಗ ಅಮೇರಿಕದಲ್ಲಿ ಶಿಕ್ಷಣವೃತ್ತಿ ನಿರ್ವಹಿಸಿದನು. ಪೀಪಲ್ಸ ರಿಪಬ್ಲಿಕ್ ಆಫ್ ಚೈನಾ ಸ್ಥಾಪನೆಯಾದ ನಂತರ ಚೀನಾಕ್ಕೆ ಮರಳಿದನು. ಇನ್ನಿತರ ಸಾವಿರಾರು ವೈಚಾರಿಕ ಸಾಹಿತಿಗಳಂತೆ ಇವನನ್ನೂ ಚೀನಾದ ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ೧೯೬೦ರ ದಶಕದ ಮಧ್ಯಭಾಗದಲ್ಲಿ ರಸ್ತೆಗಳಲ್ಲಿ ಹೊಡೆದು ಅವಮಾನಿಸಲಾಯಿತು. ೧೯೬೬ರಲ್ಲಿ ಇವನ ನಿಗೂಢ ಮರಣ. ಕೊಲ್ಲಲ್ಪಟ್ಟನು ಅಥವಾ ಆತ್ಮಹತ್ಯೆ ಮಾಡಿಕೊಳ್ಳಲು ಒತ್ತಾಯಿಸಲಾಯಿತು. ಮೂಲತಃ

ವಿಡಂಬನ ಸಾಹಿತಿ. ಪ್ರಖ್ಯಾತ ಕಾದಂಬರಿ "ರಿಕ್ಷಾ ಬಾಯ್"ವನ್ನು ಆಧುನಿಕ ಚೀನೀಸಾಹಿತ್ಯದಲ್ಲಿ ಮೇರುಕೃತಿಯೆಂದು ಪರಿಗಣಿಸಲಾಗುತ್ತದೆ. ಇದರ ಇಂಗ್ಲೀಷ ಅವತರಣಿಕೆಯು ಅಮೇರಿಕದಲ್ಲಿ ೧೯೪೫ರಲ್ಲಿ ಬೆಸ್ಟ್ ಸೆಲ್ಲರ್ ಆಗಿತ್ತು. "ಟೀ ಹೌಸ್" ಅವನ ಪ್ರಮುಖ ನಾಟಕಗಳಲ್ಲೊಂದು. ಅವನ ಇತರ ಕೃತಿಗಳೆಂದರೆ [illegible]. ಕ್ಯಾಟ್ ಸಿಟಿ (ವಿಡಂಬನೆ ಮತ್ತು ಪ್ರಥಮ ಪ್ರಮುಖ ವೈಜ್ಞಾನಿಕ ಕಾದಂಬರಿ), ದ [illegible] (೪ ಅಂಕಗಳ ನಾಟಕ) ಅನೇಕ ಕಥೆಗಳು. ಕಥೆಗಳಲ್ಲಿ "ಕ್ರೆಸೆಂಟ್ ಮೂನ್ (ಬಿದಿಗೆಯ ಚಂದ್ರ)" ಅತಿ ಪ್ರಸಿದ್ಧ. ಅವನ ಅನೇಕ ಕೃತಿಗಳು ಚಲನಚಿತ್ರಗಳಾಗಿವೆ-ದಿಸ್ ಲೈಫ್ ಆಫ್ ಮಾಯಿನ್ (೧೯೫೦), ಡ್ರ್ಯಾಗನ್ ಬಿಯರ್ಡ್ ಡಿಚ್ (೧೯೫೨), ರಿಕ್ಷಾ ಬಾಯ್ (೧೯೮೨), ಕ್ರೆಸೆಂಟ್ ಮೂನ್ (೧೯೮೬) ಡ್ರಮ್ ಸಿಂಗರ್ಸ್ (೧೯೮೭) ಮತ್ತು ಟೀಹೌಸ್. ಲಾವೋ ಶೆಯನ್ನು "ಜನರ ಕಲಾವಿದ" ಮತ್ತು "ಬೀಜಿಂಗ್ ಭಾಷೆಯ ದೊಡ್ಡ ವಿದ್ವಾಂಸ"ನೆಂದು ಪರಿಗಣಿಸಲಾಗುತ್ತದೆ. ೧೯೭೬ರಲ್ಲಿ ಸಾಂಸ್ಕೃತಿಕ ಕ್ರಾಂತಿಯ ಮುಖ್ಯಪುರುಷ ಜಿಯಾಂಗ್ ಕ್ವಿಂಗ್‌ನ ಪತನಾನಂತರ ಅವನ ಕೃತಿಗಳನ್ನು ಮರುಪ್ರಕಟಿಸಲಾಯಿತು. ೧೯೭೮ರಲ್ಲಿ ಕಮ್ಯುನಿಸ್ಟ್ ಪಾರ್ಟಿಯು ಅವನನ್ನು ಮರಣಾನಂತರ "ಮರುಸ್ಥಾಪಿಸಿತು."



ಅಮ್ಮ

ಮಲಯಾಲ ಮೂಲ ಜ್ಞಾನಪೀಠ ಪುರಸ್ಕೃತ ಓ.ಎನ್.ವಿ. ಕುರುಪ್
ಕನ್ನಡಕ್ಕೆ. ಕೆ.ಕೆ. ನಾಯರ್

ಕಲ್ಲುಕುಟಿಗರವರು ಒಂಬತ್ತು ಮಂದಿಯೂ
ಒಂದೆ ತಾಯಿಯ ಮಕ್ಕಳಾಗಿದ್ದರು
ಒಂಬತ್ತು ವರರವರು ಒಂಬತ್ತು ವಧುಗಳೂ
ಒಟ್ಟಿಗೇ ವಾಸ್ತವ್ಯ ಹೂಡಿದ್ದರು
ಕಲ್ಲುಗಳ ಕೆತ್ತುತ್ತ ಕಟ್ಟುವಾ ತೋಳುಗಳು
ಕಲ್ಲಿಗಿಂತಲು ಗಟ್ಟಿಯಾಗಿದ್ದವು!
ಕಲ್ಲುಕುಟಿಗರವರ ಕೈಹಿಡಿದ ಲಲನೆಯರು
ಕಲ್ಲುಗಳ ಒಳಗಿನೊಸರಾಗಿದ್ದರು।
ಒಂದೆ ಕಲ್ಲೊಲೆಯೊಳಗೆ ಉರಿದ ಬೆಂಕಿಯಲೇನೆ
ಬೇಯುತ್ತಲಿದ್ದದ್ದು ಅವರ ಗಂಜಿ।
ಒಂದೆ ದೀಪದ ಬೆಳಕಿನಲ್ಲೆ ಸಾಗುತ್ತಿತ್ತು
ಅವರ ಭೋಜನ ಪಾನಗಳ ಸಂಭ್ರಮ।
ಒಂದೆ ಬಾವಿಯ ಒಸರು ನೀರನ್ನೆ ಮೊಗೆದವರು
ಕುಡಿಯಲೂ ಮೀಯಲೂ ಬಳಸುತಿಹರು।
ಒಂಬತ್ತು ಕೋಣೆಗಳು ಬೇರೆಬೇರೆಯ ಇದ್ದೂ
ರಾತ್ರಿ ಮಲಗಲು ಮಾತ್ರ ಬಳಸುವವರು।
ಕೆತ್ತಿರುವ ಕಲ್ಲುಗಳ ಕಟ್ಟಿರುವ ಗೋಡೆಗಳ
ಚೆಲುವನೂ ಬಲವನೂ ಕಂಡ ಜನರು
ಅವರ ಕೈ ಚಳಕವನು ಬಾಯ್ಬಿಟ್ಟು ಹೊಗಳುವರು
ಎಲ್ಲಕ್ಕು ಮಿಗಿಲವರಿಗವರ ಹೊಗಳು।
ಕೋಟೆಯಾ ಪೌಳಿಯೂ ಪೌಳಿಯೊಳಗಿರುವಂಥ
ಅರಮನೆಯ ದೇಗುಲವು ನಾಟ್ಯ ಗೃಹವೂ
ಎಲ್ಲವೂ ಆ ಕಲ್ಲುಕುಟ್ಟಿಗರ ಸೃಷ್ಟಿಗಳೆ
ಸೌಂದರ್ಯ ದೃಢತೆಗಳ ಸೇರ್ಪಡೆಗಳೆ।
ಒಂಬತ್ತೂ ಒಂಬತ್ತೂ ಜಂಟೆಗಳು ಒಟ್ಟಾಗಿ

ಶಿಲ್ಪವೊಂದರ ಚೆಲುವು ಚಿಗುರಿದಂತೆ,
ಒಂಬತ್ತು ಕಲ್ಲುಕುಟ್ಟಿಗರು ಮತ್ತೊಂಬತ್ತು
ನಾರಿಯರು ಒಟ್ಟಿಗೇ ಬಾಳಿದ್ದರು

ಮುಂದೆ ಕೋಟೆಯ ಮುಂದೆ ಒಂದು ಗೋಪುರವನ್ನು
ಹೊಸತಾಗಿ ನಿರ್ಮಿಸುವ ಕಾರ್ಯಕ್ಕಾಗಿ
ಸೇರಿದವು ಹದಿನೆಂಟು ಕೈಗಳೂ ಮತ್ತೊಮ್ಮೆ
ಮೊಳಗಿತ್ತು ಉತ್ಸವದ ಶಬ್ದಘೋಷ।
ಕಲ್ಲುಗಳ ಮೈಮೇಲೆ ಕಲ್ಲುಳಿಯ ನರ್ತನಕೆ
ಓನ್ನೆಲೆಯ ಸುತ್ತಿಗೆಯ ತಾಳವಾದ್ಯ।
ಕೆತ್ತಿರುವ ಕಲ್ಲುಗಳ ಎಡೆಯಲ್ಲಿ ಗಾರೆಯನು
ಬಳಿದು ಕಟ್ಟಿದ ಗೋಡೆ ಯಾಕೊ ಈಗ
ಬಿಗಡಾಯಿಸುತ್ತಲಿದೆ, ಏನುಮಾಡಿದರೂನು
ಗಟ್ಟಿಯಾಗದೆ ಮುರಿದು ಬೀಳುತ್ತಿದೆ।
ಕಲ್ಲುಗಳ ಬದಲಿಸುತ ಹಾಕಿನೋಡಿದವರವರು
ಕೈಗಳನು ಕೂಡ ಬದಲಾಯಿಸಿದರು;
ಗಾರೆ ಮಿಶ್ರಣವನ್ನು ಮಾರ್ಪಡಿಸಿ ನೋಡಿದರು:
ಯಾದಿಯನು ಪೂರ್ತಿ ಬದಲಾಯಿಸಿದರು:
ಗೋಡೆ ನಿಲ್ಲುತ್ತಿಲ್ಲ ಏನುಮಾಡಿದರೂನು।
ಏನಿದಕೆ ಪರಿಹಾರ? ಎಂಬ ಒಂದೆ
ಚಿಂತೆಯಲಿ ಅವರೆಲ್ಲ ಬೇಯುತ್ತ ಇರುವಾಗ.
ಯಾವನೋ ಒಬ್ಬಾತನೊರೆದನಂತೆ,
ಅಧಿಕಾರವಿದ್ದವರು ಒತ್ತಿ ಹೇಳಿದರಂತೆ
ಆತನಾ ನುಡಿಯನ್ನು ನಡೆಸುವಂತೆ:
"ಇವರಿಗಿರುವೊಂಬತ್ತು ವಧುಗಳಲಿ ಒಬ್ಬಳನು
ಗೋಡೆಗಳವಡಿಸಿದರೆ ಶಿಲೆಯ ಬದಲು
ಗೋಪುರವು ದೃಢವಾಗಿ ನಿಂತೀತು ನೆಲದಲ್ಲಿ।
ಆಚಂದ್ರತಾರ ತಲೆಯೆತ್ತಿಕೊಂಡು।"
ಒಂಬತ್ತು ಮಂದಿ ಪ್ರಿಯ ವಧುಗಳಲಿ ಯಾರನ್ನು,

ಆಯ್ಕೆ ಮಾಡುವುದು ಬಲಿ ನೀಡಲೆಂದು?
ಆ ಸಹೋದರರಲ್ಲಿ ಅತ್ಯಂತ ಹಿರಿಯವನು
ತುಸು ಗತ್ತಿನೊಂದಿಗೇ ಹೇಳಿಬಿಟ್ಟ:
ಈ ದಿವಸ ಮಧ್ಯಾಹ್ನ ಗಂಜಿಗಡಿಗೆಯ ಹೊತ್ತು
ಯಾವ ವಧುವೇ ಬರಲಿ ನಮ್ಮ ಬಳಿಗೆ;
ಅವಳನಳವಡಿಸಿ ಗೋಪುರವನ್ನು ಕಟ್ಟೋಣ।
ಅವಳಿಂದ ಉಳಿಯುವುದು ನಮ್ಮ ಮಾನ।
ಒಂಬತ್ತು ಜನ ಕಲ್ಲುಕುಟ್ಟಿಗರಿಗಿದ್ದದ್ದು
ಒಂಬತ್ತು ಕಾಯಗಳು; ಒಂದೆ ಮನಸು
ಆದರೂ ಒಂಬತ್ತು ಮಂದಿಯೂ ಆ ಹೊತ್ತು
ನೆನೆದದ್ದು ಸ್ವಂತ ವಧುವನ್ನು ಮಾತ್ರ।
ಅಶುಭ ಚಿಂತೆಗಳು ಕಾಡಿದ್ದರಿಂದಲೊ ಏನೊ
ಅರಿಯದೆಯೆ ನಿಟ್ಟುಸಿರು ಬಿಟ್ಟರವರು।
ಆದರೂ, ಹದಿನೆಂಟು ಕೈಗಳೂ ಒಟ್ಟಾಗಿ
ನಿರತವಾದವು ತಮ್ಮ ಕರ್ಮದಲ್ಲಿ।
ಅನ್ಯೋನ್ಯ ನೋಡಲೂ ಅಸಮರ್ಥರಾಗಿರಲು
ಇನ್ನೆಲ್ಲೊ ನೋಟವನು ನೆಟ್ಟರವರು।

ತಲೆಮೇಲೆ ಹೊತ್ತಿದ್ದ ಬಿಸಿಗಂಜಿ ತುಂಬಿರುವ
ಗಡಿಗೆಯನು ಕೈಯಿಂದ ಹಿಡಿದುಕೊಂಡೇ
ಸುಗ್ಗಿ ಪೊಲಗದ್ದೆಗಳ ಹುಣಿಗಳನು ಕ್ರಮಿಸುತ್ತ
ಕೆಂತಾಳೆ ತೋಟಗಳ ದಾರಿ ಸವೆಸಿ
ತುಟಿಯಲ್ಲಿ ಮಲ್ಲಿಗೆಯ ಮಂದಹಾಸವ ಸೂಸಿ
ಓಡುತ್ತ ತೇಕುತ್ತ ಬರುವವರಾರು।
ನಾಸಿಕದ ತುದಿಯಲ್ಲಿ ಮುತ್ತು ನತ್ತುಗಳಂತೆ
ಬೆವರ ಹನಿ ಹೊಳೆಹೊಳೆದು ತೊಳಗುತ್ತಿದೆ.
ಈ ತೆರದಿ ಮುಂದುಗಡೆ ಬಂದು ನಿಂತಿರುವಾಕೆ
ಬೇರಾರು, ಹಿರಿಯವನ ಧರ್ಮಪತ್ನಿ!
ಅವಳಂದು ಬಂದದ್ದು ಪಾಳಿಗನುಗುಣವಾಗಿ

ಮಧ್ಯಾಹ್ನ ಬಿಸಿಗಂಜಿ ಮಡಕೆ ಹೊತ್ತು।
ಒಂಬತ್ತು ಜನ ಕಲ್ಲುಕುಟ್ಟಿಗರಿಗಿದ್ದದ್ದದ್ದು
ಒಂಬತ್ತು ಕಾಯಗಳು; ಒಂದೆ ಮನಸು
ಆದರೂ ಅವರಲ್ಲಿ ಅತಿಹಿರಿಯನೆದೆಯಲ್ಲಿ
ಆಗ ಗರ್ಜಿಸಿತೊಂಡು ಘೋರ ಸಿಡಿಲು।

ಬಟ್ಟಲಲಿ ಗಂಜಿಯನು ತಿಳಿಯ ಜತೆಗೇ ಬಡಿಸಿ,
ಮಧ್ಯದಲಿ ಹಲಸಿನೆಲೆ ಚಮಚೆಯಿರಿಸಿ
ಎಲೆಸೀಳುಗಳಲಿ ವ್ಯಂಜನವನ್ನೂ ಬಡಿಸುತ್ತ
ಒಂಬತ್ತು ಮಂದಿಗೂ ಹಂಚಿದವಳು
ಮಗುವನ್ನು ಹೆಗಲಲ್ಲಿ ಮಲಗಿಸುತ್ತಲೆ ತನ್ನ
ಮಗುವಿನಪ್ಪನ ಸನಿಹ ಕುಳಿತ ವೇಳೆ,
ಈ ಗಂಜಿಯೂಟವೇ ಕಟ್ಟಕಡೆಯದು ಎಂದು
ಅರಿತುಕೊಳ್ಳಲು ಅವಳಿಗಾಗಲಿಲ್ಲ।
ಸಿಡಿಲು ಬಡಿಯುವ ಘಟನೆ ನಡೆಯುವುದು ತಟಕ್ಕನೆ।
ಯಾರು ತಾನೇ ಬಲ್ಲ ಆ ಮುಹೂರ್ತ?
ವಿಷಯ ವಿವರಗಳೆಲ್ಲ ಒಂದೊಂದೆ ತಿಳಿದಂತೆ
ಒದ್ದೆ ಕಣ್ಣುಗಳನ್ನು ಒರೆಸುತ್ತಲೇ,
ತಲ್ಲಣಗಳೆಲ್ಲವನು ತನ್ನಲ್ಲೆ ಅಮುಕುತ್ತ
ದೊರೆತಿರುವ ಕಹಿಯನ್ನೂ ಸಿಹಿಯಾಗಿಸಿ,
ಜೊತೆಯಲ್ಲಿ ಬಾಳಿರುವ ಪತಿಯೊಡನೆ ಮತ್ತವಳ
ಒಡಹುಟ್ಟುಗಳೊಡನೆ ಕೈಯ ಮುಗಿದು
ಗಪ್ಪವರ ಜೊತೆಯಲ್ಲಿ ಹೋರಾಡುತಿರುವಂತೆ
ಅಕ್ಷರವನೊಂದೊಂದೆ ಒತ್ತಿಯೊತ್ತಿ
ತನ್ನೊಂದು ಕೊನೆಯಾಸೆಯನ್ನು ಹೇಳಿದಳವಳು:
"ನನ್ನನ್ನು ಕಲ್ಲುಗಳ ಎಡೆಯಲ್ಲಿ ನಿಲ್ಲಿಸುತ್ತ
ಕಟ್ಟಿಕೊಳ್ಳಿರಿ; ಗೋಡೆ ಗಟ್ಟಿಗೊಳಲಿ।
ಒಂದೆ ಒಂದಾಸೆಯಿದೆ ನನಗದನು ಆಲಿಸಿರಿ
ಕಟ್ಟ ಮರೆ ಮಾಡದಿರಿ ಕಲ್ಲಿನಿಂದ

ನನ್ನರ್ಧ ಎದೆಯನೂ ನನ್ನೊಂದು ಕೈಯನೂ
ಕಟ್ಟಿ ಮರೆ ಮಾಡದಿರಿ ಕಲ್ಲಿನಿಂದ
ನನ್ನ ಮುದ್ದಿನ ಕಂದ ಹಸಿವೆಯಿಂದಳುವಾಗ
ನನ್ನ ಬಳಿಗವನನ್ನು ಎತ್ತಿ ತನ್ನಿ।
ಈ ನನ್ನ ಕೈಯಿಂದ ಕಂದನನು ಪಡೆಯುತ್ತ
ಈ ಮೊಲೆಯನುಣಿಸಲನುಮತಿಯ ನೀಡಿ।"

ಯಾವ ಗಾಳಿಯು ನನ್ನ ಹಾಡನ್ನು ಹಾಡುತಿದೆ।
ಯಾವ ನೆಲದಲ್ಲು ದುಡಿಯುವೆನು ನಾನು।
ಭೂಮಿಯನ್ನಳೆದು ಗಡಿ ವಿಗಂಡಿಸಿ ಕೋಲೂರಿ
ಭೂಪತಿಗಳಾಗಿ ಮದಿಸಿದ ಮಂದಿಗೆ
ಒಂಬತ್ತು ಕಲ್ಲುಕುಟ್ಟಿಗರವರು ಕಟ್ಟಿದ್ದ
ಭವ್ಯ ಕೋಟೆಯ ಇದಿರು ಭಾಗದಲ್ಲಿ
ಇಂದು ಕಂಡೆನು ನಾನು ಆ ಹೆಣ್ಣ ಅರಮೈಯ
ಚೆಲುವು ತುಂಬಿದ ಅಮೃತ ಶಿಲೆಯ ಶಿಲ್ಪ।
ಏನೊ ಬೇಡುವ ತರಹ ಮುಂದಕ್ಕೆ ಚಾಚಿರುವ
ಚೆಲುವಿಕೆಯ ತುಂಬಿರುವ ಬಲದ ಕೈಯ;
ತೊಟ್ಟಿನಿಂದೆದೆಹಾಲು ತೊಟ್ಟಿಕ್ಕುತ್ತಿರುವಂತೆ
ನಗ್ನವಾದೆದೆಯನ್ನು ಕಂಡು ನನ್ನ
ಒಳಗಿರುವ ಪುಟ್ಟಮಗು ಎಚ್ಚೆತ್ತು ಕೂಗುತ್ತಿದೆ:
"ಅಮ್ಮ, ಅಮ್ಮಾ" ಎಂದು ತಡೆಯಿಲ್ಲದೆ।

ಬಜಾರು

(ಸಣ್ಣ ಕಥೆ)

ತೆಲುಗು ಮೂಲ : ಡಾ. ಕೇತು ವಿಶ್ವನಾಥರೆಡ್ಡಿ
ಕನ್ನಡಕ್ಕೆ : ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಮಿತ್ರರನ್ನು ನೋಡುವುದಕ್ಕೆ ನಾರಾಯಣ ಕರ್ನೂಲಿಗೆ ಬಂದ. ಅತನ ಮಿತ್ರರಾದ ಹೌಸ್ ಸರ್ಜನ್ ಪ್ರಕಾಶಂ, ಸಹಕಾರ ಸಂಘಗಳ ಡೆಪ್ಯೂಟಿ ಪಿಚ್ಚಿರೆಡ್ಡಿ, ಡಿವೈಎಸ್‌ಪಿ ರಾಮಯ್ಯ ಬಹಳ ದಿನಗಳ ನಂತರ ಬಂದ ಮಿತ್ರನನ್ನು ಸಂತೋಷ ಸಾಗರದಲ್ಲಿ ತೇಲಿಸಬೇಕೆಂದುಕೊಂಡರು. ಅವರು ಮೂವರೂ ಸುಖಲೋಲುಪತೆಯ ನವ ವಾರಸುದಾರರು. ಉದ್ಯೋಗದಲ್ಲಿ ಧರ್ಮ ಕರ್ಮ ಎನ್ನದೆ ಕೈತುಂಬ ಹಣ ಸಂಪಾದಿಸಿದವರು. ಓದುತ್ತಿದ್ದ ದಿನಗಳಲ್ಲಿ ಬಿಸಿ ಪ್ರವರದ ವ್ಯಾಖ್ಯಾನಕಾರನಾಗಿದ್ದ ಪ್ರಿಯಮಿತ್ರ ನಾರಾಯಣನನ್ನು ಹೇಗಾದರೂ ಸರಿ, ಹಠಮಾಡಿಯಾದರೂ ತಮ್ಮ ದಾರಿಗೆ ತರಬೇಕು ಅಂದುಕೊಂಡರು. ತಾವು ಸವಿ ನೋಡುತ್ತಿರುವ ಸ್ವರ್ಗ ಸುಖಗಳನ್ನು ಕುರಿತು ಸಂನ್ಯಾಸಿಯಂಥವನ ಬಾಯಲ್ಲಿಯೂ ನೀರೂರುವಂತೆ ನಾರಾಯಣನ ಮುಂದೆ ವರ್ಣಿಸಿದರು. ತನ್ನಲ್ಲಿ ಎಳ್ಳಷ್ಟೂ ಇಲ್ಲದ, ಇತರರಲ್ಲಿಯ ನೀತಿಯನ್ನು ಸಹಿಸಲಾರದ ಪಿಚ್ಚಿರೆಡ್ಡಿ ನಾರಾಯಣನ ಪಾತಿವ್ರತ್ಯ ಭಂಗಕ್ಕೆ ನಾಯಕತ್ವ ವಹಿಸಿದ.

ನಾರಾಯಣ ಕತೆ ಬರೆಯುವ ವಿಷಯ ಪಿಚ್ಚಿರೆಡ್ಡಿಗೆ ಗೊತ್ತು. ಅದಕ್ಕಾಗಿ ಲೇಖಕನಾದ ನಾರಾಯಣ ಹೊಂದಲೇಬೇಕಾದ ವೈವಿಧ್ಯಮಯ ಅನುಭವಗಳನ್ನು ಕುರಿತು ಪಿಚ್ಚಿರೆಡ್ಡಿ ಒಂದು ಉಪನ್ಯಾಸ ಕೊಟ್ಟ. ಉಪನ್ಯಾಸದ ಉದ್ದೇಶವೆಲ್ಲಾ ನಾರಾಯಣನನ್ನು ತಮ್ಮಂತೆ ಅನುಭವಿಯನ್ನಾಗಿ ಮಾಡಬೇಕೆಂಬುದು!

"ನೋಡು ನಾರಾಯಣಾ! ಲೇಖಕರಿಗೆ ನಾನಾ ಬಗೆಯ ಅನುಭವಗಳು ಬೇಕು. ಜೀವನಕ್ಕೆ ಹೊರತಾಗಿದ್ದರೆ ಅನುಭವಗಳು ಆಗುವುದಿಲ್ಲ. ಲೇಖಕ ಅನುಭವಗಳನ್ನು ಹುಡುಕಬೇಕು. ಹುಡುಕದಿದ್ದರೆ ಅನುಭವಗಳಲ್ಲಿ ವೈವಿಧ್ಯ ಇರುವುದಿಲ್ಲ. ವೈವಿಧ್ಯವಿಲ್ಲದ ಅನುಭವಗಳು ಬರವಣಿಗೆಗೆ ಸಹಾಯಕವಾಗುವುದಿಲ್ಲ. ಸ್ವಲ್ಪಮಟ್ಟಿಗೆ ಸಹಾಯಕ ಆದರೂ ಆಮೇಲೆ ಆ ಬರವಣಿಗೆ ಖಾರ ಮಂಡಕ್ಕಿ ಕಟ್ಟುವ ಪೊಟ್ಟಣಗಳಿಗೇ ಉಪಯೋಗಕ್ಕೆ ಬರೋದು. ಈ ಹೆಂಗಸರು ಬರೆಯೋ ಬಹಳಷ್ಟು ಕೃತಿಗಳು ಅಷ್ಟೇ. ವೇಶ್ಯೆಯ ಜೀವನವನ್ನು ಕತೆಯಾಗಿ ಚಿತ್ರಿಸಬೇಕು ಅಂದುಕೋ. ಅವರ ಸ್ಥಿತಿಗತಿ ತಿಳಿದುಕೊಳ್ಳದೆ, ಅವರ ಅಂತರಂಗಗಳನ್ನು ಶೋಧಿಸದೆ ಕತೆ ಬರೆಯೋದು ಅಂದರೆ ಹೆಂಗಾಗುತ್ತೆ? ಅದೇ ನಮ್ಮ ಲೇಖಕರಿಗೂ, ವಿದೇಶಿ ಲೇಖಕರಿಗೂ ಇರೋ ವ್ಯತ್ಯಾಸ. ಇನ್ನೊಂದು ಇದುವರೆಗೂ ಹೆಂಗಸರ ಮುಖವೇ ಕಾಣದ ನೀನು ಪ್ರೇಮಕತೆಗಳನ್ನ ಗೀಚ್ತಾ ಇದೀಯ. ನೋಡ್ತಾ ಇದ್ದರೆ ಆ ಕತೆಗಳಲ್ಲಿ ಪರಿಶೀಲಿಸಬೇಕಾದ್ದು ಮತ್ತಷ್ಟು ಇರುತ್ತೆ ಅನಿಸೋಲ್ಲವೇ! ಇರುತ್ತೆ ಅಂದರೆ ಜೀವನದಲ್ಲಿ ತಲೆಕೆಳಗಾಗಬೇಕು. ಮೂವತ್ತು ವರ್ಷ ಆದರೂ ನಿನಗೆ ಹೆಂಗಸರ ಅನುಭವವೇ ಇಲ್ಲ..."

ನಾರಾಯಣ ಇಕ್ಕಟ್ಟಿಗೆ ಸಿಕ್ಕಿದ. ಸನಾತನ ಹಿಂದೂ ರಕ್ತ ಆತನಲ್ಲಿ ಪ್ರವಹಿಸುತ್ತಲೇ ಇದೆ. ಇಷ್ಟು ಕಾಲ ಬ್ರಹ್ಮಚರ್ಯೆಯನ್ನು ಕಾಪಾಡಿಕೊಂಡು ಬಂದಿರುವುದಕ್ಕೆ ಆತನ ಮನಸ್ಸಿನ ಯಾವುದೋ ಮೂಲೆಯಲ್ಲಿ ಹೆಮ್ಮೆ ಇದೆಯಾದರೂ, ಇತ್ತೀಚೆಗೆ ಆತ ತನ್ನ ಲೈಂಗಿಕಾಂಕ್ಷೆಯನ್ನು ಅದುಮಿಡಲು ತಾಪತ್ರಯ ಪಡುತ್ತಿದ್ದಾನೆ. ಕಂಡೂ ಕಾಣದಂತಿರುವ ಬಯಕೆಗಳನ್ನು ಕನಸಿನಲ್ಲಿ ಬಿಟ್ಟರೆ ಹೊರಗಡೆ ಪ್ರಕಟಿಸದೆ ಒಳಗೊಳಗೇ ಕೊರಗುತ್ತಿರುವವನಿಗೆ ಗೆಳೆಯರು ಬೆಂಕಿ ಹಚ್ಚಿದರು. ಪಿಚ್ಚಿರೆಡ್ಡಿ ಬೆಂಕಿಯನ್ನು ಇನ್ನಷ್ಟು ಕೆರಳಿಸಿದ. ಈ ಬೆಂಕಿಯಿಂದ ತಪ್ಪಿಸಿಕೋ ಎಂದು ನಾರಾಯಣನ ಅಂತರಾತ್ಮ ಘೋಷಿಸಿತು. ಬಲವಾದ ಬಯಕೆ ಶರೀರದ ಮೇಲೆ ದಿಗ್ವಿಜಯ ಯಾತ್ರೆ ನಡೆಸುತ್ತಿದ್ದರೂ, ಶರೀರಕ್ಕೆ ಸೇರಿದ ಅಂತರಾತ್ಮಕ್ಕೆ ಬಾಯಿಮುಚ್ಚಿಕೊಳ್ಳದೆ ವಿಧಿ ಇರಲಿಲ್ಲ. ಅಂತರಾತ್ಮಗಳು ಮೇಣದ ಮುದ್ದೆಗಳಿದ್ದಂತೆ. ಮಿತ್ರರ ಕೆರಳಿಕೆ, ಜೀವನಾನುಭವವನ್ನು ಸಂಪಾದಿಸಬೇಕೆಂಬ ಚಪಲ, ತನ್ನೊಳಗೇ ಸುಡುತ್ತಿರುವ ಬಿಸಿ ನೆತ್ತರು....

ನಾರಾಯಣ ಗುರಮ್ಮನ ಮಹಡಿಗೆ ಹೋಗಲು ಒಪ್ಪಿಕೊಂಡ. ರಾಮಯ್ಯ ದಾರಿ ಗೊತ್ತಿದ್ದ ಒಂದು ಪಕ್ಕಿಯನ್ನು ನಾರಾಯಣನ ಹಿಂದೆ ಕಳಿಸಿದ. ಇಂತಹ ವಿಷಯಗಳಲ್ಲಿ

ಬಿತ್ತಾಗ ಸಹಾಯ ಮಾಡುವ ಶಕ್ತಿ ಅಧಿಕಾರವನ್ನು ವಿಶ್ವನಾಥ ರಾಮಯ್ಯ ತೋರಿಸಿರಲಿಲ್ಲ.

ಆ ಕಡೆಗೆ ಹೋಗುತ್ತಿರುವಾಗ ದಾರಿಯುದ್ದಕ್ಕೂ ನಾರಾಯಣ ಚಿಂತಾಕ್ರಾಂತನಾದ. ಕರ್ನೂಲಿಗೆ ಬರದಿದ್ದರೂ ಚೆನ್ನಾಗಿತ್ತು. ಇವರುಗಳಲ್ಲಿ ಈ ಮೂವರು. ಇವರಿಗೆ ಜೀವನದಲ್ಲಿ ತಿನ್ನೋದು, ಕುಡಿಯೋದು, ಸಂದಿಯಲ್ಲಿ ಹುಡುಕೋದು ಬಿಟ್ಟರೆ ಯಾವ ಮೌಲ್ಯಗಳೂ ಇಲ್ಲ. ಮುಂದೇ ಮಕ್ಕಳು ಇಂಥವರಿಗೇ ಒಳ್ಳೆಯ ಉದ್ಯೋಗಗಳು ದೊರಕುತ್ತವೆ. ಇನ್ನೂ ಮೂವತ್ತು ದಾಟಿಲ್ಲ. ಎಲ್ಲ ವಿಧದಿಂದಲೂ ಕೆಟ್ಟಿದ್ದಾರೆ. ಇವರ ಮಾತು ಕೇಳಿದರೆ ಕೆಡದೆ ಬೇರೆ ದಾರಿ ಇಲ್ಲ. ಯಾರ ಜೀವನದ ಮೌಲ್ಯಗಳು ಬೇಕಾದರೂ ಹಾಳಾಗುತ್ತವೆ. ಸ್ವಾರ್ಥವೇ ಇವರಿಗೆ ದೇವರು. ಆದರೆ ತಾನು ಎಲ್ಲರಂಥವನಲ್ಲ. ತಾನೊಂದು ನೀತಿಯುಳ್ಳ ಕುಟುಂಬದಲ್ಲಿ ಹುಟ್ಟಿದವನು. ತನಗೊಂದು ಪ್ರತ್ಯೇಕತೆ ಇದೆ. ತಾನು ಒಬ್ಬ ಮೇಧಾವಿ. ಒಂದು ಕಾಲೇಜಿನಲ್ಲಿ ಉಪನ್ಯಾಸಕ ಬೇರೆ. ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕೆ ಹರಡುವುದು ತನ್ನಿಂದಲೇ. ತಾನು ಹೀಗೆ ಬೇಟೆಗೆ ಹೋಗುವುದು ಹೊರಗಿನ ಊರಿನಲ್ಲಾದರೂ, ವಿದ್ಯಾರ್ಥಿಗಳು ಆ ಸಂದಿನಲ್ಲಿ ಅಕಸ್ಮಾತ್ ಕಾಣಿಸಿದರೆ ಎಂಥಾ ಅನರ್ಥ ಕೆಲಸವಾಗುತ್ತದೆ? ತನಗೆ ಕೆಲವು ನೈತಿಕ ಮೌಲ್ಯಗಳಿವೆ. ನೈತಿಕ ಜವಾಬ್ದಾರಿಗಳಿವೆ. ತಾನು ಲೇಖಕ.

ಬುಚ್ಚಿರೆಡ್ಡಿ ಹೇಳಿದ್ದು ನಿಜವೇನೋ! ಲೇಖಕನಿಗೆ ಜೀವನಾನುಭವಗಳು ಸಮೃದ್ಧವಾಗಿ ಇರಬೇಕು. ಕೆಡದೆಯೂ ಜೀವನಾನುಭವಗಳನ್ನು ಪಡೆಯಬಹುದಲ್ಲ?

ಈಗ ಕತ್ತಲೆಯ ಬದುಕಿನ ವಿಷಾದ ಗಾಥೆಗಳನ್ನು ಪರಿಶೀಲಿಸುವ ಅವಕಾಶ ಒದಗಿ ಬಂದಿದೆ. ಒಳ್ಳೆಯ ಕರುಣಾಜನಕ ಕತೆಗಳನ್ನು ಬರೆಯಬಹುದು. ಓದುಗರು ಕಣ್ಣೀರು ಹಾಕುತ್ತಾರೆ. ಎಷ್ಟೊಂದು ಪ್ರಶಂಸೆಗಳು ಬರುತ್ತವೆ! ಅಷ್ಟಕ್ಕಿಂತ ಹೆಚ್ಚಿನ ಸಾಮಾಜಿಕ ಪ್ರಯೋಜನ ಬೇರೇನಿದೆ? ಒಂದು ವೇಳೆ ಇಂಥ ಜೀವನ ಪರಿಶೋಧನೆಯಲ್ಲಿ ನೀತಿ ತಪ್ಪಿದರೆ! ಕಲಾಕಾರ ನೀತಿಗೆ ಅತೀತನೆಂದು ಹೇಳುತ್ತಾರೆ. ಆಸ್ಕರ್ ವೈಲ್ಡ್‌ನಿಂದ ಬುಚ್ಚಿಬಾಬುವರೆಗೆ ಅದೇ ಮಾತು ಹೇಳುತ್ತಾರೆ. ಬುಚ್ಚಿಬಾಬುವಿನ ಮಾತು 'ಹೊಸತನ-ದಕೆಯ ನೀರು' ಎಷ್ಟು ಚೆನ್ನಾಗಿದೆ! ಈ ನೆರಳು ಬೆಳಕಿನ ಮಧ್ಯೆ, ಆ ಕೆಂಪು ತ್ರಿಕೋನ ತಮಾಷೆಯಂತೆ ಕಾಣುತ್ತಿದೆ. ಮದುವೆಯಾಗಿದ್ದರೆ ಚೆನ್ನಾಗಿತ್ತು....

ಗುರಮ್ಮನ ಮನೆ ಬಂತು ಎಂಬ ಮಾತಿನಿಂದ ಎಚ್ಚೆತ್ತ ನಾರಾಯಣನ ಆಲೋಚನೆಗಳು ಕಡಿದು ಬಿದ್ದವು.

ಗುರಮ್ಮನ ಮನೆಯಲ್ಲಿ ಇದ್ದವರು ಇಬ್ಬರೇ. ಆ ಇಬ್ಬರನ್ನು ನಾರಾಯಣನಿಗೆ ತೋರಿಸಿದಳು. ಶರೀರದ ಪ್ರತಿಯೊಂದು ವಕ್ರತೆಯಲ್ಲಿ ಲೈಂಗಿಕ ವಾಸನೆ

ಹೊಡೆಯುತ್ತಿರುವ ದಪ್ಪನೆ ಬಿಳಿಯ ಹುಡುಗಿಯ ಮೇಲಿನ ದೃಷ್ಟಿಯನ್ನು ಕಿತ್ತು, ಕೃತಕತೆ ಇಲ್ಲದ ಯಾವುದೋ ವಿಚಿತ್ರ ಆಕರ್ಷಣೆಯುಳ್ಳ ಎರಡನೆಯ ಹುಡುಗಿಯನ್ನು ನೋಡಿದ. ಲಕ್ಷಣವಾದ ತೆಳು ದೇಹದ. ಸ್ವಲ್ಪ ಕಪ್ಪಗಿರುವ ಕೋಲು ಮುಖ, ಮುಖಕ್ಕೆ ಹತ್ತಿಕೊಂಡ ಸಣ್ಣನೆ ಮೂಗು, ಸಣ್ಣ ನಡು. ಕಣ್ಣಲ್ಲಿ ಕದಲುತ್ತಿರುವ ಯಾವುದೋ ಭಾವನೆಗಳು, ತುಟಿಗಳಲ್ಲಿ ಅಡಗಿದ ಮತ್ತಾವುದೋ ರಹಸ್ಯಗಳು ಆ ಕ್ಷಣದಲ್ಲಿ ಆಕೆಯಲ್ಲಿ ನಾರಾಯಣ ಕಂಡ. ನಾಚಿಕೆ, ಹೆದರಿಕೆ, ಭಯಗಳೊಂದಿಗೆ ಯಾವುದೋ ಅವ್ಯಕ್ತ ಸಾಹಸದಿಂದ ಹುಡುಗಿಯನ್ನು ಆಯ್ಕೆ ಮಾಡಿಕೊಂಡ. ನಾರಾಯಣನ ಜೊತೆಗೆ ಬಂದ ತಲೆಹಿಡುಕ ಗುರಮ್ಮನೊಂದಿಗೆ ಮಾತನಾಡಿ ಐವತ್ತು ರೂಪಾಯಿ ಕೊಟ್ಟು ಅಲ್ಲಿಂದ ಹೊರಟ.

ನಾರಾಯಣ ಆ ಹುಡುಗಿಯೊಂದಿಗೆ ಒಂದು ಕೋಣೆಗೆ ಹೋದ. ಆ ಕೋಣೆಯನ್ನು, ಆ ಕೋಣೆಯ ವಾತಾವರಣವನ್ನು ಯಾಂತ್ರಿಕವಾಗಿ ಗಮನಿಸುತ್ತಾ ಒಂದೂ ಮಾತನಾಡದೆ ಬಿಳಿಯ ದುಪ್ಪಟಿ ಹೊದಿಸಿದ್ದ ಪಟ್ಟೆ ಮಂಚದ ಹಾಸಿಗೆಯ ಮೇಲೆ ನಿರ್ಲಿಪ್ತವಾಗಿ ಮಲಗಿಕೊಂಡ ಆ ಹುಡುಗಿಯನ್ನು ನೋಡಿದ ನಾರಾಯಣನ ಹೃದಯ ಕರಗಿತು. ಆಕೆಯತ್ತ ಕರುಣೆಯಿಂದ ನೋಡುತ್ತಾ ಹೇಳಿದ: "ಹೀಗೆ ಕೂತ್ಕೊಳಿ. ನಾನು ಅಷ್ಟು ನೀಚನಲ್ಲ. ನಿಮ್ಮ ಹೆಸರು?"

"ಸರಳಾ." ನಾರಾಯಣನನ್ನು ವಿಚಿತ್ರವಾಗಿ ನೋಡುತ್ತಾ ಉತ್ತರಿಸಿದಳು.

"ಚೆನ್ನಾಗಿದೆ. ಏನಾದರೂ ಓದಿದೀರಾ?"

"ಪಿಯುಸಿ ಓದುತ್ತಿದ್ದೆ, ಅಪ್ಪ–ಅಮ್ಮ ಹೋಗಿದ್ದರಿಂದ ಕೈಬಿಟ್ಟೆ."

"ಪಾಪ! ಯಾವ ಊರು?"

"ನೆಲ್ಲೂರು."

"ಮತ್ತೆ ಇಷ್ಟು ದೂರ, ಕರ್ನೂಲಿಗೆ ಬಂದಿದ್ದ್ಯಾಕೆ?"

"ಗುರಮ್ಮ ನಮ್ಮ ಚಿಕ್ಕಮ್ಮ."

"ಈ ನೀಚವಾದ ವೃತ್ತಿ ಏಕೆ? ಯಾವುದಾದರೂ ಟಿಸಿಎಚ್ ಟ್ರೈನಿಂಗ್ ಮಾಡಬಹುದಿತ್ತಲ್ಲಾ?"

ಸರಳ ನೀರಸವಾಗಿ ನಕ್ಕಳು.

ಇನ್ನೇನು ಪ್ರಶ್ನೆಗಳನ್ನು ಹಾಕಬೇಕೋ ನಾರಾಯಣನಿಗೆ ತೋಚಲಿಲ್ಲ. ಸರಳಳ ಆಕರ್ಷಣೆ ಅವನನ್ನು ಸುಡುತ್ತಿದೆ. ಆಕೆಯ ಕರುಣಾಜನಕ ಬದುಕು ಆತನನ್ನು ಛಿದ್ರ ಮಾಡುತ್ತಿದೆ. ಆಕೆಯ ಕಿವಿಯ ಲೋಲಾಕಿನತ್ತ ನೋಡುತ್ತಾ ಅರ್ಥಹೀನವಾಗಿ ಹೇಳಿದ.

"ನಿನ್ನ ಲೋಲಾಕು (ಜುಮುಕಿ) ಬಾಳ ಚೆನ್ನಾಗಿವೆ."

ಸರಳ ನಕ್ಕಳು.

"ಆ ದಪ್ಪದ ಹುಡುಗಿ ಯಾರು?"

"ನಮ್ಮ ಚಿಕ್ಕಮ್ಮನ ಮಗಳು."

"ಮತ್ತೆ ವಿಚಿತ್ರವಾಗಿದ್ದಾಳೆ."

"ಅದು ಅಂದರೆ ಬಾಳ ಜನ ಇಷ್ಟಪಡತ್ತಾರೆ."

"ನನ್ನ ಮೇಲೆ ಗೊತ್ತಿಲ್ಲದೆ....."

ಸರಳ ಕಣ್ಣು ಹೊಡ್ಸ್ವ ಮಾಡುತ್ತಾ, ನಾರಾಯಣ ಮಾತುಗಳನ್ನು ನಂಬದವಳಂತೆ ನೋಡಿದಳು.

"ನಾನೊಬ್ಬಳು ಕೆಲಸಕ್ಕೆ ಬರಲಾರೆ. ಸುಖ ಕೊಡೋಕೂ ಕೈಲಾಗೋಲ್ಲ. ಪಡೆಯೋಕೂ ಕೈಲಾಗಲ್ಲ. ಬಲವಂತವಾಗಿ ತಗೋಬೇಕಷ್ಟೇ"– ಕ್ಷಮಾಪಣೆ ಕೋರುತ್ತಿರುವ ಧ್ವನಿಯಲ್ಲಿ ಹೇಳಿದಳು.

"ನನಗಿನ್ನೂ ಮನಸ್ಸು ಸತ್ತಿಲ್ಲ ಅನಿಸುತ್ತದೆ. ಇಲ್ಲಿ ನನ್ನ ಹಾಗೆ ಹೊಸಬಳೇನೋ."

ಸರಳ ನಿಟ್ಟುಸಿರುಬಿಟ್ಟಳು.

"ನಂಜೊತೆ ಕಡಪಾಕ್ಕೆ ಬರ್ತೀಯಾ?"

"ನಿಮ್ಮದು ಕಡಪಾನಾ? ಏನ್ಮಾಡ್ತಿರಲ್ಲಿ?"

"ಲೆಕ್ಚರರ್. ಕತೆ ಬರೀತೀನಿ" ನಾರಾಯಣ ಹೆಮ್ಮೆಯಿಂದ ಹೇಳಿದ.

ಸರಳ ಆಶ್ಚರ್ಯಕರವಾಗಿ ನೋಡಿದಳು.

"ಹೋದವರಿಗೆಲ್ಲಾ ಕಡಪಾಕ್ಕೆ ಬರ್ರಿ ಅಂತಾನೆ ಕರೀತೀಯಾ?"

"ಇಲ್ಲ ಇಲ್ಲ. ನನಗಿದೇ ಮೊದಲ ಅನುಭವ. ನಿನ್ನ ನೋಡಿದ್ದ ಹಾಗೇ ಮನಸ್ಸು ಮರುಗಾಯಿತು. ನೀನು ಈ ಜಾಗದಲ್ಲಿ ಇರಬೇಕಾದವಳಲ್ಲ." ನಡುಗುತ್ತಿರುವ ಬೆರಳುಗಳಿಂದ ಗಲ್ಲ ಹಿಡಿದು ಮುಖ ಎತ್ತಿ ಹೇಳಿದ.

"ಮತ್ತೆಲ್ಲಿರಬೇಕು?" ಕಣ್ಣೊಳಕ್ಕೆ ನೇರವಾಗಿ ನೋಡಿದಳು.

ತನ್ನ ಹಿಂದೆ ಬರ್ತೀನಿ ಅಂತಾಳೇನೋ ಅಂತ ಭಯವಾಯಿತು. ದೃಷ್ಟಿ ತಪ್ಪಿಸಿ ಕಿಟಿಕಿ ಬೋಲ್ಟಿನೊಂದಿಗೆ ಆಟವಾಡುತ್ತಾ ನಾರಾಯಣ ಕೇಳಿದ:

"ಯಾಕೆ ಈ ವೃತ್ತಿಗೆ ಇಳಿದೆ?"

"ನಿಮ್ಮಂತವರು ಯಾಕೆ ಇಂಥ ಜಾಗಕ್ಕೆ ಬರ್ತಾರೆ?" ಸರಳ ಕಂಠ ಕಂಪಿಸಿತು.

"ನಿಜ. ನಿಜ ಬರಕೂಡದು. ಸ್ನೇಹಿತರು ಬಲವಂತ ಮಾಡಿದರು" ನಾರಾಯಣ ಗೊಣಗಿದ.

"ನೀವು ಇಂಥ ಜಾಗಗಳಿಗೆ ಬರಬೇಡ್ರಿ. ಮದುವೆಯಾಗಿದೆಯಾ?"

"ಆಗಿಲ್ಲ."

ಸರಳ ನಿಟ್ಟುಸಿರುಬಿಟ್ಟಳು.

ನಾರಾಯಣನಲ್ಲಿ ಬಯಕೆ ಸತ್ತುಹೋಯಿತು. ಹೊರಗಡೆಗೆ ನಡೆದು ಹೋಗುತ್ತಿರುವ ನಾರಾಯಣನನ್ನು ಸರಳ ಅಯೋಮಯವಾಗಿ ನೋಡುತ್ತಿದ್ದಾಳೆ.

ಸರಳಳ ಮನಸ್ಸಿನಲ್ಲಿಯ ಮೆತ್ತನೆ ಗೂಡು ಒಂದು ಕ್ಷಣ ಕದಲಿತು. ನಾರಾಯಣನ ಮಾತುಗಳನ್ನು ನೆನಸಿಕೊಂಡಳು. ಅವು ಒಣಗಿಹೋಗುತ್ತಿರುವ ಕೇದಗೆಯ ಪೊದೆಯ ಮೇಲೆ ಬಿದ್ದ ಮಳೆಯ ಹನಿಯಂತೆ ಪರಿಣಾಮ ಬೀರಿದವು. ತನ್ನದು ಸುಳ್ಳಿನ ಬದುಕು ಅಂದುಕೊಂಡಳು. ತನ್ನ ಹೆಸರು ಸರಳ ಅಲ್ಲ– ಸುಬ್ಬುಲು. ತಾನು ಓದಿದ್ದು ಕಾಲಾಯಾಪನೆಯ ಓದು. ತನ್ನದು ನೆಲ್ಲೂರು ಅಲ್ಲ– ತನಗೊಂದು ನೆಲೆ ಇಲ್ಲ. ಗುರಮ್ಮ ತನ್ನ ಚಿಕ್ಕಮ್ಮನಲ್ಲ. ತನ್ನ ಲೋಲಾಕುಗಳು ಗಿಲೀಟನವು. ಈ ನಿಜ ಹೇಳಿದ್ದರೆ ಚೆನ್ನಾಗಿತ್ತು. ಓದಿಕೊಂಡ ವೇಶ್ಯೆ ಅಂದರೆ ದೊಡ್ಡತನ. ಅಂತಹ ದೊಡ್ಡತನಕ್ಕಾಗಿ ಬರುವವರಿಗೆ ಸುಳ್ಳು ಹೇಳಬೇಕಾಗಿ ಬರುತ್ತದೆ ಅಂದುಕೊಂಡಳು. ಆತ ಮತ್ತೆ ಬಂದರೆ ಚೆನ್ನಾಗಿರುತ್ತೆ! ಆತನಿಗೆ ಮದುವೆಯಾಗಿಲ್ಲವಂತೆ! ತನಗೆ ಅಷ್ಟೊಂದು ಅದೃಷ್ಟವಿದೆಯೇ? ಹುಣ್ಣು ಕೆದಕಿ ಹೋದ.

ನಾರಾಯಣ ಪ್ರಕಾಶನ ರೂಮಿಗೆ ಹೋದ. ಪ್ರಕಾಶ್ ರಾತ್ರಿ ಡ್ಯೂಟಿಗೆ ಹೋಗಿದ್ದಾನೆ ಎಂದು ತಿಳಿಯಿತು. ನಾರಾಯಣನ ಮನಸ್ಸಿನಲ್ಲಿ 'ಪ್ಯಾಸಾ' ಚಲನಚಿತ್ರ ಮಿಂಚಿತು. ಆತನಲ್ಲಿ ಮಿಶ್ರ ಭಾವನೆಗಳು.

ಸ್ನೇಹಿತರಾದರೇನು ಒಂದು ಗಂಟೆಗೆ ಐವತ್ತು ಹೋಗಿದ್ದಕ್ಕೆ ಬೇಸರ. ಅನುಭವವನ್ನು ಜಾರಿಬಿಟ್ಟದ್ದಕ್ಕೆ ವ್ಯಥೆ. ಸರಳ ತನ್ನನ್ನು ಕೆಲಸಕ್ಕೆ ಬಾರದ ಸಂನ್ಯಾಸಿಯ ಕೆಳಗೆ ಜಮಾ ಕಟ್ಟಿರುತ್ತಾಳೆ ಎಂಬ ಚಿಂತೆ. ಚಟ ಹತ್ತಿಸಿದ ಮಿತ್ರರ ಮೇಲೆ ಕೋಪ. ಸರಳಳ ಬಗ್ಗೆ ಕರುಣೆ. ಪಿಚ್ಚಿರೆಡ್ಡಿಯ ಮೇಲೆ ಕೋಪ.

ನಾರಾಯಣ ಆ ರಾತ್ರಿ ಸರಿಯಾಗಿ ನಿದ್ರೆ ಹೋಗಲಿಲ್ಲ. ಅವನಿಗೆ ಒಂದು ಕನಸು ಕೂಡಾ ಬಿತ್ತು.

ಕನಸಿನಲ್ಲಿ ಆತನಿಗೂ ಸರಳಳಿಗೂ ಮದುವೆ ನಡೆಯುತ್ತಿದೆ. ಮದುವೆಗೆ ಪ್ರಿನ್ಸಿಪಾಲ್, ವಿದ್ಯಾರ್ಥಿಗಳ ಮುದಾಳುತನ. ಪತ್ರಿಕೆಯವರೂ ಬಂದರು. ಪೋಲಿಸರನ್ನು ಜೊತೆಗೇ ಕರೆದುಕೊಂಡು ಬಂದ ಗುರಮ್ಮನನ್ನೂ, ಮೇಲೆಯೇ ಬೀಳುವಂತೆ ಬಂದ

ಪಿಚ್ಚಿರೆಡ್ಡಿಯನ್ನು, ರಾಮಯ್ಯನನ್ನು ನೋಡಿ ಸರಳ ಕಿಟ್ಟನೆ ಕಿರುಚಿ ಮದುವೆ ಪೀಠದ ಮೇಲೆಯೇ ಬಿದ್ದುಹೋದಳು. ಮೆಡಿಕಲ್ ಕಾಲೇಜು ಆಸ್ಪತ್ರೆ... ಆಸ್ಪತ್ರೆ ವಾಸನೆ. ಸರಳಳ ಮೈತುಂಬಾ ಕಾಯಿಲೆಗಳು ಎಂದು ಡಾಕ್ಟರ್ ಹೌಸ್ ಸರ್ಜನ್‌ಗಳ ಜೊತೆ ಚರ್ಚಿಸುತ್ತಿದ್ದಾರೆ...

ಪ್ರಕಾಶಂ ನಾರಾಯಣನನ್ನು ನಿದ್ರೆಯಿಂದ ಎಬ್ಬಿಸಿದ. ರಾತ್ರಿ ತನಗೆ ಬಿದ್ದ ಕನಸಿನ ಬಗ್ಗೆ ಯೋಚಿಸುತ್ತಾ, ನಾರಾಯಣ ಆ ದಿನವೆಲ್ಲಾ ಕೊಕ್ಕರೆ ರೋಗ ಬಂದ ಕೋಳಿಯಂತೆ ಕೊರಗಿದ. ಪ್ರಕಾಶಂ ನಕ್ಕ.

ಈ ಸಂಜೆ ಮಿತ್ರರೆಲ್ಲಾ ಸೇರಿದರು. ರಾತ್ರಿಯ ಸಂಗತಿಯ ಬಗ್ಗೆ ಹೇಳು ಎಂದು ಪೀಡಿಸಿದರು. ಹಾಸ್ಯ ಮಾಡಿದರು. ನಾರಾಯಣ ನಡುಗಿಹೋದ. ಏನೂ ನಡೆಯಲಿಲ್ಲವೆಂದೂ, ನಡೆದಿದ್ದೆಲ್ಲಾ ಹೇಳಿದ. ಪಿಚ್ಚಿರೆಡ್ಡಿ ನಾರಾಯಣನ ಭುಜದ ಮೇಲೆ ಕೈಹಾಕಿ ಗುರೂಪದೇಶ ಮಾಡಿದ.

"ನಾರಾಯಣ! ನಿನ್ನಂತ ಮೇಷ್ಟ್ರುಗಳ ಹಣೆಬರಹ ಇಷ್ಟೇ. ಏನೋ ಕೊಂಪೆಗಳಿಗೆ ಬೆಂಕಿ ಬಿದ್ದ ಹಾಗೆ ಪ್ರತಿಯೊಂದಕ್ಕೂ ಕಿರಿಕಿರಿ ಮಾಡ್ತೀರಿ. ಮೇಲಾಗಿ ನೀನೊಬ್ಬ ಸಣ್ಣ ಲೇಖಕ. ಲೇಖಕ ಬರೀ ಭಾವನಾತ್ಮಕತೆಯ ಹುಂಬತನದಲ್ಲಿ ಬಿಟ್ಟರೆ ಬದುಕುವುದಿಲ್ಲ. ಅಶ್ಲೀಲವಾದದ್ದು ಬರೆತ್ತಾರೆ. ಅಳೋದೇನಿದ್ದರೂ ಅವರೇ ಅಳದೆ, ತಮ್ಮೊಂದಿಗೆ ಬೇರೆಯವರೂ ಅಳಬೇಕೆಂದು ಆಶಿಸ್ತಾರೆ. ಇಲ್ಲದಿದ್ದರೆ ಕರುಣೆ-ಗಿರುಣೆ ಈ ನಾನ್‌ಸೆನ್ಸೆಲ್ಲ ಏನು? ಒಂದ್ ನೆನಪಿಟ್ಟುಕೋ. ಈ ಜೀವನ ಒಂದು ಬಜಾರು. ನಿನ್ನ ಕೊಳ್ಳುವ ಶಕ್ತಿಗೆ ಅನುಗುಣವಾಗಿ, ನಿನ್ನ ತೃಪ್ತಿಗೋಸ್ಕರ ನಿನಗೆ ನೆಚ್ಚಿದ್ದು ಯಾವುದನ್ನಾದರೂ ಕೊಳ್ತೀಯಾ. ಮಾರೋನದೂ ತಪ್ಪಿಲ್ಲ, ಕೊಳ್ಳೋನದೂ ತಪ್ಪಿಲ್ಲ. ಆ ಬಜಾರ್‌ದೇ ತಪ್ಪು. ಸ್ವಲ್ಪ ಕರ್ಮ ಸಿದ್ಧಾಂತ ಅಭ್ಯಾಸ ಮಾಡಿಕೋ. ಈ ಕಿರಿಕಿರಿಯ ರೋಗಗಳು ಹೋಗ್ತವೆ. ನಿಜವಾದ ವಿಷಯ ಹೇಳಲಾ ಅಂತೀಯಾ? ನೀನೊಬ್ಬ ಅಂಜುಬುರುಕ ಗೊಡ್ಡು. ತಳುಕು ಬಳುಕಿನ ಮಾತಿನ ಮುಸುಕಿನಲ್ಲಿ ನಿನ್ನ ನಿಜವಾದ ಬಣ್ಣ ಬೇರೆ. ನಾನು ಸವಾಲು ಹಾಕ್ತೀನಿ. ನೀನು ರಾತ್ರಿಗೆ ಮತ್ತೆ ಗುರಮ್ಮನ ಸ್ವರ್ಗಕ್ಕೆ ಹೋಗ್ತೀಯ. ನಿನ್ನೆ ರಾತ್ರಿ ಬಂದಂಗೆ ವಾಪಾಸು ಬರೋಲ್ಲ. ಕಾರಣ ನಿನ್ನ ಅದೃಷ್ಟ ನಿನ್ನ ಕೈಯಲ್ಲಿಲ್ಲ."

ಪಿಚ್ಚಿರೆಡ್ಡಿಯ ಮಾತುಗಳಿಗೆ ನಾರಾಯಣನಿಗೆ ಕಿತ್ತುಕೊಂಡು ಹೋದಂತಾಯಿತು.

ಎರಡನೆಯ ದಿನ ರಾತ್ರಿ ನಾರಾಯಣ ಗುರಮ್ಮನ ಮಹಡಿಗೆ ಹೋಗದೆ ಇರಲಾಗಲಿಲ್ಲ. ಮತ್ತೆ ತನಗೋಸ್ಕರವೇ ಬಂದ ನಾರಾಯಣನನ್ನು ನೋಡಿ ಸುಬ್ಬಲು ಮುಖ ಅರಳಿತು.

ಕೋಣೆಯೊಳಗೆ ಹೋಗುತ್ತಿದ್ದಂತೆಯೇ ನಾರಾಯಣನಿಗೆ ಕರುಣೆ ಇರಲಿಲ್ಲ,

ಪ್ರೇಮ ಇರಲಿಲ್ಲ – ಬಯಕೆ ಬಿಟ್ಟರೆ. ವೃತ್ತಿಗೆ ಪ್ರವೇಶಿಸಿದಂದಿನಿಂದ ಸುಬ್ಬುಲು ಮೊದಲ ಸಾರಿಗೆ ನಾರಾಯಣನಿಗೆ ಏನನ್ನೂ ಬಚ್ಚಿಟ್ಟುಕೊಳ್ಳದೆ ಎಲ್ಲವನ್ನೂ ಕೊಟ್ಟಳು. ಸುಬ್ಬುಲನ್ನು ನಾರಾಯಣ ನೋಡಿಯೂ ಕೂಡಾ ನೋಡಲಿಲ್ಲ. ಒಂದು ಮಾತೂ ಕೂಡ ಆಡದೆ ಕೋಣೆ ದಾಟಿ ಹೋಗುತ್ತಿರುವ ನಾರಾಯಣನನ್ನು ನೋಡಿ ಸುಬ್ಬುಲು ನಿಬ್ಬೆರಗಳಾದಳು. ನಾರಾಯಣನಂತವರ ಕೃತಿಗಳನ್ನು ಓದಿದ್ದರೆ ಇನ್ನೂ ಏನಾಗುತ್ತಿದ್ದಳೋ! ಬಹುಶಃ ತನ್ನ ವೃತ್ತಿಯೇ ಮೇಲು ಅಂದುಕೊಳ್ಳುತ್ತಿದ್ದಳೇನೋ! ಇಲ್ಲದಿದ್ದರೆ.....



ಲೇಖಕರ ವಿಳಾಸಗಳು

ಡಾ.ಜೆ. ಬಾಲಕೃಷ್ಣ
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು – ೨೪

ಚಂದ್ರಕಾಂತ ಪೋಕಳೆ
ಫ್ಲಾಟ್ ನಂ. ೩೫೯,
ಯೋಜನೆ –೪೦, ೩ನೇ ಹಂತ
ಹನುಮಾನ ನಗರ
ಬೆಳಗಾವಿ –೦೧

ಡಿ.ಎನ್. ಶ್ರೀನಾಥ
ನವನೀತ, ೨ನೇ ಅಡ್ಡರಸ್ತೆ,
ಅಣ್ಣಾಜಿರಾವ್ ಲೇಔಟ್
ಮೊದಲನೆ ಹಂತ,
ವಿನೋಭಾ ನಗರ
ಶಿವಮೊಗ್ಗ – ೫೭೭೨೦೪

ಡಾ. ಮಲರ್ ವಿಳಿ ಕೆ.
ಪ್ರೆಸಿಡೆನ್ಸಿ ಕಾಲೇಜು
ಹೆಬ್ಬಾಳ– ಕೆಂಪಾಪುರ
ಬೆಂಗಳೂರು – ೨೪

ಡಾ. ಪೀರಾಸಾಬಿ ಹಳ್ಳಿ ಶಿವಣ್ಣ
ನಂ. ೭೭, ಸಿರಿ,
ಮೊದಲನೆ ಮಹಡಿ
೫ನೇ ಅಡ್ಡ ರಸ್ತೆ, ಶಾಂತಿವನ
ಸಹಕಾರನಗರ ಪೋಸ್ಟ್
ಬೆಂಗಳೂರು – ೫೬೦ ೦೯೨

ಕೆ.ಕೆ. ನಾಯರ್
ತಿರುಪತಿ
೪ನೇ ಅಡ್ಡರಸ್ತೆ, ಸಪ್ತಗಿರಿ ನಗರ
ಮಣಿಪಾಲ – ೫೭೬೧೦೪

ಟಿ.ಎಸ್. ವಿವೇಕಾನಂದ
C/o ಅನಿಕೇತನ

ಡಾ. ಪ್ರಭಾಕರ ನಿಂಬರಗಿ
ನಂ. ೧೮೬, ೧ನೇ ಹಂತ ವಿರೇಂದ್ರ
ಪಾಟೀಲನಗರ,
ವಿಶ್ವ ವಿದ್ಯಾಲಯ ರಸ್ತೆ,
ಗುಲಬಗಾ – ೫೮೫೧೦೫



Reg. No. 45656/88 Price : Rs. 30/-